ಗುರುವಾರ, ಜನವರಿ 26, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ@75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಯೋಧ

ಗಡಿ ನಿಯಂತ್ರಣ ರೇಖೆಯಲ್ಲಿ ಫೈರಿಂಗ್ ರೇಂಜ್‌ನ ಡ್ರಿಲ್‌ನಲ್ಲಿ ನಿಂತ ಯೋಧ



ಖಾದಿ ಉತ್ಸವ ಇಂದಿನಿಂದ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಮಟ್ಟದ ಖಾದಿ ಮತ್ತು ಗ್ರಾಮೋದ್ಯೋಗ ವಸ್ತು ಪ್ರದರ್ಶನ 'ಖಾದಿ ಉತ್ಸವ' ಜ.26ರಿಂದ ಫೆ.26ರವರೆಗೆ ನಗರದ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ನಡೆಯಲಿದೆ.

ವಸ್ತು ಪ್ರದರ್ಶನದಲ್ಲಿ ಒಟ್ಟು 200 ಮಳಿಗೆಗಳಿದ್ದು, ಇದರಲ್ಲಿ ರಾಜ್ಯದ 120 ಮತ್ತು ಹೊರರಾಜ್ಯದ 80 ಮಳಿಗೆಗಳಿವೆ.

ಈ ವಸ್ತು ಪ್ರದರ್ಶನದಲ್ಲಿ ನೂತನ ಶೈಲಿಯ ಖಾದಿ ಉಡುಪುಗಳು ಹಾಗೂ ಗ್ರಾಮೋದ್ಯೋಗ ಉತ್ಪನ್ನಗಳಾದ ಸಾಂಬಾರ ಪದಾರ್ಥಗಳು, ಉಪ್ಪಿನಕಾಯಿ, ಪಾದರಕ್ಷೆಗಳು, ಕರಕುಶಲ ವಸ್ತುಗಳು, ಜೇನುತುಪ್ಪ, ಗೋಡಂಬಿ, ಔಷಧೀಯ ಉತ್ಪನ್ನಗಳು, ಚನ್ನಪಟ್ಟಣದ ಗೊಂಬೆಗಳು, ಇಳಕಲ್ ಸೀರೆಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ.

ನಗರದಲ್ಲಿ ಬುಧವಾರ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಕೆ.ವಿ. ನಾಗರಾಜ್, ಸಚಿವ ಎಂ.ಟಿ.ಬಿ. ನಾಗರಾಜ್ ಮತ್ತು ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಸವರಾಜು ಅವರು ಖಾದಿ ಬಟ್ಟೆಗಳನ್ನು ಪ್ರದರ್ಶಿಸಿದರು. – ಪ್ರಜಾವಾಣಿ ಚಿತ್ರ

ವಸ್ತು ಪ್ರದರ್ಶನದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಹಾಗೂ ಆಂಧ್ರ, ಗುಜರಾತ್ ಸೇರಿ 13ಕ್ಕೂ ಹೆಚ್ಚು ರಾಜ್ಯಗಳ ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳ ತಯಾರಕರು, ಮಾರಾಟಗಾರರು ಭಾಗ ವಹಿಸಲಿದ್ದಾರೆ.

'2020ರಲ್ಲಿ ನಡೆದ ವಸ್ತು ಪ್ರದರ್ಶನಕ್ಕೆ 1.17 ಲಕ್ಷ ಜನರು ಭೇಟಿ ನೀಡಿದ್ದರು. ₹40 ಕೋಟಿ ಮೊತ್ತದಷ್ಟು ಖಾದಿ ಮತ್ತು ಗ್ರಾಮೋದ್ಯೋಗದ ವಸ್ತುಗಳು ಮಾರಾಟವಾಗಿದ್ದವು. ಈ ಬಾರಿ 1.5 ಲಕ್ಷ ನಾಗರಿಕರು ಭೇಟಿ ನೀಡುವ ನಿರೀಕ್ಷೆ ಇದ್ದು, ₹60 ಕೋಟಿಗೂ ಹೆಚ್ಚು ವಹಿವಾಟು ನಡೆಯಬಹುದು' ಎಂದು ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆಗಳ ಸಚಿವ ಎಂ.ಟಿ.ಬಿ. ನಾಗರಾಜ್ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಈ ವಸ್ತು ಪ್ರದರ್ಶನವನ್ನು ಮುಖ್ಯವಾಗಿ ಯುವಕರಲ್ಲಿ ಖಾದಿ ಬಟ್ಟೆಗಳ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಆಯೋಜಿಸಲಾಗಿದೆ. ಖಾದಿಗೆ ಹೊಸ ಸ್ಪರ್ಶ ನೀಡುವ ನಿಟ್ಟಿನಲ್ಲಿ ರಾಷ್ಟ್ರೀಯ ಫ್ಯಾಷನ್ ತಂತ್ರಜ್ಞಾನ ಸಂಸ್ಥೆ (ಎನ್‌ಐಎಫ್‌ಟಿ) ಜತೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಸುಮಾರು 2600 ಟೇಲರ್‌ಗಳಿಗೆ ತರಬೇತಿ ನೀಡಲಾಗಿದೆ' ಎಂದು ತಿಳಿಸಿದರು.

'ಖಾದಿ ಉತ್ಸವವನ್ನು ಜ.26ರಂದು ಸಂಜೆ 4ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ' ಎಂದು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಕೆ.ವಿ. ನಾಗರಾಜ್ ತಿಳಿಸಿದರು. ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಸವರಾಜು ಇದ್ದರು.

ಜಿಇಆರ್ ಅಂಕಿಅಂಶಗಳಿಂದ ದೊರೆತ ಮಾಹಿತಿ

ಉನ್ನತ ಶಿಕ್ಷಣ ವಂಚಿತ ವಿದ್ಯಾರ್ಥಿಗಳು 37 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲೆ ಹಾಗೂ ಪದವಿ ಪೂರ್ವ ಹಂತಗಳಲ್ಲೇ ಹೊರಗುಳಿದ ಕಾರಣ ರಾಜ್ಯದ 37 ಲಕ್ಷ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗಿದ್ದಾರೆ.

ಉನ್ನತ ಶಿಕ್ಷಣದ ಮೇಲಿನ ರಾಷ್ಟ್ರೀಯಮಟ್ಟ ಸಮೀಕ್ಷೆಗಾಗಿ (ಎಐಎಸ್‌ಎಚ್‌ಇ) ಕೇಂದ್ರ ಸರ್ಕಾರ 2020-21ನೇ ಶೈಕ್ಷಣಿಕ ವರ್ಷಕ್ಕೆ ರಾಜ್ಯ ಸರ್ಕಾರದಿಂದ ಪಡೆದ, ಉನ್ನತ ಶಿಕ್ಷಣದಲ್ಲಿ ಕರ್ನಾಟಕದ ಒಟ್ಟು ದಾಖಲಾತಿ ಅನುಪಾತದ (ಜಿಇಆರ್) ಅಂಕಿಅಂಶಗಳಿಂದ ಈ ಮಾಹಿತಿ ದೊರೆತಿದೆ. ಕರ್ನಾಟಕದಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ದಾಖಲಾತಿಯಿಂದ ಹೊರಗುಳಿದ ಕಾರಣ ಉನ್ನತ ಶಿಕ್ಷಣದಲ್ಲಿ ಒಟ್ಟು ದಾಖಲಾತಿ ಅನುಪಾತ ಕುಂಠಿತವಾಗಿದೆ.

ಕಾಲೇಜಿಗೆ ತೆರಳಲು ಅರ್ಹ ಇರುವ ಒಟ್ಟು ಜನಸಂಖ್ಯೆಯಲ್ಲಿ ಉನ್ನತ ಶಿಕ್ಷಣ ಪಡೆಯಲು ದಾಖಲಾದ ವಿದ್ಯಾರ್ಥಿಗಳ ಸಂಖ್ಯೆಯೇ ಜಿಇಆರ್. 18ರಿಂದ 23 ವಯೋಮಾನದವರನ್ನು ಗುರುತಿಸಿ ಇದರ ಲೆಕ್ಕಾಚಾರ ಹಾಕಲಾಗಿದೆ. ವೈದ್ಯಕೀಯ, ತಾಂತ್ರಿಕ, ಡಿಪ್ಲೊಮಾ ಹಾಗೂ ಇತರ ಪದವಿ ಮತ್ತು ಸ್ನಾತಕೋತ್ತರ ಪದವಿಗಳ ವಿದ್ಯಾರ್ಥಿಗಳ ಸಂಖ್ಯೆಯನ್ನು ಈ ವಿಶ್ಲೇಷಣೆಗೆ ಪರಿಗಣಿಸಲಾಗಿದೆ.

ಹುಟ್ಟಿದ ವರ್ಷವನ್ನು ಆಧರಿಸಿ 10ನೇ ತರಗತಿ ದಾಖಲಾತಿ ದತ್ತಾಂಶಗಳನ್ನು ತೆಗೆದುಕೊಂಡು ಹೊರಗುಳಿದ ವಿದ್ಯಾರ್ಥಿಗಳನ್ನು ಲೆಕ್ಕ ಹಾಕಲಾಗಿದೆ. ಉದಾಹರಣೆಗೆ, 1992ರಲ್ಲಿ ಜನಿಸಿದ ವಿದ್ಯಾರ್ಥಿಯು 2007ರಲ್ಲಿ 10ನೇ ತರಗತಿ, 2009ರಲ್ಲಿ ದ್ವಿತೀಯ ಪಿಯುಗೆ ಬರಬೇಕು. 2015ರಲ್ಲಿ ಆತ ತನ್ನ 23ನೇ ವಯಸ್ಸಿನಲ್ಲಿ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿರಬೇಕು.

ಅಂಕಿ ಅಂಶ

22,59,165 10ನೇ ತರಗತಿ ದಾಟದ ವಿದ್ಯಾರ್ಥಿಗಳು

8,15,371 ದ್ವಿತೀಯ ಪಿಯು ಅನುತ್ತೀರ್ಣರಾದವರು

6,27,662 ದ್ವಿತೀಯ ಪಿಯುಗೆ ದಾಖಲಾಗದ ಪ್ರಥಮ ಪಿಯು ವಿದ್ಯಾರ್ಥಿಗಳು

ಮಕ್ಕಳ ಜನ್ಮ ದಾಖಲೆಗಳ ಆಧಾರದಲ್ಲಿ 2007ರಿಂದ 2012ರ ಮಧ್ಯೆ ರಾಜ್ಯದ 56.29 ಲಕ್ಷ ವಿದ್ಯಾರ್ಥಿಗಳು 10ನೇ ತರಗತಿ ಪೂರ್ಣಗೊಳಿಸಿರಬೇಕು.

ಆದರೆ, 22.59 ಲಕ್ಷ ವಿದ್ಯಾರ್ಥಿಗಳು ಪೂರ್ಣಗೊಳಿಸಿಲ್ಲ. 2008ರಿಂದ 2014ರ ನಡುವೆ 6.27 ಲಕ್ಷ ವಿದ್ಯಾರ್ಥಿಗಳು ಪ್ರಥಮ ಪಿಯುನಿಂದ ದ್ವಿತೀಯ ಪಿಯುಗೆ ಪ್ರವೇಶ ಪಡೆದಿಲ್ಲ. ದ್ವಿತೀಯ ಪಿಯು ಅಂತಿಮ ಪರೀಕ್ಷೆಯಲ್ಲಿ 8.15 ಲಕ್ಷ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಈ ಪ್ರಕಾರ ಒಟ್ಟಾರೆ 37.02 ಲಕ್ಷ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದಿಲ್ಲ.

'ಪರೀಕ್ಷೆ ತೆಗೆದುಕೊಂಡ ಶೇ 40ರಷ್ಟು ವಿದ್ಯಾರ್ಥಿಗಳು 10 ಹಾಗೂ 12ನೇ ತರಗತಿಯಲ್ಲಿ ಅನುತ್ತೀರ್ಣರಾಗುತ್ತಾರೆ. ಇದು ಉನ್ನತ ಶಿಕ್ಷಣ ದಾಖಲಾತಿಯ ಮೇಲೆ ಪರಿಣಾಮ ಬೀರುತ್ತಿದೆ. ಈ ಕುರಿತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಜತೆ ಚರ್ಚಿಸಿದ್ದೇವೆ. ಶಾಲಾ ಹಂತದಲ್ಲೇ ಅಗತ್ಯ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ' ಎನ್ನುತ್ತಾರೆ ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥ ನಾರಾಯಣ.

'ಮಕ್ಕಳು ಶಾಲೆಯಿಂದ ಹೊರಗುಳಿಯಲು ಸಾಮಾಜಿಕ-ಆರ್ಥಿಕ ಅಂಶಗಳು ಕಾರಣವಾಗುತ್ತವೆ. 8ನೇ ತರಗತಿವರೆಗೆ ಅನ್ವಯವಾಗುವ ಆರ್‌ಟಿಇ ಕಾಯ್ದೆಯನ್ನು 12ನೇ ತರಗತಿವರೆಗೂ ವಿಸ್ತರಿಸಬೇಕು. ರಾಜ್ಯದಲ್ಲಿ 48 ಸಾವಿರ ಪ್ರಾಥಮಿಕ ಶಾಲೆಗಳಿವೆ. ಪ್ರೌಢಶಾಲೆಗಳು 5 ಸಾವಿರ ದಾಟಿಲ್ಲ. ಇದು ಸಹ ಹಿನ್ನಡೆಗೆ ಕಾರಣ' ಎನ್ನುವುದು ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಅವರ ಅಭಿಪ್ರಾಯ.

ಜಿಇಆರ್‌ನಲ್ಲೂ ನ್ಯೂನತೆ: 'ಸರ್ಕಾರದ ಅಂಕಿಅಂಶಗಳ ಪ್ರಕಾರ ಉನ್ನತ ಶಿಕ್ಷಣ ತೊರೆದವರು 20 ಲಕ್ಷ ದಾಟಿಲ್ಲ. ಜಿಇಆರ್ ನಿರ್ಧರಿಸಲು 18-23 ವಯೋಮಾನದವರನ್ನು ಪರಿಗಣಿಸಬೇಕು ಎಂಬ ಕೇಂದ್ರ ಸರ್ಕಾರದ ನಿಲುವು ದೋಷಪೂರಿತವಾಗಿದೆ. ಜಿಇಆರ್ ಲೆಕ್ಕ ಹಾಕುವಾಗ ಎಲ್ಲಾ ಕೋರ್ಸ್‌ಗಳ ವಿದ್ಯಾರ್ಥಿಗಳನ್ನು ಪರಿಗಣಿಸುತ್ತೇವೆ. ಹೆಚ್ಚಿನ ವಿದ್ಯಾರ್ಥಿಗಳು 21ನೇ ವಯಸ್ಸಿನಲ್ಲಿ ಪದವಿಪೂರ್ವ ಶಿಕ್ಷಣ ಪೂರೈಸುತ್ತಾರೆ. ಉದ್ಯೋಗವನ್ನು ಪಡೆಯುತ್ತಾರೆ. ಹಲವು ವರ್ಷಗಳ ನಂತರ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುತ್ತಾರೆ. ಎಲ್ಲರನ್ನೂ ವಯಸ್ಸಿನ ಮೇಲೆ ನಿರ್ಧರಿಸಲಾಗದು' ಎನ್ನುವುದು ಅಧಿಕಾರಿಗಳ ವಿವರಣೆ.

₹ 2 ಕೋಟಿ ವೆಚ್ಚದಲ್ಲಿ 33 ಅಡಿ ಎತ್ತರದ ಕಂಚಿನ ಪ್ರತಿಮೆ

ಉಮಿಕಲ್ ಬೆಟ್ಟದಲ್ಲಿ ಪರಶುರಾಮ

• ಬಾಲಚಂದ್ರ ಎಚ್.

ಉಡುಪಿ: 'ತುಳುನಾಡಿನ ಸೃಷ್ಟಿಕರ್ತ' ಪರಶುರಾಮನ 33 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಕಾರ್ಕಳ ತಾಲ್ಲೂಕಿನ ಬೈಲೂರು ಯರ್ಲಪಾಡಿಯ ಉಮಿಕಲ್ ಬೆಟ್ಟದ ಮೇಲೆ ಪ್ರತಿಷ್ಠಾಪಿಸಲಾಗುತ್ತಿದೆ.

ಒಂದು ಕೈನಲ್ಲಿ ಬಿಲ್ಲು ಮತ್ತೊಂದು ಕೈನಲ್ಲಿ ಕೊಡಲಿ ಹಿಡಿದಿರುವ ಭಂಗಿಯಲ್ಲಿ ಆಕರ್ಷಕವಾಗಿ ಪರಶುರಾಮನ ಪ್ರತಿಮೆ ನಿರ್ಮಾಣ ಮಾಡಲಾಗಿದ್ದು ಜ.27ರಿಂದ 29ರವರೆಗೆ ನಡೆಯುವ ಪರಶುರಾಮ ಥೀಂ ಪಾರ್ಕ್ ಉದ್ಘಾಟನಾ ಸಮಾರಂಭದಲ್ಲಿ ಲೋಕಾರ್ಪಣೆ ಮಾಡಲಾಗುವುದು.

15 ಟನ್ ತಾಮ್ರವನ್ನು ಬಳಸಿ ₹ 2 ಕೋಟಿ ವೆಚ್ಚದಲ್ಲಿ ಶಿಲ್ಪಿ ಕೃಷ್ಣಾ ನಾಯ್ಕ ಪ್ರತಿಮೆ ತಯಾರಿಸಿದ್ದಾರೆ. ಬೆಂಗಳೂರಿನಿಂದ ಉಮ್ಮಿಕಲ್ ಬೆಟ್ಟಕ್ಕೆ ಪರಶುರಾಮನ ಪ್ರತಿಮೆಯನ್ನು ತಂದು ಅಳವಡಿಕೆ ಕಾರ್ಯ ನಡೆಯುತ್ತಿದೆ.

ಪ್ರವಾಸಿಗರನ್ನು ಸೆಳೆಯುವ ಉದ್ದೇಶದಿಂದ ಪರಶುರಾಮನ ಪ್ರತಿಮೆಯ



ಪರಶುರಾಮ ಥೀಂ ಪಾರ್ಕ್‌ನ ವಿನ್ಯಾಸ

ಜತೆಗೆ ₹ 15 ಕೋಟಿ ವೆಚ್ಚದಲ್ಲಿ ಥೀಂ ಪಾರ್ಕ್ ಸಹ ನಿರ್ಮಿಸಲಾಗಿದೆ. 1,000 ಮಂದಿ ಕೂರುವ ಸಾಮರ್ಥ್ಯವಿರುವ ವೀಕ್ಷಣಾ ಗ್ಯಾಲರಿ, ಪರಶುರಾಮನ ಜೀವನ ವೃತ್ತಾಂತವನ್ನು ಸಾರುವ ವಿಶೇಷ ಕಲಾ ಗ್ಯಾಲರಿ ಥೀಂ ಪಾರ್ಕ್‌ನ ಪ್ರಮುಖ ಆಕರ್ಷಣೆ.

ಕಲಾವಿದ ಪುರುಷೋತ್ತಮ ಅಡ್ವೆ ಸಾರಥ್ಯದಲ್ಲಿ ಫೈಬರ್ ಗ್ಲಾಸ್ ಮ್ಯೂರಲ್‌ನಲ್ಲಿ ಪರುಶುರಾಮನ ಕುರಿತು ವಿವರಗಳನ್ನು ಅಚ್ಚು ಹಾಕಿಸಲಾಗಿದೆ. ಉಮಿಕಲ್ ಬೆಟ್ಟದ ಕೆಳ ಭಾಗದಲ್ಲೂ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಗೆ ಪ್ರತ್ಯೇಕ ವೇದಿಕೆ ಹಾಗೂ ಕಲಾ ಪ್ರದರ್ಶನಕ್ಕೆ ತಯಾರಾಗಲು ಗ್ರೀನ್ ರೂಂಗಳ ವ್ಯವಸ್ಥೆ ಮಾಡಲಾಗಿದೆ.

ನೆಲಮಟ್ಟದಿಂದ ಸುಮಾರು 400 ಅಡಿ ಎತ್ತರದ ಮೇಲಿರುವ ಬೆಟ್ಟದಿಂದ ಪ್ರವಾಸಿಗರು ರಮಣೀಯ ದೃಶ್ಯಗಳನ್ನು ಕಣ್ತುಂಬಿಕೊಳ್ಳಬಹುದು. ಕುದುರೆಮುಖ, ಆಗುಂಬೆಯ ಮಳೆ ಕಾಡು, ಪಶ್ಚಿಮಘಟ್ಟದ ಸೊಬಗನ್ನು ಸವಿಯಬಹುದು ಎನ್ನುತ್ತಾರೆ ಕಾಮಗಾರಿ ಹೊಣೆ ಹೊತ್ತಿಕೊಂಡಿರುವ ನಿರ್ಮಿತಿ ಕೇಂದ್ರದ ಅಧಿಕಾರಿ ಅರುಣ್.

ಅಂಗವಿಕಲರು ಹಾಗೂ ವೃದ್ಧರಿಗೆ ಲಿಫ್ಟ್ ವ್ಯವಸ್ಥೆಯೂ ಇದೆ. ಗ್ಯಾಲರಿಯಿಂದ ಪ್ರತಿಮೆ ಇರುವ ಜಾಗಕ್ಕೆ ಪ್ರವೇಶಿಸಲು ರ್‍ಯಾಂಪ್ ಮಾಡಲಾಗಿದೆ. ಪ್ರತಿಮೆಗೆ ಸಿಡಿಲು ಬಡಿಯದಂತೆ ಸಿಡಿಲು ನಿರೋಧಕ ವ್ಯವಸ್ಥೆ ಅಳವಡಿಸಲಾಗಿದೆ.

ರೆಸ್ಟೋರೆಂಟ್‌ನಲ್ಲಿ ಕುಳಿತು ಭೋಜನ ಸವಿಯುತ್ತಲೇ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಬಹುದು. ಜತೆಗೆ ಥೀಂ ಪಾರ್ಕ್ ಸುತ್ತಲೂ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ.

30 ಲಕ್ಷ ಟನ್ ಗೋಧಿ ಮಾರಲಿರುವ ಸರ್ಕಾರ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಗೋಧಿ ಹಾಗೂ ಗೋಧಿ ಹಿಟ್ಟಿನ ಬೆಲೆ ಏರಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ತನ್ನ ಸಂಗ್ರಹದ 30 ಲಕ್ಷ ಟನ್ ಗೋಧಿಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಿದೆ ಎಂದು ಮೂಲಗಳು ಹೇಳಿವೆ.

ಈಗ ಗೋಧಿ ಹಿಟ್ಟಿನ ಸರಾಸರಿ ಬೆಲೆಯು ಕೆ.ಜಿ.ಗೆ ₹ 38ಕ್ಕೆ ಏರಿಕೆಯಾಗಿದೆ. 2021ರ ಡಿಸೆಂಬರ್ ಕೊನೆಯ ವೇಳೆಗೆ ಗೋಧಿ ಹಿಟ್ಟಿನ ಬೆಲೆ ₹ 31.74 ಆಗಿತ್ತು.

ಗೋಧಿಯನ್ನು ಕೇಂದ್ರವು ಹಿಟ್ಟಿನ ಗಿರಣಿಗಳಿಗೆ ಹಾಗೂ ವರ್ತಕರಿಗೆ ಮಾರಾಟ ಮಾಡಲಿದೆ. 'ಗೋಧಿ, ಗೋಧಿ ಹಿಟ್ಟಿನ ಬೆಲೆ ಏರಿಕೆಯನ್ನು ನಿಯಂತ್ರಿಸಲು ಕೇಂದ್ರವು ಕ್ರಮ ಕೈಗೊಳ್ಳಲಿದೆ' ಎಂದು ಆಹಾರ ಕಾರ್ಯದರ್ಶಿ ಸಂಜೀವ್ ಚೋಪ್ರಾ ಈಚೆಗೆ ಹೇಳಿದ್ದರು. ಬೆಲೆ ನಿಯಂತ್ರಿಸುವ ಉದ್ದೇಶದಿಂದ ಕೇಂದ್ರವು ಗೋಧಿ ರಫ್ತನ್ನು 2022ರ ಮೇ ತಿಂಗಳಲ್ಲಿ ನಿರ್ಬಂಧಿಸಿತ್ತು.

ಗೋಧ್ರೋತ್ತರ ಹತ್ಯಾಕಾಂಡ 22 ಆರೋಪಿಗಳು ಖುಲಾಸೆ

ಅಹಮದಾಬಾದ್ (ಪಿಟಿಐ): 2002ರ ಗೋಧ್ರೋತ್ತರ ಗಲಭೆಯಲ್ಲಿ ಅಲ್ಪಸಂಖ್ಯಾತ ಸಮುದಾಯದ 17 ಮಂದಿಯನ್ನು ಹತ್ಯೆಗೈದಿದ್ದ ಪ್ರಕರಣದ 22 ಆರೋಪಿಗಳನ್ನು ಗುಜರಾತ್‌ನ ಪಂಚಮಹಲ್ ಜಿಲ್ಲೆಯ ಹಾಲೋಲ್ ನಗರ ನ್ಯಾಯಾಲಯವು ಮಂಗಳವಾರ ಖುಲಾಸೆಗೊಳಿಸಿದೆ.

'ಹತ್ಯೆಯಾದವರ ಪೈಕಿ ಯಾರೊಬ್ಬರ ಮೃತದೇಹವೂ ಪತ್ತೆಯಾಗಿಲ್ಲ. ಮೂಳೆಗಳು ಸುಟ್ಟು ಕರಕಲಾಗಿದ್ದರಿಂದ ಡಿಎನ್‌ಎ ಪರೀಕ್ಷೆಯೂ ಸಾಧ್ಯವಾಗಿಲ್ಲ. ಆರೋಪಿಗಳನ್ನು ದೋಷಿಗಳೆಂದು ಸಾಬೀತುಪಡಿಸಲು ಸೂಕ್ತ ಸಾಕ್ಷ್ಯಾಧಾರಗಳೇ ಇಲ್ಲ. ಹೀಗಾಗಿ ಎಲ್ಲರನ್ನೂ ಪ್ರಕರಣದಿಂದ ಖುಲಾಸೆಗೊಳಿಸಲಾಗುತ್ತಿದೆ' ಎಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಹರ್ಷ್ ತ್ರಿವೇದಿ ಹೇಳಿದ್ದಾರೆ.

'ಮೃತದೇಹ ದೊರೆಯದ ಹೊರತು ಆರೋಪಿಗಳನ್ನು ಶಿಕ್ಷೆಗೆ ಗುರಿಪಡಿಸುವುದಕ್ಕೆ ಸಾಧ್ಯವಿಲ್ಲ. ಇದು ಸಾಮಾನ್ಯ ನಿಯಮ. ಎಲ್ಲಾ ಅಪರಾಧಗಳಿಗೂ ಇದು ಅನ್ವಯಿಸುತ್ತದೆ. ಯಾರಾದರೂ ಕಾಣೆಯಾದಾಗ ಪೊಲೀಸರಿಗೆ ದೇಹ ಅಥವಾ ಇತರೆ ಯಾವುದೇ ಪುರಾವೆ ದೊರೆಯದೆ ಹೋದರೆ ಅವರು ತನಿಖೆ ಕೈಗೊಳ್ಳುವುದಾದರೂ ಹೇಗೆ' ಎಂದು ನ್ಯಾಯಪೀಠ ಪ್ರಶ್ನಿಸಿದೆ.

2002ರ ಫೆ. 27ರಂದು ನಡೆದಿದ್ದ ಘಟನೆ ಸಂಬಂಧ 22 ಮಂದಿಯನ್ನು ಬಂಧಿಸಿದ್ದ ಪೊಲೀಸರು, 2004ರಲ್ಲಿ ನ್ಯಾಯಾಲಯಕ್ಕೆ ಎರಡು ಪ್ರತ್ಯೇಕ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಮೊದಲ ಚಾರ್ಜ್‌ಶೀಟ್‌ನಲ್ಲಿ ಮೂವರು ಹಾಗೂ ಇನ್ನೊಂದು ಚಾರ್ಜ್‌ಶೀಟ್‌ನಲ್ಲಿ 19 ಮಂದಿಯನ್ನು ಹೆಸರಿಸಿದ್ದರು. ಆರೋಪಿಗಳ ಪೈಕಿ 8 ಮಂದಿ ಈಗಾಗಲೇ ಮೃತಪಟ್ಟಿದ್ದಾರೆ. 14 ಮಂದಿಯನ್ನು ನ್ಯಾಯಾಲಯ ಖುಲಾಸೆಗೊಳಿಸಿದೆ.

CONNECT ಕ್ಲಾಸಿಫೈಡ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

PUBLIC NOTICE
This is to inform the General public that our client intends to purchase Site No.990, situated at XI Block, Banashankari VI Stage, PID 6000031953, Bengaluru, measuring east to west 6 meters and north to south 10.48 meters and bounded on the EAST: SITE No. 991, WEST: SITE No. 989, NORTH: SITE No. 1022, SOUTH: ROAD, from its owners **Mr. GIRISH B S/o H Beeraiah and Mrs. Nagamani W/o. Girish B.** Any person/s asserting any kind of right, title, interest or claims of any sort towards the Sale transaction may file their objections or claims with documentary proof thereof with the undersigned within **SEVEN** days from the date of this publication, failing which our clients will proceed to complete the transaction without being liable for any claims put forth thereof.
Bengaluru, Date: 25/01/2023
Sd/- PRAROOP LAW
K R PRADEEP ADVOCATE
31/9, NCP Tower, 1st floor, 1st main, Mount Joy Extension, Hanumanthnagar, Bengaluru-19.
E-mail: prarooplaw@gmail.com Phone: 9886012455.

JOB OPPORTUNITIES
Teachers/ Professors

BEL EDUCATIONAL INSTITUTIONS
BEL School (CBSE), Jalahalli P.O. Bengaluru – 560 013.
requires
PRINCIPAL FOR SENIOR SECONDARY SCHOOL
For detailed advertisement, visit our website: www.beei.edu.in www.bel-india.in
Last date for receiving applications **13.02.2023**

Part-Time Jobs

WANTED 10TH/PUC Passed for City Career Agency in LIC, Age: 18-60, House Wives/ Retired/ Working, Stipend 7000/- PM, Commission , Gratuity & other Benefits, Contact: 9901995554/ 8217293244

DH DECCAN HERALD ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
For more information Contact:
9845114560 : 9731810277
9901641752 : 9886213331
080 - 45557163 / 164
*conditions apply

General

REQUIRED: IIMM Bangalore, Office Manager with accounts knowledge Qualification: B.com / M.com Any degree Experience in Logistics & Supply Chain Management Resume can be sent to : iimm@iimmbangalore.org

BUILDERS ESSENTIAL
Building Contractors

CONSTRUCTION OF RESIDENTIAL and COMMERCIAL Buildings Done. ARCHITECT Designed, VAASTU Compliant, FAST TRACK Construction GENUINE Materials and ALL APPROVALS/ PERMISSIONS taken care. Contact: 9980883950

REAL ESTATE SELLING
Sites
Vishweshwariah Layout

"SALE 30X40 North face 2nd Block Direct Owner Sitting 7600/-P.Sft (Brokers Excuse) "SP Estate"- 9845178335"

BEAUTY & HEALTH
Health Products

POST CORONA Health issues, reduce by using Vomega. 3 drops daily. https://vomegaforveggies.com Contact : 9448116184

BUSINESS
Business Offers
Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7204995189

PERSONAL
Change of Name

CHANGE OF NAME
I, **RADHIKA SURESH BABU**, Residing at #3967, Sai Samyogh, 3rd Floor, 2nd Main, Visweswaraiah Road, Girinagar IV Phase, VBHBCS Layout, Bangalore, have changed my name to **RADHIKA SURESH** vide affidavit dated 10/11/2022, before notary P.S. Gurumurthy, Bangalore. Henceforth I shall be called **RADHIKA SURESH** only.

I, GIREESH GOPAL Residing at No.1511/2, 1st Floor, Shreem,5th Cross, Judicial Layout,GKVK Post, Bengaluru-560065 have changed my name to GIRISH GOPALH S/o. P.N.Gopalan, vide affidavit dated 23.01.2023 Sworn before notary: Aurna.V, Bangalore

6497603W, SEP/ ASH, JADEJA HARISINH DILUBHA, Vill- Nani Khakhar, Mandvi, Kutch Bhuj, Gujarat changed daughter's name HINALBA to JADEJA HINALBA HARISINH, 25/01/2023, Notary K.V. Mani, Bangalore

6497603W, SEP/ ASH, JADEJA HARISINH DILUBHA, Vill- Nani Khakhar, Mandvi, Kutch Bhuj, Gujarat changed Son's name UDITRAJ SINH to UDITRAJSINH HARISINH JADEJA, 25/01/2023, Notary K.V. Mani, Bangalore

I, SANDHYARANI Bhat aged 37 years, W/o. Kiran Bhat, R/o. No. C1321, 13th Floor, Brigade Buena Vista, Near Budigere Cross, Bommenahalli, Bengaluru-560049 Karnataka have changed my name to Sandhya Bhat for all future purposes. Vide affidavit no. IN- KA55188671035560V dated 19-Jan 2023, sworn before notary Manjunath T.

HEATLBA, WIFE/O, 6497603W, SEP/ ASH, JADEJA HARISINH DILUBHA, Vill- Nani Khakhar, Mandvi, Kutch Bhuj, Gujarat changed name HEATLBA to HETALBA HARISINH JADEJA, 25/01/2023 Notary K.V. Mani Bangalore

I, MADHAN RAJ C/o. Shivalingam.S, residing at No. 2-3, Old No. 1st Stage. Shivannshetty Garden. Bangalore North, Bangalore-560042, have changed my name from MADHAN RAJ to MOHAMMED MIZAN vide affidavit dated 22-02-2022 sworn before notary K.C. Gowthami, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ನಾಲ್ವರು ಐಎಎಸ್ ಅಧಿಕಾರಿಗಳಿಗೆ ಹೆಚ್ಚುವರಿ ಪ್ರಭಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಬಕಾರಿ ಇಲಾಖೆ ಆಯುಕ್ತ ಡಾ.ಜೆ. ರವಿಶಂಕರ್ ಸೇರಿದಂತೆ ನಾಲ್ವರು ಐಎಎಸ್ ಅಧಿಕಾರಿಗಳಿಗೆ ಇತರ ಇಲಾಖೆಗಳ ಹೆಚ್ಚುವರಿ ಪ್ರಭಾರ ವಹಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಬುಧವಾರ ಆದೇಶ ಹೊರಡಿಸಿದೆ.

ರವಿಶಂಕರ್ ಅವರಿಗೆ ವಸತಿ ಇಲಾಖೆ ಕಾರ್ಯದರ್ಶಿ, ಬಿಬಿಎಂಪಿ ಎಸ್ಟೇಟ್ಸ್ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ಅವರಿಗೆ ಕರ್ನಾಟಕ ಮುನಿಸಿಪಲ್ ಡೇಟಾ ಸೊಸೈಟಿಯ ಜಂಟಿ ನಿರ್ದೇಶಕರ ಹುದ್ದೆ, ಕರ್ನಾಟಕ ಗೃಹ ಮಂಡಳಿ ಕಾರ್ಯದರ್ಶಿ ಕವಿತಾ ಎಸ್. ಮನ್ನಿಕೇರಿ ಅವರಿಗೆ ರಾಜ್ಯ ಮಹಿಳಾ ಆಯೋಗದ ಕಾರ್ಯದರ್ಶಿ ಹುದ್ದೆ ಹಾಗೂ ಕರ್ನಾಟಕ ಖನಿಜ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಸ್. ರಂಗಪ್ಪ ಅವರಿಗೆ ಕರ್ನಾಟಕ ವೈದ್ಯಕೀಯ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯ ಹೆಚ್ಚುವರಿ ಪ್ರಭಾರ ನೀಡಲಾಗಿದೆ.

ಬೆಂಗಳೂರು ಪೊಲೀಸರ ದಾಳಿ ● ಮಹಿಳೆ ಸೇರಿ ನಾಲ್ವರು ಆರೋಪಿಗಳ ಬಂಧನ

ಆಂಧ್ರ: ಮನೆಯಲ್ಲಿ ಖೋಟಾ ನೋಟು ಮುದ್ರಣ

ಪ್ರಜಾವಾಣಿ ವಾರ್ತೆ

ರಾಜು

ಚರಣ್‌ಸಿಂಗ್

ರಜನಿ

ಗೋಪಿನಾಥ್

ಬೆಂಗಳೂರು: ಆಂಧ್ರಪ್ರದೇಶದ ಮನೆಯೊಂದರ ಮೇಲೆ ನಗರದ ಸುಬ್ರಮಣ್ಯಪುರ ಪೊಲೀಸರು ಇತ್ತೀಚೆಗೆ ದಾಳಿ ಮಾಡಿದ್ದು, ಖೋಟಾ ನೋಟು ಮುದ್ರಣ ಜಾಲ ಭೇದಿಸಿದ್ದಾರೆ.

ಖೋಟಾ ನೋಟು ಜಾಲದ ಆರೋಪಿಗಳಾದ ಆಂಧ್ರಪ್ರದೇಶದ ಕಡಪ ಜಿಲ್ಲೆಯ ಚರಣ್ ಸಿಂಗ್ (40), ಅವರ ಸಂಬಂಧಿ ರಜನಿ (36), ಗೋಪಿನಾಥ್ (36) ಹಾಗೂ ರಾಜು (32) ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

'ಅನಂತಪುರ ನಗರದ ಬಾಡಿಗೆ ಮನೆಯೊಂದರಲ್ಲಿ ಖೋಟಾ ನೋಟು ಮುದ್ರಿಸುತ್ತಿದ್ದ ಆರೋಪಿಗಳು, ಹಲವು ರಾಜ್ಯಗಳಲ್ಲಿ ಚಲಾವಣೆ ಮಾಡುತ್ತಿದ್ದರು. ಆರೋಪಿಗಳಿಂದ ₹ 500 ಮುಖ ಬೆಲೆಯ ₹ 10.34 ಲಕ್ಷ ಮೊತ್ತದ ಖೋಟಾ ನೋಟುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಕಾರು ತಪಾಸಣೆ ವೇಳೆ ಪತ್ತೆ: 'ಆರೋಪಿಗಳಾದ ಚರಣ್‌ಸಿಂಗ್ ಹಾಗೂ ರಜಿನಿ, ಜನವರಿ 19ರಂದು ಉತ್ತರಹಳ್ಳಿ–ಕೆಂಗೇರಿ ರಸ್ತೆಯಲ್ಲಿ ಕಾರಿನಲ್ಲಿ ಹೊರಟಿದ್ದರು. ಅವರು ಖೋಟಾ ನೋಟು ಸಾಗಿಸುತ್ತಿದ್ದ ಮಾಹಿತಿ ಬಂದಿತ್ತು. ಕಾರು ತಡೆದು ತಪಾಸಣೆ ನಡೆಸಿದಾಗ, ₹ 500 ಮುಖಬೆಲೆಯ ಖೋಟಾ ನೋಟುಗಳು ಪತ್ತೆಯಾಗಿದ್ದವು' ಎಂದು ಪೊಲೀಸರು ತಿಳಿಸಿದರು.

'ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ಅನಂತಪುರದ ಮನೆಯೊಂದರಲ್ಲಿ ನೋಟು ಮುದ್ರಣ ಮಾಡುತ್ತಿದ್ದ ಸಂಗತಿ ಗೊತ್ತಾಯಿತು. ಅನಂತಪುರಕ್ಕೆ ಹೋದ ವಿಶೇಷ ತಂಡ, ಮನೆ ಮೇಲೆ ದಾಳಿ ಮಾಡಿತು' ಎಂದು ಹೇಳಿದರು.

'ಪ್ರತಿ ತಿಂಗಳು ₹ 3,500 ಕೊಟ್ಟು ಮನೆ ಬಾಡಿಗೆ ಪಡೆಯಲಾಗಿತ್ತು. ಮಾಲೀಕರಿಗೆ ಗೊತ್ತಾಗದ ರೀತಿಯಲ್ಲಿ ನೋಟುಗಳನ್ನು ಮುದ್ರಣ ಮಾಡಿ, ಮಧ್ಯವರ್ತಿಗಳ ಮೂಲಕ ಚಲಾವಣೆ ಮಾಡಲಾಗುತ್ತಿತ್ತು' ಎಂದು ಪೊಲೀಸರು ತಿಳಿಸಿದರು.

'ಖೋಟಾ ನೋಟು ಮುದ್ರಣ ಮಾಡಿರುವ ಹಾಳೆಗಳು, ಲ್ಯಾಪ್‌ಟಾಪ್, ಎರಡು ಪ್ರಿಂಟರ್, ನೋಟು ಮುದ್ರಣಕ್ಕೆ ಬಳಸುತ್ತಿದ್ದ ಶಾಯಿ, ಸ್ಕ್ರೀನ್ ಪ್ರಿಂಟಿಂಗ್ ಬಾಕ್ಸ್, 2 ಮೊಬೈಲ್ ಹಾಗೂ ಇತರೆ ಉಪಕರಣಗಳು ಮನೆಯಲ್ಲಿ ಸಿಕ್ಕಿವೆ. ಆರೋಪಿಗಳು ಹಲವು ತಿಂಗಳಿನಿಂದ ನೋಟು ಮುದ್ರಣ ಮಾಡುತ್ತಿದ್ದ ಮಾಹಿತಿ ಇದೆ' ಎಂದು ಹೇಳಿದರು.

'ಕೃತ್ಯದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇದೆ. ಆರೋಪಿಗಳು ಯಾರಿಗೆಲ್ಲ ಖೋಟಾ ನೋಟು ಕೊಟ್ಟಿದ್ದಾರೆ, ಯಾವ ನಗರಗಳಲ್ಲಿ ನೋಟುಗಳು ಚಲಾವಣೆಯಾಗಿವೆ? ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ' ಎಂದೂ ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ: ಗಡುವು ವಿಸ್ತರಣೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ವಿಧಿಸಿದ್ದ ಗಡುವನ್ನು 2023ರ ಡಿಸೆಂಬರ್ 31ರವರೆಗೂ ವಿಸ್ತರಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ನಿರ್ಧರಿಸಿದ್ದು, ಕರ್ನಾಟಕ ನಾಗರಿಕ ಸೇವೆ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳಿಗೆ ತಿದ್ದುಪಡಿ ತರಲು ಕರಡನ್ನು ಬುಧವಾರ ಪ್ರಕಟಿಸಲಾಗಿದೆ.

ಈಗ ಜಾರಿಯಲ್ಲಿರುವ ನಿಯಮಗಳ ಪ್ರಕಾರ, ರಾಜ್ಯ ಸರ್ಕಾರಿ ನೌಕರರು 2022ರ ಡಿಸೆಂಬರ್ 31ರೊಳಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣ ರಾಗಬೇಕಿತ್ತು. ಅದನ್ನು 2023ರ ಡಿಸೆಂಬರ್ 31ರ ಒಳಗಾಗಿ ಎಂಬ ತಿದ್ದುಪಡಿ ತರುವ ಪ್ರಸ್ತಾವ ಕರಡಿನಲ್ಲಿದೆ.

ಅನುಕಂಪದ ನೌಕರಿಗೆ ಮೃತ ವಿಚ್ಛೇದಿತರ ಒಡಹುಟ್ಟಿದವರು ಅರ್ಹರು

ಬೆಂಗಳೂರು: ಮಕ್ಕಳಿಲ್ಲದ ವಿಚ್ಛೇದಿತ ಪುರುಷ ಅಥವಾ ಮಹಿಳೆ ಸರ್ಕಾರಿ ನೌಕರಿಯಲ್ಲಿ ಇರುವಾಗಲೇ ಮೃತಪಟ್ಟರೆ, ಅವರ ಅವಲಂಬಿತ ಸಹೋದರ, ಸಹೋದರಿಯರಿಗೆ ಅನುಕಂಪದ ಆಧಾರದ ನೇಮಕಾತಿಗೆ ಪರಿಗಣಿಸಬಹುದು ಎಂದು ಸರ್ಕಾರ ಬುಧವಾರ ಹೊರಡಿಸಿದ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಿದೆ.

ಅನುಕಂಪದ ಆಧಾರದ ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿ 2021ರ ಏ.9ರಂದು ಆದೇಶ ಹೊರಡಿಸಲಾಗಿದ್ದು, ಅದಕ್ಕೆ ಈ ನಿಯಮವೂ ಅನ್ವಯಿಸುತ್ತದೆ. ನೇಮಕಾತಿಗೆ ಪರಿಗಣಿಸುವ ಮೊದಲು ಮೃತರ ಮೇಲೆ ಅವಲಂಬಿತವಾಗಿರುವ, ಅವರ ಜತೆ ವಾಸಿಸುತ್ತಿರುವ ಕುರಿತು ದೃಢೀಕರಿಸಬೇಕು ಎನ್ನುವ ಷರತ್ತುಗಳನ್ನು ವಿಧಿಸಲಾಗಿದೆ.

ಮೃತ ವಿಚ್ಛೇದಿತ ನೌಕರರಿಗೆ ಮಕ್ಕಳಿದ್ದರೆ, ನಿಯಮದಂತೆ ಅಂತಹ ಮಕ್ಕಳು ಅವರ ಮೇಲೆ ಅವಲಂಬಿತರಾಗಿರಬೇಕು. ಅವರ ಜತೆ ವಾಸಿಸುತ್ತಿರಬೇಕು. ವಿವಾಹಿತ ನೌಕರರು ಮೃತಪಟ್ಟರೆ ಅವರ ಪತಿ ಅಥವಾ ಪತ್ನಿ, ಮಕ್ಕಳು, ಅವಿವಾಹಿತರಾಗಿದ್ದರೆ ಅವರ ಸಹೋದರ, ಸಹೋದರಿಯರು ಅನುಕಂಪದ ನೇಮಕಾತಿಗೆ ಅರ್ಹರಾಗಿರುತ್ತಾರೆ ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ.

ಹೊಂಬುಜ ಮಠದ ದೇವೇಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಶ್ರೀ ಒತ್ತಾಯ

'2ಬಿಗೆ ಜೈನ ಸಮುದಾಯ ಸೇರಿಸಿ'

ಪ್ರಜಾವಾಣಿ ವಾರ್ತೆ

ರಿಪ್ಪನ್‌ಪೇಟೆ (ಶಿವಮೊಗ್ಗ ಜಿಲ್ಲೆ): 'ಜೈನ ಸಮುದಾಯವನ್ನು ಪ್ರವರ್ಗ 2 'ಬಿ'ಗೆ ಸೇರಿಸುವ ಮೂಲಕ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಉದ್ಯೋಗ ಕಲ್ಪಿಸಬೇಕು' ಎಂದು ಹೊಂಬುಜ ಮಠದ ಪೀಠಾಧಿಕಾರಿ ದೇವೇಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ವರ್ಯ ಸ್ವಾಮೀಜಿ ಒತ್ತಾಯಿಸಿದರು.

ಹೊಂಬುಜದ ಪಾರ್ಶ್ವನಾಥ ತೀರ್ಥಂಕರರ ಮತ್ತು ಪದ್ಮಾವತಿ ಅಮ್ಮನವರ ಸನ್ನಿಧಾನದ ಜಿನದತ್ತರಾಯ ಸಭಾಮಂಟಪ ಅರ್ಹದಾಸ ವೇದಿಕೆಯಲ್ಲಿ ಬುಧವಾರ ನಡೆದ ನಾಲ್ಕನೇ ದಿನದ ಪಂಚಕಲ್ಯಾಣ ಮಹೋತ್ಸವದಲ್ಲಿ ಅವರು ಮಾತನಾಡಿದರು.

'ಪಾದಯಾತ್ರೆಯ ಮೂಲಕ ಪುಣ್ಯ ಕ್ಷೇತ್ರಗಳ ದರ್ಶನ ಮಾಡುವ ಮುನಿಗಳು ತಂಗಲು ಸರ್ಕಾರಿ ಶಾಲಾ ಕೊಠಡಿಗಳನ್ನು ಬಳಕೆ ಮಾಡಿಕೊಳ್ಳುತ್ತಿದ್ದು, ಕೆಲವೆಡೆ ಅವರಿಗೆ ಜೀವ ಭದ್ರತೆ ಸಿಗುತ್ತಿಲ್ಲ. ಸರ್ಕಾರ ಅವರಿಗೆ ರಕ್ಷಣೆ ನೀಡಬೇಕು' ಎಂದು ಮನವಿ ಮಾಡಿದರು.

ಪಂಚ ಕಲ್ಯಾಣೋತ್ಸವದಲ್ಲಿ ಮಠದ ಪೀಠಾಧಿಕಾರಿ ದೇವೇಂದ್ರ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಅವರಿಗೆ ಪಟ್ಟಾಭಿಷೇಕದ 12ನೇ ವರ್ಷದ ಅಂಗವಾಗಿ 'ಧರ್ಮತೀರ್ಥ ಪ್ರವರ್ಧಕ' ಬಿರುದು ನೀಡಿ ಸನ್ಮಾನಿಸಲಾಯಿತು. ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ, ಗೃಹ ಸಚಿವ ಆರಗ ಜ್ಞಾನೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಇದ್ದರು.

'ದೇಶದಲ್ಲಿ ಶೇ 2ರಷ್ಟು ಜನಸಂಖ್ಯೆ ಹೊಂದಿರುವ ಜೈನ ಸಮುದಾಯದ ಆಚಾರ–ವಿಚಾರ, ತತ್ವ–ಸಿದ್ಧಾಂತಗಳನ್ನು ಕಾಲಕಾಲಕ್ಕೆ ಸಮಾಜಕ್ಕೆ ಪರಿಚಯಿಸುತ್ತಿರುವ ಹೊಂಬುಜ ಮಠದ ಭಟ್ಟಾರಕರು ಸಮುದಾಯದವರಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಿರುವುದು ಶ್ಲಾಘನೀಯ' ಎಂದು ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಹೇಳಿದರು.

'ಪಾದಯಾತ್ರೆಯ ಮೂಲಕ ಪುಣ್ಯ ಕ್ಷೇತ್ರಗಳ ದರ್ಶನ ಮಾಡುವ ಮುನಿಗಳಿಗೆ ಸೂಕ್ತ ಭದ್ರತೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು,

ಆಚಾರ್ಯ ಗುಣಧರನಂದಿ ಮುನಿ ಮಹಾರಾಜರು, ಮುನಿಶ್ರೀ ಪುಣ್ಯಸಾಗರ ಮಹಾರಾಜರು, ಆಯಿರ್ಕ ನೂತನ ಮತಿ ಮಾತಾಜಿ ಇದ್ದರು.

'ಆರ್‌.ಡಿ.ಪಾಟೀಲ ಖಾತೆಯಿಂದ ಹಣ ವಿತ್ ಡ್ರಾ ಆಗಿಲ್ಲ'

ಕಲಬುರಗಿ: 'ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ಪ್ರಮುಖ ಆರೋಪಿ ಆರ್‌.ಡಿ. ಪಾಟೀಲ ಅವರ ಬ್ಯಾಂಕ್ ಖಾತೆಯಿಂದ ಯಾವುದೇ ಹಣ ವಿತ್‌ಡ್ರಾ ಆಗಿಲ್ಲ' ಎಂದು ತನಿಖಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಪ್ರಕರಣ ಮುಂದುವರಿಸದಿರಲು ಶಂಕರಗೌಡ ಪಾಟೀಲ ಅವರು ₹3 ಕೋಟಿ ಹಣಕ್ಕೆ ಬೇಡಿಕೆ ಇಟ್ಟಿದ್ದರು. ನಾನು ₹76 ಲಕ್ಷ ಹಣ ಕೊಡುತ್ತೇನೆ ಎಂದು ಹೇಳಿ ಬ್ಯಾಂಕ್ ಆಫ್ ಬರೋಡ ಶಾಖೆಯಿಂದ ಹಣ ಡ್ರಾ ಮಾಡಿಸಿ, ನನ್ನ ಅಳಿಯನ ಮೂಲಕ ತಲುಪಿಸಿದ್ದೆ' ಎಂದು ಆರ್‌.ಡಿ. ಪಾಟೀಲ ವಿಡಿಯೊದಲ್ಲಿ ಹೇಳಿದ್ದ. 'ಆರ್‌.ಡಿ ಪಾಟೀಲ ಹೇಳಿದ್ದ ಬ್ಯಾಂಕ್ ಆಫ್ ಬರೋಡ ಶಾಖೆಯ ಆತನ ಬ್ಯಾಂಕ್ ಖಾತೆ ವಿವರ ಪರಿಶೀಲಿಸಲಾಗಿದ್ದು, ₹76 ಲಕ್ಷ ಹಣ ವಿತ್ ಡ್ರಾ ಆಗಿಲ್ಲ. ಖಾತೆಯಿಂದ ವಹಿವಾಟು ನಡೆದ ದಾಖಲೆಗಳು ನಮೂದು ಆಗಿಲ್ಲ' ಎಂದು ಅವರು ಹೇಳಿದ್ದಾರೆ.

ವಿಜ್ಞಾನ ಸ್ಪರ್ಧೆಯಲ್ಲಿ ಅಂತಿಮ ಸುತ್ತಿಗೆ ಐವರು ಭಾರತೀಯ ವಿದ್ಯಾರ್ಥಿಗಳು

ವಾಷಿಂಗ್ಟನ್ (ಪಿಟಿಐ): ಪ್ರತಿಷ್ಠಿತ ರೆಜೆನರ್ ಸೈನ್ಸ್ ಟ್ಯಾಲೆಂಟ್ ಸರ್ಚ್ ಹಾಗೂ ಗಣಿತ ಸ್ಪರ್ಧೆಯಲ್ಲಿ ಅಮೆರಿಕದ 40 ಮಂದಿ ವಿದ್ಯಾರ್ಥಿಗಳು ಅಂತಿಮ ಘಟಕ್ಕೆ ತಲುಪಿದ್ದು, ಇವರಲ್ಲಿ ಐವರು ಭಾರತೀಯ ಮೂಲದವರು ಇದ್ದಾರೆ.

ಕಳೆದ 82 ವರ್ಷಗಳಿಂದ ಈ ಸ್ಪರ್ಧೆ ನಡೆಯುತ್ತಿದ್ದು, ಯುವ ವಿಜ್ಞಾನಿಗಳನ್ನು ಜಗತ್ತಿಗೆ ಪರಿಚಯಿಸುವ ಕೆಲಸ ಮಾಡುತ್ತಿದೆ.

ಜೊತೆಗೆ 18 ಲಕ್ಷ ಡಾಲರ್ (ಅಂದಾಜು ₹14.76 ಕೋಟಿ) ಪ್ರಶಸ್ತಿ ಮೊತ್ತವನ್ನು ನಿಗದಿ ಮಾಡಲಾಗಿದೆ.

ಟೆಕ್ಸಾಸ್‌ನಿಂದ ಸಿಧು ಪಾಚಿಪಲಾ, ಫ್ಲಾರಿಡಾದಿಂದ ಲಾವಣ್ಯ ನಟರಾಜನ್ ಹಾಗೂ ಇಶಿಕಾ, ಮಿಷಿಗನ್‌ನಿಂದ ನೀಲ್ ಮೌದ್ಗಲ್ ಹಾಗೂ ಕೆನಾಡಿಕೆಟ್‌ನಿಂದ ಅಂಬಿಕಾ ಗ್ರೋವರ್ ಅಂತಿಮ ಸುತ್ತಿಗೆ ಆಯ್ಕೆಯಾದ ಭಾರತ ಮೂಲದ ವಿದ್ಯಾರ್ಥಿಗಳಾಗಿದ್ದಾರೆ.

300 ಮಂದಿ ವಿದ್ಯಾರ್ಥಿಗಳ ಪೈಕಿ, 40 ವಿದ್ಯಾರ್ಥಿಗಳನ್ನು ವಿಜ್ಞಾನಿಗಳ ತಂಡವು ಅಂತಿಮ ಸುತ್ತಿಗೆ ಆಯ್ಕೆ ಮಾಡಿದೆ. ಈ ಸ್ಪರ್ಧೆಗಾಗಿ ಒಟ್ಟು 1,900 ವಿದ್ಯಾರ್ಥಿಗಳು ತಮ್ಮ ಸಂಶೋಧನಾ ಯೋಜನೆಯೊಂದರ ಜೊತೆಯಲ್ಲಿ ಅರ್ಜಿ ಸಲ್ಲಿಸಿದ್ದರು.

'ಅಂತಿಮ ಸುತ್ತಿನಲ್ಲಿರುವ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜನೆ ಮಾಡಲಾಗುವುದು. ಮಾರ್ಚ್ 14ರಂದು ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸ್ಪರ್ಧೆಯ ಮೊದಲ 10 ಸ್ಥಾನ ಪಡೆದ ವಿದ್ಯಾರ್ಥಿಗಳ ಹೆಸರನ್ನು ಪ್ರಕಟಿಸಲಾಗುವುದು' ಎಂದು ಸೊಸೈಟಿ ಫಾರ್ ಸೈನ್ಸ್ ಆ್ಯಂಡ್ ಎಕ್ಸಿಕ್ಯುಟಿವ್ ಪಬ್ಲಿಷರ್ ತಿಳಿಸಿದೆ.

ಮೊಟ್ಟೆ ಬಯಸಿದ 38.37ಲಕ್ಷ ಶಾಲಾ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ 38.37 ಲಕ್ಷ ವಿದ್ಯಾರ್ಥಿಗಳು ಮಧ್ಯಾಹ್ನದ ಬಿಸಿಯೂಟದಲ್ಲಿ ಮೊಟ್ಟೆಗೆ ಬೇಡಿಕೆ ಸಲ್ಲಿಸಿದ್ದಾರೆ.

ಶಿಕ್ಷಣ ಇಲಾಖೆ ಪೌಷ್ಟಿಕಾಂಶದ ಕೊರತೆ ನೀಗಿಸಲು 1ರಿಂದ 8ನೇ ತರಗತಿಯ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದಲ್ಲಿ ವಾರಕ್ಕೆ ಎರಡು ದಿನ ಮೊಟ್ಟೆ, ಚಿಕ್ಕಿ ಅಥವಾ ಬಾಳೆ ಹಣ್ಣು ನೀಡುತ್ತಿದೆ. ಮಕ್ಕಳ ಬೇಡಿಕೆಗೆ ಅನುಗುಣವಾಗಿ ಮೂರು ಪದಾರ್ಥಗಳಲ್ಲಿ ಅವರು ಬಯಸಿದ್ದನ್ನು ನೀಡಲು ಎಲ್ಲ ಶಾಲೆಗಳಿಗೂ ಸೂಚಿಸಲಾಗಿದೆ.

'ವಿದ್ಯಾರ್ಥಿಗಳ ಬೇಡಿಕೆ ಕುರಿತು ಅಭಿಪ್ರಾಯ ಸಂಗ್ರಹಿಸಿದಾಗ 47.97 ಲಕ್ಷ ಮಕ್ಕಳಲ್ಲಿ ಶೇ 79.98 ಮಕ್ಕಳು ಬೇಯಿಸಿದ ಮೊಟ್ಟೆಗೆ ಬೇಡಿಕೆ ಸಲ್ಲಿಸಿದ್ದಾರೆ. 2.27 ಲಕ್ಷ ಮಕ್ಕಳು ಚಿಕ್ಕಿ ಅಥವಾ ಬಾಳೆಹಣ್ಣು ನೀಡುವಂತೆ ಬೇಡಿಕೆ ಇಟ್ಟಿದ್ದಾರೆ. ಬೆಳಗಾವಿ ವಿಭಾಗದಲ್ಲೇ ಹೆಚ್ಚಿನ ಮಕ್ಕಳು ಮೊಟ್ಟೆ ಸೇವಿಸಲು ಬಯಸಿದ್ದಾರೆ. ನಂತರ ಕ್ರಮವಾಗಿ ಬೆಂಗಳೂರು, ಕಲಬುರಗಿ ಹಾಗೂ ಮೈಸೂರು ವಿಭಾಗದಲ್ಲಿ ಮೊಟ್ಟೆಗೆ ಹೆಚ್ಚಿನ ಬೇಡಿಕೆ ಬಂದಿದೆ' ಎಂದು ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

ಮಕ್ಕಳು ಸಾತ್ವಿಕ ಆಹಾರ ಸೇವಿಸುವ ಕುರಿತು ಚರ್ಚೆ, ಪರ–ವಿರೋಧ ಮಾತುಗಳು ಕೇಳಿಬರುತ್ತಿರುವ ಸಮಯದಲ್ಲೇ ಮಕ್ಕಳು ಬೇಡಿಕೆ ಸಲ್ಲಿಸುವ ಮೂಲಕ ತಮ್ಮ ಹಕ್ಕು ಚಲಾಯಿಸಿದ್ದಾರೆ.

ಮೊಟ್ಟೆ ಸೇವನೆಯ ನಂತರ ಮಕ್ಕಳಲ್ಲಿ ಪೌಷ್ಟಿಕಾಂಶ ಹೆಚ್ಚಾಗಿರುವುದು ಆರೋಗ್ಯ ಇಲಾಖೆ ನಡೆಸಿದ ತಪಾಸಣೆಯಲ್ಲಿ ದೃಢಪಟ್ಟಿತ್ತು.

ಮಕ್ಕಳ ಬೇಡಿಕೆಗೆ ಅನುಗುಣವಾಗಿಯೇ ಪೌಷ್ಟಿಕ ಪದಾರ್ಥ ನೀಡುವಂತೆ, ಇಲ್ಲದಿದ್ದರೆ ಕ್ರಮ ಜರುಗಿಸುವುದಾಗಿ ಶಿಕ್ಷಣ ಇಲಾಖೆಯ ಆಯುಕ್ತರು ಈಚೆಗೆ ಸುತ್ತೋಲೆ ಹೊರಡಿಸಿದ್ದರು.

27ರಿಂದ 'ಕ್ರೈಸ್' ವಿಜ್ಞಾನ ಮೇಳ: ಕೋಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆಯ ಅಧೀನದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ವ್ಯಾಪ್ತಿಯಲ್ಲಿರುವ 830 ವಸತಿ ಶಾಲೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿರುವ 326 ಸೇರಿದಂತೆ 1,156 ವಸತಿ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಇದೇ ಶುಕ್ರವಾರದಿಂದ (ಜ. 27) ಎರಡು ದಿನಗಳ ಕಾಲ ರಾಜ್ಯಮಟ್ಟದ 'ಕ್ರೈಸ್ ವಿಜ್ಞಾನ ಮೇಳ' ಆಯೋಜಿಸಲಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, 'ಅರಮನೆ ಮೈದಾನದಲ್ಲಿರುವ ತ್ರಿಪುರವಾಸಿನಿ ಸಭಾಂಗಣದಲ್ಲಿ ಶನಿವಾರ ಬೆಳಿಗ್ಗೆ 9.30ಕ್ಕೆ ನಡೆಯುವ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೇಳವನ್ನು ಉದ್ಘಾಟಿಸುವರು. ಈ ಮೇಳದಲ್ಲಿ ವಿದ್ಯಾರ್ಥಿಗಳು ವಿಜ್ಞಾನ, ಗಣಿತ, ಮಾಹಿತಿ ತಂತ್ರಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ನೂತನ ಮಾದರಿಗಳು ಹಾಗೂ ಹೊಸ ಪ್ರಯೋಗಗಳ ಮಾದರಿಗಳನ್ನು ಪ್ರದರ್ಶಿಸಲಿದ್ದಾರೆ. ರಾಜ್ಯದ 224 ವಿಧಾನಸಭಾ ಕ್ಷೇತ್ರಗಳ ತಲಾ ಒಂದು ವಸತಿ ಶಾಲೆಗಳ ವಿದ್ಯಾರ್ಥಿಗಳು ಮಾದರಿ ಮತ್ತು ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸುವರು' ಎಂದು ಮಾಹಿತಿ ನೀಡಿದ್ದಾರೆ.

ರಾಜ್ಯಮಟ್ಟಕ್ಕೆ ಆಯ್ಕೆಯಾದ ಪ್ರತಿ ವಸತಿ ಶಾಲೆಯಿಂದ ಐದು ವಿದ್ಯಾರ್ಥಿಗಳು, ಒಬ್ಬರು ಪ್ರಾಂಶುಪಾಲರು ಮತ್ತು ಒಬ್ಬ ಶಿಕ್ಷಕರು ಸೇರಿದಂತೆ ಒಟ್ಟು ಏಳು ಜನ ಭಾಗವಹಿಸುತ್ತಾರೆ. ಒಟ್ಟು 1,500ಕ್ಕೂ ಹೆಚ್ಚು ಮಂದಿ ಮೇಳದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

₹ 34 ಲಕ್ಷ ಬಹುಮಾನ: ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ಶಾಲೆಗೆ ₹ 5 ಲಕ್ಷ, ದ್ವಿತೀಯ ಸ್ಥಾನ ಪಡೆದ ಶಾಲೆಗೆ ₹ 3 ಲಕ್ಷ ಮತ್ತು ತೃತೀಯ ಸ್ಥಾನ ಪಡೆದ ಶಾಲೆಗೆ 2 ಲಕ್ಷ ಬಹುಮಾನ ನೀಡಲಾಗುವುದು. ಪ್ರತಿ ಕಂದಾಯ ವಿಭಾಗದಲ್ಲಿನ ಅತ್ಯುತ್ತಮ ಪ್ರಯೋಗದಲ್ಲಿ ಮೊದಲ ಸ್ಥಾನ ಪಡೆಯುವ ಶಾಲೆಗೆ ₹ 3 ಲಕ್ಷ, ಎರಡನೇ ಸ್ಥಾನ ಪಡೆಯುವ ಶಾಲೆಗೆ ₹ 2 ಲಕ್ಷ ಮತ್ತು ಮೂರನೇ ಸ್ಥಾನ ಪಡೆಯುವ ಶಾಲೆಗೆ ₹ 1 ಲಕ್ಷ ನೀಡಲಾಗುತ್ತದೆ. ಒಟ್ಟು 34 ಲಕ್ಷ ಮೊತ್ತದ ನಗದು ಬಹುಮಾನಹಾಗೂ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಗುವುದು ಎಂದು ಹೇಳಿದ್ದಾರೆ.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ, ಭಾರತೀಯ ವಿಜ್ಞಾನ ಸಂಸ್ಥೆ, ಅಗಸ್ತ್ಯ ಫೌಂಡೇಷನ್, ಅಖಿಲ ಭಾರತ ಜ್ಞಾನವಿಜ್ಞಾನ ಸಮಿತಿ, ನೆಹರು ತಾರಾಲಯ, ವಿಶ್ವೇಶ್ವರಯ್ಯ ವಸ್ತು ಸಂಗ್ರಹಾಲಯ ಸೇರಿದಂತೆ ಹಲವು ಸಂಸ್ಥೆಗಳು ವಿಜ್ಞಾನದ ಪ್ರಯೋಗಗಳ ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆ ನೀಡಲಿವೆ ಎಂದು ತಿಳಿಸಿದ್ದಾರೆ.

ಒಬಿಸಿ: ಅತಿಸಣ್ಣ ಸಮುದಾಯಗಳಿಗೆ ಪ್ರತ್ಯೇಕ ಮಂಡಳಿ–ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಮಂಗಳೂರು: 'ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬಂದರೆ ಇತರ ಹಿಂದುಳಿದ ವರ್ಗಗಳಲ್ಲಿರುವ (ಒಬಿಸಿ) ಅತಿಸಣ್ಣ ಸಮುದಾಯಗಳ ಅಭಿವೃದ್ಧಿಗೆ ಪ್ರತ್ಯೇಕ ಮಂಡಳಿಯನ್ನು ಸ್ಥಾಪಿಸಿ, ಅದಕ್ಕೆ ವರ್ಷಕ್ಕೆ ₹ 250 ಕೋಟಿಯಂತೆ ಐದು ವರ್ಷಗಳಲ್ಲಿ ₹ 1,250 ಕೋಟಿ ಅನುದಾನ ಒದಗಿಸಲಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ತಿಳಿಸಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಇತರ ಹಿಂದುಳಿದ ವರ್ಗಗಳಲ್ಲಿರುವ ಕೆಲವು ಸಮುದಾಯಗಳ ಜನಸಂಖ್ಯೆ ಅತಿ ಕಡಿಮೆ ಇದೆ. ಕುಲಕಸುಬನ್ನು ಕಳೆದುಕೊಂಡ ಈ ಸಮುದಾಯಗಳ ಜನರು ನಾನಾ ರೀತಿಯ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಅವರನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಮೇಲಕ್ಕೆತ್ತುವುದಕ್ಕೆ ಈ ಮಂಡಳಿಯು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಿದೆ. ಅಗತ್ಯ ಬಿದ್ದರೆ ಈ ಕಾರ್ಯಕ್ರಮಗಳಿಗೆ ಹೆಚ್ಚುವರಿ ಅನುದಾನವನ್ನೂ ಒದಗಿಸಲಿದ್ದೇವೆ' ಎಂದು ಅವರು ಭರವಸೆ ನೀಡಿದರು.

'ಕರಾವಳಿ ಕರ್ನಾಟಕದ ಗಟ್ಟಿ, ಕುಲಾಲ, ಆಚಾರ್ಯ, ಕೋಟ, ಮಡಿವಾಳ, ದೇವಾಡಿಗ, ಭಂಡಾರಿ, ಗಾಣಿಗ, ಕೊಟ್ಟಾರಿ ಜೋಗಿ, ಥಿಯಾ, ಯಾದವ, ಶೆಟ್ಟಿಗಾರ್, ಶೇರಿಗಾರ್, ಕುಡುಬಿ ಮುಂತಾದ ಜಾತಿಗಳ ಜನರಿಗೆ ಇದರ ಪ್ರಯೋಜನ ಸಿಗಲಿದೆ' ಎಂದು ತಿಳಿಸಿದರು.

'ಅಲ್ಪಸಂಖ್ಯಾತರ ಅಭಿವೃದ್ಧಿ ಒದಗಿಸುವ ಅನುದಾನದಲ್ಲಿ ಬ್ಯಾರಿ, ಜೈನ, ಕ್ರೈಸ್ತ ಮುಂತಾದ ಜನಸಂಖ್ಯೆ ತೀರಾ ಕಡಿಮೆ ಇರುವ ಸಮುದಾಯಗಳಿಗೆ ನಿರ್ದಿಷ್ಟ ಮೊತ್ತದ ಅನುದಾನ ಬಳಸುವುದನ್ನು ಕಡ್ಡಾಯಗೊಳಿಸುತ್ತೇವೆ' ಎಂದೂ ಸುರ್ಜೇವಾಲಾ ಅವರು ಭರವಸೆ ನೀಡಿದರು.

ಸಮಾಲೋಚನೆ: ಇದಕ್ಕೂ ಮುನ್ನ ಸುರ್ಜೇವಾಲ ಹಾಗೂ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಅವರು ವಿಧಾನಸಭಾ ಚುನಾವಣೆ ಪೂರ್ವ ತಯಾರಿ ಕುರಿತು ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗಳ ಪಕ್ಷದ ನಾಯಕರ ಜೊತೆ ಸಮಾಲೋಚನೆ ನಡೆಸಿದರು.

ಉಕ್ರೇನ್‌ಗೆ ಯುದ್ಧಟ್ಯಾಂಕ್ ಕೊಡಲು ಜರ್ಮನಿ ಒಪ್ಪಿಗೆ

ಬರ್ಲಿನ್/ಕೀವ್(ಎಪಿ): ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಉಕ್ರೇನ್‌ಗೆ ಪೂರೈಸಲು ಹಿಂಜರಿದಿದ್ದಕ್ಕೆ ತನ್ನ ಮಿತ್ರ ರಾಷ್ಟ್ರಗಳಲ್ಲಿ ಅಸಹನೆ ವ್ಯಕ್ತವಾಗಿರುವ ಬೆನ್ನಲ್ಲೇ ಲೆಪರ್ಡ್–2 ಯುದ್ಧ ಟ್ಯಾಂಕ್‌ಗಳನ್ನು ನೀಡಲು ಜರ್ಮನಿಯು ಒಪ್ಪಿದೆ.

ಜರ್ಮನಿಯ ಚಾನ್ಸಲರ್ ಓಲಾಫ್ ಸ್ಕೋಲ್ಜ್ ಅವರು ತಮ್ಮ ಸರ್ಕಾರವು ಉಕ್ರೇನ್ ಕೋರಿಕೆಯಂತೆ ಲೆಪರ್ಡ್–2 ಯುದ್ಧ ಟ್ಯಾಂಕ್‌ಗಳನ್ನು ಪೂರೈಸಲು ಸಮ್ಮತಿಸಿದೆ. ಅಲ್ಲದೇ ತನ್ನ ಇತರ ಮಿತ್ರ ದೇಶಗಳೂ ತಮ್ಮ ಬಳಿ ಇರುವ ಲೆಪರ್ಡ್–2 ಟ್ಯಾಂಕ್‌ಗಳನ್ನು ಉಕ್ರೇನ್‌ಗೆ ಪೂರೈಸಲು ಅನುಮತಿ ನೀಡುವಂತೆ ಸಲ್ಲಿಸಿರುವ ಕೋರಿಕೆಗಳನ್ನು ಅನುಮೋದಿಸುತ್ತದೆ ಎಂದು ಬುಧವಾರ ಘೋಷಿಸಿದರು.

ತನ್ನ ಸಂಗ್ರಹದಲ್ಲಿರುವ 14 ವಾಹನಗಳನ್ನು ಒಳಗೊಂಡ ಲೆಪರ್ಡ್–2 ಯುದ್ಧ ಟ್ಯಾಂಕ್‌ಗಳನ್ನು ಆರಂಭಿಕವಾಗಿ ಒದಗಿಸಲಾಗುವುದು. ಉಕ್ರೇನ್‌ಗೆ ಒಟ್ಟು ಎರಡು ಬೆಟಾಲಿಯನ್ ಅಥವಾ 88 ಯುದ್ಧ ಟ್ಯಾಂಕ್‌ಗಳನ್ನು ಒದಗಿಸಲು ಜರ್ಮನಿ ಮತ್ತು ಮಿತ್ರರಾಷ್ಟ್ರಗಳು ಗುರಿ ಹೊಂದಿವೆ. ತನ್ನ ಮಿತ್ರರಾಷ್ಟ್ರಗಳೊಂದಿಗೆ ನಿಕಟವಾದ ಸಮನ್ವಯತೆಯಿಂದ ಜರ್ಮನಿಯು ಕಾರ್ಯನಿರ್ವಹಿಸುತ್ತಿದೆ ಎಂದು ಸ್ಕೋಲ್ಜ್ ಹೇಳಿದರು.

ರಷ್ಯಾ ಪಡೆಗಳನ್ನು ಕೀವ್‌ನಿಂದ ಹಿಮ್ಮೆಟ್ಟಿಸಲು ಎಂ1 ಅಬ್ರಾಮ್ಸ್ ಟ್ಯಾಂಕ್‌ಗಳ ಪೂರೈಕೆಗೆ ಅಮೆರಿಕ ಪ್ರಾಥಮಿಕ ಒಪ್ಪಂದ ಮಾಡಿಕೊಂಡಿದೆ ಎಂದು ಅಮೆರಿಕದ ಅಧಿಕಾರಿಗಳು ಹೇಳಿದ ಬೆನ್ನಲ್ಲೇ ದೀರ್ಘ ಸಮಯದಿಂದ ಉಕ್ರೇನ್ ನಿರೀಕ್ಷಿಸುತ್ತಿದ್ದ ಈ ನಿರ್ಧಾರ ಪ್ರಕಟವಾಗಿದೆ.

ಅಣ್ವಸ್ತ್ರಸಜ್ಜಿತ ರಷ್ಯಾವನ್ನು ಯುರೋಪ್ ಎದುರಿಸಬೇಕಾಗುವುದನ್ನು ತಪ್ಪಿಸಲು, ಆ ದೇಶವನ್ನು ಕಟ್ಟಿಹಾಕುವಲ್ಲಿ ಅಮೆರಿಕದ ನಿರ್ಧಾರ ನಿರ್ಣಾಯಕವಾದುದು. ಹಾಗೆಯೇ ಜರ್ಮನಿಯ ಈ ನಿರ್ಧಾರವು ತುಂಬಾ ಚಾರಿತ್ರಿಕ ಮಹತ್ವ ಹೊಂದಿದೆ ಎಂದು ಜರ್ಮನಿ ಸೇನೆಯ ಫೆಡರಲ್ ಅಕಾಡೆಮಿ ಫಾರ್ ಸೆಕ್ಯುರಿಟಿ ಪಾಲಿಸಿ ಮುಖ್ಯಸ್ಥ ಎಕ್ಕೆಹಾರ್ಡ್ ಬ್ರೋಸ್ ಹೇಳಿದರು.

ರಷ್ಯಾ ಕಿಡಿ: 'ಉಕ್ರೇನ್‌ಗೆ ಅಮೆರಿಕ ಮತ್ತು ಜರ್ಮನಿ ಯುದ್ಧ ಟ್ಯಾಂಕ್‌ಗಳನ್ನು ಪೂರೈಸುತ್ತಿರುವುದು ವಿನಾಶಕಾರಿ ಯೋಜನೆ. ಈ ಟ್ಯಾಂಕ್‌ಗಳೂ ಅದೇ ರೀತಿ ಉರಿದು ಭಸ್ಮವಾಗುತ್ತವೆ. ಯುರೋಪಿನ ನಾಗರಿಕರ ಮೇಲೆ ತೆರಿಗೆ ಹೊರೆ ಬೀಳುತ್ತದೆ' ಎಂದು ಪುಟಿನ್ ಆಡಳಿತ ಕಚೇರಿ ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೊವ್ ಕಿಡಿಕಾರಿದ್ದಾರೆ.

ಯುದ್ಧಕಾಲದಲ್ಲಿ ಭ್ರಷ್ಟರ ಪದಚ್ಯುತಿ

ಭ್ರಷ್ಟಾಚಾರದ ಹಗರಣದಲ್ಲಿ ಸಿಲುಕಿರುವ ಉಕ್ರೇನಿನ ಐವರು ಗವರ್ನರ್‌ಗಳು ಮತ್ತು ನಾಲ್ವರು ಉಪ ಸಚಿವರು ಸೇರಿ ಹಲವು ಹಿರಿಯ ಅಧಿಕಾರಿಗಳು ಮಂಗಳವಾರ ತಮ್ಮ ಸ್ಥಾನ ಕಳೆದುಕೊಂಡರು.

ನಿರ್ಗಮಿತ ಪ್ರಮುಖರ ವಿರುದ್ಧ ಉಕ್ರೇನ್ ಅಧಿಕಾರಿಗಳು ಯಾವುದೇ ಕ್ರಿಮಿನಲ್ ಆರೋಪಗಳನ್ನು ಹೊರಿಸಿಲ್ಲ. ತಕ್ಷಣದ ವಿವರಣೆಯನ್ನೂ ನೀಡಿಲ್ಲ. ಆದರೆ, ರಷ್ಯಾದ ಆಕ್ರಮಣವನ್ನು ಹಿಮ್ಮೆಟ್ಟಿಸುವಾಗ ದೇಶದಲ್ಲಿನ ಭ್ರಷ್ಟಾಚಾರವನ್ನು ಬದಿಗೆ ಸರಿಸಲಾಗದು. ಹಗರಣಗಳಿಗೆ ಯಾವುದೇ ವಿನಾಯಿತಿ ಇಲ್ಲ. ತಪ್ಪಿತಸ್ಥರ ಮೇಲೆ ಕ್ರಮ ಶತಃಸಿದ್ಧ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಗುಡುಗಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business to Business

Services

ಫ್ರಾಂಚೈಸಿಗಾಗಿ B to B ONLINE ಸೇವೆಗಳನ್ನು ಗ್ರಾಮಗಳಿಗೆ ಪರಿಚಯಿಸಲು ಜಿಲ್ಲಾ ತಾಲ್ಲೂಕುಗಳಿಗೆ ಫ್ರಾಂಚೈಸಿಗಾಗಿ ಸಂಪರ್ಕಿಸಿ: ಆಶೀರ್ವಾದ್ ಪೇಸ್ ಬೆಂಗಳೂರು. 8217593354.

ಉದ್ಯೋಗಾವಕಾಶ

Wanted

ಬೇಕಾಗಿದ್ದಾರೆ: ವೃದ್ಧರನ್ನು, ರೋಗಿಗಳನ್ನು ಮತ್ತು ಮಗುವನ್ನು ನೋಡಿಕೊಳ್ಳಲು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಮತ್ತು ತರಬೇತಿ ನೀಡಲಾಗುವುದು. ಸಂಬಳ: 15,000/- ರಿಂದ 20,000/-. ಆಸಕ್ತರು ಸಂಪರ್ಕಿಸಿ: 9620985000, 9620557000, 080-41115200. ಮೆರಿಟ್ಟಾ ಕೇರ್, ದೊಡ್ಡ ಬಾಣಸವಾಡಿ, ಬೆಂಗಳೂರು-43

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/ 9611225344

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611225388/ 9611225266

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 26.02.2023 7ದಿನಗಳು ಕಾಶಿ ನೈಮಿಷ್ಯಾರಣ್ಯಾ,ಅಯೋಧ್ಯ ಪ್ರಯಾಗ ಗಯಾ ಬುದ್ಧಗಯಾ, ಸೀತಾಮಡು.20.02.2023 11ದಿನಗಳು ಚಂದೀಗಡ್,ಸಿಮ್ಲಾ ಕುಲುಮನಾಲಿ 5ದೇವಿಯರು ವೈಷ್ಣೋದೇವಿ,ಅಮೃತಸರ್ ವಾಘಗಡಿ,ಕುರುಕ್ಷೇತ್ರ., 04.03.2023 10ದಿನಗಳು ಅಖಂಡ ನೇಪಾಳ ರಾಷ್ಟ್ರ ಪ್ರವಾಸ (ಮುಕ್ತಿನಾಥ ಸಹಿತ) 25.03.2023,15.04.2023 06.05.2023 21/16/13ದಿನಗಳು ಈಶಾನ್ಯ ರಾಜ್ಯಗಳ(ಸೆವೆನ್‌ಸಿಸ್ಟರ್ಸ ಪ್ರವಾಸ)ಅಸ್ಸಾಂ, ಅರುಣಾಚಲ, ನಾಗಲ್ಯಾಂಡ್,ಮಣಿಪುರ ತ್ರಿಪುರ ಮೇಘಾಲಯ,ಮಿಝೋರಾಂ. 8073824856, 6366322639, 9206979202

TRAVEL CORNER

★07.02.2023 16ದಿನಗಳು★ 95ದಿವ್ಯದೇಶಂಪ್ರವಾಸ. 04.03.2023, 11.04.2023 8/13ದಿನಗಳು ಕಾಶಿ ಪ್ರವಾಸ, 20.04.2023 7ದಿನಗಳು ವೈಷ್ಣೋದೇವಿ, ಅಮೃತಸರ್ ಪ್ರವಾಸ.27.04.2023 16ದಿನಗಳು ಕಾಶಿ,ನೇಪಾಳ,ಮುಕ್ತಿನಾಥ ಜನಕಪುರ್ ಪ್ರವಾಸ.ಆರ್.ಗಾಂಧಿ ಟೂರ್ಸ್(ರಿ) 9902433500/ 9945445809/ 26760367

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 21/2 ದೆಹಲಿ, ವೈಷ್ಣೋದೇವಿ. 8/2 ಕಾಶಿ, ಗಯ, ಅಯೋಧ್ಯ. 11/2 ಪೂರಿ ಜಗನ್ನಾಥ್, ಕೊನಾರ್ಕ್, ಭುವನೇಶ್ವರ್. 9591017782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭವಿಷ್ಯ

Astrology

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ, ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ, ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9844174018

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171



ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಗುರುವಾರ, ಜನವರಿ 26, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 26 | ಪುಟ 30

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ@75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗಣರಾಜ್ಯೋತ್ಸವದ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,205	17,892	₹59,000 (ಬೆಂಗಳೂರು)	₹70,100 (ಬೆಂಗಳೂರು)	81.65

ನೃತ್ಯ
ನವದೆಹಲಿಯ ಛತ್ರಸಾಲ್ ಕ್ರೀಡಾಂಗಣದಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ನಡೆದ ತಾಲೀಮಿನಲ್ಲಿ ನೃತ್ಯ ಪ್ರದರ್ಶಿಸಿದ ವಿದ್ಯಾರ್ಥಿನಿ

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ.

— ಸಂ

ಅಮೆರಿಕದ ಸಂಶೋಧನಾ ಸಂಸ್ಥೆಯ ವರದಿ • ಆರೋಪ ಅಲ್ಲಗಳೆದ ಸಮೂಹ

ಅದಾನಿ: ಲೆಕ್ಕಪತ್ರ 'ವಂಚನೆ'

ನವದೆಹಲಿ (ಪಿಟಿಐ): ಅದಾನಿ ಸಮೂಹವು 'ಯಾವ ಲಜ್ಜೆಯೂ ಇಲ್ಲದೆ ಷೇರು ಬೆಲೆಯ ಮೇಲೆ ಕೃತಕವಾಗಿ ಪರಿಣಾಮ ಬೀರುವ ಕೆಲಸದಲ್ಲಿ ಹಾಗೂ ಲೆಕ್ಕಪತ್ರಗಳ ವಂಚನೆಯಲ್ಲಿ ತೊಡಗಿದೆ' ಎಂದು ಅಮೆರಿಕದ ಹೂಡಿಕೆ ಸಂಶೋಧನಾ ಸಂಸ್ಥೆ 'ಹಿಂಡನ್‌ಬರ್ಗ್ ರಿಸರ್ಚ್' ಆರೋಪಿಸಿದೆ.

ಗೌತಮ್ ಅದಾನಿ

ಸಂಸ್ಥೆಯ ಆರೋಪಕ್ಕೆ ಪ್ರತಿಕ್ರಿಯಿಸಿರುವ ಅದಾನಿ ಸಮೂಹವು, 'ಇದಕ್ಕೆ ಆಧಾರವಿಲ್ಲ, ಇದು ದುರುದ್ದೇಶದಿಂದ ಕೂಡಿದೆ, ಏಕಪಕ್ಷೀಯವಾಗಿದೆ ಹಾಗೂ ನಮ್ಮ ಷೇರು ಮಾರಾಟ ಪ್ರಕ್ರಿಯೆಯನ್ನು (ಎಫ್‌ಪಿಒ) ಹಾಳುಗೆಡಹುವ ಕೆಟ್ಟ ಉದ್ದೇಶ ಹೊಂದಿದೆ' ಎಂದು ತಿರುಗೇಟು ನೀಡಿದೆ.

'₹ 17.8 ಲಕ್ಷ ಕೋಟಿ ಮೌಲ್ಯದ ಅದಾನಿ ಸಮೂಹವು ದಶಕಗಳಿಂದ ಈ ರೀತಿ ಮಾಡಿಕೊಂಡು ಬಂದಿದೆ' ಎಂಬುದು ತಾನು ಎರಡು ವರ್ಷಗಳಿಂದ ನಡೆಸಿದ ಸಂಶೋಧನೆಯಿಂದ ಗೊತ್ತಾಗಿದೆ ಎಂದು ಹಿಂಡನ್‌ಬರ್ಗ್ ಹೇಳಿದೆ.

6ನೇ ಪುಟ ನೋಡಿ

ಅದಾನಿ ಷೇರು ಮೌಲ್ಯ ಕುಸಿತ

ಕಂಪನಿ	ಷೇರು ಮೌಲ್ಯ ಕುಸಿತ (%)
ಅದಾನಿ ಟ್ರಾನ್ಸ್‌ಮಿಷನ್	8.87
ಅದಾನಿ ಪೋರ್ಟ್ಸ್ ಆ್ಯಂಡ್ ಎಸ್‌ಇಜೆಡ್	6.30
ಅದಾನಿ ಟೋಟಲ್ ಗ್ಯಾಸ್	5.59
ಅದಾನಿ ವಿಲ್ಮರ್	5
ಅದಾನಿ ಪವರ್	5
ಅದಾನಿ ಗ್ರೀನ್ ಎನರ್ಜಿ	3.04
ಅದಾನಿ ಎಂಟರ್‌ಪ್ರೈಸಸ್	1.54

(ಹಿಂಡನ್‌ಬರ್ಗ್ ರಿಸರ್ಚ್ ವರದಿ ಬಹಿರಂಗ ಆದ ನಂತರದಲ್ಲಿ ಅದಾನಿ ಸಮೂಹದ ಕಂಪನಿಗಳ ಷೇರು ಮೌಲ್ಯದಲ್ಲಿ ಆದ ಇಳಿಕೆ)

ಸಾಲ: ಕಳವಳ ಅಲ್ಲಗಳೆದ ಸಮೂಹ

ನವದೆಹಲಿ: ಸಾಲಕ್ಕೆ ಸಂಬಂಧಿಸಿದ ಕಳವಳಗಳನ್ನು ಅದಾನಿ ಸಮೂಹವು ಮತ್ತೆ ಮತ್ತೆ ಅಲ್ಲಗಳೆಯುತ್ತ ಬಂದಿದೆ. ಸಮೂಹದ ಮುಖ್ಯ ಹಣಕಾಸು ಅಧಿಕಾರಿ ಜುಗೇಶಿಂದರ್ ಸಿಂಗ್ ಅವರು ಈಚೆಗೆ ಮಾಧ್ಯಮಗಳ ಬಳಿ, 'ಈ ಕಳವಳವನ್ನು ನಮ್ಮ ಬಳಿ ಯಾರೂ ವ್ಯಕ್ತಪಡಿಸಿಲ್ಲ. ಒಬ್ಬನೇ ಒಬ್ಬ ಹೂಡಿಕೆದಾರ ಕೂಡ ಈ ಮಾತು ಹೇಳಿಲ್ಲ' ಎಂದಿದ್ದರು.

ಬುಧವಾರ ನೀಡಿರುವ ಪ್ರತಿಕ್ರಿಯೆಯಲ್ಲಿ ಅದಾನಿ ಸಮೂಹವು, 'ಹೂಡಿಕೆದಾರರ ಸಮೂಹವು ಅದಾನಿ ಸಮೂಹದಲ್ಲಿ ಯಾವತ್ತಿಗೂ ವಿಶ್ವಾಸ ಇರಿಸಿದೆ. ಹಣಕಾಸು ತಜ್ಞರು ಸಿದ್ಧಪಡಿಸಿದ ವಿಸ್ತೃತ ವರದಿಗಳು ಹಾಗೂ ವಿಶ್ಲೇಷಣೆಗಳು ಮತ್ತು ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಗಳು ನೀಡುವ ಕ್ರೆಡಿಟ್ ರೇಟಿಂಗ್ ಆಧರಿಸಿ ಅವರು ವಿಶ್ವಾಸ ಇರಿಸಿದ್ದಾರೆ' ಎಂದು ಹೇಳಿದೆ.

'ಅಗತ್ಯ ಮಾಹಿತಿ ಹಾಗೂ ಜ್ಞಾನವನ್ನು ಹೊಂದಿರುವ ನಮ್ಮ ಹೂಡಿಕೆದಾರರು ಏಕಪಕ್ಷೀಯ, ಆಧಾರವಿಲ್ಲದ ಹಾಗೂ ಸ್ಥಾಪಿತ ಹಿತಾಸಕ್ತಿಗಳಿಂದ ಕೂಡಿರುವ ವರದಿಗಳಿಂದ ಪ್ರಭಾವಿತರಾಗುವುದಿಲ್ಲ' ಎಂದು ಅದು ವಿಶ್ವಾಸ ವ್ಯಕ್ತಪಡಿಸಿದೆ.

ಸಮೂಹವು ಎಲ್ಲ ಕಾನೂನುಗಳನ್ನು ಪಾಲಿಸುತ್ತ ಬಂದಿದೆ. ಕಾರ್ಪೊರೇಟ್ ಆಡಳಿತದಲ್ಲಿ ಅತ್ಯುನ್ನತ ಮಟ್ಟವನ್ನು ಕಾಯ್ದುಕೊಂಡಿದೆ ಎಂದೂ ಹೇಳಿದೆ.

ಫಿಚ್ ಸಮೂಹದ ಅಂಗಸಂಸ್ಥೆಯಾಗಿರುವ ಕ್ರೆಡಿಟ್‌ಸೈಟ್ಸ್ ಸೆಪ್ಟೆಂಬರ್ ತಿಂಗಳಲ್ಲಿ ವರದಿಯೊಂದರಲ್ಲಿ, 'ಸಮೂಹವು ಅತಿಯಾದ ಸಾಲದಲ್ಲಿ ಇದೆ' ಎಂದು ಹೇಳಿತ್ತು. ನಂತರ ತನ್ನ ಕೆಲವು ತಪ್ಪು ಲೆಕ್ಕಾಚಾರಗಳನ್ನು ಅದು ತಿದ್ದಿಕೊಂಡಿತ್ತು. ಆದರೆ ಸಮೂಹದ ಸಾಲದ ವಿಚಾರವಾಗಿ ಕಳವಳ ಇದ್ದೇ ಇದೆ ಎಂದು ಸ್ಪಷ್ಟಪಡಿಸಿತ್ತು.

ಉತ್ತರ ಪ್ರದೇಶದ ಸಚಿವನಿಗೆ 1 ವರ್ಷ ಜೈಲು, ಜಾಮೀನು

ಲಖನೌ: ಉತ್ತರ ಪ್ರದೇಶದಲ್ಲಿ ಒಂಬತ್ತು ವರ್ಷಗಳ ಹಿಂದೆ ನಡೆದ ಲೋಕಸಭಾ ಚುನಾವಣೆ ವೇಳೆ ಸಮಾಜವಾದಿ ಪಕ್ಷದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ನಂದಗೋಪಾಲ್ ಗುಪ್ತಾ ಅವರಿಗೆ ಒಂದು ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ.

ಪ್ರಯಾಗ್‌ರಾಜ್ ಶಾಸಕ/ಸಂಸದರ ನ್ಯಾಯಾಲಯದ ವಿಶೇಷ ನ್ಯಾಯಾಧೀಶ ದಿನೇಶ್ ಚಂದ್ರ ಶುಕ್ಲಾ ಅವರು ಸಚಿವ ಗುಪ್ತಾ ಅವರಿಗೆ ಈ ಶಿಕ್ಷೆ ವಿಧಿಸಿದ್ದಲ್ಲದೆ, ₹ 10 ಸಾವಿರ ದಂಡವನ್ನೂ ವಿಧಿಸಿದರು. ಆದರೆ ನ್ಯಾಯಾಲಯ ಇದೇ ವೇಳೆ ಜಾಮೀನು ನೀಡಿದ್ದು, ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವುದಾಗಿ ಗುಪ್ತಾ ತಿಳಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬಿಬಿಸಿ ಸಾಕ್ಷ್ಯಚಿತ್ರ: ಜಟಾಪಟಿ ತೀವ್ರ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಮತ್ತು 2002ರ ಗೋಧ್ರಾ, ಗೋಧ್ರೋತ್ತರ ಹತ್ಯಾಕಾಂಡಗಳ ಕುರಿತು ಬಿಬಿಸಿ ನಿರ್ಮಿಸಿರುವ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಸಂಬಂಧಿಸಿದಂತೆ ದೆಹಲಿಯ ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯ ಮತ್ತು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಸಂಘಟನೆಗಳು ಮಂಗಳವಾರ ರಾತ್ರಿ ಮತ್ತು ಬುಧವಾರ ಪ್ರತಿಭಟನೆ ನಡೆಸಿವೆ.

ಪ್ರತಿಭಟನಾನಿರತರಾಗಿದ್ದ ಹಲವು ವಿದ್ಯಾರ್ಥಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ವಿದ್ಯಾರ್ಥಿ ಸಂಘಟನೆಗಳು ಆರೋಪಿಸಿವೆ. ಪೊಲೀಸರ ಈ ಕ್ರಮವನ್ನು ವಿದ್ಯಾರ್ಥಿ ಸಂಘಟನೆಗಳು ಖಂಡಿಸಿ, ಪ್ರತಿಭಟನೆ ನಡೆಸಿವೆ. ವಿದ್ಯಾರ್ಥಿಗಳನ್ನು ವಶಕ್ಕೆ ಪಡೆದಿರುವ ಬಗ್ಗೆ ವಿಶ್ವವಿದ್ಯಾಲಯಗಳು ಯಾವುದೇ ಮಾಹಿತಿ ನೀಡಿಲ್ಲ. ಈ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸುವುದಾಗಿ ಪಶ್ಚಿಮ ಬಂಗಾಳದ ಇನ್ನೂ ಎರಡು ವಿಶ್ವವಿದ್ಯಾಲಯಗಳ ವಿದ್ಯಾರ್ಥಿ ಸಂಘಟನೆಗಳು ಘೋಷಿಸಿವೆ.

ಕಾಂಗ್ರೆಸ್ ಹುದ್ದೆಗಳಿಗೆ ಅನಿಲ್ ಆ್ಯಂಟನಿ ರಾಜೀನಾಮೆ

ತಿರುವನಂತಪುರ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಕುರಿತು ಬಿಬಿಸಿ ಸಾಕ್ಷ್ಯಚಿತ್ರವನ್ನು ನಿರ್ಬಂಧಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡಿರುವ ಕಾಂಗ್ರೆಸ್‌ನ ಹಿರಿಯ ನಾಯಕ ಎ.ಕೆ.ಆ್ಯಂಟನಿ ಅವರ ಪುತ್ರ ಅನಿಲ್ ಕೆ. ಆ್ಯಂಟನಿ, ಪಕ್ಷದ ವಿವಿಧ ಹುದ್ದೆಗಳಿಗೆ ರಾಜೀನಾಮೆ ಸಲ್ಲಿಸಿದ್ದಾರೆ. ಆದರೆ, ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಅವರು ರಾಜೀನಾಮೆ ನೀಡಿಲ್ಲ.

ಬಿಬಿಸಿ ಸಾಕ್ಷ್ಯಚಿತ್ರದ ವಿರುದ್ಧ ಅನಿಲ್ ಟ್ವೀಟ್ ಮಾಡಿದ್ದರು. ಇದಕ್ಕೆ ಕಾಂಗ್ರೆಸ್‌ನಿಂದಲೇ ವ್ಯಾಪಕ ಟೀಕೆ ವ್ಯಕ್ತವಾಗಿತ್ತು. ಇದರ ಬೆನ್ನಲ್ಲೇ ಅವರು, ಕೆಪಿಸಿಸಿ ಡಿಜಿಟಲ್ ಮಾಧ್ಯಮ, ಎಐಸಿಸಿ ಸಾಮಾಜಿಕ ಮಾಧ್ಯಮ ಮತ್ತು ಡಿಜಿಟಲ್ ಸಂವಹನ ಘಟಕಗಳ ಮುಖ್ಯಸ್ಥರ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ. ಸಾಕ್ಷ್ಯಚಿತ್ರವನ್ನು ವಿರೋಧಿಸಿದ್ದಕ್ಕೆ ತಮಗೆ ಬೆದರಿಕೆ ಕರೆ ಮತ್ತು ಸಂದೇಶಗಳು ಬರುತ್ತಿವೆ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಇನ್ನಷ್ಟು ಸುದ್ದಿಗಳು 2A

ತುಂಗಾ ಆರತಿ

'ಹಂಪಿ ಉತ್ಸವ'ದ ಅಂಗವಾಗಿ ವಿಜಯನಗರ ಜಿಲ್ಲಾಡಳಿತವು ಬುಧವಾರ ರಾತ್ರಿ ಹೊಸಪೇಟೆ ತಾಲ್ಲೂಕಿನ ಹಂಪಿಯಲ್ಲಿ ಹಮ್ಮಿಕೊಂಡಿದ್ದ ತುಂಗಾ ಆರತಿ ಕಾರ್ಯಕ್ರಮದಲ್ಲಿ ಮುಜರಾಯಿ ಖಾತೆ ಸಚಿವೆ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ, ಪ್ರವಾಸೋದ್ಯಮ ಖಾತೆ ಸಚಿವ ಆನಂದ್ ಸಿಂಗ್, ಸಂಸದ ವೈ.ದೇವೇಂದ್ರಪ್ಪ ಅವರು ತುಂಗಭದ್ರೆಗೆ ಆರತಿ ಬೆಳಗಿದರು -ಪ್ರಜಾವಾಣಿ ಚಿತ್ರ

ಎಸ್‌.ಎಲ್‌.ಭೈರಪ್ಪ, ಸುಧಾಮೂರ್ತಿ ಅವರಿಗೆ ಪದ್ಮಭೂಷಣ

ಎಸ್‌.ಎಂ.ಕೃಷ್ಣ ಪದ್ಮವಿಭೂಷಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು ಈ ಸಾಲಿನ ಅತ್ಯುನ್ನತ ನಾಗರಿಕ ಸೇವಾ ಪ್ರಶಸ್ತಿಗಳಾದ ಪದ್ಮವಿಭೂಷಣ, ಪದ್ಮಭೂಷಣ ಹಾಗೂ ಪದ್ಮಶ್ರೀ ಪುರಸ್ಕೃತರ ಹೆಸರುಗಳನ್ನು ಬುಧವಾರ ರಾತ್ರಿ ಪ್ರಕಟಿಸಿದೆ.

ಕರ್ನಾಟಕದ ಹಿರಿಯ ರಾಜಕಾರಣಿ ಎಸ್‌.ಎಂ. ಕೃಷ್ಣ ಸೇರಿ ಆರು ಸಾಧಕರನ್ನು ಪದ್ಮವಿಭೂಷಣ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಕನ್ನಡದ ಹಿರಿಯ ಸಾಹಿತಿ ಎಸ್‌.ಎಲ್‌.ಭೈರಪ್ಪ ಹಾಗೂ ಇನ್ಫೋಸಿಸ್ ಫೌಂಡೇಷನ್‌ನ ಅಧ್ಯಕ್ಷೆ ಸುಧಾಮೂರ್ತಿ ಪದ್ಮಭೂಷಣ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕರ್ನಾಟಕದ ಐವರು ಸಾಧಕರನ್ನು ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಿಂದ ಡಾ.ಖಾದರ್ ವಲ್ಲಿ ದುಡೆಕುಲ್ಲಾ, ನೃತ್ಯದ ಮೂಲಕ ಕೊಡವ ಸಂಸ್ಕೃತಿಯನ್ನು ಪಸರಿಸಲು ಶ್ರಮಿಸಿದ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷೆ ರಾಣಿ ಮಾಚಯ್ಯ, ತಮಟೆಯ ತಂದೆಯೆಂದು ಪ್ರಖ್ಯಾತರಾದ ಚಿಕ್ಕಬಳ್ಳಾಪುರದ ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ

2F ಪುಟ ನೋಡಿ

ಎಸ್‌.ಎಂ. ಕೃಷ್ಣ



ಎಸ್‌.ಎಲ್‌. ಭೈರಪ್ಪ

ಸುಧಾಮೂರ್ತಿ

ಎಸ್‌.ಸುಬ್ಬರಾಮನ್

ಡಾ.ಖಾದರ್ ವಲ್ಲಿ ದುಡೆಕಲ್ಲಾ

ರಾಣಿ ಮಾಚಯ್ಯ



ಮುನಿವೆಂಕಟಪ್ಪ

ರಶೀದ್ ಅಹ್ಮದ್

ಸುಧಾ, ಮಯೂರ, ಸ್ಪರ್ಧಾವಾಣಿ ಓದಿರಿ

SBI ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ
ಪರ್ಸ್ನಲ್ ಬ್ಯಾಂಕಿಂಗ್ ಬ್ರಾಂಚ್, ನಂ. 397, 13ನೇ ಅಡ್ಡರಸ್ತೆ, ಅಪ್ಪರ್ ಪ್ಯಾಲೆಸ್ ಆರ್ಕೆಡ್, ಸದಾಶಿವನಗರ, ಬೆಂಗಳೂರು – 560080, ಬ್ರಾಂಚ್ ಕೋಡ್: (04253), ಫೋನ್: 080–23619082, ಇ–ಮೇಲ್: sbi.04253@sbi.co.in

ಸೂಚನೆ:

ಈ ಮೂಲಕ ಲಾಕರ್ ಹೋಲ್ಡರ್‌ಗಳಾದ ಶ್ರೀ ಎ. ಪ್ರಸಾದ್ ಮತ್ತು ಶ್ರೀ ಹೆಚ್.ವಿ. ಶಂಕರ (ಪಶ್ಚಿಮ್ ಡೆವಲಪರ್ಸ್ ಕನ್ಸ್ಟ್ರಕ್ಷನ್ಸ್, 389, 13ನೇ ಮುಖ್ಯರಸ್ತೆ, ಅಪ್ಪರ್ ಪ್ಯಾಲೆಸ್ ಆರ್ಕೆಡ್ ಸದಾಶಿವನಗರ, ಬೆಂಗಳೂರು – 560080, ಇವರಿಗೆ ಸೂಚಿಸುವುದೇನೆಂದರೆ ದಿನಾಂಕ: 27–02–2023ರ ಒಳಗಾಗಿ ಲಾಕರ್ ಬಾಡಿಗೆಯ ಬಾಕಿ ಮೊತ್ತ ರೂ. 36,182/–ಗಳನ್ನು ಪಾವತಿಸದಿದ್ದರೆ ಅವರುಗಳು ಬಾಡಿಗೆಗೆ ಪಡೆದಿರುವ ಬ್ಯಾಂಕ್ ಲಾಕರುಗಳನ್ನು ಬ್ಯಾಂಕಿನ ನಿಯಮದ ಪ್ರಕಾರ ದಿನಾಂಕ: 28.02.2023 ರಂದು ಒಡೆದು ತೆರೆಯಲು ಉದ್ದೇಶಿಸಲಾಗುತ್ತದೆ.

ಸ್ಥಳ: ಬೆಂಗಳೂರು, ದಿನಾಂಕ: 26–01–2023 ಶಾಖಾ ವ್ಯವಸ್ಥಾಪಕರು

E-mail: ndribng@kar.nic.in
Fax : 080-22631475
Head: 080-22631402/A.O : 080-22631405

ಐಸಿಎಆರ್–ರಾಷ್ಟ್ರೀಯ ಹೈನು ಸಂಶೋಧನಾ ಸಂಸ್ಥೆ
ದಕ್ಷಿಣ ವಲಯ ಕೇಂದ್ರ
ಬೆಂಗಳೂರು – 560 030

ಎಫ್.ನಂ.6–2/ಸಿಡಿಎನ್/ಸ್ಟಾಫ್ ಕ್ಯಾಂಟೀನ್/22–23 ದಿನಾಂಕ: 25.01.2023

ಸ್ಟಾಫ್ ಕ್ಯಾಂಟೀನ್ ನಡೆಸಲು ಕೊಟೇಶನ್ಸ್ ಆಹ್ವಾನ ಪ್ರಕಟಣೆ

ಸದರಿ ಸಂಸ್ಥೆಯಲ್ಲಿ ಸ್ಟಾಫ್ ಕ್ಯಾಂಟೀನ್ ನಡೆಸಲು ಮೊಹರಾದ ಕೊಟೇಶನ್‌ಗಳನ್ನು ಆಹ್ವಾನಿಸಲಾಗಿದೆ. ವಿವರವಾದ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಕೊಟೇಶನ್ ಫಾರಂಗಳನ್ನು 15.02.2023 ರಂದು ಅಪರಾಹ್ನ 2.00 ಗಂಟೆಯೊಳಗೆ ಈ ಕೆಳಗೆ ಸಹಿ ಹಾಕಿರುವವರ ಕಚೇರಿಯಿಂದ ಪಡೆದುಕೊಳ್ಳಬಹುದು.

ಸಹಿ/– ಸಹಾಯಕ ಆಡಳಿತಾಧಿಕಾರಿ
ಲ್ಯಾಂಡ್‌ಲೈನ್ ನಂ. 080 22631405

ದಾಖಲೆಯ ₹13.60 ಲಕ್ಷಕ್ಕೆ ಎತ್ತು ಖರೀದಿ

ಪ್ರಜಾವಾಣಿ ವಾರ್ತೆ

ಮಹಾಲಿಂಗಪುರ (ಬಾಗಲಕೋಟೆ): ಸಮೀಪದ ನಂದಗಾಂವ ಗ್ರಾಮದ ರೈತರೊಬ್ಬರು ಎತ್ತನ್ನು ದಾಖಲೆಯ ₹13.60 ಲಕ್ಷಕ್ಕೆ ಖರೀದಿ ಮಾಡಿದ್ದಾರೆ.

ಮುಧೋಳ ತಾಲ್ಲೂಕಿನ ಮೆಟಗುಡ್ಡ-ಹಲಕಿ ಗ್ರಾಮದ ಕಾಶಿಲಿಂಗಪ್ಪ ಮತ್ತು ಯಮನಪ್ಪ ಗಡದಾರ ಸಹೋದರರಿಂದ ನಂದಗಾಂವ ಗ್ರಾಮದ ವಿಠ್ಠಲ ಮ್ಯಾಗಾಡಿ ಅವರು ಈ ಎತ್ತನ್ನು ಖರೀದಿಸಿದ್ದಾರೆ.

ಬೆಂಗಳೂರು ವಿವಿ: ನಿರ್ದೇಶಕರ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ವಿವಿಧ ವಿಭಾಗಗಳ ನಿರ್ದೇಶಕರು, ವಿಶೇಷ ಅಧಿಕಾರಿಗಳು ಮತ್ತು ಸಮನ್ವಯಾಧಿಕಾರಿಗಳನ್ನು ಬದಲಾಯಿಸಲಾಗಿದೆ.

ಮಂಗಳವಾರ ನಡೆದ ಸಿಂಡಿಕೇಟ್ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗಿದೆ. ವಿವಿಧ ವಿಭಾಗಗಳಿಗೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರನ್ನು ನಿರ್ದೇಶಕರು, ಸಮನ್ವಯಾಧಿಕಾರಿ ಮತ್ತು ವಿಶೇಷಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಸದ್ಯ ಈ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರು ಹೊಸಬರಿಗೆ ಅಧಿಕಾರ ಹಸ್ತಾಂತರಿಸಬೇಕು ಎಂದು ಕುಲಸಚಿವರು ಸೂಚಿಸಿದ್ದಾರೆ.

ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರನ್ನಾಗಿ ಪ್ರೊ.ಅಶೋಕ್ ಡಿ. ಹಂಜಗಿ, ಪ್ರಸಾರಂಗ ಮತ್ತು ಪ್ರಿಂಟಿಂಗ್ ಪ್ರೆಸ್ ನಿರ್ದೇಶಕರನ್ನಾಗಿ ಪ್ರೊ. ಎಂ. ನಾರಾಯಣ ಸ್ವಾಮಿ, ವಿದ್ಯಾರ್ಥಿ ಕಲ್ಯಾಣ ನಿರ್ದೇಶಕರನ್ನಾಗಿ ಪ್ರೊ. ಕೆ.ರಾಮಕೃಷ್ಣಯ್ಯ, ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕರನ್ನಾಗಿ ಪ್ರೊ. ಸಿ.ಬಿ. ಹೊನ್ನುಸಿದ್ಧಾರ್ಥ ಅವರನ್ನು ನೇಮಿಸಲಾಗಿದೆ.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001.
ಫೋನ್: +91 80 4544 8000, 2221 0705; ಫ್ಯಾಕ್ಸ್: +91 80 3985 6862
ಇಮೇಲ್: contactus.India@diageo.com ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

ಡಿಸೆಂಬರ್ 31, 2022ಕ್ಕೆ ಅಂತ್ಯವಾದ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳುಗಳಿಗೆ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಪರಿಶೋಧಿಸದಿರುವ ಆರ್ಥಿಕ ಫಲಿತಾಂಶಗಳ ವಿವರಣೆ

(ಐಎನ್‌ಆರ್ ದಶಲಕ್ಷಗಳಲ್ಲಿ ಪ್ರತಿ ಷೇರಿನ ಡೇಟಾದ ಆದಾಯವನ್ನು ಹೊರತುಪಡಿಸಿ)

ಕ್ರ. ಸಂಖ್ಯೆ	ವಿವರಗಳು	ಪ್ರತ್ಯೇಕಿತ			ಕ್ರೋಢೀಕೃತ		
		ಡಿಸೆಂಬರ್ 31, 2022ಕ್ಕೆ ಕೊನೆಗೊಂಡ ತ್ರೈಮಾಸಿಕ	ಡಿಸೆಂಬರ್ 31, 2022ಕ್ಕೆ ಕೊನೆಗೊಂಡ 9 ತಿಂಗಳುಗಳಿಗೆ	ಡಿಸೆಂಬರ್ 31, 2021ಕ್ಕೆ ಕೊನೆಗೊಂಡ ತ್ರೈಮಾಸಿಕ	ಡಿಸೆಂಬರ್ 31, 2022ಕ್ಕೆ ಕೊನೆಗೊಂಡ ತ್ರೈಮಾಸಿಕ	ಡಿಸೆಂಬರ್ 31, 2022ಕ್ಕೆ ಕೊನೆಗೊಂಡ 9 ತಿಂಗಳುಗಳಿಗೆ	ಡಿಸೆಂಬರ್ 31, 2021ಕ್ಕೆ ಕೊನೆಗೊಂಡ ತ್ರೈಮಾಸಿಕ
		ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	66,122	2,17,949	88,498	66,098	2,20,238	89,172
2.	ಅವಧಿಯ (ತೆರಿಗೆಯ ಮೊದಲು ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	3,031	8,679	3,779	3,040	9,549	4,038
3.	ಅವಧಿಯ ತೆರಿಗೆಯ ಮೊದಲು (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	1,520	10,500	3,779	1,551	11,483	4,038
4.	ಅವಧಿಯ ತೆರಿಗೆಯ ನಂತರ (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	1,105	8,477	3,108	2,142	10,230	2,953
5.	ಅವಧಿಯ ಒಟ್ಟಾರೆ ವ್ಯಾಪಕ ಆದಾಯ ಅವಧಿಯ [ಲಾಭ/(ನಷ್ಟ) (ತೆರಿಗೆಯ ನಂತರ) ಮತ್ತು ಇತರ ವ್ಯಾಪಕ ಆದಾಯ (ತೆರಿಗೆಯ ನಂತರ)ಗಳನ್ನು ಒಳಗೊಂಡಿರುವ]	1,105	8,477	3,190	2,200	10,275	3,033
6.	ಈಕ್ವಿಟಿ ಷೇರು ಬಂಡವಾಳ	1,455	1,455	1,455	1,455	1,455	1,453
7.	ಮೀಸಲುಗಳು (ಮೌಲ್ಯಮಾಪಿತ ಮೀಸಲುಗಳನ್ನು ಹೊರತುಪಡಿಸಿ) ಹಿಂದಿನ ವರ್ಷದ ಪರಿಶೋಧಿತ ಆಯವ್ಯಯ ಪಟ್ಟಿಯಲ್ಲಿ ತೋರಿಸಲಾಗಿದೆ						
8.	ಪ್ರತಿ ಷೇರಿನ ಗಳಿಕೆ (ಪ್ರತಿ ಷೇರಿಗೆ ರೂ. 2/–) [ಸೂಚನೆ (ಸಿ) ಅನ್ನು ನೋಡಿ]						
	1. ಮೂಲ :	1.52	11.65	4.27	3.02	14.55	4.22
	2. ದುರ್ಬಲೀಕೃತ :	1.52	11.65	4.27	3.02	14.55	4.22

ಸೂಚನೆಗಳು:

ಎ) ಮೇಲಿನದು 2015ರ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಫೈಲ್ ಮಾಡಿರುವ ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಂಶವಾಗಿದೆ. ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ ಲಭ್ಯವಿರುತ್ತದೆ.

ಬಿ) ಅಸಾಧಾರಣ ಮತ್ತು/ಅಥವಾ ಅಸಾಮಾನ್ಯ ಐಟಂಗಳನ್ನು, ಕಂಪನಿಗಳ (ಭಾರತೀಯ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್) ನಿಯಮಗಳು, 2015 ಕಂಪನಿ ಕಾಯಿದೆ 2013 ಮತ್ತು ನೀತಿಗಳ ವಿಭಾಗ 133 ಅಡಿಯಲ್ಲಿ ಶಿಫಾರಸು ಅನುಗುಣವಾಗಿ ಲಾಭ ಹೇಳಿಕೆ ಮತ್ತು ನಷ್ಟದಲ್ಲಿ ಸರಿಹೊಂದಿಸಲ್ಪಡುತ್ತದೆ.

ಸಿ) ಫಲಿತಾಂಶಗಳ ಕ್ರೋಢೀಕೃತ ಸ್ಟೇಟ್‌ಮೆಂಟ್ ಅಡಿಯಲ್ಲಿ ಪ್ರಸ್ತುತಪಡಿಸಲಾದ ಎಲ್ಲಾ ಅವಧಿಗಳಲ್ಲಿ ಸರಾಸರಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳನ್ನು ಲೆಕ್ಕಾಚಾರ ಮಾಡುವಾಗ, ಕಂಪನಿಯ ಯುಎಸ್‌ಎಲ್ ಬೆನಿಫಿಟ್ ಟ್ರಸ್ಟ್‌ನಲ್ಲಿ ಹೊಂದಿರುವ (ಕಂಪೆನಿಯ ಏಕೈಕ ಫಲಾನುಭವಿಯಾಗಿರುವ) ಸ್ವಂತ ಷೇರುಗಳನ್ನು ಕಡಿಮೆ ಮಾಡಿದೆ.

ನಿರ್ದೇಶಕರ ಮಂಡಳಿಯ ನಿಮಿತ್ಯ ಮತ್ತು ಅವರ ಪರವಾಗಿ
ಸಹಿ/–
ಹಿನಾ ನಾಗರಾಜನ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : ಜನವರಿ 24, 2023

PUBLIC NOTICE

It is hereby notified that, my clients have agreed to purchase the Schedule Property from its owners: (i) **Miss.SHRAVANI.M** D/o Sri.Muniraju.G.A; (ii) **SMT.K.C.PAVITHRA** W/o Sri.R.Raju; (iii) **SRI.P.MAYUR** S/o Sri.K.C.Praveen; (iv) **SMT.SHASHIKALA.R** W/o Sri.Ramanjaneya; (v) **SMT.M.MUNIRATHNA** W/o Sri.M.Krishna Murthy; (vi) **SMT.T.N.TEJAVATHI (TUMKUR NARASIMHAMURTHY THEJAVATHI)** D/o Sri.Narasimhamurthy Rangappa; and (vii) **SMT.J.MANJULA** W/o Sri.Srinivasa.G, residing at No.39, 5th Cross, Narasimha Layout, Vijinapura, Dooravani Nagar, Bengaluru-560 016.

Apart from the said Owners, if any other person/s have any manner of right, title and or interest or claim or charge or lien over the Schedule Property or otherwise have any lawful objection/s for sale of the Schedule Property by the aforesaid Owners, they are hereby called upon to file their objection/s in writing, along with the photocopies of documents on which they rely, with the undersigned, within **14 days** from the date of publication of this notice. Objection/s received thereafter will not be binding on my clients

SCHEDULE

All that piece and parcel of the vacant residential property bearing (i) **Municipal No.4221/19/2/99 & 100 (Site bearing Nos.99 and 100)** measuring East to West 96+97/2ft and North to South 58ft, totally measuring **5597 Sq.ft; (ii) Municipal No.4223/19/2/101 & 102 (Site bearing Nos.101 and 102)** measuring East to West 97+98/2ft and North to South 57ft,**totally measuring 5558 Sq.ft; (iii) Municipal No.4224/19/2/103& 104(Site bearing Nos.103 & 104)** measuring East to West 98+99/2ft and North to South 56ft,**totally measuring 5516 Sq.ft and (iv) Municipal No.4222/19/2/105& 106** (Site bearing Nos.105 & 106) measuring East to West 99+100/2ft and North to South 56ft,**totally measuring 5572 Sq.ft, carved** out the converted land **in Sy.No.19/2, all the aforesaid sites being a composite block of property measures 22,243 Sq.ft., situated at Vijinapura @ Kothur Village**, K.R.Puram Hobli, Bengaluru East Taluk, within the administrative jurisdiction of BBMP and bounded as follows:

East by : Road
West by : Private Property
North by : Private Property
South by : Road.

Sd/- Goutam Chand S.F
Advocate
Goutam Associates
No.60, 2nd Floor, Kanakapura Road, Basavanagudi, Bangalore–560 004

ಬಿಬಿಸಿ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ತಡೆ ● ವಿಶ್ವವಿದ್ಯಾಲಯದ ಕ್ಯಾಂಪಸ್ ಬಳಿ ಭಾರಿ ಸಂಖ್ಯೆಯ ಪೊಲೀಸರ ನಿಯೋಜನೆ

ಜಾಮಿಯಾ: 70 ವಿದ್ಯಾರ್ಥಿಗಳು ವಶಕ್ಕೆ?

ದೆಹಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದಲ್ಲಿ ಬುಧವಾರ ಸಂಜೆ ಸಾಕ್ಷ್ಯಚಿತ್ರ ಪ್ರದರ್ಶಿಸಲು ಮುಂದಾಗಿದ್ದ ವಿದ್ಯಾರ್ಥಿಯೊಬ್ಬರನ್ನು ಪೊಲೀಸರು ವಶಕ್ಕೆ ಪಡೆದರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಬಿಬಿಸಿ ನಿರ್ಮಿಸಿರುವ ಗೋಧ್ರೋತ್ತರ ಹತ್ಯಾಕಾಂಡಕ್ಕೆ ಸಂಬಂಧಿಸಿದ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಮುಂದಾಗಿದ್ದ ನಾಲ್ವರು ವಿದ್ಯಾರ್ಥಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದನ್ನು ಖಂಡಿಸಿ ಪ್ರತಿಭಟನೆ ನಡೆಸಿದ 70ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಪೊಲೀಸರು ಬುಧವಾರ ವಶಕ್ಕೆ ಪಡೆದಿದ್ದಾರೆ ಎಂದು ವಿದ್ಯಾರ್ಥಿ ಸಂಘಟನೆ ಎಸ್‌ಎಫ್‌ಐ ಆರೋಪಿಸಿದೆ.

ದೆಹಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದಲ್ಲಿ ಬುಧವಾರ ಸಂಜೆ ಸಾಕ್ಷ್ಯಚಿತ್ರ ಪ್ರದರ್ಶಿಸಲು ಮುಂದಾಗಿದ್ದ ವಿದ್ಯಾರ್ಥಿಗಳ ಪೈಕಿ ನಾಲ್ವರನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಇದನ್ನು ಖಂಡಿಸಿ ನೂರಾರು ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಆವರಣದಲ್ಲಿ ಜಮಾವಣೆಗೊಂಡು ಪ್ರತಿಭಟನೆ ನಡೆಸಿದರು. 'ಪ್ರತಿಭಟನೆ ನಡೆಸಿದ 13 ವಿದ್ಯಾರ್ಥಿಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ. ಆದರೆ, 'ಪ್ರತಿಭಟನೆ ನಡೆಸುವ ಮುನ್ನವೇ ವಿದ್ಯಾರ್ಥಿಗಳನ್ನು ಪೊಲೀಸರು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದರು' ಎಂದು ಎಸ್‌ಎಫ್‌ಐ ಕಾರ್ಯದರ್ಶಿ ಪ್ರೀತೀಶ್ ಮೆನನ್ ಅವರು ಆರೋಪಿಸಿದ್ದಾರೆ.

ವಿಶ್ವವಿದ್ಯಾಲಯದ ಕ್ಯಾಂಪಸ್ ಬಳಿ ಭಾರಿ ಸಂಖ್ಯೆಯ ವಿದ್ಯಾರ್ಥಿಗಳು ಸೇರಿದ್ದರಿಂದ, ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿತ್ತು. ಭದ್ರತೆಗಾಗಿ ಶಸ್ತ್ರಸಜ್ಜಿತ ಕ್ಷಿಪ್ರ ಕಾರ್ಯಪಡೆ ಸಿಬ್ಬಂದಿಯನ್ನೂ ಕ್ಯಾಂಪಸ್ ಹೊರಗೆ ನಿಯೋಜಿಸಲಾಗಿತ್ತು.

ಮುಖ್ಯಾಂಶಗಳು
- ಕೋಲ್ಕತ್ತದ 2 ವಿಶ್ವವಿದ್ಯಾಲಯಗಳಲ್ಲಿ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ನಿರ್ಧಾರ
- ಜಾಧವಪುರ ವಿಶ್ವವಿದ್ಯಾಲಯದಲ್ಲಿ ಗುರುವಾರ ಪ್ರದರ್ಶನ
- ಪ್ರೆಸಿಡೆನ್ಸಿ ಯೂನಿವರ್ಸಿಟಿಯಲ್ಲಿ ಶುಕ್ರವಾರ ಪ್ರದರ್ಶನ

ವಿಶ್ವವಿದ್ಯಾಲಯದ ಎಂಸಿಆರ್‌ಸಿ ಲಾನ್‌ನಲ್ಲಿ ಬುಧವಾರ ಸಂಜೆ 6 ಗಂಟೆಗೆ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಆದರೆ, ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಸಾಕ್ಷ್ಯಚಿತ್ರಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಎಂದು ಆಡಳಿತ ಮಂಡಳಿ ಮೊದಲೇ ಸ್ಪಷ್ಟಪಡಿಸಿತ್ತು. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಬೇರಾವ ವಿದ್ಯಾರ್ಥಿಗಳಿಗೂ ಕ್ಯಾಂಪಸ್ ಪ್ರವೇಶಿಸಲು ಅವಕಾಶ ನೀಡಲಿಲ್ಲ. ಇದಕ್ಕೆ ಆಕ್ರೋಶಗೊಂಡ ವಿದ್ಯಾರ್ಥಿಗಳು ಕ್ಯಾಂಪಸ್ ಹೊರಗಡೆ ಪ್ರತಿಭಟನೆ ನಡೆಸಿ, ಕುಲಪತಿ ವಿರುದ್ಧ ಘೋಷಣೆಗಳನ್ನು ಕೂಗಿದರು.

ಚಿತ್ರ ಪ್ರದರ್ಶನಕ್ಕೆ ಯಾವುದೇ ಅನುಮತಿ ಕೋರಲಾಗಿಲ್ಲ ಹಾಗೂ ಅನುಮತಿ ಕೋರಿದರೂ ಪ್ರದರ್ಶನಕ್ಕೆ ಅವಕಾಶ ನೀಡುವುದಿಲ್ಲ ಎಂದು ಆಡಳಿತ ಮಂಡಳಿಯು ಪ್ರಕಟಣೆಯಲ್ಲಿ ತಿಳಿಸಿತ್ತು. ನಿಯಮ ಉಲ್ಲಂಘಿಸಿ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಮುಂದಾದರೆ, ಅದನ್ನು ತಡೆಯಲು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ತಿಳಿಸಿತ್ತು.

'ಬೆಂಬಲಿಗರೇ ಇಲ್ಲದಂತಹ ಎಸ್‌ಎಫ್‌ಐ ರೀತಿಯ ಸಣ್ಣ ಗುಂಪುಗಳು ಪ್ರತಿಭಟನೆ ನಡೆಸಿವೆ. ಇಂತಹ ವರ್ತನೆಗಳನ್ನು ನಾವು ಒಪ್ಪುವುದಿಲ್ಲ. ಕ್ಯಾಂಪಸ್‌ನಲ್ಲಿ ಶಾಂತಿ ಹಾಗೂ ಸಾಮರಸ್ಯವನ್ನು ಹಾಳುಮಾಡಲು ಅವಕಾಶ ನೀಡುವುದಿಲ್ಲ' ಎಂದು ಕುಲಪತಿ ನಜ್ಮಾ ಅಖ್ತರ್ ಅವರು ತಿಳಿಸಿದರು.

ದೆಹಲಿಯ ಜೆಎನ್‌ಯು ಕ್ಯಾಂಪಸ್‌ನಲ್ಲಿ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ವಿದ್ಯಾರ್ಥಿಗಳು ಯತ್ನಿಸಿದ ಮರುದಿನ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದಲ್ಲಿ ಈ ಘಟನೆ ನಡೆದಿದೆ.

ಜೆಎನ್‌ಯು: ಕಲ್ಲುತೂರಾಟ, ಹಲ್ಲೆ ಆರೋಪ

ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ (ಜೆಎನ್‌ಯು) ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ಸದಸ್ಯರು ತಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ವಿಶ್ವವಿದ್ಯಾಲಯದ ಇಬ್ಬರು ವಿದ್ಯಾರ್ಥಿಗಳು ಆರೋಪಿಸಿದ್ದಾರೆ. ಆದರೆ ಈ ಆರೋಪವನ್ನು ಅಲ್ಲಗಳೆದಿರುವ ಜೆಎನ್‌ಯು ವಿದ್ಯಾರ್ಥಿ ಸಂಘಟನೆ ಅಧ್ಯಕ್ಷೆ ಐಷಾ ಘೋಷ್, ಸಾಕ್ಷ್ಯಚಿತ್ರ ಪ್ರದರ್ಶನದ ವೇಳೆ ಮಂಗಳವಾರ ಯತ್ನಿಸಿದ ವಿದ್ಯಾರ್ಥಿಗಳ ಗುಂಪಿನ ಮೇಲೆ ಎಬಿವಿಪಿಯ ಇಬ್ಬರು ಸದಸ್ಯರು ಕಲ್ಲುತೂರಾಟ ನಡೆಸಿದ್ದಾರೆ ಎಂದು ಹೇಳಿದ್ದಾರೆ. ಕಲ್ಲುತೂರಾಟ ನಡೆಸಿದವರಲ್ಲಿ ಇಬ್ಬರನ್ನು ಸೆರೆಹಿಡಿದಿದ್ದು, ಅವರಿಗೆ ಯಾವುದೇ ಹಿಂಸೆ ನೀಡಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಕಲ್ಲುತೂರಾಟ ಖಂಡಿಸಿ ವಸಂತ್ ಕುಂಜ್ ಪೊಲೀಸ್ ಠಾಣೆವರೆಗೆ ಮಂಗಳವಾರ ರಾತ್ರಿ ಮೆರವಣಿಗೆ ನಡೆಸಿದ ವಿದ್ಯಾರ್ಥಿ ಸಂಘಟನೆ ಸದಸ್ಯರು ದೂರು ಸಲ್ಲಿಸಿದರು. ಘಟನೆಯ ಬಗ್ಗೆ ಎಬಿವಿಪಿ ಹಾಗೂ ಜೆಎನ್‌ಯು ವಿದ್ಯಾರ್ಥಿ ಸಂಘಟನೆಗಳಿಂದ ದೂರು ಸ್ವೀಕರಿಸಲಾಗಿದ್ದು, ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

ಜೆಎನ್‌ಯು ಆವರಣದಲ್ಲಿ ರಾತ್ರಿ 9 ಗಂಟೆಗೆ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ಆದರೆ, ವಿದ್ಯುತ್ ಹಾಗೂ ಇಂಟರ್‌ನೆಟ್ ಸೇವೆ ಸ್ಥಗಿತಗೊಂಡಿದ್ದರಿಂದ ವಿದ್ಯಾರ್ಥಿಗಳು ಮೊಬೈಲ್ ಫೋನ್‌ನಲ್ಲೇ ಸಾಕ್ಷ್ಯಚಿತ್ರ ವೀಕ್ಷಿಸಲು ಮುಂದಾದರು. ಆಗ ಕತ್ತಲಲ್ಲಿ ತಮ್ಮ ಮೇಲೆ ಕಲ್ಲುತೂರಾಟ ನಡೆಯಿತು ಎಂದು ವಿದ್ಯಾರ್ಥಿ ಸಂಘಟನೆ ಆರೋಪಿಸಿದೆ. ಎಬಿವಿಪಿ ಸದಸ್ಯರು ಕಲ್ಲು ತೂರಿದರು ಎಂದು ಸಂಘಟನೆಯ ಕೆಲವು ಸದಸ್ಯರು ಆರೋಪಿಸಿದ್ದಾರೆ.

ಎರಡನೇ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿ ಗೌರವ್ ಎಂಬಾತನನ್ನು ವಿದ್ಯಾರ್ಥಿ ಸಂಘಟನೆ ಸದಸ್ಯರು ಸರೆ ಹಿಡಿದಿದ್ದಾರೆ. ಆದರೆ ಕಲ್ಲು ತೂರಿದ ಆರೋಪವನ್ನು ಅವರು ನಿರಾಕರಿಸಿದ್ದಾರೆ. ಸಂಘಟನೆ ಸದಸ್ಯರು ತಮ್ಮನ್ನು ಹಿಂಸಿಸಿದ್ದಾರೆ ಎಂದು ಗೌರವ್ ಆರೋಪಿಸಿದ್ದಾರೆ.

ತಾಂತ್ರಿಕ ಕಾರಣದಿಂದ ವಿದ್ಯುತ್ ಪೂರೈಕೆ ಕಡಿತವಾಗಿತ್ತು ಎಂದು ವಿಶ್ವವಿದ್ಯಾಲಯವು ಹೇಳಿದೆ. ಆದರೆ, ಇಂಟರ್‌ನೆಟ್ ಸಂಪರ್ಕ ಸ್ಥಗಿತಕ್ಕೆ ಯಾವುದೇ ಸ್ಪಷ್ಟನೆ ನೀಡಿಲ್ಲ. 'ವಿಶ್ವವಿದ್ಯಾಲಯಕ್ಕೆ ವಿದ್ಯುತ್ ಪೂರೈಸುವ ಘಟಕದಲ್ಲಿ ದೋಷ ಉಂಟಾಗಿದ್ದು, ಅದನ್ನು ಬೇಗ ದುರಸ್ತಿ ಮಾಡಲಾಗುವುದು' ಎಂದು ಜೆಎನ್‌ಯು ಆಡಳಿತ ಮಂಡಳಿಯ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದ್ದಾರೆ.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಮಹಿಳಾ ಐಪಿಎಲ್ ಟಿ-20 ಟೂರ್ನಿಯು ವನಿತೆಯರ ಕ್ರಿಕೆಟ್‌ನಲ್ಲಿ ಹೊಸ ಬದಲಾವಣೆಗೆ ನಾಂದಿ ಹಾಡಲಿದೆ ಎಂದು ನೀವು ನಂಬುವಿರೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೃದ್ಧರಲ್ಲಿ ಅಧಿಕ ಮರೆವು: 11 ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ

ಪ್ರಜಾವಾಣಿ ವಾರ್ತೆ

ನವದೆಹಲಿ: 'ವೃದ್ಧರಲ್ಲಿನ ಮರೆವಿನ ಕಾಯಿಲೆಯು ರಾಷ್ಟ್ರೀಯ ಸರಾಸರಿಗಿಂತಲೂ ಹೆಚ್ಚು ವರದಿಯಾಗಿರುವ ದೇಶದ 11 ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕವೂ ಸೇರಿದೆ' ಎಂದು ಅಧ್ಯಯನವೊಂದು ತಿಳಿಸಿದೆ.

ಅಂತರರಾಷ್ಟ್ರೀಯ ತಂಡವೊಂದು ಇದೇ ಮೊದಲ ಬಾರಿಗೆ ದೇಶದಾದ್ಯಂತ ಅಧ್ಯಯನ ಕೈಗೊಂಡಿತ್ತು. 60 ವರ್ಷ ಮೇಲ್ಪಟ್ಟವರ ಪೈಕಿ ಅಂದಾಜು 88 ಲಕ್ಷ ಮಂದಿಯಲ್ಲಿ ಸ್ಮರಣ ಶಕ್ತಿ ಕ್ಷೀಣಿಸಿರುವುದು ಇದರಿಂದ ದೃಢಪಟ್ಟಿದೆ.

ಮರೆವಿನ ಕಾಯಿಲೆಯಿಂದ ಬಳಲುತ್ತಿರುವವರ ರಾಷ್ಟ್ರೀಯ ಸರಾಸರಿ ಪ್ರಮಾಣವು ಶೇ 7.4ರಷ್ಟಿದೆ. ಕರ್ನಾಟಕದಲ್ಲಿ ಈ ಪ್ರಮಾಣ ಶೇ 7.61ರಷ್ಟು ವರದಿಯಾಗಿದೆ. ಜಮ್ಮು ಮತ್ತು ಕಾಶ್ಮೀರವು (ಶೇ 11.04) ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಒಡಿಶಾ (ಶೇ 9.87), ಪಶ್ಚಿಮ ಬಂಗಾಳ (ಶೇ 9.23), ಅಸ್ಸಾಂ (ಶೇ 8.47), ಹಿಮಾಚಲ ಪ್ರದೇಶ (ಶೇ 8.43), ಕೇರಳ (ಶೇ 8.27), ತೆಲಂಗಾಣ (ಶೇ 8.27), ಉತ್ತರಪ್ರದೇಶ (ಶೇ 7.92), ಆಂಧ್ರಪ್ರದೇಶ (ಶೇ 7.74) ಹಾಗೂ ಮಹಾರಾಷ್ಟ್ರ (ಶೇ 7.61) ಕೂಡ ಈ ಪಟ್ಟಿಯಲ್ಲಿವೆ. ದೆಹಲಿಯಲ್ಲಿ ಈ ಪ್ರಮಾಣವು ಅತಿ ಕಡಿಮೆ (ಶೇ 4.5) ವರದಿಯಾಗಿದೆ.

2010ರಲ್ಲಿ ದೇಶದಲ್ಲಿ ಅಂದಾಜು 37 ಲಕ್ಷ ಮಂದಿ ಮರೆವಿನ ಕಾಯಿಲೆಯಿಂದ ಬಳಲುತ್ತಿದ್ದರು. ಈ ಸಂಖ್ಯೆಯು ಗಣನೀಯವಾಗಿ ಏರಿಕೆಯಾಗಿರುವುದು ಹೊಸ ಅಧ್ಯಯನದಿಂದ ತಿಳಿದುಬಂದಿದೆ. ಪುರುಷರಿಗಿಂತಲೂ ಮಹಿಳೆಯರಲ್ಲಿ, ನಗರಗಳಿಗಿಂತಲೂ ಗ್ರಾಮೀಣ ಪ್ರದೇಶದ ವೃದ್ಧರಲ್ಲೇ ಹೆಚ್ಚು ಸ್ಮರಣಶಕ್ತಿ ಕುಗ್ಗಿರುವುದೂ ಅಧ್ಯಯನದಿಂದ ಬಹಿರಂಗವಾಗಿದೆ.

ಉಮ್ಮತ್ತಾಟ್ ನೃತ್ಯ ಕಲಿಸಿದ ರಾಣಿ ಮಾಚಯ್ಯಗೆ ಪದ್ಮಶ್ರೀ ಗೌರವ

ಮಡಿಕೇರಿ: 'ಉಮ್ಮತ್ತಾಟ್ ರಾಣಿ' ಎಂದೇ ಖ್ಯಾತರಾದ ಐಮುಡಿಯಂಡ ರಾಣಿ ಮಾಚಯ್ಯ (79) ಅವರು ಹತ್ತು ಸಾವಿರ ಮಕ್ಕಳಿಗೆ ಕೊಡಗಿನ ಸಾಂಪ್ರದಾಯಿಕ ಹಾಗೂ ಅತಿ ವಿಶಿಷ್ಟ ನೃತ್ಯ ಎನಿಸಿದ ಉಮ್ಮತ್ತಾಟ್‌ನ್ನು ಕಲಿಸುವ ಮೂಲಕ ಆ ಕಲೆಯ ರಕ್ಷಣೆಗಾಗಿ ಅಪಾರ ಶ್ರಮಪಟ್ಟಿದ್ದಾರೆ.

1943ರಲ್ಲಿ ಸಿದ್ದಾಪುರದಲ್ಲಿ ಜನಿಸಿದ ಅವರು ಕಲಿತದ್ದು ಪಿಯುಸಿವರೆಗೆ ಮಾತ್ರ. ಆದರೆ, ಉಮ್ಮತ್ತಾಟ್ ಅನ್ನು 1984ರಿಂದ ಹರಡುವ ಪ್ರಯತ್ನ ಆರಂಭಿಸಿದರು. ಕಾವೇರಿ ಕಲಾ ವೃಂದವನ್ನು ಸ್ಥಾಪಿಸಿ ಗೋವಾದಿಂದ ಆರಂಭವಾದ ಅವರ ಕಲಾಯಾತ್ರೆ ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಒಡಿಸ್ಸಾ, ಮಿಜೋರಾಂ, ಮಹಾರಾಷ್ಟ್ರ, ಮಧ್ಯಪ್ರದೇಶ, ಪಂಜಾಬ್ ಸೇರಿದಂತೆ ದೇಶದ ಉದ್ದಗಲಕ್ಕೂ ಸಾಗಿದೆ.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷೆಯಾಗಿ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಉಪಾಧ್ಯಕ್ಷೆಯಾಗಿದ್ದ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ.

'ಪದ್ಮಶ್ರೀ ಪ್ರಶಸ್ತಿ ಕುರಿತು ನಾನು ಯೋಚನೆಯನ್ನೇ ಮಾಡಿರಲಿಲ್ಲ. ಯಾರು ನನ್ನನ್ನು ಗುರುತಿಸಿದರೋ ಗೊತ್ತಿಲ್ಲ. ಆಶ್ಚರ್ಯದ ಜತೆಗೆ ಸಂತಸವೂ ಆಗಿದೆ' ಎಂದು ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಮುನಿವೆಂಕಟಪ್ಪ ತಮಟೆ ಸದ್ದಿಗೆ ಒಲಿದ ಪದ್ಮಶ್ರೀ

ಶಿಡ್ಲಘಟ್ಟ (ಚಿಕ್ಕಬಳ್ಳಾಪುರ): ತಾಲ್ಲೂಕಿನ ಪಿಂಡಿಪಾಪನಹಳ್ಳಿ ಗ್ರಾಮದ ತಮಟೆ ಕಲಾವಿದ ಮುನಿವೆಂಕಟಪ್ಪ ಅವರು 2023ನೇ ಸಾಲಿನ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಜಾನಪದ ಸಂಗೀತ ವಿಭಾಗದಲ್ಲಿ ಅವರಿಗೆ ಪ್ರಶಸ್ತಿ ದೊರೆತಿದೆ.

ಪಿಂಡಿಪಾಪನಹಳ್ಳಿಯ ಪಾಪಣ್ಣ ಮತ್ತು ಮುನಿಗಂಗಮ್ಮ ಅವರ ಪುತ್ರ ಮುನಿವೆಂಕಟಪ್ಪ ಇಡೀ ಬದುಕನ್ನು ಕಡು ಬಡತನದಲ್ಲಿಯೇ ಕಳೆದವರು. ನಾಲ್ಕನೇ ತರಗತಿಯವರೆಗೆ ಕಲಿತಿರುವ ಅವರು, ತಂದೆಯಿಂದ ತಮಟೆ ವಾದನ ಕಲಿತರು. ಅದು ಅವರನ್ನು ಹಳ್ಳಿಯಿಂದ ದೆಹಲಿಯವರೆಗೆ ಕರೆದೊಯ್ಯಲಿದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ 'ನಾಡೋಜ' ಗೌರವ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಮೈಸೂರು ದಸರಾ ಪ್ರಶಸ್ತಿ, ಡಾ.ಎಲ್.ಬಸವರಾಜು ಪ್ರತಿಷ್ಠಾನ ಪ್ರಶಸ್ತಿ ಅವರಿಗೆ ಸಂದ ಪ್ರಮುಖ ಪ್ರಶಸ್ತಿಗಳು. ಮುನಿವೆಂಕಟಪ್ಪ ಈ ಹಿಂದೆ ಜಾನಪದ ಅಕಾಡೆಮಿಯ ಸದಸ್ಯರೂ ಆಗಿದ್ದರು. ರಾಜ್ಯವಷ್ಟೇ ಅಲ್ಲ ಜಪಾನ್ ಸೇರಿದಂತೆ ವಿವಿಧ ದೇಶಗಳಲ್ಲಿಯೂ ಅವರ ತಮಟೆ ಸದ್ದು ಮೊಳಗಿದೆ.

ತಾಯಿ ಒಲಿದರೆ ಪ್ರಶಸ್ತಿ: 'ನಾಡೋಜ' ಬಂದಿದ್ದಾಗ ಒಂದು ರೀತಿಯಲ್ಲಿ ಖುಷಿ ಆಗಿತ್ತು. ಈಗ ಸಾಯುವ ಕಾಲದಲ್ಲಿ ಈ ಪ್ರಶಸ್ತಿ ಬಂದಿದ್ದು ಮತ್ತಷ್ಟು ಖುಷಿ ತಂದಿದೆ. ಕಷ್ಟಪಟ್ಟರೆ ಖುಷಿ ಸಿಕ್ಕೇ ಸಿಗುತ್ತದೆ. ಕಷ್ಟ ಬಿದ್ದರೆ ಆ ತಾಯಿ (ತಮಟೆ) ಒಲಿಯುತ್ತಾರೆ. ಆ ತಾಯಿ ಒಲಿದರೆ ನಮಗೆ ಇಂತಹ ಗೌರವ, ಪ್ರಶಸ್ತಿಗಳೆಲ್ಲ ಸಿಗುತ್ತವೆ ಎಂದು ಮುನಿವೆಂಕಟಪ್ಪ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'26 ಗಡಿ ಕೇಂದ್ರಗಳ ನಿಯಂತ್ರಣ ಕಳೆದ ಭಾರತ'

ಲಡಾಖ್: ಆತಂಕದ ವರದಿ ಬಹಿರಂಗಪಡಿಸಿರುವ ಲೆಹ್‌ನ ಪೊಲೀಸ್ ಅಧಿಕಾರಿ

ನವದೆಹಲಿ: ಪೂರ್ವ ಲಡಾಖ್‌ನಲ್ಲಿ 65 ಗಸ್ತು ಕೇಂದ್ರಗಳ ಪೈಕಿ 26 ಗಡಿ ಕೇಂದ್ರಗಳಲ್ಲಿ ಭಾರತ ಪ್ರವೇಶ ಕಳೆದುಕೊಂಡಿದ್ದು, ಅಷ್ಟೂ ಕೇಂದ್ರಗಳನ್ನು 'ಬಫರ್ ವಲಯ'ವಾಗಿಸಿ ಚೀನಾ ಇಂಚಿಂಚೆ ಆಕ್ರಮಿಸಿಕೊಳ್ಳಲು ಯತ್ನಿಸುತ್ತಿರುವ ಆಘಾತಕಾರಿ ಮಾಹಿತಿ ಹೊರಬಿದ್ದಿರುವುದನ್ನು 'ಎನ್‌ಡಿಟಿವಿ' ವರದಿ ಮಾಡಿದೆ.

ಇತ್ತೀಚೆಗೆ ದೆಹಲಿಯಲ್ಲಿ ನಡೆದ ಉನ್ನತ ಪೊಲೀಸ್ ಅಧಿಕಾರಿಗಳ ಸಮ್ಮೇಳನದಲ್ಲಿ ಕೇಂದ್ರಾಡಳಿತ ಪ್ರದೇಶ ಲಡಾಖ್‌ನ ಪ್ರಮುಖ ನಗರ ಲೆಹ್‌ನ ಪೊಲೀಸ್ ವರಿಷ್ಠಾಧಿಕಾರಿ ಪಿ.ಡಿ. ನಿತ್ಯಾ ಅವರು ಈ ಸಂಶೋಧನಾ ವರದಿಯನ್ನು ಸಲ್ಲಿಸಿದ್ದಾರೆ. ಈ ಸಮ್ಮೇಳನದಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ಭದ್ರತಾ ಸಲಹೆಗಾರ ಅಜಿತ್ ಡೋಬಾಲ್ ಅವರು ಉಪಸ್ಥಿತರಿದ್ದರು.

3,500 ಕಿ.ಮೀ. ಉದ್ದದ ಗಡಿಯಲ್ಲಿ ಚೀನಾದ ಜತೆಗೆ ದೇಶವು ವಿವಿಧೆಡೆ ಗಡಿ ಸಂಘರ್ಷ ಎದುರಿಸುತ್ತಿರುವಾಗ ಈ ಮಾಹಿತಿ ಬಹಿರಂಗವಾಗಿರುವುದು ಆತಂಕಕಾರಿಯಾಗಿದೆ. ವಾಸ್ತವಿಕ ನಿಯಂತ್ರಣ ರೇಖೆಯ ಗಡಿಯಲ್ಲಿ ಅಕ್ಷರಶಃ ಯಥಾಸ್ಥಿತಿಯನ್ನು ಏಕಮುಖವಾಗಿ ಬದಲಾಯಿಸಲು ಚೀನಾ ಪ್ರಯತ್ನಿಸುತ್ತಿದೆ ಎಂದು ಭಾರತವು ಆರೋಪಿಸಿದ ತಿಂಗಳ ನಂತರ ಈ ವರದಿ ಹೊರಬಿದ್ದಿದೆ.

'ಪ್ರಸ್ತುತ 65 ಗಡಿ ಗಸ್ತು ಕೇಂದ್ರಗಳು ಕಾರಕೊರಾಮ್ ಪಾಸ್‌ನಿಂದ ಚುಮೂರ್ ವರೆಗೆ ಇದ್ದವು. ಇವುಗಳನ್ನು ಭಾರತೀಯ ಭದ್ರತಾ ಪಡೆಗಳು (ಐಎಸ್‌ಎಫ್‌ಗಳು) ನಿಯಮಿತವಾಗಿ ಗಸ್ತು ತಿರುಗಿಸಬೇಕು. ಈ 65 ಗಸ್ತು ಕೇಂದ್ರಗಳಲ್ಲಿ 26 ಗಸ್ತು ಕೇಂದ್ರಗಳಲ್ಲಿ ಅಂದರೆ, 5ರಿಂದ 17, 24ರಿಂದ 32 ಹಾಗೂ 37ನೇ ಗಸ್ತು ಕೇಂದ್ರಗಳು ನಿರ್ಬಂಧಿತ ಅಥವಾ ಗಸ್ತು ತಿರುಗದ ಕಾರಣ ಅಲ್ಲಿ ಐಎಸ್‌ಎಫ್ ಉಪಸ್ಥಿತಿ ಇಲ್ಲದಂತಾಗಿದೆ ಎಂದು ನಿತ್ಯಾ ಅವರು ವರದಿ ಸಲ್ಲಿಸಿದ್ದಾರೆ. 'ಈ ಗಸ್ತು ಕೇಂದ್ರಗಳ ಪ್ರದೇಶಗಳಲ್ಲಿ ಚೀನಿಯರು ಇದ್ದಾರೆ. ಈ ಜಾಗಗಳಲ್ಲಿ ಐಎಸ್‌ಎಫ್ ಅಥವಾ ಭಾರತೀಯ ನಾಗರಿಕರ ಉಪಸ್ಥಿತಿ ದೀರ್ಘಕಾಲದಿಂದ ಇಲ್ಲವೆಂದು ಒಪ್ಪಿಕೊಳ್ಳುವಂತೆ ನಮ್ಮ ಮೇಲೆ ಚೀನಿ ಪಡೆ ಒತ್ತಡ ಹೇರುತ್ತಿದೆ. ಇದನ್ನು ಬಫರ್ ವಲಯವಾಗಿಸಿ, ಗಡಿಯಲ್ಲಿ ಒಮ್ಮುಖ ಬದಲಾವಣೆಗೆ ಕಾರಣವಾಗುತ್ತದೆ. ಅಂತಿಮವಾಗಿ ಭಾರತ ಈ ಪ್ರದೇಶಗಳ ಮೇಲೆ ನಿಯಂತ್ರಣ ಕಳೆದುಕೊಳ್ಳಬೇಕಾಗುತ್ತದೆ. ಇಂಚಿಂಚು ಭೂಮಿಯನ್ನು ಅತಿಕ್ರಮಿಸುವ 'ಸಲಾಮಿ ಸ್ಲೈಸಿಂಗ್' ತಂತ್ರವನ್ನು ಚೀನಾ ಪಿಎಲ್‌ಎ ಸೇನೆ ಅನುಸರಿಸುತ್ತಿದೆ' ಎಂದು ಅವರು ವರದಿಯಲ್ಲಿ ಹೇಳಿದ್ದಾರೆ. ಈ ವರದಿಯನ್ನು ಭಾರತದ ರಕ್ಷಣಾ ಸಚಿವಾಲಯ ಅಲ್ಲಗಳೆದಿದೆ.

ಎಸ್.ಎಂ.ಕೃಷ್ಣ ಪದ್ಮವಿಭೂಷಣ

ಒಂದನೇ ಪುಟದಿಂದ

ಒಕ್ಕಲಿಗ ಸಮುದಾಯದ ಪ್ರಭಾವಿ ನಾಯಕರಾದ ಎಸ್.ಎಂ.ಕೃಷ್ಣ ಅವರು ಕೆಲವು ವರ್ಷಗಳ ಹಿಂದೆ ಬಿಜೆಪಿಗೆ ಸೇರ್ಪಡೆಯಾಗಿದ್ದರು. ಇತ್ತೀಚೆಗೆ ಸಕ್ರೀಯ ರಾಜಕಾರಣದಿಂದ ನಿವೃತ್ತರಾಗಿದ್ದರು. ಅವರನ್ನು ದೇಶದ ಎರಡನೇ ಅತ್ಯುನ್ನತ ಪ್ರಶಸ್ತಿಯಾದ ಪದ್ಮವಿಭೂಷಣಕ್ಕೆ ಆಯ್ಕೆ ಮಾಡಲಾಗಿದೆ. ಏಪ್ರಿಲ್–ಮೇ ತಿಂಗಳಲ್ಲಿ ನಡೆಯಲಿರುವ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಒಕ್ಕಲಿಗ ಸಮುದಾಯದ ಮತಗಳನ್ನು ಸೆಳೆಯುವ ಉದ್ದೇಶದಿಂದ ಎಸ್.ಎಂ. ಕೃಷ್ಣ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ಆರಂಭವಾಗಿದೆ.

ಪದ್ಮವಿಭೂಷಣಕ್ಕೆ ಆರು ಮಂದಿ, ಪದ್ಮಭೂಷಣಕ್ಕೆ 9 ಸಾಧಕರು, ಪದ್ಮಶ್ರೀಗೆ 91 ಸಾಧಕರನ್ನು ಆಯ್ಕೆ ಮಾಡಲಾಗಿದೆ.

ಮಂಗಳವಾರ ನಿಧನರಾದ ಗುಜರಾತ್‌ನ ಬಾಲಕೃಷ್ಣ ದೋಶಿ, ಮಹಾರಾಷ್ಟ್ರದ ಕಲಾವಿದ ಜಾಕೀರ್ ಹುಸೇನ್, ಪಶ್ಚಿಮ ಬಂಗಾಳದ ವೈದ್ಯ (ಮರಣೋತ್ತರ) ದಿಲೀಪ್ ಮಹಲನಬೀಸ್, ಅಮೆರಿಕದಲ್ಲಿ ನೆಲೆಸಿರುವ ಶ್ರೀನಿವಾಸ ವರದಾನ್ (ವಿಜ್ಞಾನ ಮತ್ತು ತಂತ್ರಜ್ಞಾನ), ಸಮಾಜವಾದಿ ಪಕ್ಷದ ಸಂಸ್ಥಾಪಕ ಮುಲಾಯಂ ಸಿಂಗ್ ಯಾದವ್ (ಮರಣೋತ್ತರ) ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಲಾಗಿದೆ.

ಪದ್ಮಶ್ರೀ: ಅಂಡಮಾನ್ ಮತ್ತು ನಿಕೋಬಾರ್‌ನ ನಿವೃತ್ತ ವೈದ್ಯ ರತನ್ ಚಂದ್ರ ಕರ್, ಗುಜರಾತ್‌ನ ಸಿದ್ದಿ ಬುಡಕಟ್ಟು ಸಮುದಾಯದ ಏಳಿಗೆಗೆ ಶ್ರಮಿಸಿದ ಸಾಮಾಜಿಕ ಕಾರ್ಯಕರ್ತೆ ಹೀರಾಬಾಯಿ ಲೋಬಿ, ಮಧ್ಯಪ್ರದೇಶದ ವೈದ್ಯ ಮುನೀಶ್ವರ ಚಂದರ್ ದಾವರ್, ಅಸ್ಸಾಂನ ಸಾಮಾಜಿಕ ಕಾರ್ಯಕರ್ತ ರಾಮ್‌ಕ್ವಿಂಬಾವೆ ನೆವ್ಮೆ, ಕೇರಳದ ಸಾಮಾಜಿಕ ಕಾರ್ಯಕರ್ತ ಹಾಗೂ ಸ್ವಾತಂತ್ರ್ಯ ಹೋರಾಟಗಾರ ವಿ.ಪಿ. ಅಪ್ಪುಕುಟ್ಟನ್ ಪೊಡುವಾಳ್, ಆಂಧ್ರ ಪ್ರದೇಶದ ಸಾಮಾಜಿಕ ಕಾರ್ಯಕರ್ತ ಸಂಕುರತ್ರಿ ಚಂದ್ರಶೇಖರ್, ಪ್ರಾಣಿಗಳ ಕಲ್ಯಾಣಕ್ಕಾಗಿ ಶ್ರಮಿಸಿದ ತಮಿಳುನಾಡಿನ ವಡಿವೇಲ್ ಗೋಪಾಲ್ ಮತ್ತು ಮಾಸಿ ಸಡೈಯನ್, ಸಿಕ್ಕಿಂನ ಸಾವಯವ ಕೃಷಿಕ ತೂಲಾ ರಾಮ್ ಉಪ್ರೇತಿ, ಹಿಮಾಚಲ ಪ್ರದೇಶದ ಸಾವಯವ ಕೃಷಿಕ ನೆಕ್ರಂ ಶರ್ಮ, ಜಾರ್ಖಂಡ್‌ನ ಲೇಖಕ ಜಾನುಂ ಸಿಂಗ್ ಸೋಯ್, ಪಶ್ಚಿಮ ಬಂಗಾಳದ ಧಾನಿರಾಮ್ ಟೊಟೊ, ತೆಲಂಗಾಣದ 80ರ ಹರೆಯದ ಭಾಷಾ ವಿದ್ವಾಂಸ ಬಿ.ರಾಮಕೃಷ್ಣ ರೆಡ್ಡಿ, ಛತ್ತೀಸಘಡದ ಅಜಯ್ ಕುಮಾರ್ ಮಾಂಡವಿ, ಮಿಜೊರಾಂನ ಕಲಾವಿದೆ ಕೆ.ಸಿ.ರುನ್‌ರೆಮ್ ಸಂಗಿ, ಪಶ್ಚಿಮ ಬಂಗಾಳದ ಕಲಾವಿದ ಮಂಗಲ ಕಾಂತಿ ರಾಯ್, ಛತ್ತೀಸಘಡದ ನೃತ್ಯಪಟು ದೋಮರ್ ಸಿಂಗ್ ಕುನ್ವಾರ್, ಮಹಾರಾಷ್ಟ್ರದ ರಂಗ ಕಲಾವಿದ ಪರಶುರಾಮ್ ಕೊಮಾಜಿ ಖೂನೆ, ಜಮ್ಮು ಮತ್ತು ಕಾಶ್ಮೀರದ ಸಂತೂರ್ ಕಲಾವಿದ ಗುಲಾಂ ಮಹಮ್ಮದ್ ಜಾಜ್, ಗುಜರಾತ್‌ನ ಕಲಾವಿದ ಭಾನುಬಾಯ್ ಚಿತಾರ, ಗುಜರಾತ್‌ನ ಕಲಾವಿದ ಪರೇಶ್ ರಾಥ್ವಾ, ಬಿಹಾರದ ಕಪಿಲ್ ದೇವ್ ಪ್ರಸಾದ್ ಅವರು ಸೇರಿದಂತೆ 91 ಸಾಧಕರು ಪದ್ಮ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಒಬಿಸಿ ಒಳ ವರ್ಗೀಕರಣ: ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): 'ಕೇಂದ್ರ ಹಿಂದುಳಿದ ವರ್ಗಗಳ ಪಟ್ಟಿ'ಯ ಒಳ ವರ್ಗೀಕರಣಕ್ಕಾಗಿ ರಚಿಸಿದ್ದ ನಿವೃತ್ತ ನ್ಯಾಯಮೂರ್ತಿ ಜಿ.ರೋಹಿಣಿ ಆಯೋಗದ ಅಧಿಕಾರ ಅವಧಿಯನ್ನು ಇನ್ನೂ ಆರು ತಿಂಗಳು ಅಂದರೆ ಜುಲೈ 31ರವರೆಗೆ ರಾಷ್ಟ್ರಪತಿ ಅವರು ವಿಸ್ತರಿಸಿದ್ದಾರೆ ಎಂದು ಅಧಿಕೃತ ಅಧಿಸೂಚನೆ ತಿಳಿಸಿದೆ.

ನ್ಯಾ. ಜಿ.ರೋಹಿಣಿ ಅವರ ನೇತೃತ್ವದ ಐವರು ಸದಸ್ಯರ ಆಯೋಗವನ್ನು 2017ರಲ್ಲಿ ರಚಿಸಲಾಗಿತ್ತು. ಇದರ ಅಧಿಕಾರ ಅವಧಿಯನ್ನು ಇದುವರೆಗೆ 13 ಬಾರಿ ವಿಸ್ತರಿಸಿದಂತಾಗಿದೆ. ಆಯೋಗದ ಅಧಿಕಾರಾವಧಿ ವಿಸ್ತರಣೆಗೆ ಕೇಂದ್ರ ಸಂಪುಟ ಕಳೆದ ವಾರ ತನ್ನ ಒಪ್ಪಿಗೆ ನೀಡಿತ್ತು. ಆಯೋಗವು ತನ್ನ ವರದಿಯನ್ನು ಇದೇ ವರ್ಷದ ಜುಲೈ 31ರೊಳಗೆ ಸಲ್ಲಿಸಬೇಕು ಎಂದು ಅಧಿಸೂಚನೆಯಲ್ಲಿ ತಿಳಿಸಿದೆ.

'ಕೇಂದ್ರ ಹಿಂದುಳಿದ ವರ್ಗಗಳ ಪಟ್ಟಿ'ಯ ಒಳ ವರ್ಗೀಕರಣದ ಕರಡು ವರದಿ ಸಿದ್ಧವಾಗಿರುವುದಾಗಿ ರೋಹಿಣಿ ಆಯೋಗವು ಸರ್ಕಾರಕ್ಕೆ ಹೇಳಿತ್ತು.

'ಚುನಾವಣಾ ಸುಧಾರಣೆ: ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆ ಅತ್ಯಗತ್ಯ'

ನವದೆಹಲಿ (ಪಿಟಿಐ): 'ಚುನಾವಣಾ ಸುಧಾರಣೆಗಳನ್ನು ಕಾರ್ಯಗತಗೊಳಿಸುವ ಮುನ್ನ ಚುನಾವಣಾ ಆಯೋಗವು ರಾಜಕೀಯ ಪಕ್ಷಗಳು ಹಾಗೂ ಸಂಬಂಧಪಟ್ಟ ಸಂಸ್ಥೆಗಳೊಂದಿಗೆ ವ್ಯಾಪಕ ಸಮಾಲೋಚನೆ ನಡೆಸುವುದು ಅತ್ಯಗತ್ಯ' ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಬುಧವಾರ ಹೇಳಿದ್ದಾರೆ.

13ನೇ ರಾಷ್ಟ್ರೀಯ ಮತದಾರರ ದಿನದ ಅಂಗವಾಗಿ ಇಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸಮಾಲೋಚಿಸುವುದು ಹಾಗೂ ಚರ್ಚೆಗಳನ್ನು ನಡೆಸುವುದು ಶಕ್ತಿಶಾಲಿ ಪ್ರಜಾಪ್ರಭುತ್ವದ ಸಂಕೇತ. ವರ್ಷದ ಹಿಂದೆ ಚುನಾವಣಾ ಕಾನೂನಿನಲ್ಲಿ ಕೆಲ ಮಾರ್ಪಾಡುಗಳನ್ನು ಮಾಡಲಾಗಿತ್ತು. ಇದರಿಂದಾಗಿ ಮತದಾರರ ಪಟ್ಟಿಗೆ 1.5 ಕೋಟಿಗೂ ಹೆಚ್ಚು ಮಂದಿ ಹೊಸ ಮತದಾರರ ಸೇರ್ಪಡೆ ಸಾಧ್ಯವಾಗಿತ್ತು' ಎಂದಿದ್ದಾರೆ.

ಚುನಾವಣಾ ಸುಧಾರಣೆ ಸಮಸ್ಯೆ ಕುರಿತು ಪ್ರತಿಕ್ರಿಯಿಸಿದ ಅವರು, 'ಚುನಾವಣಾ ಆಯೋಗದೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆ. ಆಯೋಗದ ಅಧಿಕಾರಿಗಳೊಂದಿಗೂ ಸಭೆಗಳನ್ನು ನಡೆಸಿದ್ದೇನೆ' ಎಂದಿದ್ದಾರೆ.

ಹಿಂದಿ ಚಲನಚಿತ್ರ 'ಪಠಾಣ್' ಪ್ರದರ್ಶನಗೊಳ್ಳುತ್ತಿರುವ ಬೆಳಗಾವಿಯ ಸ್ವರೂಪ ಚಿತ್ರಮಂದಿರದಲ್ಲಿ ಬುಧವಾರ ಪೊಲೀಸರು ಭದ್ರತೆ ಕೈಗೊಂಡಿರುವುದು

ಪೊಲೀಸ್ ಭದ್ರತೆಯಲ್ಲಿ 'ಪಠಾಣ್' ಚಿತ್ರ ಪ್ರದರ್ಶನ

ಬೆಳಗಾವಿ: ನಗರದ ಸ್ವರೂಪ, ಐನಾಕ್ಸ್ ಮತ್ತು ಕಪಿಲ್ ಸಿನೇಮಾಸ್ ಚಿತ್ರಮಂದಿರಗಳಲ್ಲಿ ಬುಧವಾರ ಪೊಲೀಸ್ ಭದ್ರತೆಯಲ್ಲೇ ಹಿಂದಿ ಚಲನಚಿತ್ರ 'ಪಠಾಣ್' ಪ್ರದರ್ಶನಗೊಂಡಿತು.

'ಶಾರೂಖ್ ಖಾನ್ ಹಾಗೂ ದೀಪಿಕಾ ಪಡುಕೋಣೆ ಅಭಿನಯದ 'ಪಠಾಣ್' ಚಿತ್ರದಲ್ಲಿ ಅಶ್ಲೀಲ ದೃಶ್ಯಗಳಿವೆ. ಇಂಥ ಚಿತ್ರ ಪ್ರದರ್ಶಿಸಬಾರದು' ಎಂದು ಒತ್ತಾಯಿಸಿ ಸ್ವರೂಪ ಚಿತ್ರಮಂದಿರದ ಮೇಲೆ ಮಂಗಳವಾರ ರಾತ್ರಿ ಕೆಲ ಕಿಡಿಗೇಡಿಗಳು ಕಲ್ಲುತೂರಾಟ ನಡೆಸಿದ್ದರು. ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದರು.

ಹೀಗಾಗಿ, ಯಾವುದೇ ಅಹಿತಕರ ಘಟನೆ ನಡೆಯಬಾರದು ಎಂದು ಚಿತ್ರಮಂದಿರದ ಆವರಣದಲ್ಲಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದರು. ಯುವಕ, ಯುವತಿಯರು ಸೇರಿದಂತೆ ನೂರಾರು ಜನರು ಚಿತ್ರ ವೀಕ್ಷಿಸಿದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರಮ ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ
	ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009				
1	ಉತ್ತರ ಪಶ್ಚಿಮ–2	ಬೆಂಜಮಂ/ಕಾನಿಅ(ಉಪ–2)/ತಾಂಅ/ಪಿಬಿ/2197/2022–23 ದಿನಾಂಕ: 24.01.2023	ರೂ. 8,90,895/– / ರೂ. 22,300/–	03.02.2023 ಸಂಜೆ 4.00 ಗಂಟೆಯವರೆಗೆ	04.02.2023 ಸಂಜೆ 4.30 ಗಂಟೆಯ ನಂತರ
2	ಉತ್ತರ ಪಶ್ಚಿಮ–2	ಬೆಂಜಮಂ/ಕಾನಿಅ(ಉಪ–2)/ತಾಂಅ/ಪಿಬಿ/2197/2022–23 ದಿನಾಂಕ: 24.01.2023	ರೂ. 10,23,238/– / ರೂ. 25,600/–	03.02.2023 ಸಂಜೆ 4.00 ಗಂಟೆಯವರೆಗೆ	04.02.2023 ಸಂಜೆ 4.30 ಗಂಟೆಯ ನಂತರ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ ಪಶ್ಚಿಮ)–2				
	ಮುಖ್ಯ ಅಭಿಯಂತರರ ಕಛೇರಿ (ತ್ಯಾಜ್ಯನೀರು–ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009				
3	(ತ್ಯಾನೀನಿ–ಸಂಪರ್ಕ) ವಿ. ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ–ಸಂಪರ್ಕ)–ವಿ.ವ್ಯಾಲಿ/ಪಿಬಿ/1234/2022–23 ದಿನಾಂಕ: 24.01.2023	ರೂ. 27.38 ಲಕ್ಷಗಳು / ರೂ. 65,000/–	06.02.2023 ಸಂಜೆ 5.30 ಗಂಟೆಯವರೆಗೆ	08.02.2023 ಸಂಜೆ 4.00 ಗಂಟೆಗೆ
4	(ತ್ಯಾನೀನಿ–ಸಂಪರ್ಕ) ವಿ. ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ–ಸಂಪರ್ಕ)–ವಿ.ವ್ಯಾಲಿ/ಪಿಬಿ/1221/2022–23 ದಿನಾಂಕ: 24.01.2023	ರೂ. 65.71 ಲಕ್ಷಗಳು / ರೂ. 1.55 ಲಕ್ಷಗಳು	10.02.2023 ಸಂಜೆ 5.30 ಗಂಟೆಯವರೆಗೆ	13.02.2023 ಸಂಜೆ 4.00 ಗಂಟೆಗೆ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಸಂಪರ್ಕ)–ವಿ. ವ್ಯಾಲಿ				
5	(ತ್ಯಾನೀನಿ–ಸಂಪರ್ಕ) ಹೆಚ್&ಎ ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ–ಸಂಪರ್ಕ)/ಹೆಚ್&ಎ/ಪಿಬಿ/1189/2022–23 ದಿನಾಂಕ: 23.01.2023	ರೂ. 75.68 ಲಕ್ಷಗಳು / ರೂ. 1.79 ಲಕ್ಷಗಳು	03.02.2023 ಸಂಜೆ 5.30 ಗಂಟೆಯವರೆಗೆ	06.02.2023 ಮಧ್ಯಾಹ್ನ 12.00 ಗಂಟೆಗೆ
6	(ತ್ಯಾನೀನಿ–ಸಂಪರ್ಕ) ಹೆಚ್&ಎ ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ ಸಂಪರ್ಕ–ಹೆಚ್&ಎ. ವಿ)/ಪಿಬಿ/1174/2022–23 ದಿನಾಂಕ: 09.01.2023	ರೂ. 28.33 ಲಕ್ಷಗಳು / ರೂ. 66,900/–	11.02.2023 ಸಂಜೆ 5.30 ಗಂಟೆಯವರೆಗೆ	13.02.2023 ಸಂಜೆ 4.00 ಗಂಟೆಗೆ
7	(ತ್ಯಾನೀನಿ–ಸಂಪರ್ಕ) ಹೆಚ್&ಎ ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ ಸಂಪರ್ಕ–ಹೆಚ್&ಎ. ವಿ)/ಪಿಬಿ/1176/2022–23 ದಿನಾಂಕ: 09.01.2023	ರೂ. 41.03 ಲಕ್ಷಗಳು / ರೂ. 91,900/–	11.02.2023 ಸಂಜೆ 5.30 ಗಂಟೆಯವರೆಗೆ	13.02.2023 ಸಂಜೆ 4.00 ಗಂಟೆಗೆ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಸಂಪರ್ಕ)–ಹೆಚ್ & ಎ ವ್ಯಾಲಿ				

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://eproc.karnataka.gov.inಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ವಾಪ್ರ/4316/ಆಕಾರ್/22–23

ರಾಷ್ಟ್ರೀಯ ಆರೋಗ್ಯ ಅಭಿಯಾನ
ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು – 560023.
ದೂರವಾಣಿ: 080–23113584, ಇ–ಮೇಲ್: pdrch-hfws@karnataka.gov.in

No: STDC/IRL/12/2019-20 (E-81557) Date: 25-01-2023

ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
For Supply of Laboratory and Office Equipment's

ರಾಷ್ಟ್ರೀಯ ಆರೋಗ್ಯ ಅಭಿಯಾನವು ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮಕ್ಕೆ ಅವಶ್ಯವಿರುವ Laboratory and Office Equipment's ಗಳನ್ನು ಸರಬರಾಜು ಮಾಡಲು ತಯಾರಕರು / ಅಧಿಕೃತ ವಿತರಕರುಗಳಿಗೆ ಅಗತ್ಯ ದಾಖಲೆಯೊಂದಿಗೆ ಭಾಗವಹಿಸಲು ಟೆಂಡರ್ ಅನ್ನು ಆಹ್ವಾನಿಸಲಾಗಿದೆ.
ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್: www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ದಿನಾಂಕ: 25–01–2023 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಡಾಕ್ಯೂಮೆಂಟ್‌ಗಳನ್ನು ದಿನಾಂಕ: 15–02–2023 ರ ಅಪರಾಹ್ನ 5.30 ರ ಒಳಗಾಗಿ ಸಲ್ಲಿಸತಕ್ಕದ್ದು.
ಹೆಚ್ಚಿನ ಮಾಹಿತಿಯನ್ನು ಕೆಳಸಹಿದಾರರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಬೆಳಿಗ್ಗೆ 11.00 ರಿಂದ ಅಪರಾಹ್ನ 5.30 ರ ಒಳಗಾಗಿ ಪಡೆಯಬಹುದಾಗಿರುತ್ತದೆ.

ಸಹಿ/–
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)
ವಾಸಾಸಂಇ/ವಾ.ಪ್ರ/4327/ಅಡ್ವರ್ಟೋರ್/2022–23

ರಿಜಿಸ್ಟ್ರಾರ್‌ರವರ ಕಚೇರಿ
ಕಾನೂನು ಬಾಹಿರ ಚಟುವಟಿಕೆಗಳ (ತಡೆ)
ನ್ಯಾಯಾಧೀಕರಣದ ಕಛೇರಿ, ಚೇಂಬರ್ ನಂ.15, ನೆಲಮಹಡಿ, ಬ್ಲಾಕ್ 'ಎ'
ದೆಹಲಿ ಉಚ್ಚ ನ್ಯಾಯಾಲಯ, ನವದೆಹಲಿ–110503

ರಿಜಿಸ್ಟರ್:20/ಯುಎ(ಪಿ)–ಟ್ರಿಬ್ಯುನಲ್–2023 ದಿನಾಂಕ: 18.01.2023

ಉಲ್ಲೇಖ : ಅಧಿಸೂಚನೆ ಸಂಖ್ಯೆ: ಎಸ್, ಓ. 4559(ಇ) ದಿನಾಂಕ: 27ನೇ ಸೆಪ್ಟೆಂಬರ್ 2022, ಅಧಿಕೃತ ಗೆಜೆಟ್‌ನಲ್ಲಿ 28ನೇ ಸೆಪ್ಟೆಂಬರ್, 2022 ರಂದು ಪ್ರಕಟವಾದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (PFI) ಮತ್ತು (ಸೇರಿದಂತೆ) ಅದರ ಸಹವರ್ತಿಗಳು ಅಥವಾ ಅಂಗ ಸಂಸ್ಥೆಗಳು ಅಥವಾ ಮುಂಭಾಗಗಳು ರಿಹ್ಯಾಬ್ ಇಂಡಿಯಾ ಫೌಂಡೇಶನ್ (RIF), ಕ್ಯಾಂಪಸ್ ಫ್ರಂಟ್ ಆಪ್ ಇಂಡಿಯಾ (CFI) ಆಲ್ ಇಂಡಿಯಾ ಇಮಾಮ್ಸ್ ಕೌನ್ಸಿಲ್ (AIIC) ನ್ಯಾಷನಲ್ ಕಾನ್ಫೆಡರೇಷನ್ ಆಫ್ ಹ್ಯೂಮನ್ ರೈಟ್ಸ್ ಆರ್ಗನೈಸೇಶನ್ (NCHRO), ನ್ಯಾಷನಲ್ ವುಮೆನ್ಸ್ ಫ್ರಂಟ್, ಜೂನಿಯರ್ ಫ್ರಂಟ್, ಎಂಪವರ್ ಇಂಡಿಯಾ ಫೌಂಡೇಶನ್ ಮತ್ತು ರಿಹ್ಯಾಬ್ ಫೌಂಡೇಶನ್, ಕೇರಳ (ಸಂಕ್ಷಿಪ್ತ ಪಿ.ಎಫ್.ಐ ಮತ್ತು ಅದರ ಸಹವರ್ತಿಗಳು ಅಥವಾ ಅಂಗ ಸಂಸ್ಥೆಗಳು ಅಥವಾ ಮುಂಭಾಗಗಳು) ಮೂಲಕ ನೀಡಲಾದ ಅಧಿಕಾರವನ್ನು ಬಳಸಿ "ಕಾನೂನು ಬಾಹಿರ ಸಂಘ" ಸೆಕ್ಷನ್–3 ರ ಉಪ–ನಿಯಮಗಳು (1) ಮತ್ತು (3)ಕಾನೂನು ಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) 1967 ಎಂದು ಅಧಿಸೂಚನೆ ಸಂಖ್ಯೆ: ಎಸ್.ಓ.4559(ಇ) ದಿನಾಂಕ: 06ನೇ ಅಕ್ಟೋಬರ್ 2022.

ಸಾರ್ವಜನಿಕ ಸೂಚನೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕಾನೂನು ಬಾಹಿರ ಚಟುವಟಿಕೆಗಳ (ತಡೆ) ನ್ಯಾಯಾಧೀಕರಣ, ನವದೆಹಲಿಯ ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ದಿನೇಶ್ ಕುಮಾರ್ ಶರ್ಮಾರವರು ದಿನಾಂಕ: 28.01.2023, 29.01.2023 ಮತ್ತು 30.01.2023 ರಂದು ಪ್ರತಿನಿತ್ಯ ಬೆಳಿಗ್ಗೆ: 10.00 ಗಂಟೆಗೆ ಬೆಂಗಳೂರು ನಗರದ ಬಾಲಬ್ರೂಹಿ ಅತಿಥಿ ಗೃಹ, ಪ್ಯಾಲೇಸ್ ರಸ್ತೆ, ಬೆಂಗಳೂರು–560003 ನ್ಯಾಯಾಧೀಕರಣದ ಕಾರ್ಯಕಲಾಪ ನಡೆಸಲಿದ್ದಾರೆ.
ನ್ಯಾಯಾಧೀಕರಣದ ಮುಂದೆ ಸಾಕ್ಷಿ ನುಡಿಯಲು ಇಚ್ಛಿಸುವ ಸಾರ್ವಜನಿಕರು ತಮ್ಮ ಪ್ರಮಾಣ ಪತ್ರವನ್ನು ಈ ಕೆಳಗೆ ಸಹಿ ಮಾಡಿದವರಲ್ಲಿಗೆ ಸಲ್ಲಿಸಬಹುದು ಮತ್ತು ಮಾನ್ಯ ನ್ಯಾಯ ಮಂಡಳಿಯ ಮುಂದೆ ತಮ್ಮ ಪಾರ್ಟಿ ಸವಾಲಿಗಾಗಿ ಯಾರಾದರೂ ಇದ್ದಲ್ಲಿ ಮೇಲಿನ ದಿನಾಂಕಗಳಂದು ಖುದ್ದಾಗಿ ಈ ಮೇಲ್ಕಂಡ ಸ್ಥಳದಲ್ಲಿ ಹಾಜರಿರಬೇಕೆಂದು ತಿಳಿಯಪಡಿಸಿದೆ.
31ನೇ ಅಕ್ಟೋಬರ್ 2022 ರಂದು ನನ್ನ ಹಸ್ತ ಮತ್ತು ಕಾನೂನುಬಾಹಿರ ಚಟುವಟಿಕೆ (ತಡೆ) ನ್ಯಾಯಾಧೀಕರಣ, ಉಚ್ಚ ನ್ಯಾಯಾಲಯ, ಶೇರ್ ಷಾ ರಸ್ತೆ, ದೆಹಲಿಯ ಮುದ್ರೆಯೊಡನೆ ಹೊರಡಿಸಲಾಗಿದೆ.

ಮುದ್ರೆ ಸಹಿ/– (ರಿತೀಶ್ ಸಿಂಗ್) ರಿಜಿಸ್ಟ್ರಾರ್
ಕಾನೂನುಬಾಹಿರ ಚಟುವಟಿಕೆ (ತಡೆ) ನ್ಯಾಯಾಧೀಕರಣ, ಕಾನೂನುಬಾಹಿರ ಚಟುವಟಿಕೆ (ತಡೆ) ನ್ಯಾಯಾಧೀಕರಣ, ದೆಹಲಿ ಉಚ್ಚ ನ್ಯಾಯಾಲಯ ಕಟ್ಟಡ, ನವದೆಹಲಿ.
ವಾಸಾಸಂಇ/ವಾಪ್ರ/ಅಡ್ವಿಟ್/4340/2022–23

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್
(ಕರ್ನಾಟಕ ರಾಜ್ಯ ಸರ್ಕಾರದ ಒಂದು ಸಾರ್ವಜನಿಕ ಉದ್ದಿಮೆ)
ರಿಜಿಸ್ಟರ್ಡ್ ಕಚೇರಿ: 5ನೇ ಮಹಡಿ, ಟಿ.ಟಿ.ಎಂ.ಸಿ, 'ಎ' ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿ ನಗರ, ಬೆಂಗಳೂರು–560 027, ಫ್ಯಾಕ್ಸ್ : 080–22213172
ದೂರವಾಣಿ: 080–22278813/14/15/16 ಜಾಲತಾಣ: https://ksmc.karnataka.gov.in

ಸಂಖ್ಯೆ: 1066/ಕೆಎಸ್‌ಎಂಸಿಎಲ್/ಸ್ಫೋಟಕ–ಇ–ಟೆಂಡರ್/2022–23/2947 ದಿನಾಂಕ: 25.01.2023

ಇ–ಟೆಂಡರ್ ಆಹ್ವಾನ ಪತ್ರಿಕೆ

ಕೆಎಸ್‌ಎಂಸಿಎಲ್ ಸಂಸ್ಥೆಯು ಗಣಿ/ಶಿಲಾಗಣಿಗಳಿಗೆ ಸಿಡಿಮದ್ದು ಸರಬರಾಜು ಮಾಡಲು ಸರಬರಾಜುದಾರರನ್ನು ಆಯ್ಕೆ ಮಾಡಲು ಈ ಕೆಳಗಿನ ವೇಳಾಪಟ್ಟಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ವೇಳಾಪಟ್ಟಿ	
ಟೆಂಡರ್ ಉಲ್ಲೇಖ ಸಂಖ್ಯೆ	1066/ಕೆಎಸ್‌ಎಂಸಿಎಲ್/ಸ್ಫೋಟಕ–ಇ–ಟೆಂಡರ್/2022–23/2942
https://eproc.karnataka.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ	25.01.2023
ಬಿಡ್–ಪೂರ್ವ ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ	30.01.2023 ಸಂಜೆ 5.00 ಗಂಟೆ
KSMCLನ ಪ್ರಧಾನ ಕಛೇರಿಯಲ್ಲಿ ಬಿಡ್–ಪೂರ್ವ ಸಭೆ	02.02.2023 ಅಪರಾಹ್ನ 12.00 ಗಂಟೆ
ಇ–ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	08.02.2023 ಸಂಜೆ 5.00 ಗಂಟೆಯವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	10.02.2023 ಬೆಳಿಗ್ಗೆ 11.00 ಗಂಟೆಗೆ
ಇಎಂಡಿ ಮೊತ್ತ	ವಲಯ – I – ರೂ.58,000/– ವಲಯ – II – ರೂ.22,000/– ವಲಯ – I & II – ರೂ.80,000/–
ಕಛೇರಿ ವಿಳಾಸ	ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್, ಬಿಎಂಟಿಸಿ, 'ಎ' ಬ್ಲಾಕ್, 5ನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆ.ಹೆಚ್. ರೋಡ್, ಶಾಂತಿನಗರ, ಬೆಂಗಳೂರು–560027.

ಸಹಿ/–
ಪ್ರಧಾನ ವ್ಯವಸ್ಥಾಪಕರು (ಉ)
ವಾ.ಸಾ.ಸಂ.ಇ/ವಾಪ್ರ/4320/ಆಕಾರ್/22–23

ಪ್ರಜಾ ಮತ
ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

ಕಾಂಗ್ರೆಸ್ ಅವಧಿಯ 59 ಕೇಸ್ ಲೋಕಾಯುಕ್ತಕ್ಕೆ ಹಸ್ತಾಂತರ: ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ

ಮುಖವಾಡ ಕಳಚಲಿದ್ದೇವೆ: ಸಿ.ಎಂ

ಪ್ರಜಾವಾಣಿ ವಾರ್ತೆ

ಹಿರೇಕೆರೂರು (ಹಾವೇರಿ): 'ತಮ್ಮ ವಿರುದ್ಧ ದಾಖಲಾದ ಪ್ರಕರಣಗಳನ್ನು ಮುಚ್ಚಿಹಾಕಲು ಸಿದ್ದರಾಮಯ್ಯನವರು ಲೋಕಾಯುಕ್ತ ಸಂಸ್ಥೆಯನ್ನೇ ಮುಚ್ಚಿ ಹಾಕಿದರು. ತಮ್ಮ ಕೈಗೊಂಬೆಯಾದ ಎಸಿಬಿಯನ್ನು ರಚನೆ ಮಾಡಿದರು. ಕಾಂಗ್ರೆಸ್ ಅವಧಿಯಲ್ಲಿ ದಾಖಲಾದ 59 ಪ್ರಕರಣಗಳನ್ನು ನಾವು ಲೋಕಾಯುಕ್ತಕ್ಕೆ ಹಸ್ತಾಂತರಿಸುತ್ತೇವೆ. ನಿಮ್ಮ ಮುಖವಾಡ ಗೊತ್ತಾಗಲಿ, ಭ್ರಷ್ಟಾಚಾರದ ಮುಖ ಅನಾವರಣಗೊಳ್ಳಲಿ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಾಗ್ದಾಳಿ ನಡೆಸಿದರು.

ಹಿರೇಕೆರೂರು ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಜನಸಂಕಲ್ಪ ಯಾತ್ರೆಯನ್ನು ಉದ್ಘಾಟಿಸಿ ಮಾತನಾಡಿ, 'ಸಿದ್ದರಾಮಯ್ಯನವರ ಸರ್ಕಾರ ಸ್ವಜನ ಪಕ್ಷಪಾತ ಮತ್ತು ಭ್ರಷ್ಟಾಚಾರದಿಂದ ಕೂಡಿತ್ತು. ಮಕ್ಕಳ ಹಾಸಿಗೆ, ದಿಂಬನ್ನೂ ಬಿಡಲಿಲ್ಲ. ಸಣ್ಣ ನೀರಾವರಿ ಯೋಜನೆಯಡಿ ಕೆಲಸ ಮಾಡದೇ ಬಿಲ್ ತೆಗೆದು ಅಧಿಕಾರಿಗಳು ಅಮಾನತುಗೊಂಡರು. ಬಿಡಿಎ, ಇಂಧನ ಇಲಾಖೆ ಸೇರಿದಂತೆ ಎಲ್ಲೆಡೆ ಭ್ರಷ್ಟಾಚಾರದ ಹಗರಣಗಳು ನಡೆದವು' ಎಂದು ಅವರು ಆರೋಪಿಸಿದರು.

ಸಿಬಿಐ ಅಧಿಕಾರಿ ಸತ್ತಿದ್ದೇಕೆ?: '₹30ರ ಮೋದಿ ಅಕ್ಕಿಗೆ ಮೂರು ರೂಪಾಯಿ ಸಿದ್ದರಾಮಯ್ಯನವರ ಚೀಲ ಹಾಕಿ 'ಅನ್ನಭಾಗ್ಯ' ಕೊಟ್ಟದ್ದು ನಮ್ಮ ಸರ್ಕಾರ ಎಂದು ಸಿದ್ದರಾಮಯ್ಯ ಪುಕ್ಕಟೆ ಪ್ರಚಾರ ಪಡೆದರು. ನಾವು ಅಧಿಕಾರಕ್ಕೆ ಬಂದರೆ, 10 ಕೆ.ಜಿ. ಅಕ್ಕಿ ಕೊಡುತ್ತೇವೆ ಎಂದು ಆಶ್ವಾಸನೆ ಕೊಡುತ್ತಿದ್ದಾರೆ. ಅಧಿಕಾರದಲ್ಲಿದ್ದಾಗ 7 ಕೆ.ಜಿ.ಯಿಂದ 4 ಕೆ.ಜಿಗೆ. ಇಳಿಸಿದ್ದು ಏಕೆ? ಅನ್ನಭಾಗ್ಯಕ್ಕೆ ಕನ್ನ ಹಾಕಿದ ಪ್ರಕರಣವನ್ನು ತನಿಖೆ ಮಾಡುತ್ತಿದ್ದ ಸಿಬಿಐ ಅಧಿಕಾರಿಯೊಬ್ಬರು ಉತ್ತರ ಭಾರತದಲ್ಲಿ ನಿಗೂಢವಾಗಿ ಸಾವಿಗೀಡಾಗಿದ್ದೇಕೆ? ಇದಕ್ಕೆ ಏನು ಉತ್ತರ ಕೊಡುತ್ತೀರಿ' ಎಂದು ಪ್ರಶ್ನಿಸಿದರು.

ಹಾವೇರಿ ಜಿಲ್ಲೆ ಹಿರೇಕೆರೂರು ಪಟ್ಟಣದಲ್ಲಿ ಬುಧವಾರ ನಡೆದ ಬಿಜೆಪಿ ಜನಸಂಕಲ್ಪಯಾತ್ರೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ರಟ್ಟೀಹಳ್ಳಿ ತಾಲ್ಲೂಕಿನ ಹಾಲುಮತ ಸಮಾಜದ ಮುಖಂಡರು ಕಂಬಳಿ ಹೊದಿಸಿ, ಕುರಿಮರಿಯನ್ನು ಉಡುಗೊರೆಯಾಗಿ ನೀಡಿದರು – ಪ್ರಜಾವಾಣಿ ಚಿತ್ರ

ಶ್ರೀಕೃಷ್ಣನಂತೆ ಬಿಎಸ್‌ವೈ ಅವರು ಯು.ಬಿ. ಬಣಕಾರರ ಬೆನ್ನಿಗೆ ನಿಂತಿದ್ದರು. ಮುಂದಿನ ಚುನಾವಣೆಯಲ್ಲಿ ಶ್ರೀಕೃಷ್ಣ ಇಲ್ಲದೇ ಯಾವ ರೀತಿ ಯುದ್ಧ ಮಾಡುತ್ತೀರಾ?
ಬಿ.ಸಿ.ಪಾಟೀಲ, ಕೃಷಿ ಸಚಿವ

ಸಿದ್ದರಾಮಯ್ಯ ಮತ್ತು ಡಿಕೆಶಿ ಅವರ ಹಾವು–ಮುಂಗಸಿ ಇದ್ದಂತೆ. ಆದರೆ, ಚುನಾವಣೆಯಲ್ಲಿ ಗೆಲ್ಲಲು ಹೊಂದಾಣಿಕೆ ರಾಜಕಾರಣ ಮಾಡುತ್ತಿದ್ದಾರೆ
ಬಿ.ಶ್ರೀರಾಮುಲು, ಸಾರಿಗೆ ಸಚಿವ

ಕಾಂಗ್ರೆಸ್ ಎಂದರೆ 'ಪ್ರೆಷರ್ ಕುಕ್ಕರ್ ಪಾರ್ಟಿ'

ಹಾವೇರಿ: 'ಕುಕ್ಕರ್ ಹಂಚಿ ಕಾಂಗ್ರೆಸ್ ಶಾಸಕರೇ ಸಿಕ್ಕಿ ಹಾಕಿಕೊಂಡಿದ್ದಾರೆ. ವಾಣಿಜ್ಯ ತೆರಿಗೆ ಅಧಿಕಾರಿಗಳು ಜಪ್ತಿ ಮಾಡಿ ದಂಡ ಹಾಕಿದ್ದಾರೆ. ಕಾಂಗ್ರೆಸ್ ಎಂದರೆ ಪ್ರೆಷರ್ ಕುಕ್ಕರ್ ಪಾರ್ಟಿ. ಕುಕ್ಕರ್‌ನಲ್ಲಿ ಬಾಂಬ್ ಇಟ್ರೂ ಏನೂ ಇಲ್ಲ ಅಂತಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಲೇವಡಿ ಮಾಡಿದರು.

ಹಿರೇಕೆರೂರು ಪಟ್ಟಣದ ಹೊರವಲಯದ ಹೆಲಿಪ್ಯಾಡ್ ಬಳಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿ, ಸರ್ಕಾರದ ಮೇಲೆ ಕಾಂಗ್ರೆಸ್‌ನಿಂದ ಭ್ರಷ್ಟಾಚಾರ ಪ್ರಕರಣ ದಾಖಲು ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ಇದು ಅತ್ಯಂತ ಹಾಸ್ಯಾಸ್ಪದ ಮತ್ತು ಕೀಳುಮಟ್ಟದ್ದು. ಕಾಂಗ್ರೆಸ್‌ನವರು ಕೇವಲ ರಾಜಕೀಯ ಕಾರಣಕ್ಕೆ ಮಾತಾಡ್ತಾ ಇದಾರೆ. ಸೋಲೋದು ಗ್ಯಾರಂಟಿ ಅಂತ ಗೊತ್ತಾಗಿದೆ. ಹೀಗಾಗಿ ಸುಳ್ಳು ಆರೋಪ ಮಾಡಿ ಜನರನ್ನು ದಾರಿ ತಪ್ಪಿಸುತ್ತಿದ್ದಾರೆ' ಎಂದು ತಿರುಗೇಟು ನೀಡಿದರು.

ಬೊಮ್ಮಾಯಿ ಭ್ರಷ್ಟಾಚಾರದ ಪಿತಾಮಹ ಎಂಬ ಡಿಕೆಶಿ ಹೇಳಿಕೆಗೆ ಪ್ರತಿಕ್ರಿಯಿಸಿ, 'ಈ ದೇಶದಲ್ಲಿ ಮೊದಲನೇ ಹಗರಣ ಪ್ರಾರಂಭ ಆಗಿದ್ದೇ ಕಾಂಗ್ರೆಸ್‌ನಿಂದ. ಜೀಪ್ ಹಗರಣ ಮಾಡಿ ಅಂದು ಡಿಫೆನ್ಸ್ ಮಿನಿಸ್ಟರ್ ರಾಜೀನಾಮೆ ನೀಡಿದ್ರು. ಅಲ್ಲಿಂದಲೇ ಈ ದೇಶದಲ್ಲಿ ಭ್ರಷ್ಟಾಚಾರ ಆರಂಭ ಆಯ್ತು. ಭ್ರಷ್ಟಾಚಾರ ಕಾಂಗ್ರೆಸ್ಸಿನ ಅವಿಭಾಜ್ಯ ಅಂಗ. ಇನ್ನು ಡಿಕೆ ಶಿವಕುಮಾರ್ ಬಗ್ಗೆ ನಾನು ಏನು ಹೇಳಲಿ?ಅವರು ಬಹಳ ಸ್ವಚ್ಛವಿರುವ ಮನುಷ್ಯ. ಅವರಷ್ಟು ಸ್ವಚ್ಛ ಮನುಷ್ಯ ರಾಜಕಾರಣದಲ್ಲಿ ಯಾರೂ ಇಲ್ಲ' ಎಂದು ವ್ಯಂಗ್ಯವಾಡಿದರು.

ಸುದ್ದಿ 2 ನಿಮಿಷ

ಹಾಸನದಲ್ಲಿ ಅಭ್ಯರ್ಥಿ ಆಯ್ಕೆ ಅನಿವಾರ್ಯತೆ ಇಲ್ಲ: ಎಚ್‌ಡಿಕೆ

ರಾಯಚೂರು: 'ಹಾಸನ ವಿಧಾನ ಸಭಾ ಕ್ಷೇತ್ರಕ್ಕೆ ಈಗಾಗಲೇ ಜೆಡಿಎಸ್ ಸಮರ್ಥ ಅಭ್ಯರ್ಥಿ ಇದ್ದಾರೆ. ಅಲ್ಲಿ ಅಭ್ಯರ್ಥಿ ಆಯ್ಕೆ ಅನಿವಾರ್ಯತೆ ಇದ್ದರೆ, ಭವಾನಿ ರೇವಣ್ಣ ಅವರಿಗೆ ಸ್ಪರ್ಧಿಸುವಂತೆ ನಾನೇ ಹೇಳುತ್ತಿದ್ದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ತಿಳಿಸಿದರು.

ಜಿಲ್ಲೆಯ ದೇವದುರ್ಗದಲ್ಲಿ ಬುಧವಾರ ಪಂಚರತ್ನ ಯಾತ್ರೆ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ಬಗ್ಗೆ ಗೊಂದಲ ಬೇಡ. ಕುಟುಂಬದಲ್ಲಿ ಸಂಘರ್ಷ, ತಳಮಳ ಎಂಬುದು ಇಲ್ಲ. ಎಲ್ಲವನ್ನೂ ಬಗೆಹರಿಸುವೆ. ಪಕ್ಷ ಕಟ್ಟುತ್ತಿರುವ ಲಕ್ಷಾಂತರ ಕಾರ್ಯಕರ್ತರಿಗೆ ತಲೆ ಕೊಡಬೇಕಿರುವುದು ನನ್ನ ಜವಾಬ್ದಾರಿ. ಅವರೇ ನನ್ನ ಕುಟುಂಬ' ಎಂದರು.

'2008ರಲ್ಲಿ ಮಧುಗಿರಿಯಲ್ಲಿ ಅನಿತಾ ಕುಮಾರಸ್ವಾಮಿ ಅವರನ್ನು ಅಭ್ಯರ್ಥಿಯಾಗುವಂತೆ ಹೇಳಲು ಅನಿವಾರ್ಯತೆ ಇತ್ತು. ಜೆಡಿಎಸ್ ಅಭ್ಯರ್ಥಿ ಎಂದು ಗುರುತಿಸಿದ್ದ ವೀರಭದ್ರಯ್ಯ ಸರ್ಕಾರಿ ನೌಕರರಾಗಿದ್ದರು. ಅವರ ಸ್ವಯಂನಿವೃತ್ತಿಯನ್ನು ಸರ್ಕಾರವು ಅನುಮೋದಿಸಿರಲಿಲ್ಲ. ಹೀಗಾಗಿ ಅನಿತಾ ಸ್ಪರ್ಧಿಸಿ, ಶಾಸಕರಾದರು' ಎಂದರು.

'ಕ್ಷೇತ್ರದಲ್ಲಿ ಅಭ್ಯರ್ಥಿಗಳು ಇರದಿದ್ದಾಗ ಮತ್ತು ಕಾರ್ಯಕರ್ತರು ನೊಂದುಕೊಂಡಾಗ, ನಮ್ಮ ಕುಟುಂಬ ತಲೆ ಕೊಟ್ಟಿದೆ. ನಾನು ಚನ್ನಪಟ್ಟಣ ಮತ್ತು ರಾಮನಗರದಲ್ಲಿ ಸ್ಪರ್ಧಿಸಬೇಕಾಯಿತು. ಆದರೆ, ಹಾಸನದಲ್ಲಿ ಅಂತಹ ಪರಿಸ್ಥಿತಿ ಇಲ್ಲ' ಎಂದರು.

ಸಮುದಾಯಕ್ಕೆ ಅನ್ಯಾಯವಾದರೆ ಕ್ಷಮಿಸಲ್ಲ: ಕ್ಷತ್ರಿಯ ಒಕ್ಕೂಟ ಎಚ್ಚರಿಕೆ

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಕ್ಷತ್ರಿಯ ಸಮುದಾಯದ ಮುಖಂಡರಿಗೆ ಅನ್ಯಾಯ ಮಾಡಿದರೆ ಸಹಿಸುವುದಿಲ್ಲ. ಈ ಸಮುದಾಯವನ್ನು ಕಡೆಗಣಿಸುವ ಪಕ್ಷವನ್ನು ಬಹಿಷ್ಕರಿಸಲಾಗುವುದು ಎಂದು ಕರ್ನಾಟಕ ಕ್ಷತ್ರಿಯ ಒಕ್ಕೂಟ ಎಚ್ಚರಿಸಿದೆ.

'ಈ ಸಮುದಾಯದ ಮುಖಂಡರಿಗೆ ರಾಜಕೀಯವಾಗಿ ನಿರಂತರವಾಗಿ ಶೋಷಣೆಯಾಗುತ್ತಿದೆ. ಎಲ್ಲಾ ಪಕ್ಷಗಳಲ್ಲೂ ನಮ್ಮ ಸಮುದಾಯದ ಮುಖಂಡರಿದ್ದಾರೆ. ದುಡಿಸಿಕೊಂಡು ಅಧಿಕಾರ ನೀಡುವ ಸಂದರ್ಭದಲ್ಲಿ ಪರಿಗಣಿಸದೆ ಅನ್ಯಾಯ ಮಾಡಲಾಗುತ್ತಿದೆ' ಎಂದು ಒಕ್ಕೂಟದ ಅಧ್ಯಕ್ಷ ಉದಯ್ ಸಿಂಗ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಮರಾಠರು, ಅರಸು, ಅಗ್ನಿಕುಲ, ವಹ್ನಿಕುಲ ತಿಗಳ ಕ್ಷತ್ರಿಯ, ಭಾವಸಾರ ಕ್ಷತ್ರಿಯ, ರಾಜು ಕ್ಷತ್ರಿಯ, ಸೋಮವಂಶ ಸಹಸ್ರಾರ್ಜುನ, ರಜಪೂತ ಕ್ಷತ್ರಿಯ ಸೇರಿ 38 ಒಳಪಂಗಡಗಳಿದ್ದು, ಎಲ್ಲರನ್ನೂ ಒಂದೇ ವೇದಿಕೆಗೆ ತರುವಲ್ಲಿ ಈಗ ಯಶಸ್ವಿಯಾಗಿದ್ದೇವೆ. ಮೊದಲ ಸಮಾವೇಶವನ್ನು ಇದೇ 29ರಂದು ಅರಮನೆ ಮೈದಾನದಲ್ಲಿ ಆಯೋಜಿಸಲಾಗಿದೆ' ಎಂದು ಹೇಳಿದರು.

'ಚುನಾವಣೆಯಲ್ಲಿ ನಮಗೆ ಟಿಕೆಟ್ ನೀಡಬೇಕು ಎಂಬ ಆಕಾಂಕ್ಷೆ ನಮ್ಮದಲ್ಲ. ಈಗಾಗಲೇ ಮೂರು ಪಕ್ಷದಲ್ಲಿರುವ ಮುಖಂಡರನ್ನೇ ಗುರುತಿಸಿ ಟಿಕೆಟ್ ನೀಡಬೇಕು ಎಂಬುದು ನಮ್ಮ ಬೇಡಿಕೆ. ಸಮಾವೇಶದಲ್ಲಿ ಎಲ್ಲ ಹಿರಿಯರೊಂದಿಗೆ ಸಮಾಲೋಚನೆ ನಡೆಸಿ ಹಕ್ಕೊತ್ತಾಯಗಳನ್ನು ಮಂಡಿಸಲಾಗುವುದು. 5 ಲಕ್ಷಕ್ಕೂ ಹೆಚ್ಚು ಮಂದಿ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

'ನಟ ಅಭಿಷೇಕ್ ಅಂಬರೀಷ್ ಬಿಜೆಪಿ ಸೇರ್ಪಡೆಗೆ ಮಾತುಕತೆ'

ಶಿವಮೊಗ್ಗ: 'ನಟ ಅಭಿಷೇಕ್ ಅಂಬರೀಷ್ ಅವರ ಪಕ್ಷ ಸೇರ್ಪಡೆ ಬಗ್ಗೆ ಮಂಡ್ಯದಲ್ಲಿ ಮಾತುಕತೆ ನಡೆದಿದೆ. ಮುಂದಿನ ಎರಡು ದಿನಗಳಲ್ಲಿ ಸ್ಪಷ್ಟತೆ ಸಿಗಲಿದೆ' ಎಂದು ಸಚಿವ ಕೆ.ಸಿ. ನಾರಾಯಣಗೌಡ ತಿಳಿಸಿದರು.

ಬುಧವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿ, 'ಅಭಿಷೇಕ್ ರಾಜಕೀಯಕ್ಕೆ ಬರುತ್ತಾರೆ ಎಂಬ ಮಾತು ಮೊದಲಿನಿಂದಲೂ ಕೇಳಿಬರುತ್ತಿದೆ. ಅವರು ಪಕ್ಷಕ್ಕೆ ಬಂದರೆ ಒಳ್ಳೆಯದು. ಈ ಬಗ್ಗೆ ಮಂಡ್ಯ ಸಂಸದೆ, ಅಭಿಷೇಕ್ ಅವರ ತಾಯಿ ಸುಮಲತಾ ಅಂಬರೀಷ್ ಅವರೊಂದಿಗೂ ಮಾತುಕತೆ ನಡೆದಿದೆ' ಎಂದರು.

'ಅಂಬರೀಷ್ ಮಂಡ್ಯದವರು. ಅವರ ಪುತ್ರ ಅಭಿಷೇಕ್ ಬಿಜೆಪಿ ಸೇರಿ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಒಳ್ಳೆಯದು' ಎಂದು ಹೇಳಿದರು.

ಬಿಜೆಪಿ ಸಂಪರ್ಕದಲ್ಲಿ ಕಾಂಗ್ರೆಸ್ ಶಾಸಕರು: ಸಚಿವ ಅಶೋಕ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): 'ಹತ್ತಕ್ಕೂ ಹೆಚ್ಚು ಕಾಂಗ್ರೆಸ್ ಶಾಸಕರು ಬಿಜೆಪಿ ಸೇರಲು ಆಸಕ್ತಿ ತೋರಿದ್ದಾರೆ. ಮುಖ್ಯಮಂತ್ರಿ ಮತ್ತು ನಾನು ಆ ಪಕ್ಷದ ಇಬ್ಬರು ಶಾಸಕರೊಂದಿಗೆ ಮಂಗಳವಾರವೂ ಮಾತುಕತೆ ನಡೆಸಿದ್ದೇವೆ' ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ಇಲ್ಲಿ ಬುಧವಾರ ನಡೆದ ಬಿಜೆಪಿ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಪಡೆಯುತ್ತದೆ ಎಂಬ ಭ್ರಮೆಯಲ್ಲಿ ಆ ಪಕ್ಷದ ಮುಖಂಡರಿದ್ದಾರೆ. ಕಾಂಗ್ರೆಸ್ 70 ಸ್ಥಾನ ಗೆಲ್ಲುವುದೂ ಕಷ್ಟ. 123 ಸ್ಥಾನ ಗೆಲ್ಲುವುದಾಗಿ ಹೇಳುತ್ತಿರುವ ಜೆಡಿಎಸ್ 13 ಸ್ಥಾನ ಗೆದ್ದರೆ ದೊಡ್ಡದು. ಬಿಜೆಪಿ 120ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆದ್ದು ಮತ್ತೆ ಸರ್ಕಾರ ರಚಿಸಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಬಿಜೆಪಿ ಸೇರುವಂತೆ ಸಂಸದೆ ಸುಮಲತಾ ಅಂಬರೀಶ್ ಅವರನ್ನು ಆಹ್ವಾನಿಸಿದ್ದೇವೆ. ಅವರೊಂದಿಗೆ ನಾನೂ ಮಾತನಾಡಿದ್ದು ಸಕಾರಾತ್ಮವಾಗಿ ಸ್ಪಂದಿಸಿದ್ದಾರೆ' ಎಂದರು.

'ಪಪ್ಪು ಗಡ್ಡ ಬೆಳೆದಿದೆ, ಬುದ್ಧಿ ಬೆಳೆದಿಲ್ಲ'

ಮಂಡ್ಯ: 'ಅಪ್ಪುಪಪ್ಪು ದೇಶದಲ್ಲಿ ಪಾದಯಾತ್ರೆ ಮಾಡುತ್ತಿದ್ದಾರೆ. ಅವರ ಗಡ್ಡ ಬೆಳೆದಿದೆಯೇ ಹೊರತು ಬುದ್ಧಿ ಬೆಳೆದಿಲ್ಲ' ಎಂದು ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಆರ್.ಅಶೋಕ ಟೀಕಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಆಡಳಿತಕ್ಕೆ ಅವಕಾಶ ಸಿಕ್ಕಿಲ್ಲ ಎಂದಾಗ ಪಾದಯಾತ್ರೆ ಮಾಡಬೇಕು. ಆದರೆ ಅವರ ನಾಲ್ಕು ತಲೆಮಾರಿಗೆ ಅವಕಾಶ ದೊರಕಿದೆ. ಆಗ ಅವರು ದೇಶ ಲೂಟಿ ಮಾಡಿದರು. ಪಂಚರತ್ನ ಯಾತ್ರೆ ಮಾಡಿರುವ ಜೆಡಿಎಸ್‌ನವರನ್ನು ಅಲ್ಲಿಂದಲೂ ಜನ ಖಾಲಿ ಮಾಡಿಸುತ್ತಾರೆ' ಎಂದರು. 'ಸಿದ್ದರಾಮಯ್ಯ ಅವರ ತಲೆ ಮೇಲೆ ಬೂತಯ್ಯನ ಮಗ ಅಯ್ಯು ತರ ಖರ್ಗೆ, ಪರಮೇಶ್ವರ್ ಕತ್ತಿ ಮಸೆಯುತ್ತಿದ್ದಾರೆ. ಕತ್ತಿಗೆ ಡಿಕೆಶಿ ಪುಡಿ ಹಾಕುತ್ತಿದ್ದಾರೆ' ಎಂದರು.

ಸಚಿವ ಸುಧಾಕರ್ ಬಫೂನ್: ಟೀಕೆ

ಹೆಣಗಳ ವಿಚಾರದಲ್ಲೂ ಲಂಚ ಹೊಡೆಯುವುದು ಭ್ರಷ್ಟಾಚಾರ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಚಿವ ಸುಧಾಕರ್ ಒಬ್ಬ ಪೆದ್ದ. ಬಿಜೆಪಿಯ ಆಲಿಬಾಬಾ ಮತ್ತು 40 ಕಳ್ಳರ ದಂಡನಾಯಕ ಆಗುವ ಹಠಕ್ಕೆ ಬಿದ್ದ ಸುಧಾಕರ್‌ನನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಫೂನ್ ಮಾಡುತ್ತಿದ್ದಾರೆ. ಬೇಕಂತಲೇ ಸುಧಾಕರ್ ಬಾಯಲ್ಲಿ ಸುಳ್ಳು ಹೇಳಿಸುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ತಮ್ಮ ವಿರುದ್ಧ ಸುಧಾಕರ್ ಮಾಡಿರುವ ₹ 35 ಸಾವಿರ ಕೋಟಿ ಭ್ರಷ್ಟಾಚಾರದ ಆರೋಪಕ್ಕೆ ಬುಧವಾರ ಸುದ್ದಿಗೋಷ್ಠಿ ನಡೆಸಿ ಪ್ರತಿಕ್ರಿಯಿಸಿದ ಅವರು, 'ಮಹಾಲೇಖಪಾಲರ (ಸಿಎಜಿ) ವರದಿ ಓದಲು, ಅರ್ಥ ಮಾಡಿಕೊಳ್ಳಲು ಸುಧಾಕರ್‌ಗೆ ಬರುವುದಿಲ್ಲ. ಆತ ಮಾಡಿದ ಆರೋಪಕ್ಕೂ ಸಿಎಜಿ ವರದಿಯಲ್ಲಿ ಇರುವುದಕ್ಕೂ ಸಂಬಂಧವೇ ಇಲ್ಲ' ಎಂದರು.

'ಭ್ರಷ್ಟಾಚಾರ ಎಂದರೆ ಯಾವುದು ಗೊತ್ತಾ ಸುಧಾಕರ್? ಕೊರೊನಾ ಸಮಯದಲ್ಲಿ ಹೆಣಗಳ ವಿಚಾರದಲ್ಲೂ ಲಂಚ ಹೊಡೆಯುವುದು ಭ್ರಷ್ಟಾಚಾರ. 2020-21ರಲ್ಲಿ ಕೊರೊನಾದಲ್ಲಿ ಸುಮಾರು ₹ 3 ಸಾವಿರ ಕೋಟಿ ಭ್ರಷ್ಟಾಚಾರ ನಡೆದಿದೆಯೆಂದು ಆಗಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷ ಎಚ್.ಕೆ. ಪಾಟೀಲರು ವಿಧಾನಸಭಾಧ್ಯಕ್ಷರಿಗೆ ವರದಿ ಕೊಟ್ಟಿದ್ದಾರೆ. ಆದರೆ, ಸಭಾಧ್ಯಕ್ಷರು ಆ ವರದಿಯನ್ನು ಸದನದಲ್ಲಿ ಮಂಡಿಸದೆ ವಿಧಾನಸಭಾಧ್ಯಕ್ಷ ಎನ್ನುವುದನ್ನೂ ಮರೆತು ಆರೆಸ್ಸೆಸ್ಸಿನ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

'ನಮ್ಮ ಪಕ್ಷದಿಂದ ರಾಜಕೀಯ ಜೀವನ ಪಡೆದ ಸುಧಾಕರ್, ದುಡ್ಡಿನ ಆಸೆಗೆ ಬಿದ್ದು ತಮ್ಮನ್ನು ಆಪರೇಷನ್ ಕಮಲಕ್ಕೆ ಮಾರಿಕೊಂಡರು. ಕಾಂಗ್ರೆಸ್‌ನಿಂದ ಸುಧಾಕರ್‌ಗೆ ಟಿಕೆಟ್ ಕೊಡುವಾಗ ಮೊಯಿಲಿ, 'ಅವನೊಬ್ಬ ಬಿಗ್ ಫ್ರಾಡ್. ಅವನಿಗೆ ಟಿಕೆಟ್ ಕೊಡಬಾರದು' ಎಂದು ಹೇಳಿದ್ದರು' ಎಂದು ನೆನಪಿಸಿದರು.

'ಬೆಂಗಳೂರಿನ ಟೆಂಡರ್ ಶ್ಯೂರ್ ಮತ್ತು ವೈಟ್ ಟಾಪಿಂಗ್ ಕಾಮಗಾರಿಯಲ್ಲಿ ಅವ್ಯವಹಾರ ಆಗಿಲ್ಲ ಎಂದು ಕ್ಯಾಪ್ಟನ್ ದೊಡ್ಡಿಹಾಳ್ ಸಮಿತಿ ಕೊಟ್ಟಿದ್ದ ವರದಿಯನ್ನು ಯಡಿಯೂರಪ್ಪ ಸರ್ಕಾರವು ಅಂಗೀಕರಿಸಿದೆ. ಈ ವಿಚಾರ ತಿಳಿದುಕೊಳ್ಳದೆ ಸುಧಾಕರ್ ಮಣ್ಣು ತಿನ್ನುತ್ತಿದ್ದರಾ? ಇಲ್ಲ ಏನು ತಿನ್ನುತ್ತಿದ್ದರು?' ಎಂದೂ ಅವರು ಆಕ್ರೋಶ ವ್ಯಕ್ತಪಡಿಸಿದರು.

'ಆಪರೇಷನ್ ಕಮಲ'ಕ್ಕೆ ಜೆಡಿಎಸ್ ಕಾರಣ: 'ಜೆಡಿಎಸ್ 20 ತಿಂಗಳ ಅಧಿಕಾರ ಬಿಟ್ಟು ಕೊಟ್ಟಿದ್ದರೆ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುತ್ತಿರಲಿಲ್ಲ. ಆಪರೇಷನ್ ಕಮಲ ಮಾಡಲು ಜೆಡಿಎಸ್ ಕಾರಣ' ಎಂದೂ ಸಿದ್ದರಾಮಯ್ಯ ಹೇಳಿದರು.

ಆರೋಪ ಸಾಬೀತಾದರೆ ನೇಣಿಗೆ ಹಾಕಿ: ಸುಧಾಕರ್

ಕೋಲಾರ: ಕೋವಿಡ್ ಸಂದರ್ಭದಲ್ಲಿ ಹಗರಣ ನಡೆದಿರುವುದು ಸಾಬೀತಾದರೆ ಸಾರ್ವಜನಿಕವಾಗಿ ನನ್ನನ್ನು ನೇಣಿಗೆ ಹಾಕಿ' ಎಂದು ಸುಧಾಕರ್ ಅವರು ಸವಾಲು ಹಾಕಿದರು.

'ನನ್ನ ವಿರುದ್ಧ ಯಾವುದೇ ತನಿಖೆಯಾದರೂ ನಡೆಯಲಿ. ದಾಖಲೆ ಸಮೇತ ಪ್ರತಿ ಪೈಸೆಯ ಲೆಕ್ಕ ಕೊಡುತ್ತೇನೆ. ಬೇಕಿದ್ದರೆ ಶ್ವೇತಪತ್ರವನ್ನೂ ಹೊರಡಿಸಲು ಸಿದ್ಧ' ಎಂದರು.

'ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕೋಲಾರದಲ್ಲಿ ಬೌಲಿಂಗ್ ಮಾಡಿ, ರನ್‌ಗಾಗಿ ವರುಣಾ ಕಡೆ ಓಡಲಿದ್ದಾರೆ' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ವ್ಯಂಗ್ಯ ಮಾಡಿದ್ದಾರೆ.

'ಸಿದ್ದರಾಮಯ್ಯ ಕೋಲಾರದಿಂದ ಸ್ಪರ್ಧೆಯನ್ನೇ ಮಾಡುವುದಿಲ್ಲ. ಒಂದು ವೇಳೆ ಸ್ಪರ್ಧಿಸಿದರೂ ಅವರು ಗೆಲ್ಲುವುದಿಲ್ಲ. ಸ್ಥಳೀಯ ಮುಖಂಡರು ಅವರನ್ನು ಇಲ್ಲಿಗೆ ಕರೆತಂದು ಖೆಡ್ಡಾಕ್ಕೆ ಕೆಡವಲು ಸಂಚು ನಡೆಸಿದ್ದಾರೆ' ಎಂದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸೋಲಿನ ಭಯದಲ್ಲಿರುವ ಜಿಲ್ಲೆಯ ಕಾಂಗ್ರೆಸ್ ಶಾಸಕರು ಅವರನ್ನು ಅಡ್ಡ ನಿಲ್ಲಿಸಿಕೊಂಡು ತಾವು ಚುನಾವಣೆಯಲ್ಲಿ ಗೆಲ್ಲಲು ಪ್ರಯತ್ನಿಸುತ್ತಿದ್ದಾರೆ' ಎಂದು ಹೇಳಿದರು.

'ಹೆಬ್ಬಾಳಕರ ವಿರುದ್ಧ ದೂರು ಇಂದು'

ಬೆಳಗಾವಿ: 'ಬೆಳಗಾವಿ ಗ್ರಾಮೀಣ ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕರು ಬಹಿರಂಗವಾಗಿ ಮಿಕ್ಸರ್ ಹಾಗೂ ಸ್ಟೀಲ್ ಬಾಕ್ಸ್‌ಗಳನ್ನು ಮತದಾರರಿಗೆ ಹಂಚುತ್ತಿದ್ದಾರೆ. ಈ ಬಗ್ಗೆ ಜ.26ರಂದು ಬೆಂಗಳೂರಿನಲ್ಲಿ ಚುನಾವಣಾ ಆಯೋಗಕ್ಕೆ ದೂರು ನೀಡಲಾಗುವುದು' ಎಂದು ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ ಹೇಳಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ರಮೇಶ ಜಾರಕಿಹೊಳಿ ಸೇರಿ ಮೂವರ ವಿರುದ್ಧ ಭ್ರಷ್ಟಾಚಾರ ಬಗ್ಗೆ ಡಿ.ಕೆ. ಶಿವಕುಮಾರ ಹಾಗೂ ವಿಪಕ್ಷ ನಾಯಕ ಸಿದ್ದರಾಮಯ್ಯ ದೂರು ನೀಡಿದ್ದಾರೆ. ರಮೇಶ ಅವರು ₹6,000 ಹಂಚಿರುವ ಬಗ್ಗೆ ದಾಖಲೆ ಇದ್ದರೆ ಬಿಡುಗಡೆ ಮಾಡಲಿ' ಎಂದು, ಮಿಕ್ಸರ್ ಹಂಚಿಕೆ ಬಗ್ಗೆ ವಿಡಿಯೊ ತೋರಿಸಿದರು.

ಕಾಂಗ್ರೆಸ್ ಎಂದರೆ 'ಪ್ರೆಷರ್ ಕುಕ್ಕರ್ ಪಾರ್ಟಿ': ಬೊಮ್ಮಾಯಿ ಲೇವಡಿ

ಪ್ರಜಾವಾಣಿ ವಾರ್ತೆ

ಹಾವೇರಿ: 'ಕುಕ್ಕರ್ ಹಂಚಿ ಕಾಂಗ್ರೆಸ್ ಶಾಸಕರೇ ಸಿಕ್ಕಿ ಹಾಕಿಕೊಂಡಿದ್ದಾರೆ. ವಾಣಿಜ್ಯ ತೆರಿಗೆ ಅಧಿಕಾರಿಗಳು ಜಪ್ತಿ ಮಾಡಿ ದಂಡ ಹಾಕಿದ್ದಾರೆ. ಕಾಂಗ್ರೆಸ್ ಎಂದರೆ ಪ್ರೆಷರ್ ಕುಕ್ಕರ್ ಪಾರ್ಟಿ. ಕುಕ್ಕರ್‌ನಲ್ಲಿ ಬಾಂಬ್ ಇಟ್ರೂ ಏನೂ ಇಲ್ಲ ಅಂತಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಲೇವಡಿ ಮಾಡಿದರು.

ಹಿರೇಕೆರೂರು ಪಟ್ಟಣದ ಹೊರವಲಯದ ಹೆಲಿಪ್ಯಾಡ್ ಬಳಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿ, ಸರ್ಕಾರದ ಮೇಲೆ ಕಾಂಗ್ರೆಸ್‌ನಿಂದ ಭ್ರಷ್ಟಾಚಾರ ಪ್ರಕರಣ ದಾಖಲು ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ಇದು ಅತ್ಯಂತ ಹಾಸ್ಯಾಸ್ಪದ ಮತ್ತು ಕೀಳುಮಟ್ಟದ್ದು. ಕಾಂಗ್ರೆಸ್‌ನವರು ಕೇವಲ ರಾಜಕೀಯ ಕಾರಣಕ್ಕೆ ಮಾತಾಡ್ತಾ ಇದಾರೆ. ಸೋಲೋದು ಗ್ಯಾರಂಟಿ ಅಂತ ಗೊತ್ತಾಗಿದೆ. ಹೀಗಾಗಿ ಸುಳ್ಳು ಆರೋಪ ಮಾಡಿ ಜನರನ್ನು ದಾರಿ ತಪ್ಪಿಸುತ್ತಿದ್ದಾರೆ' ಎಂದು ತಿರುಗೇಟು ನೀಡಿದರು.

ಬೊಮ್ಮಾಯಿ ಭ್ರಷ್ಟಾಚಾರದ ಪಿತಾಮಹ ಎಂಬ ಡಿಕೆಶಿ ಹೇಳಿಕೆಗೆ ಪ್ರತಿಕ್ರಿಯಿಸಿ, 'ಈ ದೇಶದಲ್ಲಿ ಮೊದಲನೇ ಹಗರಣ ಪ್ರಾರಂಭ ಆಗಿದ್ದೇ ಕಾಂಗ್ರೆಸ್‌ನಿಂದ. ಜೀಪ್ ಹಗರಣ ಮಾಡಿ ಅಂದು ಡಿಫೆನ್ಸ್ ಮಿನಿಸ್ಟರ್ ರಾಜೀನಾಮೆ ನೀಡಿದ್ರು. ಅಲ್ಲಿಂದಲೇ ಈ ದೇಶದಲ್ಲಿ ಭ್ರಷ್ಟಾಚಾರ ಆರಂಭ ಆಯ್ತು. ಭ್ರಷ್ಟಾಚಾರ ಕಾಂಗ್ರೆಸ್ಸಿನ ಅವಿಭಾಜ್ಯ ಅಂಗ. ಇನ್ನು ಡಿ.ಕೆ. ಶಿವಕುಮಾರ್ ಬಗ್ಗೆ ನಾನು ಏನು ಹೇಳಲಿ? ಅವರು ಬಹಳ ಸ್ವಚ್ಛವಿರುವ ಮನುಷ್ಯ. ಅವರಷ್ಟು ಸ್ವಚ್ಛ ಮನುಷ್ಯ ರಾಜಕಾರಣದಲ್ಲಿ ಯಾರೂ ಇಲ್ಲ' ಎಂದು ವ್ಯಂಗ್ಯವಾಡಿದರು.

ಚಿರತೆಯಿಂದ ತಪ್ಪಿಸಿಕೊಳ್ಳಲು ಮರವೇರಿದ ಯುವತಿ

ರಾಮನಗರ: ಮಾಗಡಿ ತಾಲ್ಲೂಕಿನ ಮರಳುದೇವನಪುರದಲ್ಲಿ ಬುಧವಾರ ಚಿರತೆ ದಾಳಿಯಿಂದ ತಪ್ಪಿಸಿಕೊಳ್ಳಲು ಮರವೇರಿದ ಯುವತಿ ಮೇಲಿಂದ ಬಿದ್ದು ಗಾಯಗೊಂಡಿದ್ದಾಳೆ.

ಮರದಿಂದ ಬಿದ್ದು ವಿಜಯಲಕ್ಷ್ಮಿ(25) ಎಂಬ ಯುವತಿಯ ಸೊಂಟದ ಭಾಗಕ್ಕೆ ತೀವ್ರ ಪೆಟ್ಟಾಗಿದೆ. ಮಾಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ.

ಗ್ರಾಮದ ಜಮೀನಿನಲ್ಲಿ ಯುವತಿ ಕುರಿ ಮೇಯಿಸುತ್ತಿದ್ದ ವೇಳೆ ಚಿರತೆ ಅಲ್ಲಿ ಪ್ರತ್ಯಕ್ಷವಾಗಿದೆ. ಇದರಿಂದ ಗಾಬರಿಗೊಂಡ ಆಕೆ ಮರವೇರಿದ್ದು, ಕೆಳಗೆ ಬಿದ್ದು ಸೊಂಟದ ಮೂಳೆ ಮುರಿದುಕೊಂಡಿದ್ದಾಳೆ.

ಪಕ್ಕದ ಜಮೀನಿನಲ್ಲಿದ್ದವರು ಕೂಗಿಕೊಂಡ ಕಾರಣ ಚಿರತೆ ಸ್ಥಳದಿಂದ ಓಡಿಹೋಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿ ಯುವತಿಯ ಆರೋಗ್ಯ ವಿಚಾರಿಸಿದರು.

ಕಟ್ಟಡ ಕುಸಿತ: ಇಬ್ಬರು ಮೃತ ಎಸ್‌ಪಿ ಶಾಸಕರ ಪುತ್ರನ ಬಂಧನ

ಲಖನೌ (ಪಿಟಿಐ): ನಗರದಲ್ಲಿ ಮಂಗಳವಾರ ಐದು ಅಂತಸ್ತಿನ ವಸತಿ ಸಮುಚ್ಚಯ ಕುಸಿದು ಇಬ್ಬರು ಮಹಿಳೆಯರು ಮೃತಪಟ್ಟು 15ಕ್ಕೂ ಹೆಚ್ಚು ಜನರು ಗಾಯಗೊಂಡ ಘಟನೆಗೆ ಸಂಬಂಧಿಸಿದಂತೆ ಸಮಾಜವಾದಿ ಪಕ್ಷದ (ಎಸ್‌ಪಿ) ಶಾಸಕರೊಬ್ಬರ ಮಗನನ್ನು ಬುಧವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಿತೋರೆ ಕ್ಷೇತ್ರದ ಶಾಹಿದ್ ಮನ್ಝೂರ್ ಅವರ ಮಗ ನವಾಜಿಶ್ ಶಾಹಿದ್ ಬಂಧಿತ. ಆತನನ್ನು ಮೀರತ್‌ನಲ್ಲಿ ಬಂಧಿಸಲಾಯಿತು ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿ ಹಜ್ರತ್ ಗಂಜ್ ಪೊಲೀಸ್ ಠಾಣೆಯಲ್ಲಿ ಬುಧವಾರ ಎಫ್‌ಐಆರ್ ದಾಖಲಿಸಲಾಗಿದೆ. ಮೊಹಮ್ಮದ್ ತಾರಿಕ್ ಮತ್ತು ಫಹಾದ್ ಯಾರ್ಖ್ವಾನಿ ಎಂಬ ಇನ್ನೂ ಇಬ್ಬರ ಹೆಸರು ಎಫ್‌ಐಆರ್‌ನಲ್ಲಿ ನಮೂದಾಗಿದೆ. ಕಟ್ಟಡ ನಿರ್ಮಿಸಲಾಗಿದ್ದ ಭೂಮಿಯು ಶಾಹಿದ್ ಮಾಲಿಕತ್ವದಲ್ಲಿದೆ. 'ಯಾರ್ಖ್ವಾನಿ ಬಿಲ್ಡರ್ಸ್' ಈ ಕಟ್ಟಡವನ್ನು ನಿರ್ಮಿಸಿದ್ದರು.

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 323 (ಸ್ವಇಚ್ಛೆಯಿಂದ ನೋವುಂಟು ಮಾಡುವುದು), 308 (ಕೊಲೆ ಯತ್ನ), 420 (ವಂಚನೆ) ಮತ್ತು 120ಬಿ (ಕ್ರಿಮಿನಲ್ ಸಂಚು) ಮತ್ತು ಕ್ರಿಮಿನಲ್ ಕಾನೂನು ತಿದ್ದುಪಡಿ ಕಾಯ್ದೆಯ ಸೆಕ್ಷನ್ 7ರ ಅಡಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಸ್‌ಪಿ ವಕ್ತಾರ ಅಬ್ಬಾಸ್ ಹೈದರ್ ಅವರ ತಾಯಿ ಮತ್ತು ಮಡದಿ ಮೃತಪಟ್ಟವರು. ಇನ್ನೂ ಇಬ್ಬರು ಅವಶೇಷಗಳ ಅಡಿ ಸಿಲುಕಿರುವ ಶಂಕೆ ಇದೆ.

ಗಿರಿನಗರದಲ್ಲಿರುವ ಎಸ್‌.ಜಿ.ಎಸ್ ವಾಗ್ದೇವಿ ಸಂಪರ್ಕ ನ್ಯೂನತೆಯುಳ್ಳವರ ಪುನಶ್ಚೇತನ ಕೇಂದ್ರದ 27ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ 'ಡಾ. ಶಾಂತಾ ರಾಧಾಕೃಷ್ಣ ದತ್ತಿ ಪ್ರಶಸ್ತಿ'ಯನ್ನು ರತ್ನಾ ಬಿ. ಶೆಟ್ಟಿ ಅವರಿಗೆ ಬುಧವಾರ ಪ್ರದಾನ ಮಾಡಲಾಯಿತು. ಶಂಕರ್ ಮಡಿಕೇರಿ, ಎಸ್‌.ಜಿ.ಎಸ್‌ ಆಶ್ರಮದ ಟ್ರಸ್ಟಿ ಸಿ. ನರಸಿಂಹ, ಅಮೃತಾ ಲಕ್ಷ್ಮಿ, ಕಲ್ಪನಾ ಜೋಶಿ, ರಾಮಯ್ಯ ವೈದ್ಯಕೀಯ ಕಾಲೇಜಿನ ಡೀನ್ ಡಾ. ಶಾಲಿನಿ ಸಿ. ನೂಯಿ, ಡಾ. ರೋಹಿತ್ ಉದಯ್ ಪ್ರಸಾದ್, ಗೀತಾ ಪ್ರಸನ್ನ, ಡಾ. ಶಾಂತಾ ರಾಧಾಕೃಷ್ಣ ಮತ್ತು ಡಾ ಸುನಿಲ್ ಎನ್‌. ದತ್ ಇದ್ದಾರೆ – ಪ್ರಜಾವಾಣಿ ಚಿತ್ರ

ಇನ್ನೂ 110ಕ್ಕೂ ಹೆಚ್ಚು ಸಿ.ಡಿ ಇಟ್ಟುಕೊಂಡಿರುವ ಡಿಕೆಶಿ- ರಮೇಶ ಜಾರಕಿಹೊಳಿ ಆರೋಪ

'ಸಿ.ಡಿ ಪ್ರಕರಣ ಸಿಬಿಐಗೆ ಒಪ್ಪಿಸಬೇಕು'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ನನ್ನ ಖಾಸಗಿತನದ ವಿಡಿಯೊಗಳೂ ಸೇರಿದಂತೆ ಇನ್ನೂ ಹತ್ತಾರು ಜನರ 110ಕ್ಕೂ ಹೆಚ್ಚು ಸಿ.ಡಿ ಗಳನ್ನು ಡಿ.ಕೆ. ಶಿವಕುಮಾರ ಇಟ್ಟುಕೊಂಡಿದ್ದಾನೆ. ಹಾಗಾಗಿ, ಈ ಸಿ.ಡಿ ಪ್ರಕರಣವನ್ನು ಸಿಬಿಐಗೆ ಒಪ್ಪಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡುತ್ತೇನೆ' ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ರಮೇಶ ಜಾರಕಿಹೊಳಿ

ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ನನ್ನ ವೈಯಕ್ತಿಕ ಬದುಕಿಗೆ ಸಂಬಂಧಿಸಿದ ಸಿ.ಡಿ ಪ್ರಕರಣದಲ್ಲಿ ಈ 'ಮಹಾನ್ ನಾಯಕ' ಇರುವುದು ಖಚಿತ. ಇದರಲ್ಲಿ ಭಾಗಿಯಾದ ಆರೋಪಿಯೊಬ್ಬನ ದೇವನಹಳ್ಳಿಯ ಮನೆಯಲ್ಲಿ ತನಿಖೆ ನಡೆದಾಗ ಇತರರ ಹಲವು ಸಿ.ಡಿ ಗಳು ಸಿಕ್ಕಿವೆ. ನನ್ನ ಪ್ರಕರಣ ತನಿಖೆ ನಡೆಸಿದ ಅಧಿಕಾರಿಯ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಸಿ.ಡಿ ಕೂಡ ಸಿಕ್ಕಿದೆ. ಇದೆಲ್ಲವನ್ನೂ ಮುಚ್ಚಿಡಲಾಗಿದೆ. ನನ್ನ ವೈಯಕ್ತಿಕ ಜೀವನ ಹಾಳಾದಂತೆ ಬೇರೊಬ್ಬರಿಗೆ ಆಗಬಾರದು ಎಂಬ ಕಾರಣಕ್ಕೆ ಇದನ್ನು ಸಿಬಿಐಗೆ ಒಪ್ಪಿಸಲು ಆಗ್ರಹಿಸುತ್ತೇನೆ' ಎಂದರು.

ಮತದಾರರಿಗೆ ಆಮಿಷ ಒಡ್ಡಿಲ್ಲ: 'ಬೆಳಗಾವಿ ಗ್ರಾಮೀಣ ಕ್ಷೇತ್ರದಲ್ಲಿ ನಾನು ₹ 10 ಕೋಟಿ ಖರ್ಚು ಮಾಡುತ್ತೇನೆ, ಮತದಾರರಿಗೆ ತಲಾ ₹ 6,000 ಕೊಡುತ್ತೇನೆ ಎಂದು ಆಮಿಷ ಒಡ್ಡಿದ್ದಾಗಿ ಕಾಂಗ್ರೆಸ್ಸಿಗರು ಆರೋಪಿಸಿದ್ದಾರೆ. ನಾನು ಯಾವುದೇ ಆಮಿಷ ಒಡ್ಡಿಲ್ಲ. ನಮ್ಮ ಯಾವ ಅಭ್ಯರ್ಥಿಯ ಹೆಸರೂ ಹೇಳಿಲ್ಲ. ಈಗ ನೀತಿ ಸಂಹಿತೆ ಕೂಡ ಇಲ್ಲ. ಮಾತಿನ ಆವೇಶದಲ್ಲಿ ಖರ್ಚು ಮಾಡುತ್ತೇನೆ ಎಂದಿರಬಹುದು. ಈ ಕ್ಷೇತ್ರದ ಶಾಲೆ ಸುಧಾರಣೆ, ರೈತರು, ಬಡವರಿಗೆ ಆರೋಗ್ಯ ಸೌಕರ್ಯ ನೀಡುವ ಉದ್ದೇಶದಿಂದ ಹೇಳಿದ್ದೇನೆ' ಎಂದು ಸಮರ್ಥಿಸಿಕೊಂಡರು.

'ಮೀರ್‌ಸಾಧಿಕ್‌ರಿಂದ ರಕ್ಷಿಸಿಕೊಳ್ಳಲು ಸಿ.ಡಿ ಬಿಡುಗಡೆಗೆ ತಡೆ ತರಲಾಗಿತ್ತು'

ಹಾವೇರಿ: 'ನಾವ್ಯಾರು ವ್ಯಭಿಚಾರ ಮಾಡಿಲ್ಲ. ಆದರೆ, ನಮಗೆ ಕೆಟ್ಟ ಹೆಸರು ತರಲು ಸಿ.ಡಿ ಬಿಡುಗಡೆ ಮಾಡಿದರೆ, ಒಮ್ಮೆ ಹೋದ ಮಾನ ಮತ್ತೆ ಬರುವುದಿಲ್ಲ. ಮೀರ್‌ಸಾಧಿಕ್ ಮತ್ತು ನಂಬಿಕೆದ್ರೋಹಿಗಳಿಂದ ರಕ್ಷಣೆ ಅಗತ್ಯವಾದ್ದರಿಂದ ಸಿ.ಡಿ ಬಿಡುಗಡೆಗೆ ತಡೆಯಾಜ್ಞೆ ತರಲಾಗಿತ್ತು' ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಸಮರ್ಥಿಸಿಕೊಂಡರು.

'ಸಿ.ಡಿ ಬಿಡುಗಡೆ ವಿರುದ್ಧ ಕೋರ್ಟ್‌ನಿಂದ ಏಕೆ ತಡೆಯಾಜ್ಞೆ ತಂದರು?' ಎಂಬ ಮಾಜಿ ಶಾಸಕ ಯು.ಬಿ.ಬಣಕಾರ್ ಹೇಳಿಕೆಗೆ ಹಿರೇಕೆರೂರಿನಲ್ಲಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಮೀರ್ ಸಾಧಿಕ್‌ರಂಥ ಜನ ನಮ್ಮ ಸುತ್ತಮುತ್ತಲೇ ಇರುತ್ತಾರೆ. ಇದೇ ಬಣಕಾರ್ ನಮ್ಮ ಜೊತೆಗೆ ಇದ್ದು, ಈಗ ಕಾಂಗ್ರೆಸ್ ಸೇರಿದ್ದಾರೆ' ಎಂದು ಕುಟುಕಿದರು.

'ರಮೇಶ್ ಜಾರಕಿಹೊಳಿ ಬಗ್ಗೆ ಅನವಶ್ಯಕವಾಗಿ ಸಿ.ಡಿ ಬಿಡುಗಡೆ ಮಾಡಿದರು. ಆದರೆ ಏನಾಯ್ತು? 'ಬಿ' ರಿಪೋರ್ಟ್ ಆಯ್ತು. ನಾವು ನಮ್ಮ ಗೌರವ ರಕ್ಷಿಸಿಕೊಳ್ಳುವ ಕೆಲಸ ಮಾಡಲೇಬೇಕು. ತಡೆಯಾಜ್ಞೆ ಅವಧಿ ಹಿಂದೆಯೇ ಮುಗಿದಿದೆ. ನಂತರವಾದರೂ ಸಿ.ಡಿ ಬಿಡುಗಡೆ ಮಾಡಬಹುದಿತ್ತಲ್ಲ?' ಎಂದರು.

'ನಾವು 17 ಮಂದಿ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿ, ಬಿಜೆಪಿ ಸರ್ಕಾರ ರಚನೆಯಾಗಿದ್ದಕ್ಕೆ ಸಿದ್ದರಾಮಯ್ಯ ಅವರಿಗೆ ವಿರೋಧ ಪಕ್ಷದ ನಾಯಕನ ಸ್ಥಾನ ಸಿಕ್ಕಿತು. ಇದಕ್ಕಾಗಿ ಅವರು ನಮಗೆ ಅಭಿನಂದನೆ ತಿಳಿಸಬೇಕು' ಎಂದರು.

ಪ್ಯಾಂಟ್ ಬಿಚ್ಚು ಎಂದು ನಾವು ಹೇಳಿದ್ದೆವಾ: ಡಿಕೆಶಿ ಪ್ರಶ್ನೆ

ಬೆಂಗಳೂರು: 'ರಮೇಶ ಜಾರಕಿಹೊಳಿಗೆ ಪ್ಯಾಂಟ್ ಬಿಚ್ಚು ಎಂದು ನಾವು ಹೇಳಿದ್ದೆವಾ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

'ನನ್ನ ಜೀವನ ಹಾಳು ಮಾಡಿದ್ದು ಡಿ.ಕೆ. ಶಿವಕುಮಾರ್' ಎಂಬ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಲಂಚ ಹೊಡಿ ಎಂದು ನಾವು ಹೇಳಿದ್ದೆವಾ? ದುಡ್ಡು ಹಂಚು ಎಂದಿದ್ದೆವಾ' ಎಂದೂ ಅವರು ಕೇಳಿದರು.

'ಕಾಂಗ್ರೆಸ್ ಅನ್ನು ಹಾಳು ಮಾಡಿದ್ದು ಅವನು. 'ಆಪರೇಷನ್ ಕಮಲ' ಮಾಡಿದ್ದು ಅವನು. ಸರ್ಕಾರ ಬೀಳಿಸಿದ್ದು ಅವನು' ಎಂದು ರಮೇಶ ಜಾರಕಿಹೊಳಿ ವಿರುದ್ಧ ವಾಗ್ದಾಳಿ ನಡೆಸಿದರು.

ಸಂಕ್ಷಿಪ್ತ ಸುದ್ದಿ

'ಡಿಕೆಶಿ ನಿತ್ಯ ಗೋಮೂತ್ರದಲ್ಲಿ ಸ್ನಾನ ಮಾಡಲಿ'

ಶಿವಮೊಗ್ಗ: 'ಡಿ.ಕೆ. ಶಿವಕುಮಾರ್ ಎಂದರೆ ಭ್ರಷ್ಟಾಚಾರದ ಸಾಕಾರರೂಪ. ಭ್ರಷ್ಟತೆ ಅವರ ಕಣಕಣದಲ್ಲೂ ಅಡಗಿದೆ. ಹೀಗಾಗಿ ಅವರೇ ಪ್ರತಿ ದಿನ ಗಂಗಾಜಲ, ಗೋ ಮೂತ್ರ ಬಳಸಿ ಸ್ನಾನ ಮಾಡಿ ಶುದ್ಧಿಯಾಗಲಿ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ತಿರುಗೇಟು ನೀಡಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಭ್ರಷ್ಟಾಚಾರದ ಕೂಪವಾದ ವಿಧಾನಸೌಧವನ್ನು ಗಂಗಾಜಲ, ಗೋಮೂತ್ರದಿಂದ ಶುದ್ಧೀಕರಿಸುವುದಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿಕೆ ಬಗ್ಗೆ ಬುಧವಾರ ಇಲ್ಲಿ ಮಾಧ್ಯಮದವರ ಪ್ರಶ್ನೆಗೆ ಮೇಲಿನಂತೆ ಪ್ರತಿಕ್ರಿಯಿಸಿದರು.

'ಭ್ರಷ್ಟಾಚಾರದ ಬಗ್ಗೆ ಶಿವಕುಮಾರ್ ಮಾತನಾಡುವುದು ಭೂತದ ಬಾಯಲ್ಲಿ ಭಗವದ್ಗೀತೆ ಎಂಬಂತಾಗಿದೆ. ಸಮಾಜದಲ್ಲಿ ಭ್ರಷ್ಟಾಚಾರ ಹುಟ್ಟು ಹಾಕಿದ್ದೇ ಕಾಂಗ್ರೆಸ್ ಪಕ್ಷ. ಸರ್ಕಾರ ₹ 100 ಕೊಟ್ಟರೆ ಅದು ಫಲಾನುಭವಿಗೆ ತಲುಪುವ ವೇಳೆ ₹ 15 ಆಗಿರುತ್ತದೆ ಎಂದು ಅವರದ್ದೇ ಪಕ್ಷದ ಪ್ರಧಾನಿ ಹೇಳಿದ್ದರು. ಸರ್ಕಾರದ ಅನುದಾನವನ್ನು ಮಧ್ಯವರ್ತಿಗಳ ಕಾಟವಿಲ್ಲದೇ ಸಮಾಜದ ಕಟ್ಟಕಡೆಯ ವ್ಯಕ್ತಿಗೆ ತಲುಪಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ' ಎಂದರು.

'ಹೈಕೋರ್ಟ್ ನ್ಯಾಯಮೂರ್ತಿಯಿಂದ ತನಿಖೆ ನಡೆಸಿ'

ಬೆಂಗಳೂರು: 'ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಿಂದ ಪಾರು ಮಾಡಲು ಸಿಐಡಿ ಡಿವೈಎಸ್‌ಪಿ ಶಂಕರ ಗೌಡ ಪಾಟೀಲ ಅವರಿಗೆ ₹76 ಲಕ್ಷ ನೀಡಿರುವುದಾಗಿ ಪ್ರಮುಖ ಆರೋಪಿ ಆರ್‌.ಡಿ. ಪಾಟೀಲ ನೀಡಿರುವ ಹೇಳಿಕೆಯ ಕುರಿತು ಹೈಕೋರ್ಟ್ ನ್ಯಾಯಮೂರ್ತಿಯಿಂದ ತನಿಖೆ ನಡೆಸಬೇಕು' ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಆಗ್ರಹಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರಕರಣ ಮುಚ್ಚಿ ಹಾಕಲು ಲಂಚ ಕೊಟ್ಟಿರುವುದಾಗಿ ಆರ್‌.ಡಿ. ಪಾಟೀಲ ಲೋಕಾಯುಕ್ತಕ್ಕೆ ಪತ್ರ ಬರೆದಿದ್ದಾರೆ. ತನಿಖಾಧಿಕಾರಿ ₹ 3 ಕೋಟಿ ಲಂಚ ಕೇಳಿದ್ದರೆಂದೂ ಆರೋಪಿಸಿದ್ದಾರೆ' ಎಂದರು.

'ಪಿಎಸ್‌ಐ ನೇಮಕಾತಿ ಪ್ರಕರಣವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಗೃಹ ಸಚಿವ ಆರಗ ಜ್ಞಾನೇಂದ್ರ ಮುಚ್ಚಿ ಹಾಕಲು ಯತ್ನಿಸುತ್ತಿದ್ದಾರೆ' ಎಂದೂ ದೂರಿದರು.

'ಕರ್ನಾಟಕದಲ್ಲಿ ಲೋಕೋಪಯೋಗಿ ಇಲಾಖೆ ಎಂಜಿನಿಯರ್‌ಗಳು, ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಸೇರಿ ಎಲ್ಲ ಹುದ್ದೆಗಳು ಮಾರಾಟಕ್ಕಿವೆ' ಎಂದರು.

'ವರ್ಗಾವಣೆ ಮಾಹಿತಿ ಕೊಡಿ; ಇಲ್ಲವೇ ಹಕ್ಕುಚ್ಯುತಿ ಎದುರಿಸಿ'

ಶಿವಮೊಗ್ಗ: 'ಸೊರಬ ತಾಲ್ಲೂಕಿನಿಂದ ನಾಲ್ಕು ವರ್ಷಗಳಲ್ಲಿ 14 ಜನ ತಹಶೀಲ್ದಾರರು ವರ್ಗಾವಣೆ ಆಗಿದ್ದಾರೆ ಎಂದು ಸರ್ಕಾರಿ ನೌಕರರ ಸಂಘದವರು ಅಪಪ್ರಚಾರ ಮಾಡುತ್ತಿದ್ದಾರೆ. ವರ್ಗಾವಣೆ ಆದವರ ಪಟ್ಟಿಕೊಡಬೇಕು; ಇಲ್ಲವೇ ಜನರಿಗೆ ತಪ್ಪು ಮಾಹಿತಿ ಕೊಟ್ಟಿದ್ದಕ್ಕೆ ಕ್ಷಮೆ ಕೇಳಬೇಕು. ಇದಕ್ಕೆ ತಪ್ಪಿದಲ್ಲಿ ವಿಧಾನಸಭೆಯಲ್ಲಿ ಹಕ್ಕುಚ್ಯುತಿ ಮಂಡಿಸುತ್ತೇನೆ' ಎಂದು ಸೊರಬ ಶಾಸಕ ಕುಮಾರ್ ಬಂಗಾರಪ್ಪ ಎಚ್ಚರಿಸಿದರು.

ಜಿಲ್ಲಾ ಪಂಚಾಯಿತಿ ಸಭಾಭವನದಲ್ಲಿ ಬುಧವಾರ ನಡೆದ ಕೆಡಿಪಿ ಸಭೆಯಲ್ಲಿ ಮಾತನಾಡಿದ ಅವರು, 'ಕಂದಾಯ ಇಲಾಖೆ ನೌಕರರು ನಮ್ಮ ವಿರುದ್ಧ ಮಂಗಳವಾರ ಶಿವಮೊಗ್ಗದಲ್ಲಿ ನಡೆಸಿದ ಪ್ರತಿಭಟನೆ ಸಂಪೂರ್ಣ ರಾಜಕೀಯ ಪ್ರೇರಿತವಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಅವರು ರಾಜಕೀಯ ಪಕ್ಷದವರಂತೆ ಮಾತನಾಡಬಾರದು. ನಾಲಿಗೆ ಹಿಡಿತದಲ್ಲಿ ಇಟ್ಟುಕೊಳ್ಳಬೇಕು. ಈ ರೀತಿ ಮಾಡುವುದಾದರೆ ಶಾಸಕರು ಕೆಲಸ ಮಾಡುವುದು ಹೇಗೆ? ನಾವು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರನ್ನು ಕೇಳಿ ಕೆಲಸ ಮಾಡಬೇಕೇ' ಎಂದು ಪ್ರಶ್ನಿಸಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ರಾಮನಗರ ವಿಭಾಗ, ಸಂಚಾರ ಶಾಖೆ, ಮೊದಲನೇ ಮಹಡಿ, ವಾಹನ ನಿಲ್ದಾಣ, ಐಜೂರು ವೃತ್ತ, ರಾಮನಗರ–562159.

ಸಂಖ್ಯೆ: ಕರಾಸಾ.ರಾನವಿ.ಸಂ.ವಾ/3206/3207/3208/22–23 ದಿನಾಂಕ: 23.01.2023

"ಸಂಧಾನ ಪ್ರಕಟಣೆ ಸಂಖ್ಯೆ: 14 & 16 ಹಾಗೂ ಇ–ಟೆಂಡರ್ ಪ್ರಕಟಣೆ ಸಂಖ್ಯೆ: 15–2022–23"

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು, ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣ, ಕೋಡಂಬಳ್ಳಿ, ಆನೇಕಲ್, ಕೋಡಿಹಳ್ಳಿ, ಕನಕಪುರ ಹಾಗೂ ಮಾಗಡಿ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗೆ 03 ವರ್ಷಗಳವರೆಗೆ ಮತ್ತು ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಖಾಲಿ ಇರುವ ಗ್ಲೋಸೈನ್/ಪ್ಲಾಟ್ ಫಾರಂ ಫಲಕಗಳ ಜಾಹೀರಾತುಗಳಿಗೆ 05 ವರ್ಷಗಳವರೆಗೆ ಸಂಧಾನದ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ದಿ: 15.02.2023 ರಂದು 15.00 ಗಂಟೆಗೆ ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು/ಪ್ರತಿನಿಧಿಗಳ ಎದುರು ಸಂಧಾನ ಸಭೆಯನ್ನು ನಡೆಸಲಾಗುವುದು. ಸಂಧಾನ ಅರ್ಜಿಗಳನ್ನು ದಿನಾಂಕ: 23.01.2023 ರಿಂದ ದಿನಾಂಕ: 14.02.2023ರ 15.00 ಗಂಟೆಗಳವರೆಗೆ ಪಡೆಯಬಹುದು. ಹಾಗೂ ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣ, ಸೋಲೂರು, ಆನೇಕಲ್, ಸಾತನೂರು ಹಾಗೂ ಕೋಡಿಹಳ್ಳಿ ಬಸ್ ಘಟಕ/ನಿಲ್ದಾಣಗಳಲ್ಲಿ ಖಾಲಿಯಿರುವ ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗಳಿಗೆ 03 ವರ್ಷಗಳವರೆಗೆ ಇ–ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು ದಿ: 16.02.2023 ರಂದು 11.00 ಗಂಟೆಗೆ ಇ–ಟೆಂಡರ್ ನಡೆಸಲು/ತೆರೆಯಲು ಸಮಯವನ್ನು ನಿಗದಿಪಡಿಸಲಾಗಿರುತ್ತದೆ. ದಿ: 24.01.2023 ರಿಂದ ಇ–ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್ http://www.eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ದಿನಾಂಕ: 14.02.2023 ರಂದು 17.00 ಗಂಟೆಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562159 ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 7760990852.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ,
ರಾಮನಗರ ವಿಭಾಗ, ರಾಮನಗರ

ವಾ.ಸಾ.ಸಂ.ಇ/ಬೆಂ.ನಗರ/4318/ಆಕಾರ್/2021–22

ಡಿವೈಎಸ್ಪಿ/ಎಸಿಪಿ, ಇನ್‌ಸ್ಪೆಕ್ಟರ್ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 23 ಡಿವೈಎಸ್ಪಿ/ಎಸಿಪಿ ಹಾಗೂ 103 ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಿ ಪೊಲೀಸ್ ಸಿಬ್ಬಂದಿ ಮಂಡಳಿ ಬುಧವಾರ ಆದೇಶ ಹೊರಡಿಸಿದೆ.

ಬೆಂಗಳೂರುಕಮಿಷನರೇಟ್‌ವ್ಯಾಪ್ತಿಯಲ್ಲಿ ವರ್ಗಾವಣೆಯಾದ ಡಿವೈಎಸ್ಪಿ/ಎಸಿಪಿ: ಟಿ. ಮಹದೇವ್; ಕೆ.ಜಿ. ಹಳ್ಳಿ ಉಪವಿಭಾಗ, ಎಂ.ಜೆ. ಪೃಥ್ವಿ; ಸಂಚಾರ ಉ. ಉಪ ವಿಭಾಗ, ಟಿ.ಆರ್. ಪುಟ್ಟಸ್ವಾಮಿಗೌಡ; ಸಿಸಿಬಿ, ಎನ್.ಟಿ. ಶ್ರೀನಿವಾಸ್ ರೆಡ್ಡಿ; ಎಚ್‌ಎಸ್‌ಆರ್ ಲೇಔಟ್ ಉಪ ವಿಭಾಗ.

ವರ್ಗಾವಣೆಯಾದ ಇನ್‌ಸ್ಪೆಕ್ಟರ್‌ಗಳು: ಕೆ. ಪ್ರಶಾಂತ್; ತಲಘಟ್ಟಪುರ ಸಂಚಾರ ಠಾಣೆ, ಎಚ್.ಎಂ. ರಂಗಸ್ವಾಮಿ; ರಾಮಮೂರ್ತಿನಗರ ಠಾಣೆ, ಸಿ.ಇ. ಆನಂದ್‌ನಾಯಕ; ಜಾಲಹಳ್ಳಿ ಸಂಚಾರ ಠಾಣೆ, ಆರ್.ವಿ. ಮಂಜುನಾಥ್; ಕುಮಾರಸ್ವಾಮಿ ಲೇಔಟ್ ಸಂಚಾರ ಠಾಣೆ, ಧರ್ಮೇಗೌಡ; ದೇವನಹಳ್ಳಿ ಠಾಣೆ, ಮನೋಜ್ ಎಚ್.ಎಚ್; ಬ್ಯಾಟರಾಯನಪುರ ಸಂಚಾರ ಠಾಣೆ, ವಿ.ಹರೀಶ್; ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆ, ರಾಘವೇಂದ್ರ ಇಮ್ರಾಪುರ; ವೈಟ್‌ಫೀಲ್ಡ್ ಸಂಚಾರ ಠಾಣೆ, ಕೆ.ಓ.ಪುಟ್ಟ ಓಬಳರೆಡ್ಡಿ; ಬ್ಯಾಡರಹಳ್ಳಿ ಠಾಣೆ, ಬಿ.ಎನ್. ಸಂದೀಪ್ ಕುಮಾರ್; ಗಿರಿನಗರ ಠಾಣೆ, ವಿನೋದ್ ಭಟ್; ಹನುಮಂತನಗರ ಠಾಣೆ, ಆರ್. ಮಂಜುನಾಥ್; ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆ, ಎಸ್. ಮಂಜುನಾಥ್; ಎಚ್‌ಎಎಲ್ ಠಾಣೆ, ಕೆ.ಎಚ್.ಮಹೇಂದ್ರಕುಮಾರ್; ವೈಟ್‌ಫೀಲ್ಡ್ ಠಾಣೆ, ಎನ್.ಎನ್.ಕೇಶವಮೂರ್ತಿ; ಹಳೇ ಏರ್‌ಪೋರ್ಟ್ ಸಂಚಾರ ಠಾಣೆ, ಎಸ್.ಲೂಯಿರಾಮ್ ರೆಡ್ಡಿ; ಬೆಳ್ಳಂದೂರು, ಡಿ.ಆರ್.ಪ್ರಕಾಶ್; ವರ್ತೂರು ಠಾಣೆ, ಶಾಂತರಾಮ್; ಕಾಡುಗೋಡಿ ಠಾಣೆ, ಪಿ.ಎನ್.ಅನಿಲ್ ಕುಮಾರ್; ಮಾರತ್ತಹಳ್ಳಿ ಠಾಣೆ, ಸಿ.ರವಿಕುಮಾರ್; ಆಡುಗೋಡಿಠಾಣೆ, ಎಸ್.ವಿಜಯಲಕ್ಷ್ಮಿ; ಜಯನಗರ ಠಾಣೆ, ಎಸ್.ಆರ್.ಮಂಜುನಾಥ್; ಕೆ.ಆರ್.ಪುರ ಠಾಣೆ, ಜಿ.ಎಸ್. ಅನಿಲ್ ಕುಮಾರ್; ವಿವೇಕನಗರ ಠಾಣೆ, ಎಚ್.ಎಸ್.ವಿನಯ್; ಮಡಿವಾಳ ಠಾಣೆ, ಎಂ.ಆರ್.ನಟರಾಜ್; ಕಬ್ಬನ್‌ಪಾರ್ಕ್ ಸಂಚಾರ ಠಾಣೆ, ಎಂ. ಪ್ರಶಾಂತ್; ಬೈಯಪ್ಪನಹಳ್ಳಿ ಠಾಣೆ, ನಿಂಗನಗೌಡ ಪಾಟೀಲ; ಬ್ಯಾಟರಾಯನಪುರ ಠಾಣೆ, ಜಿ.ಎನ್.ವೆಂಕಟಾಚಲಪತಿ; ಜೀವನ್ ಭಿಮಾನಗರ ಸಂಚಾರ ಠಾಣೆ, ಎಂ.ಎಸ್.ಮಂಜುನಾಥ್; ಸಿಟಿ ಮಾರ್ಕೆಟ್ ಸಂಚಾರ ಠಾಣೆ.

ಕಾಮಗಾರಿ ವಿಧಾನಸೌಧದ ಮುಂದೆ ಕೆಂಪೇಗೌಡ ಪ್ರತಿಮೆ ಅನಾವರಣಕ್ಕಾಗಿ ಜೆಸಿಬಿ ಮೂಲಕ ಕೆಲಸ ನಡೆಯುತ್ತಿದ್ದು, ಗುರುವಾರ ಕಂಡುಬಂದ ದೃಶ್ಯವಿದು

ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU-260/2898/2022–23 ದಿನಾಂಕ:25.01.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ವಿ.ವೆಂಕಟಶಾಮಿರೆಡ್ಡಿ ಶ್ರೀ ವಿ.ಭದ್ರಾರೆಡ್ಡಿ, ಶ್ರೀ ವಿ.ಶಿವರಾಮರೆಡ್ಡಿ ಶ್ರೀಮತಿ ಎಸ್.ವಿ.ಶೋಭ ನಂ.398, 11ನೇ ಮುಖ್ಯರಸ್ತೆ, 3ನೇ ಹಂತ, ಕೋರಮಂಗಲ ಬೆಂಗಳೂರು–560 034	ಆನೇಕಲ್	ಸರ್ಜಾಪುರ	ಗಟ್ಟಮಾರನಹಳ್ಳಿ	62/1	03–02	ವ್ಯವಸಾಯ ವಲಯ	ವಸತಿ
2					62/2ಎ	01–20		
3					62/2ಬಿ	01–18		
					ಒಟ್ಟು	06–00		

ಷರಾ:– ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಹಾಗೂ ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು "ವ್ಯವಸಾಯ ವಲಯ" ದಿಂದ "ವಸತಿ ಉಪಯೋಗಕ್ಕೆ" ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/387/2022-23 ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ. CAO/CN/BNC/140/2023
ದಿನಾಂಕ: 20.01.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ತುಮಕೂರು–ರಾಯದುರ್ಗ	ರೂ. 97,80,000/-

ಹೊಸ ಬಿಜಿ ಲೈನ್: ಚಳ್ಳಕೆರೆ ಡಿಪೋಗೆ ಬೇಕಾದ ಮಶೀನ್ ಕ್ರಷ್ ಮಾಡಿದ ಸ್ಟೋನ್ ಬಾಲಾಸ್ಟ್‌ಗಳ ಪೂರೈಕೆ. (ಟೆಂಡರು ಒಲ್ಲೇಖ ಸಂ. TK-RDG-89)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03.02.2023, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ನಿರ್ಮಾಣ ಬೆಂಗಳೂರು ದಂಡು

PUB/629/AAD/PRB/SWR/2022-23

S.W.Railways SWRRLY SWRRLY

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ. CAO/CN/BNC/100/2022
ದಿನಾಂಕ: 26.10.2022 ರ ತಿದ್ದುಪಡಿ

ಮೇಲೆ ಸೂಚಿಸಿರುವ ಇ–ಟೆಂಡರು ಸೂಚನೆಯಲ್ಲಿ:

ಟೆಂಡರು ಸಮರ್ಪಣೆಯ ಕೊನೆಯ ದಿನಾಂಕವು	
ಅಸ್ತಿತ್ವದಲ್ಲಿ	ಪರಿಷ್ಕೃತ
18.02.2023 (11.30 ಗಂಟೆ)	17.04.2023 (15.00 ಗಂಟೆ)

ಇ–ಟೆಂಡರು ಸೂಚನೆ ಸಂ. CAO/CN/BNC/108/2022
ದಿನಾಂಕ: 16.11.2022 ರ ತಿದ್ದುಪಡಿ

ಮೇಲೆ ಸೂಚಿಸಿರುವ ಇ–ಟೆಂಡರು ಸೂಚನೆಯಲ್ಲಿ:

ಅಂದಾಜು ಮೌಲ್ಯ (ರೂ.)	
ಅಸ್ತಿತ್ವದಲ್ಲಿ	ಪರಿಷ್ಕೃತ
2,70,31,70,000/–	2,67,65,10,000/–
ಟೆಂಡರು ಸಮರ್ಪಣೆಯ ಕೊನೆಯ ದಿನಾಂಕವು	
ಅಸ್ತಿತ್ವದಲ್ಲಿ	ಪರಿಷ್ಕೃತ
16.01.2023 (11.00 ಗಂಟೆ)	06.03.2023 (11.00 ಗಂಟೆ)

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ನಿರ್ಮಾಣ ಬೆಂಗಳೂರು ದಂಡು

PUB/628/AAD/PRB/SWR/2022-23

S.W.Railways SWRRLY SWRRLY

ಚಿನ್ನಾಭರಣ ಕದ್ದು ನೇಪಾಳಕ್ಕೆ ಸಾಗಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ನಡೆದಿದ್ದ ಕಳ್ಳತನ ಪ್ರಕರಣ ಸಂಬಂಧ ಮೂವರು ಆರೋಪಿಗಳನ್ನು ರಾಮಮೂರ್ತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನೇಪಾಳದ ಕರಣ್ ಕಡ್ಕಾ, ಕಿರಣ್ ಕಡ್ಕಾ ಹಾಗೂ ಶಂಕರ್ ಬಂಧಿತರು. ಇವರಿಂದ ₹ 4.20 ಲಕ್ಷ ಮೌಲ್ಯದ 64 ಗ್ರಾಂ ಚಿನ್ನಾಭರಣ ಹಾಗೂ 1.5 ಕೆ.ಜಿ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಗಳು ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಡೆಲಿವರಿ ಬಾಯ್ ಸೋಗಿನಲ್ಲಿ ಸುತ್ತಾಡಿ ಮನೆಗಳನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದರು. ಕದ್ದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿಗಳನ್ನು ನೇಪಾಳಕ್ಕೆ ಸಾಗಿಸಿ ವಿಲೇವಾರಿ ಮಾಡುತ್ತಿದ್ದರು. ಇತ್ತೀಚೆಗೆ ನಡೆದಿದ್ದ ಕಳ್ಳತನ ಪ್ರಕರಣದ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು' ಎಂದು ತಿಳಿಸಿದರು.

ನ್ಯಾಯಾಧೀಶರ ಮನೆಯಲ್ಲಿ ಕಳ್ಳತನ: ಬೆಂಗಳೂರು, ಕೋಲಾರ ಸೇರಿದಂತೆ ಹಲವೆಡೆ ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಫಯಾಜ್ ಅಹ್ಮದ್ ಹಾಗೂ ಪ್ರಸಾದ್ ಎಂಬುವರನ್ನು ಹೆಣ್ಣೂರು ಪೊಲೀಸರು ಬಂಧಿಸಿದ್ದಾರೆ.

'ಫಯಾಜ್ ಹಾಗೂ ಪ್ರಸಾದ್, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದರು. 695 ಗ್ರಾಂ ಚಿನ್ನಾಭರಣ ಹಾಗೂ ಕಾರು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೋಲಾರದಲ್ಲಿರುವ ನ್ಯಾಯಾಧೀಶರ ಮನೆಯೊಂದರಲ್ಲಿ ಆರೋಪಿಗಳು ಕಳ್ಳತನ ಮಾಡಿದ್ದರೆಂಬ ಮಾಹಿತಿ ಇದೆ. ಶಿವಮೊಗ್ಗದಲ್ಲಿ ಎಟಿಎಂ ಘಟಕದಲ್ಲಿ ಕಳ್ಳತನ ಮಾಡಲು ಆರೋಪಿಗಳು ಯತ್ನಿಸಿದ್ದರು' ಎಂದರು.

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್

(CIN: L24231KA1979PLC003563)

ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಇಮೇಲ್: comp.secy@astrazeneca.com ವೆಬ್: www.astrazeneca.com/india
ದೂರವಾಣಿ: +91 80 67748000, ಫ್ಯಾಕ್ಸ್: +91 80 6774 8557

ಸದಸ್ಯರಿಗೆ ಸೂಚನೆ

ಜನವರಿ 24, 2023 ರ ಅಂಚೆ ಮತದಾನ ಸೂಚನೆಯಲ್ಲಿ ಹೇಳಿರುವಂತಹ ವ್ಯವಹಾರಗಳು ಮತ್ತು ಅದಕ್ಕೆ ಸಂಬಂಧಿಸಿದಂತಹ ವಿವರಣಾತ್ಮಕ ಹೇಳಿಕೆಗಳ ಬಗ್ಗೆ ತನ್ನ ಸದಸ್ಯರ ಅನುಮೋದನೆಯನ್ನು ಅಂಚೆ ಮತದಾನ ಸೂಚನೆಯ (ಕೇವಲ ರಿಮೋಟ್ ಇ–ಮತದಾನದ ಮೂಲಕ ಮಾತ್ರವೇ) ಮೂಲಕ ಕೋರುತ್ತ ಕಂಪನಿಯು, ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಾವಳಿಯ, 2014 ('ನಿಯಮಾವಳಿ') ಜೊತೆಗೆ ಓದಿಕೊಂಡಂತೆ ಕಂಪನಿಗಳ ಕಾಯಿದೆ, 2013 ('ಕಾಯಿದೆ') ರ 108, 110 ಕಲಮುಗಳು ಮತ್ತು ಅನ್ವಯವಾಗುವಂತಹ ಇತರ ನಿಬಂಧನೆಗಳ, ಸಾಮಾನ್ಯ ಸಭೆಗಳ ಕುರಿತಾದ ಸೆಕ್ರೇಟೇರಿಯಲ್ ಮಾನದಂಡ (SS-2) ಮತ್ತು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸಬೇಕಾದ ಅಗತ್ಯತೆಗಳು) ನಿಬಂಧನೆಗಳು, 2015 ('ಲಿಸ್ಟಿಂಗ್ ನಿಬಂಧನೆಗಳು') [ಇದರಲ್ಲಿ, ಸದ್ಯ ಜಾರಿಯಲ್ಲಿ ಇರುವಂತಹ, ಅದರ ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಪುನಃ–ವಿಧಿಸಿರುವ ಕಾನೂನು(ಗಳು) ಸೇರುತ್ತವೆ], ಸಾಮಾನ್ಯ ಸುತ್ತೋಲೆ ಸಂ. 14/2020 ದಿನಾಂಕ ಏಪ್ರಿಲ್ 8, 2020 ಮತ್ತು ಸಾಮಾನ್ಯ ಸುತ್ತೋಲೆ ಸಂ. 17/2020 ದಿನಾಂಕ ಏಪ್ರಿಲ್ 13, 2020 ('ಎಂಸಿಎ ಸುತ್ತೋಲೆಗಳು'), ಮತ್ತು ಸಾಮಾನ್ಯ ಸುತ್ತೋಲೆ ಸಂ. 10/2021 ದಿನಾಂಕ ಜೂನ್ 23, 2021 ಮತ್ತು ಸಾಮಾನ್ಯ ಸುತ್ತೋಲೆ ಸಂ. 20/2021 ದಿನಾಂಕ ಡಿಸೆಂಬರ್ 08, 2021 ಮತ್ತು 11/2022 ದಿನಾಂಕ ಡಿಸೆಂಬರ್ 28, 2022 ಸೇರಿದಂತೆ ಸಂಬಂಧಪಟ್ಟ ಇತರ ಯಾವುದೇ ಸುತ್ತೋಲೆಗಳು, ಕಾನೂನುಗಳು ಮತ್ತು ನಿಬಂಧನೆಗಳ ಅನುಸಾರ ಕಂಪನಿಯು ಈ ಕೆಳಗಿನಂತೆ ಸೂಚನೆಯನ್ನು ನೀಡುತ್ತಿದೆ:

1. **ವಿಶೇಷ ನಿರ್ಣಯ:** ಶ್ರೀ ರಾಜೇಶ್ ಮಾರ್ವಾ (DIN: 01458768) ರನ್ನು ಕಂಪನಿಯ ಪೂರ್ಣಾವಧಿ ನಿರ್ದೇಶಕರನ್ನಾಗಿ ಮರುನೇಮಿಸುವ ಬಗ್ಗೆ.
2. **ವಿಶೇಷ ನಿರ್ಣಯ:** ಶ್ರೀ ಸಂಜೀವ್ ಕುಮಾರ್ ಪಾಂಚಾಲ್ (DIN: 09823879) ರನ್ನು ಕಂಪನಿಯ ನಿರ್ದೇಶಕರನ್ನಾಗಿಯೂ ವ್ಯವಸ್ಥಾಪಕ ನಿರ್ದೇಶಕರನ್ನಾಗಿಯೂ ನೇಮಿಸುವ ಬಗ್ಗೆ.

ಕಾಯಿದೆಯ 108 ಮತ್ತು 110 ಕಲಮುಗಳನ್ನು ಅದರ ಅಡಿಯಲ್ಲಿ ರಚಿಸಲಾದ ನಿಯಮಾವಳಿ ಮತ್ತು ಲಿಸ್ಟಿಂಗ್ ನಿಬಂಧನೆಯ ನಿಬಂಧನೆ 44 ರ ಜೊತೆ ಓದಿಕೊಂಡ ಪ್ರಕಾರ ಕಂಪನಿಯು ತನ್ನ ಸದಸ್ಯರಿಗೆ ನ್ಯಾಷನಲ್ ಸೆಕ್ಯುರಿಟಿಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಒದಗಿಸಿರುವ ಇ–ಮತದಾನ ಸೌಲಭ್ಯದ ಮೂಲಕ ವಿದ್ಯುನ್ಮಾನ ವಿಧಾನದಲ್ಲಿ ತಮ್ಮ ಮತವನ್ನು ಚಲಾಯಿಸುವ ಸೌಲಭ್ಯವನ್ನು ಒದಗಿಸಲು ಹರ್ಷಿಸುತ್ತಿದೆ.

ಶುಕ್ರವಾರ, ಜನವರಿ 20, 2023 ರ (ಕೊನೆಯ ದಿನಾಂಕದ) ವೇಳೆಗೆ ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ಅಥವಾ ಅವರಿಗೆ ಸಂಬಂಧಪಟ್ಟ ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಅವರವರ ಇಮೇಲ್‌ಗಳಿಗೆ ಮಾತ್ರವೇ ಕಂಪನಿಯು **ಬುಧವಾರ, ಜನವರಿ 25, 2023** ರ ರಂದು ಅಂಚೆ ಮತದಾನದ ಸೂಚನೆಯನ್ನು ಕಳುಹಿಸಿದೆ. ಎಂಸಿಎ ಸುತ್ತೋಲೆಗಳ ಅಗತ್ಯತೆಗಳ ಅನುಸಾರ ಅಂಚೆ ಮತದಾನ ಸೂಚನೆಯ ಮುದ್ರಿತ ಪ್ರತಿ ಮತ್ತು ಅಂಚೆ ಮತದಾನದ ನಮೂನೆಗಳು ಮತ್ತು ಪ್ರೀ–ಪೇಯ್ಡ್ ಬಿಸಿನೆಸ್ ರಿಪ್ಲೈ ಲಕೋಟೆಗಳನ್ನು ಸದಸ್ಯರಿಗೆ ಕಳುಹಿಸುವುದಿಲ್ಲ, ಮತ್ತು ಸದಸ್ಯರು ತಮ್ಮ ಸಮ್ಮತಿ ಅಥವಾ ಅಸಮ್ಮತಿಯನ್ನು ರಿಮೋಟ್ ಇ–ವೋಟಿಂಗ್ ವ್ಯವಸ್ಥೆಯ ಮೂಲಕವೇ ಕಳುಹಿಸಬೇಕಾಗುತ್ತದೆ.

ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಎಲ್ಲ ಸದಸ್ಯರಿಗೂ ರಿಮೋಟ್ ಇ–ವೋಟಿಂಗ್‌ನ ಪ್ರಕ್ರಿಯೆ ಮತ್ತು ವಿಧಾನಗಳ ವಿವರಗಳನ್ನು, ಮತ್ತು ಯೂಸರ್ ಐಡಿ ಹಾಗೂ ಪಾಸ್‌ವರ್ಡ್‌ಗಳನ್ನು, ಇಮೇಲ್ ಮೂಲಕ ಕಳುಹಿಸಲಾಗಿದೆ.

ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಳ್ಳದಿರುವ ಆದರೆ ಅವರ ಮೊಬೈಲ್ ಸಂಖ್ಯೆಗಳು ನಮ್ಮಲ್ಲಿ ಲಭ್ಯವಿರುವಂತಹ ಸದಸ್ಯರಿಗೆ ಇಂಟೆಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಮೂಲಕ ಎಸ್ಸೆಮೆಸ್ ಗಳನ್ನು ಕಳುಹಿಸಲಾಗುತ್ತಿದೆ, ಮತ್ತು ಸೂಚನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅದರಲ್ಲಿ ವೆಬ್‌ಲಿಂಕ್ ಕೂಡ ಇದೆ. ಪ್ರಸ್ತಾವಿತ ರಿಮೋಟ್ ಇವೋಟಿಂಗ್‌ನಲ್ಲಿ ಭಾಗವಹಿಸುವ ಉದ್ದೇಶವನ್ನು ಹೊಂದಿರುವಂತಹ ಸದಸ್ಯರಲ್ಲಿ ಕೆಲವರಿಗೆ ಈ ವಿಷಯದ ಕುರಿತಾಗಿ ನೀಡಿರುವಂತಹ ಇತರ ಸಂವಹನವು ತಪ್ಪಿಹೋಗಿರುವಂತಹ/ತಲುಪಿಲ್ಲದಿರುವಂತಹ ಸಂದರ್ಭಗಳಿರಬಹುದು. ಆದ್ದರಿಂದ ಎಲ್ಲ ಸದಸ್ಯರಿಗೂ ವಿಷಯ ತಿಳಿಯಲಿ ಎಂಬ ಉದ್ದೇಶದಿಂದಲೇ ಈ ಸೂಚನೆಯನ್ನು ನೀಡುತ್ತಿದ್ದೇವೆ ಎಂಬುದನ್ನು ದಯವಿಟ್ಟು ತಿಳಿಯಿರಿ.

ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸಿಕೊಂಡಿರದ, ಮತ್ತು ಆ ಕಾರಣವಾಗಿ ಸದರಿ ಸೂಚನೆಯನ್ನು ಸ್ವೀಕರಿಸಲಾಗದಿರುವ ಸದಸ್ಯರು https://www.integratedindia.in/emailupdation.aspx ಲಿಂಕ್ ಮೇಲೆ ಕ್ಲಿಕ್ಕಿಸಿ ಅಲ್ಲಿ ಹೇಳುವಂತಹ ನೋಂದಾವಣಿ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ತಮ್ಮ ಇಮೇಲ್ ವಿಳಾಸವನ್ನು RTA ನೊಂದಿಗೆ ನೋಂದಾಯಿಸಿಕೊಳ್ಳಬಹುದು. ಇಮೇಲ್ ವಿಳಾಸದ ನೋಂದಾವಣಿ ಯಶಸ್ವಿಯಾದ ನಂತರ ಸದಸ್ಯರಿಗೆ ಸೂಚನೆಯ ವಿದ್ಯುನ್ಮಾನ ಪ್ರತಿ ಮತ್ತು ರಿಮೋಟ್ ಇ–ವೋಟಿಂಗ್ ಕಾರ್ಯವಿಧಾನ, ಜೊತೆಗೆ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಗಳು ದೊರೆಯುತ್ತವೆ, ಮತ್ತು ಇವುಗಳ ನೆರವಿನಿಂದ ಸದಸ್ಯರು ಈ ಸೂಚನೆಯ ಮೇಲೆ ರಿಮೋಟ್ ಇ–ವೋಟಿಂಗ್ ಮಾಡಬಹುದು. ಏನಾದರೂ ಸಂದೇಹಗಳಿದ್ದರೆ ದಯವಿಟ್ಟು ಸಂಪರ್ಕಿಸಿ: **giri@integratedindia.in.**

ವಿದ್ಯುನ್ಮಾನ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇಮೇಲ್ ವಿಳಾಸವನ್ನು ಡಿಪಾಸಿಟರೀಸ್/ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೂ, ಕಾಗದದ ರೂಪದಲ್ಲಿ ಷೇರುಗಳನ್ನು ಹೊಂದಿರುವವರು RTAನೊಂದಿಗೂ ನೋಂದಾಯಿಸಿಕೊಳ್ಳಬೇಕಾಗಿ ಕೋರುತ್ತೇವೆ.

RTA ನೊಂದಿಗೆ ಇಮೇಲ್ ವಿಳಾಸವನ್ನು ನೋಂದಾಯಿಸಿಕೊಳ್ಳುವ ಸಂಬಂಧವಾಗಿ ಸದಸ್ಯರು https://www.integratedindia.in/emailupdation.aspx ಲಿಂಕ್ ಮೇಲೆ ಕ್ಲಿಕ್ಕಿಸಿ ಅಲ್ಲಿ ಹೇಳುವಂತಹ ನೋಂದಾವಣಿ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ತಮ್ಮ ಇಮೇಲ್ ವಿಳಾಸವನ್ನು RTA ನೊಂದಿಗೆ ನೋಂದಾಯಿಸಿಕೊಳ್ಳಬಹುದು. ಹಾಗಿಲ್ಲವಾದರೆ ಸದಸ್ಯರು, ಮತದಾನದ ಅವಧಿ ಮುಕ್ತಾಯವಾಗುವುದಕ್ಕೆ 48 ತಾಸುಗಳಿಗೆ ಮುಂಚಿನ ಎಲ್ಲ ಕೆಲಸದ ದಿನಗಳಂದು (ಶನಿವಾರ ಮತ್ತು ಭಾನುವಾರ ಹೊರತುಪಡಿಸಿ) ಬೆಳಗ್ಗೆ 09.00 ರಿಂದ ಸಂಜೆ 05.00 ರ ನಡುವೆ ಇಲ್ಲಿ ಮುಂದೆ ತಿಳಿಸಿರುವ, ಕಂಪನಿಯ ಅಥವಾ RTA ನ ಇಮೇಲ್ ವಿಳಾಸಕ್ಕೆ ಮನವಿ/ಸಂವಹನ ಕಳುಹಿಸಬಹುದು. ಅದರಲ್ಲಿ ಪುಟ ಸಂಖ್ಯೆ/ಡೀಮ್ಯಾಟ್ ಖಾತೆ ಸಂಖ್ಯೆಗಳನ್ನು ತಿಳಿಸಿರಬೇಕು. ಕಂಪನಿಯ ಇಮೇಲ್ ವಿಳಾಸ ಮತ್ತು ಸಂಪರ್ಕ ವಿವರಗಳು: comp.secy@astrazeneca.com/ 080 67748000 ಮತ್ತು RTA ಇಮೇಲ್ ವಿಳಾಸ ಮತ್ತು ಸಂಪರ್ಕ ವಿವರಗಳು: giri@integratedindia.in / 080 23460815-18.

ಇ–ವೋಟಿಂಗ್ ಅವಧಿಯು **ಗುರುವಾರ, ಜನವರಿ 26, 2023** ರಂದು ಬೆಳಗ್ಗೆ 09.00 ರಿಂದ (ಭಾ.ಕಾ.) ಆರಂಭವಾಗಿ **ಶನಿವಾರ, ಫೆಬ್ರವರಿ 25, 2023** ರಂದು ಸಂಜೆ 05.00 ಕ್ಕೆ (ಭಾ.ಕಾ.) ಮುಕ್ತಾಯಗೊಳ್ಳುತ್ತದೆ. ಈ ಅವಧಿಯಲ್ಲಿ, **ಶುಕ್ರವಾರ, ಜನವರಿ 20, 2023** ರಂದು (ಕೊನೆಯ ದಿನಾಂಕ) ಭೌತಿಕ ಅಥವಾ ಡೀಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಕಂಪನಿಯ ಸದಸ್ಯರು ತಮ್ಮ ಮತಗಳನ್ನು ಇಲೆಕ್ಟ್ರಾನಿಕ್ ವಿಧಾನದಲ್ಲಿ ಚಲಾಯಿಸಬಹುದು. ಮೇಲೆ ಹೇಳಿದ ದಿನಾಂಕ ಮತ್ತು ಸಮಯ ಕಳೆದ ನಂತರ NSDL, ಇ–ವೋಟಿಂಗ್ ಮಾಡ್ಯೂಲನ್ನು ನಿಷ್ಕ್ರಿಯಗೊಳಿಸುವುದರಿಂದ ಮತದಾನ ಸಾಧ್ಯವಾಗುವುದಿಲ್ಲ. ಒಮ್ಮೆ ಸದಸ್ಯರು ನಿರ್ಣಯಗಳ ಮೇಲೆ ಮತವನ್ನು ಚಲಾಯಿಸಿ ದೃಢಪಡಿಸಿದ ನಂತರ ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ. ಅಂಚೆ ಮತದಾನದ ಸೂಚನೆಯನ್ನು ಸ್ವೀಕರಿಸಿರುವ ಯಾರೇ ಆಗಲಿ, ಕೊನೆಯ ದಿನಾಂಕದಂದು ಕಂಪನಿಯ ಸದಸ್ಯರಾಗಿರದಿದ್ದರೆ ಅಂತಹವರು ಸದರಿ ಅಂಚೆ ಮತದಾನದ ಸೂಚನೆಯನ್ನು ಸುಮ್ಮನೆ ಮಾಹಿತಿಗಾಗಿ ಎಂದು ಭಾವಿಸಬೇಕು. ಸದಸ್ಯರ ಮತದಾನದ ಹಕ್ಕುಗಳು ಕೊನೆಯ ದಿನಾಂಕದಂದು ಕಂಪನಿಯ ಪಾವತಿಸಿದ ಇಕ್ವಿಟಿ ಷೇರು ಬಂಡವಾಳದಲ್ಲಿ ಅವರು ಹೊಂದಿರುವ ಷೇರುಗಳ ಪ್ರಮಾಣಕ್ಕೆ ಅನುಬದ್ಧವಾಗಿರುತ್ತದೆ.

ಅಂಚೆ ಮತದಾನದ ಸೂಚನೆ ಮತ್ತು ಇ–ವೋಟಿಂಗ್ ಪ್ರಕ್ರಿಯೆಯ ವಿಧಾನವನ್ನು www.evoting.nsdl.com ಅಥವಾ www.astrazeca.com/india ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಅಂಚೆ ಮತದಾನ ಪ್ರಕ್ರಿಯೆಯು ನ್ಯಾಯಯುತವಾಗಿ ಮತ್ತು ಪಾರದರ್ಶಕವಾಗಿ ನಡೆಯಬೇಕೆಂದು ಕಂಪನಿಯ ನಿರ್ದೇಶಕರ ಮಂಡಳಿಯು ಶ್ರೀ ವಿಜಯಕೃಷ್ಣ ಕೆ.ಟಿ., ವೃತ್ತಿಪರ ಕಂಪನಿ ಸೆಕ್ರೆಟರಿ, ಬೆಂಗಳೂರು, ಸಿ.ಪಿ. ಸಂ.980, ಸದಸ್ಯತ್ವ ಸಂಖ್ಯೆ FCS:1788, ಇವರನ್ನು ಅಂಚೆ ಮತದಾನ ಪ್ರಕ್ರಿಯೆಯ ಸೂಕ್ಷ್ಮ ಪರಿಶೀಲಕರೆಂದು ನೇಮಕ ಮಾಡಿದೆ.

ಅಂಚೆ ಮತದಾನದ (ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯ) ಮೂಲಕ ನಡೆಸುವ ಮತದಾನದ ಫಲಿತಾಂಶವನ್ನು **ಮಂಗಳವಾರ, ಫೆಬ್ರವರಿ 28, 2023** ರಂದು ಅಥವಾ ಅದರೊಳಗಾಗಿ ಕಂಪನಿಯ ನೋಂದಾಯಿತ ಕಛೇರಿಯಲ್ಲಿ ಪ್ರಕಟಿಸಲಾಗುವುದು. ಫಲಿತಾಂಶವನ್ನು ಮತ್ತು ಸೂಕ್ಷ್ಮಪರಿಶೀಲಕರ ವರದಿಯನ್ನು ಕಂಪನಿಯ **www.astrazeneca.com/india** ವೆಬ್‌ಸೈಟ್‌ನಲ್ಲಿ ಹಾಕಲಾಗುವುದು, ಮತ್ತು ಕಂಪನಿಯ ಇಕ್ವಿಟಿ ಷೇರುಗಳನ್ನು ಲಿಸ್ಟ್ ಮಾಡಿರುವ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ಮತ್ತು ಬಿಎಸ್‌ಇ ಲಿಮಿಟೆಡ್ ಗಳಿಗೂ ಕಳುಹಿಸಲಾಗುವುದು.

ನಿರ್ಣಯದ ಪರವಾಗಿ ಅಗತ್ಯ ಬಹುಮತ ದೊರೆತರೆ ರಿಮೋಟ್ ಇ–ವೋಟಿಂಗ್‌ಗಾಗಿ ಕಂಪನಿಯು ನಿಗದಿಪಡಿಸಿರುವ ಕೊನೆಯ ದಿನಾಂಕದಿಂದಲೇ ನಿರ್ಣಯವು ಜಾರಿಗೊಂಡಿದೆ ಎಂದು ಪರಿಗಣಿಸಲಾಗುವುದು.

ಇಲೆಕ್ಟ್ರಾನಿಕ್ ವೋಟಿಂಗ್‌ಗೆ ಸಂಬಂಧಿಸಿದಂತೆ ಏನಾದರೂ ಪ್ರಶ್ನೆಗಳಿದ್ದರೆ: www.evoting.nsdl.com ನ ಡೌನ್‌ಲೋಡ್ ವಿಭಾಗಗಳಲ್ಲಿರುವ 'ಸಾಮಾನ್ಯವಾಗಿ ಕೇಳುವ ಪ್ರಶ್ನೆಗಳು (FAQs)' ಮತ್ತು 'ಷೇರುದಾರರಿಗಾಗಿ ಇ–ವೋಟಿಂಗ್ ಬಳಕೆದಾರರ ಕೈಪಿಡಿ' ಗಳನ್ನು ಪರಾಮರ್ಶಿಸಬಹುದು ಅಥವಾ ಶುಲ್ಕರಹಿತ ಸಂಖ್ಯೆ 1800 1020 990 /1800 224 430 ಬಳಸಿಕೊಂಡು NSDL ಗೆ ಕರೆಮಾಡಬಹುದು. ಇಲೆಕ್ಟ್ರಾನಿಕ್ ವೋಟಿಂಗ್‌ಗೆ ಸಂಬಂಧಿಸಿದಂತೆ ದೂರುಗಳೇನಾದರೂ ಇದ್ದರೆ ದಯವಿಟ್ಟು ಸಂಪರ್ಕಿಸಿ: ಶ್ರೀಮತಿ ಪಲ್ಲವಿ ಮಾತ್ರೆ, ಸೀನಿಯರ್ ಮ್ಯಾನೇಜರ್, NSDL 4ನೇ ಮಹಡಿ, 'ಎ' ಶಾಖೆ, ಟ್ರೇಡ್ ವರ್ಲ್ಡ್, ಕಮಲಾ ಮಿಲ್ಸ್ ಕಾಂಪೌಂಡ್, ಸೇನಾಪತಿ ಬಾಪಟ್ ಮಾರ್ಗ್, ಲೋವರ್ ಪರೇಲ್, ಮುಂಬೈ–400 013, ದೂರವಾಣಿ: 1800 1020 990 /1800 224 430 ಇಮೇಲ್: evoting@nsdl.co.in ಅಥವಾ ಕಂಪನಿಯ ಇಮೇಲ್: comp.secy@astrazeneca.com.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ

ಸ್ಥಳ: **ಬೆಂಗಳೂರು**
ದಿನಾಂಕ: **ಜನವರಿ 26, 2023**

ರಾಜೇಶ್ ಮಾರ್ವಾ
ಪೂರ್ಣಾವಧಿ ನಿರ್ದೇಶಕರು ಮತ್ತು ಸಿಎಫ್‌ಒ
DIN: 01458768

ಟೀಂಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

CIN: L74140KA2000PLC118395

ನೋಂದಾಯಿತ ಕಚೇರಿ: ವರ್ಕ್ ಅವಿನ್ಯೂ ಕ್ಯಾಂಪಸ್, ನಂ.77, ಅಸೆಂಟ್ ಬಿಲ್ಡಿಂಗ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು – 560 095. ಕರ್ನಾಟಕ, ಭಾರತ
E-MAIL: corporateaffairs@teamlease.com
WEBSITE: https://group.teamlease.com/

ಡಿಸೆಂಬರ್ 31, 2022ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು 9 ತಿಂಗಳಗೆ ಅಪರಿಶೋಧಿತ ಹಣಕಾಸು ಫಲಿತಾಂಶಗಳ ಹೇಳಿಕೆಯ ಸಾರಂಶ

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕೆಗಳು ಲಕ್ಷ ರೂಪಾಯಿಗಳಲ್ಲಿ)

ವಿವರಗಳು	ಏಕಿಕೃತ		ಕ್ರೋಡೀಕೃತ	
	31.12.2022ಕ್ಕೆ ಕೊನೆಯಾದ 3 ತಿಂಗಳಗೆ	31.12.2021ಕ್ಕೆ ಕೊನೆಯಾದ 3 ತಿಂಗಳಗೆ	31.12.2022ಕ್ಕೆ ಕೊನೆಯಾದ 3 ತಿಂಗಳಗೆ	31.12.2021ಕ್ಕೆ ಕೊನೆಯಾದ 3 ತಿಂಗಳಗೆ
	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ
ಕಾರ್ಯಾಚರಣೆಗಳಂದ ಒಟ್ಟು ಆದಾಯ	1,77,323.88	1,53,219.44	2,01,824.62	1,76,717.94
ಸದರಿ ಅವಧಿಗೆ ನಿವ್ವಳ ಲಾಭ / (ನಷ್ಟ) (ತೆರಿಗೆಗೆ ಮುನ್ನ, ಅಸಾಮಾನ್ಯ ಮತ್ತು/ಅಥವಾ ಅಸಾಧಾರಣ ಐಟಂಗಳು)	2,574.52	2,498.56	2,863.88	3,194.77
ಸದರಿ ಅವಧಿಗೆ ತೆರಿಗೆಗೆ ನಂತರ ನಿವ್ವಳ ಲಾಭ / (ನಷ್ಟ) (ಅಸಾಮಾನ್ಯ ಮತ್ತು/ ಅಥವಾ ಅಸಾಧಾರಣ ಐಟಂಗಳ ನಂತರ)	2,594.49	2,491.60	2,903.20	3,024.57
ಸದರಿ ಅವಧಿಗೆ ಒಟ್ಟು ಸಮಗ್ರವಾದ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು)]	2,599.98	2,501.77	2,908.38	3,023.35
ಪೇಯ್ಡ್–ಅಪ್ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂ.)	1,709.68	1,709.68	1,709.68	1,709.68
ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು)–ಹಿಂದಿನ ಲೆಕ್ಕ ವರ್ಷದ ಬ್ಯಾಲೆನ್ಸ್ ಷೀಟ್ ಪ್ರಕಾರ	66,141.89	63,728.97	67,611.24	63,492.89
ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕೀಕರಣಗೊಂಡಿಲ್ಲ)				
(ಎ) ಮೂಲ (ರೂ.)	15.18	14.57	16.94	17.53
(ಬಿ) ಡೈಲ್ಯೂಟೆಡ್ (ರೂ.)	15.18	14.57	16.94	17.53

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ("ವಿಧಾಯಕಗಳು") ವಿಧಾಯಕ 33ರ ಅಡಿಯಲ್ಲಿ ಪ್ರಕಟವಾಗಿರುವ, 31ನೇ ಡಿಸೆಂಬರ್, 2022ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು 9 ತಿಂಗಳ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪದ ಸಾರಾಂಶವಾಗಿದೆ. ಅಪರಿಶೋಧಿತ ಏಕಿಕೃತ ಮತ್ತು ಕ್ರೋಡೀಕೃತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪವು ಸ್ಟಾಕ್ ಎಕ್ಸ್‌ಚೇಂಜುಗಳ ವೆಬ್‌ಸೈಟುಗಳಲ್ಲಿ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (https://group.teamlease.com/) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ವಿಧಾಯಕ 33ರ ಪ್ರಕಾರ ಕಂಪನಿಯ ಮೇಲೆ ಹೇಳಿರುವ 31ನೇ ಡಿಸೆಂಬರ್, 2022ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು 9 ತಿಂಗಳ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪತ್ರ ಪರಿಶೋಧನಾ ಸಮಿತಿಯು ವಿಮರ್ಶಿಸಿದ್ದು, ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಲಿಯು 25ನೇ ಜನವರಿ, 2023ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ.

ಸದರಿ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿಗದಿಪಡಿಸಿರುವ, ಅನ್ವಯವಾಗುವ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) ನಲ್ಲಿ ವಿಧಿಸಿರುವ ರೆಕಗ್ನಿಷನ್ ಮತ್ತು ಮೆಷರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್‌ನ ನಿರ್ದೇಶಕ ಮಂಡಲಿಗಾಗಿ, ಮತ್ತು ಅದರ ಪರವಾಗಿ
ಸಹಿ/–
ಅಶೋಕ್ ಕುಮಾರ್ ನೆಡುರುಮಲ್ಲಿ
ವ್ಯವಸ್ಥಾಪಕ ನಿರ್ದೇಶಕರು
DIN: 00151814

ದಿನಾಂಕ: 25ನೇ ಜನವರಿ, 2023
ಸ್ಥಳ: ಬೆಂಗಳೂರು

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123. ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/88/2022–23 ದಿನಾಂಕ: 23–01–2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸದೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
01	ಶ್ರೀ ಪಿ. ಕೃಷ್ಣಮೂರ್ತಿ ಬಿನ್ ಲೇಟ್ ಪುಟ್ಟಯಲ್ಲಗಯ್ಯ	ಬೆಂಗಳೂರು ಉತ್ತರ	ದಾಸನಪುರ	ಬೈರೇಗೌಡನಹಳ್ಳಿ	41/1	05–13 ರ ಪೈಕಿ 05–00	ವ್ಯವಸಾಯ	ವಸತಿ
					ಒಟ್ಟು	05–00		

ಷರಾ:– ಪ್ರಶ್ನಿತ ಸರ್ವೆ ನಂಬರ್ ಜಮೀನುಗಳಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆದು, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ ಸುಸಜ್ಜಿತವಾದ ವಸತಿ ಬಡಾವಣೆಯನ್ನು ನಿರ್ಮಿಸಿ, ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿ ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಇದರಲ್ಲಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿರುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಪಡಿಸಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/4311/ಅಡ್ವರ್ಟೋರ್/2022–23

KIRLOSKAR ELECTRIC COMPANY LIMITED

REGD OFFICE: No.19, 2nd Main Road, Peenya 1st Stage, Phase-1, Peenya, Bengaluru - 560 058.
Phone no: 080-28397256; **Fax:** 080-28396727; **Website:** www.kirloskarelectric.com
Email: investors@kirloskarelectric.com; **CIN:** L31100KA1946PLC000415

Kirloskar

Extract of statement of unaudited financial results for the quarter and nine months ended December 31, 2022

(₹. in Lakhs)

Sr. No.	Particulars	STANDALONE				CONSOLIDATED			
		Quarter ended		Nine Months ended	Year ended	Quarter ended		Nine Months ended	Year ended
		December 31, 2022	December 31, 2021	December 31, 2022	March 31, 2022	December 31, 2022	December 31, 2021	December 31, 2022	March 31, 2022
		Unaudited	Unaudited	Unaudited	Audited	Unaudited	Unaudited	Unaudited	Audited
1	Total income from operations	11,865	8,260	34,342	44,239	11,866	8,260	34,960	45,369
2	Net Profit / (Loss) for the period (before Tax, Exceptional and/or Extraordinary items)	336	(1,032)	1,473	5,816	338	(1,087)	2,019	6,739
3	Net Profit / (Loss) for the period before tax (after Exceptional and/or Extraordinary Items)	336	(1,032)	1,473	5,816	338	(1,087)	2,019	6,739
4	Net Profit / (Loss) for the period after tax (after Exceptional and/or Extraordinary Items)	336	(1,032)	1,473	5,816	338	(1,087)	2,019	6,739
5	Total Comprehensive Income for the period [Comprising Profit / (Loss) for the period (after tax) and Other Comprehensive Income (after tax)]	262	(1,031)	1,405	3,325	264	(1,086)	1,951	4,248
6	Equity Share Capital	6,641	6,641	6,641	6,641	6,641	6,641	6,641	6,641
7	Reserves (excluding revaluation reserves as shown in the Balance Sheet of previous year)	-	-	-	-	-	-	-	-
8	Earnings Per Share (EPS) (₹.)								
	(a) Basic EPS before extra ordinary items (not annualised)	0.51	(1.55)	2.22	8.76	0.51	(1.64)	3.04	10.15
	(b) Diluted EPS before extra ordinary items (not annualised)	0.51	(1.55)	2.22	8.76	0.51	(1.64)	3.04	10.15
	(c) Basic EPS after extra ordinary items (not annualised)	0.51	(1.55)	2.22	8.76	0.51	(1.64)	3.04	10.15
	(d) Diluted EPS after extra ordinary items (not annualised)	0.51	(1.55)	2.22	8.76	0.51	(1.64)	3.04	10.15

NOTE:

1. The above unaudited standalone and consolidated financial results have been reviewed by the Audit Committee and approved by the Board of Directors at its meeting held on January 25, 2023.
2. The standalone and consolidated financial results of the Company for the quarter and nine months ended December 31, 2022 have been subject to limited review by its Statutory auditors.
3. The above is an extract of the detailed format of the unaudited financial results for the quarter and nine months ended December 31, 2022 filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015 as amended as amended from time to time. The full format of the unaudited financial results are available on the stock exchange websites. (www.bseindia.com, www.nseindia.com) and also on the Company's website (**https://kirloskarelectric.com/investors/investors-information/financial.html**).

Place : Bengaluru
Date : January 25, 2023

Sd/-
Vijay R Kirloskar
Executive Chairman

ಸರ್ಕಾರಿ ಶಾಲಾ ಆಸ್ತಿ ಸಂರಕ್ಷಣಾ ಅಭಿಯಾನಕ್ಕೆ ಇತರೆ ಇಲಾಖೆಗಳ ಅಸಹಕಾರ

ಮಕ್ಕಳನ್ನು ಹೊರಗೆ ದಬ್ಬಿ ಶಾಲೆಗೆ ಬೀಗ!

• ಚಂದ್ರಹಾಸ ಹಿರೇಮಳಲಿ

ಬೀಗ ಜಡಿದ ಮಹದೇವಪುರ ಶಾಲೆಯ ಮುಂದೆ ಕುಳಿತಿರುವ ಮಕ್ಕಳು.

ಬೆಂಗಳೂರು: ಕೆ.ಆರ್. ಪುರಂ ವ್ಯಾಪ್ತಿಯ ಮಹದೇವಪುರದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ತರಗತಿಗಳು ನಡೆಯುತ್ತಿರುವಾಗಲೇ, ಶಾಲೆಗೆ ಜಮೀನು ದಾನ ಮಾಡಿದ್ದ ಕುಟುಂಬದ ಕೆಲ ಸದಸ್ಯರು ಮಕ್ಕಳನ್ನು ಶಾಲೆಯಿಂದ ಹೊರದಬ್ಬಿ ಬೀಗ ಜಡಿದಿದ್ದಾರೆ.

ರಾಜ್ಯ ಸರ್ಕಾರ ಸರ್ಕಾರಿ ಶಾಲೆ ಮತ್ತು ಕಾಲೇಜುಗಳ ಆಸ್ತಿ ಸಂರಕ್ಷಣಾ ಅಭಿಯಾನ ಹಮ್ಮಿಕೊಂಡಿದ್ದರೂ, ನಗರ ಪ್ರದೇಶಗಳಲ್ಲಿ ಈ ಅಭಿಯಾನ ಯಶಸ್ಸು ಕಂಡಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಬಹುತೇಕ ಶಾಲೆಗಳ ಆಸ್ತಿ ಶಾಲೆಗಳ ಹೆಸರಿಗೆ ಖಾತೆ ಮಾಡಿಸಲಾಗಿದೆ. ಆದರೆ, ಬೆಂಗಳೂರು ಸೇರಿದಂತೆ ರಾಜ್ಯದ ನಗರ ಪ್ರದೇಶಗಳಲ್ಲಿ ಅಭಿಯಾನ ಸಂಪೂರ್ಣ ವಿಫಲವಾಗಿದೆ. ಮಹದೇವಪುರದ ಶಾಲೆ ಇದಕ್ಕೆ ಒಂದು ಉದಾಹರಣೆ ಅಷ್ಟೆ.

ಪ್ರಜಾವಾಣಿ ವಿಶೇಷ

ಅದೇ ಗ್ರಾಮದ ದಾನಿಯೊಬ್ಬರು ನೀಡಿದ ಜಾಗದಲ್ಲಿ 1965ರಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ ಆರಂಭವಾಗಿತ್ತು. 1980ರಿಂದ ಇಲ್ಲಿಯವರೆಗೂ ಶಾಲೆ ಇರುವ ಭೂಮಿಯ ದಾಖಲೆಗಳು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ನಿಗಮದ ಹೆಸರಿನಲ್ಲಿದೆ. ಶಾಲಾ ಆಸ್ತಿ ಸಂರಕ್ಷಣಾ ಅಭಿಯಾನ ಆರಂಭವಾದ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಖಾತೆ ಮಾಡಿಕೊಡುವಂತೆ ಶಾಲೆಯ ಮುಖ್ಯ ಶಿಕ್ಷಕರು ಅಲೆದಾಡಿದರೂ, ಪ್ರಯೋಜನವಾಗಿಲ್ಲ. ಬಿಬಿಎಂಪಿ ಸೇರಿದಂತೆ ಇತರೆ ಇಲಾಖೆಗಳ ಸಹಕಾರ ಅಭಿಯಾನಕ್ಕೆ ಸಿಗುತ್ತಿಲ್ಲ.

ಪ್ರಸ್ತುತ ಶಾಲೆಯಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಮಾಧ್ಯಮದಲ್ಲೂ ತರಗತಿಗಳು ನಡೆಯುತ್ತಿವೆ. 475 ಮಕ್ಕಳಿದ್ದಾರೆ. ಹಳೆಯ ಕಟ್ಟಡದಲ್ಲಿನ ಏಳು ಕೊಠಡಿಗಳಲ್ಲೇ ಅಷ್ಟೂ ಮಕ್ಕಳು ಕಲಿಯುತ್ತಿದ್ದರು. ನಿರಂತರ ಪ್ರಯತ್ನದ ಫಲವಾಗಿ ಸರ್ಕಾರ ಸಮೀಪದಲ್ಲೇ ಶಾಲೆಗೆ ಮತ್ತೊಂದು ಜಾಗ ಮಂಜೂರು ಮಾಡಿದೆ. ಹೊಸ ಜಾಗದಲ್ಲಿ ಹೋಪ್ ಫೌಂಡೇಷನ್ ₹ 3 ಕೋಟಿ ವೆಚ್ಚದಲ್ಲಿ 12 ಕೊಠಡಿಗಳನ್ನು ನಿರ್ಮಿಸಿಕೊಟ್ಟಿದೆ. 4ರಿಂದ 6ನೇ ತರಗತಿಯ ಮಕ್ಕಳು ಹಳೆಯ ಕಟ್ಟಡದಲ್ಲಿ, ಉಳಿದ ಮಕ್ಕಳು ಹೊಸ ಕಟ್ಟಡದಲ್ಲಿ ಕಲಿಯುತ್ತಿದ್ದಾರೆ. ಒಟ್ಟು 11 ಶಿಕ್ಷಕರು ಇದ್ದಾರೆ.

> **ನಗರ ಪ್ರದೇಶದ ಸರ್ಕಾರಿ ಶಾಲೆಗಳ ಜಾಗವನ್ನು ಖಾತೆ ಮಾಡಿಸಲು ಹಲವು ಸವಾಲುಗಳಿವೆ. ಬಿಬಿಎಂಪಿ ಸೇರಿ ಇತರೆ ಇಲಾಖೆಗಳು ಸ್ಪಂದಿಸುತ್ತಿಲ್ಲ.**
> **ಪ್ರಸನ್ನಕುಮಾರ್**
> ನಿರ್ದೇಶಕ, ಪ್ರಾಥಮಿಕ ಶಿಕ್ಷಣ

ಶಾಲೆ ಇರುವ ವ್ಯಾಪ್ತಿಯಲ್ಲಿ ಭೂಮಿಗೆ ಚಿನ್ನದ ಬೆಲೆ ಇದೆ. ಈಚೆಗೆ ಅಲ್ಲಿ ಮೆಟ್ರೊ ಮಾರ್ಗ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಶಾಲೆಯ ನಾಲ್ಕು ಅಡಿ ಜಾಗವನ್ನೂ ಬಿಟ್ಟುಕೊಡಲಾಗಿದೆ. ಹಿಂದೆ ಜಾಗ ನೀಡಿದ್ದ ಕುಟುಂಬದ ಕೆಲವರು, ತಾತ ತಮ್ಮ ಹೆಸರಿಗೆ ಜಾಗ ಬರೆದಿಟ್ಟಿದ್ದಾರೆ ಎಂದು ಕೋರ್ಟ್ ಮೊರೆ ಹೋಗಿದ್ದಾರೆ. ಸದರಿ ಜಾಗದಲ್ಲಿ ಶಾಲೆ ನಡೆಯುತ್ತಿರುವ ಕಾರಣ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ನಗರ ಸಿವಿಲ್ ನ್ಯಾಯಾಲಯ ಆದೇಶ ನೀಡಿದೆ. ಆದರೂ, ಶಾಲೆಗೆ ಅತಿಕ್ರಮ ಪ್ರವೇಶ ಮಾಡಿ, ಬೀಗ ಜಡಿಯಲಾಗಿದೆ.

ಅಂಕಿ ಅಂಶ

1,190 ಬೆಂಗಳೂರು ಗ್ರಾಮೀಣ ಶಾಲೆಗಳು

1,520 ಬೆಂಗಳೂರು ನಗರ

617 ಆಸ್ತಿ ಖಾತೆ ಇಲ್ಲದ ಶಾಲೆಗಳು

'1965ರಿಂದ ಶಾಲೆ ನಡೆಯುತ್ತಿದೆ. 1980ರಿಂದ ಜಾಗದ ಆರ್‌ಟಿಸಿ ಲಭ್ಯವಿದೆ. ವಿದ್ಯುತ್ ಬಿಲ್ಲು ಪಾವತಿಸಿದ ದಾಖಲೆಗಳಿವೆ. ಶಾಲೆಗೆ ಭೂಮಿ ನೀಡಿದ ದಾನಿಯೇ ಒಂದು ಕೊಠಡಿ ನಿರ್ಮಿಸಿಕೊಟ್ಟಿದ್ದಾರೆ. ಕೋರ್ಟ್ ಕೂಡಾ ಶಾಲಾ ಚಟುವಟಿಕೆಗೆ ತೊಂದರೆ ಆಗದಂತೆ ಯಥಾಸ್ಥಿತಿಗೆ ಆದೇಶ ನೀಡಿದೆ. ಬೀಗ ತೆರವುಗೊಳಿಸಲು ಹಾಗೂ ರಕ್ಷಣೆ ಕೋರಿ ಮುಖ್ಯ ಶಿಕ್ಷಕರು ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ' ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಡಿ.ಆರ್. ರಾಮಮೂರ್ತಿ ಅವರು ಪ್ರತಿಕ್ರಿಯಿಸಿದರು.

'ಫೆ. 5ರಿಂದ ಕರಾವಳಿ– ಮಲೆನಾಡು ಪ್ರಜಾಧ್ವನಿ ಯಾತ್ರೆ'

ಮಂಗಳೂರು: 'ರಾಜ್ಯದ ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ 'ಕರಾವಳಿ– ಮಲೆನಾಡು ಪ್ರಜಾಧ್ವನಿ ಯಾತ್ರೆ'ಯನ್ನು ಆಯೋಜಿಸಲಾಗುತ್ತದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ತಿಳಿಸಿದರು.

ವಿಧಾನ ಸಭಾ ಚುನಾವಣೆ ತಯಾರಿ ಕುರಿತು ಈ ಜಿಲ್ಲೆಗಳ ಕಾಂಗ್ರೆಸ್ ಪ್ರಮುಖರ ಜೊತೆ ಬುಧವಾರ ಸಮಾಲೋಚನಾ ಸಭೆ ನಡೆಸಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಕರಾವಳಿ, ಮಲೆನಾಡು ಭಾಗದ ಕೋಮು ಸಾಮರಸ್ಯ ಮರುಸ್ಥಾಪನೆ, ಅಭಿವೃದ್ಧಿ, ಸಮೃದ್ಧಿಯ ಬಗ್ಗೆ ಜನಜಾಗೃತಿ ಮೂಡಿಸುವುದು ಈ ಯಾತ್ರೆಯ ಉದ್ದೇಶ. ವಿಧಾನ ಪರಿಷತ್ ವಿಪಕ್ಷ ನಾಯಕ ಬಿ.ಕೆ. ಹರಿಪ್ರಸಾದ್, ಪಕ್ಷದ ಮುಖಂಡರಾದ ಆರ್.ವಿ.ದೇಶಪಾಂಡೆ, ರಮಾನಾಥ ರೈ, ವಿನಯ ಕುಮಾರ್ ಸೊರಕೆ, ಯು.ಟಿ. ಖಾದರ್, ಅಭಯಚಂದ್ರ ಜೈನ್ ಹಾಗೂ ಮಧು ಬಂಗಾರಪ್ಪ ನೇತೃತ್ವದಲ್ಲಿ ಯಾತ್ರೆ ನಡೆಯಲಿದೆ' ಎಂದರು.

ಬಿ.ಕೆ.ಹರಿಪ್ರಸಾದ್, 'ಈ ಜಿಲ್ಲೆಗಳ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಈ ಯಾತ್ರೆ ನಡೆಯಲಿದೆ. ಫೆ.5ರಿಂದ 9ರವರೆಗೆ ಮೊದಲ ಹಂತದಲ್ಲಿ ಹಾಗೂ ಫೆ. 16ರಿಂದ ಮಾರ್ಚ್ 10ರವರೆಗೆ ಎರಡನೇ ಹಂತದ ಯಾತ್ರೆ ನಡೆಯಲಿದೆ. ಫೆರಿಯರ ಸುಳ್ಯದಲ್ಲಿ ಯಾತ್ರೆಗೆ ಚಾಲನೆ ನೀಡಲಾಗುವುದು. ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಲ್ಲಿ ಸಾರ್ವಜನಿಕ ಸಭೆಗಳನ್ನು ಹಮ್ಮಿಕೊಳ್ಳಲಿದ್ದು, ಪಕ್ಷದ ಪ್ರಮುಖರು ಭಾಗವಹಿಸಲಿದ್ದಾರೆ' ಎಂದರು.

'ಕರಾವಳಿ ಮತ್ತು ಮಲೆನಾಡಿನ ಐದು ಜಿಲ್ಲೆಗಳ 26 ವಿಧಾನಸಭಾ ಕ್ಷೇತ್ರಗಳಲ್ಲಿ 23ರಲ್ಲಿ ಬಿಜೆಪಿಯ ಶಾಸಕರು ಇದ್ದಾರೆ. ಆದರೂ ಭ್ರಷ್ಟ ಬಿಜೆಪಿ ಸರ್ಕಾರ ಹಾಗೂ ಅಸಮರ್ಥ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕರಾವಳಿ ಮತ್ತು ಮಲೆನಾಡಿಗೆ ದ್ರೋಹ ಬಗೆದಿದ್ದಾರೆ' ಎಂದರು.

'ಬಿಜೆಪಿಯು ಕರಾವಳಿ–ಮಲೆನಾಡಿನ ಜನರಿಗೆ ನೀಡಿದ್ದ ಭರವಸೆಗಳಲ್ಲಿ ಶೇ 95ಕ್ಕೂ ಹೆಚ್ಚು ಭರವಸೆಗಳು ಈಡೇರಿಲ್ಲ. ಶಿರಾಡಿ ಘಾಟಿಯಲ್ಲಿ ಸುರಂಗಮಾರ್ಗ ನಿರ್ಮಿಸುವ ಯೋಜನೆ ಈಡೇರಿಲ್ಲ. ಮೀನುಗಾರರಿಗೆ ಸಬ್ಸಿಡಿ ರೂಪದಲ್ಲಿ ನೀಡುವ ಡೀಸೆಲ್ ಪ್ರಮಾಣವನ್ನು 1.80 ಲಕ್ಷ ಲೀಟರ್‌ಗೆ ಹೆಚ್ಚಿಸುವ ಬೇಡಿಕೆ ಈಡೇರಿಸಿಲ್ಲ. ಅಳಿವೆಬಾಗಿಲುಗಳ ಹೂಳೆತ್ತಲು ₹ 135 ಕೋಟಿ ಯೋಜನೆ ನನೆಗುದಿಗೆ ಬಿದ್ದಿದೆ. ರಾಜ್ಯ ಮೀನುಗಾರಿಕಾ ಅಭಿವೃದ್ಧಿ ಮಂಡಳಿ ರಚಿಸುವ ಭರವಸೆ, ಬಿಲ್ಲವ ಮತ್ತು ಬಂಟ ಸಮುದಾಯಗಳಿಗೆ ನೀಡಿದ ಭರವಸೆಗಳನ್ನೂ ಈಡೇರಿಸಿಲ್ಲ' ಎಂದು ಅವರು ಹೇಳಿದರು.

ರಂಗ ಸಂಗೀತ ನಿರ್ದೇಶಕ ಶ್ರೀನಿವಾಸ ಭಟ್ (ಚೀನಿ) ಇನ್ನಿಲ್ಲ

ಪ್ರಜಾವಾಣಿ ವಾರ್ತೆ



ಮೈಸೂರು: ರಂಗ ಸಂಗೀತ ನಿರ್ದೇಶಕ ಶ್ರೀನಿವಾಸ್ ಭಟ್ (63) ಬುಧವಾರ ರಾತ್ರಿ ಹೃದಯಾಘಾತದಿಂದ ಇಲ್ಲಿನ ವಿವೇಕಾನಂದನಗರದ ನಿವಾಸದಲ್ಲಿ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಇದ್ದಾರೆ. ರಂಗಾಯಣದ ಸಂಗೀತ ನಿರ್ದೇಶಕರಾಗಿ 30 ವರ್ಷ ಸೇವೆ ಸಲ್ಲಿಸಿದ್ದ ಅವರು, ನೂರಾರು ನಾಟಕಗಳಿಗೆ ಸಂಗೀತ ನೀಡಿದ್ದರು. ರಂಗಭೀಷ್ಮ ಬಿ.ವಿ.ಕಾರಂತರ ಮೆಚ್ಚಿನ ಶಿಷ್ಯರಾಗಿದ್ದ ಅವರು 'ಚೀನಿ' ಎಂದೇ ರಂಗವಲಯದಲ್ಲಿ ಹೆಸರಾಗಿದ್ದರು. 'ಕಾರಂತ ಸಂಗೀತ' ಮಾದರಿಯನ್ನು ರಂಗಭೂಮಿಯಲ್ಲಿ ಮುಂದುವರಿಸಿದ್ದರು. ರಂಗಾಯಣಕ್ಕೆ ಬರುವ ಮುಂಚೆ ಉಡುಪಿ ರಥಬೀದಿ ಗೆಳೆಯರು ನಾಟಕಗಳಿಗೆ ರಂಗ ಸಂಗೀತ ನೀಡಿದ್ದರು. ಹೆಗ್ಗೋಡಿನ ನೀನಾಸಂನಲ್ಲೂ ಕೆಲಸ ಮಾಡಿದ್ದರು. ನಾಡಿನ ವಿವಿಧ ಹವ್ಯಾಸಿ ರಂಗ ತಂಡಗಳ ನಾಟಕಗಳಿಗೆ ಸಂಗೀತ ನೀಡಿದ್ದರು. ಗಿಟಾರ್, ಹಾರ್ಮೋನಿಯಂ ಹಾಗೂ ತಾಳವಾದ್ಯಗಳಲ್ಲೂ ಪರಿಣತರಾಗಿದ್ದರು. ಅಂತ್ಯಕ್ರಿಯೆ ಮೈಸೂರಿನಲ್ಲಿ ಗುರುವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಯಲಲಿತಾರ ಬೆಲೆಬಾಳುವ ವಸ್ತು ವಿಲೇವಾರಿಗೆ ಕೋರಿದ ಮನವಿ

ವಿಶೇಷ ಪ್ರಾಸಿಕ್ಯೂಟರ್ ನೇಮಕಕ್ಕೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿವಂಗತ ಜೆ.ಜಯಲಲಿತಾ ಅವರಿಂದ ಜಪ್ತಿ ಮಾಡಲಾಗಿದ್ದ ಬೆಲೆಬಾಳುವ ವಸ್ತುಗಳನ್ನು ವಿಲೇವಾರಿ ಮಾಡಲು ವಿಶೇಷ ಪ್ರಾಸಿಕ್ಯೂಟರ್ ನೇಮಿಸಿ' ಎಂದು ಬೆಂಗಳೂರಿನ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು ರಾಜ್ಯ ಗೃಹ ಇಲಾಖೆಗೆ ನಿರ್ದೇಶಿಸಿದೆ.

ಈ ಸಂಬಂಧ ಮಾಹಿತಿ ಹಕ್ಕು ಕಾರ್ಯಕರ್ತ ಟಿ. ನರಸಿಂಹಮೂರ್ತಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ್ದ ನಗರದ ಪ್ರಧಾನ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ರಾಮಚಂದ್ರ ಡಿ.ಹುದ್ದಾರ (ಈಗ ಹೈಕೋರ್ಟ್ ನ್ಯಾಯಮೂರ್ತಿ) 2023ರ ಜನವರಿ 17ರಂದು ಈ ಕುರಿತಂತೆ ಆದೇಶಿಸಿದ್ದಾರೆ.

ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರದ ವಿಶೇಷ ಸೆಷನ್ಸ್ ನ್ಯಾಯಾಲಯವು ಜಯಲಲಿತಾ ಅವರಿಗೆ ನಾಲ್ಕು ವರ್ಷ ಜೈಲು ಶಿಕ್ಷೆ ಮತ್ತು ₹ 100 ಕೋಟಿ ಮೊತ್ತದ ಬೃಹತ್ ದಂಡ ವಿಧಿಸಿ 2014ರ ಸೆಪ್ಟೆಂಬರ್ 27ರಂದು ಆದೇಶಿಸಿತ್ತು. 'ಜಯಲಲಿತಾ ಅವರಿಗೆ ಸೇರಿದ ಜಪ್ತಿ ಮಾಡಿದ ಬೆಲೆಬಾಳುವ ವಸ್ತುಗಳನ್ನು ಆರ್‌ಬಿಐ, ಎಸ್‌ಬಿಐಗೆ ಅಥವಾ ಸಾರ್ವಜನಿಕ ಹರಾಜು ಮೂಲಕ ಮಾರಾಟ ಮಾಡಬೇಕು. ಅದರಿಂದ ಬಂದ ಹಣವನ್ನು ದಂಡದ ಮೊತ್ತಕ್ಕೆ ಹೊಂದಾಣಿಕೆ ಮಾಡಬೇಕು' ಎಂದು ನ್ಯಾಯಾಲಯ ನಿರ್ದೇಶಿಸಿತ್ತು.

ಈ ಸಂಬಂಧ ಮಾಹಿತಿ ಕೋರಿ ನರಸಿಂಹ ಮೂರ್ತಿ ಸಕ್ಷಮ ಪ್ರಾಧಿಕಾರದಲ್ಲಿ 2022ರ ಆಗಸ್ಟ್ 12ರಂದು ಅರ್ಜಿ ಸಲ್ಲಿಸಿದ್ದರು. ಆದರೆ, ಸಿಟಿ ಸಿವಿಲ್ ಕೋರ್ಟ್ ಮಾಹಿತಿ ಹಕ್ಕು ಅಧಿಕಾರಿ ಈ ಅರ್ಜಿಯನ್ನು 2022ರ ಸೆಪ್ಟೆಂಬರ್ 7ರಂದು ತಿರಸ್ಕರಿಸಿದ್ದರು. ಇದರಿಂದಾಗಿ ಅರ್ಜಿದಾರರು ಪ್ರಥಮ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿದ್ದರು.

ಮನವಿಯಲ್ಲೇನಿತ್ತು?: 'ಜಯಲಲಿತಾ ಅವರಿಗೆ ಸೇರಿದ ವಸ್ತುಗಳನ್ನು ನ್ಯಾಯಾಲಯದ ಸುಪರ್ದಿಯಲ್ಲಿ ಇಟ್ಟುಕೊಳ್ಳುವ ಅಗತ್ಯವಿಲ್ಲ. ಆದ್ದರಿಂದ, ಅವುಗಳನ್ನು ವಿಲೇವಾರಿ ಮಾಡಬೇಕು. ಸಾರ್ವಜನಿಕ ಹರಾಜು ಮೂಲಕ ಮಾರಾಟಕ್ಕೆ ಇಟ್ಟರೆ, ಜಯಲಲಿತಾರ ಬೆಂಬಲಿಗರು ಭಾರಿ ಮೊತ್ತ ಪಾವತಿಸಿ ಖರೀದಿಸುವುದರಲ್ಲಿ ಸಂದೇಹವಿಲ್ಲ' ಎಂದು ಮನವಿಯಲ್ಲಿ ವಿವರಿಸಲಾಗಿತ್ತು.

ಜಪ್ತಿಯಾದ ವಸ್ತುಗಳು: ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡು ಭ್ರಷ್ಟಾಚಾರ ನಿಗ್ರಹ ಮತ್ತು ವಿಚಕ್ಷಣಾ ದಳದ ಅಧಿಕಾರಿಗಳು 1996ರ ಡಿಸೆಂಬರ್ 11ರಂದು ಚೆನ್ನೈನ ಜಯಲಲಿತಾ ಅವರ ಪೋಯಸ್ ಗಾರ್ಡನ್ ನಿವಾಸದ ಮೇಲೆ ದಾಳಿ ನಡೆಸಿ ಕೋಟ್ಯಂತರ ರೂಪಾಯಿ ಮೌಲ್ಯದ ಬೆಲೆಬಾಳುವ ವಸ್ತುಗಳನ್ನು ಜಪ್ತಿ ಮಾಡಿದ್ದರು.

ಜಪ್ತಿ ಮಾಡಲಾದ ವಸ್ತುಗಳಲ್ಲಿ 7,040 ಗ್ರಾಂ ತೂಕದ 468 ಬಗೆಯ ಚಿನ್ನ ಹಾಗೂ ವಜ್ರಖಚಿತ ಆಭರಣಗಳು, 700 ಕೆ.ಜಿ. ತೂಕದ ಬೆಳ್ಳಿ ಆಭರಣಗಳು, 740 ದುಬಾರಿ ಚಪ್ಪಲಿಗಳು, 11,344 ರೇಷ್ಮೆ ಸೀರೆಗಳು, 250 ಶಾಲು, 12 ರೆಫ್ರಿಜರೇಟರ್, 10 ಟಿ.ವಿ. ಸೆಟ್ , 8 ವಿಸಿಆರ್, 1 ವಿಡಿಯೊ ಕ್ಯಾಮೆರಾ, 4 ಸಿಡಿ ಪ್ಲೇಯರ್, 2 ಆಡಿಯೊ ಡೆಕ್, 24 ಟೂ-ಇನ್ ಒನ್ ರೇಪ್ ರೆಕಾರ್ಡರ್, 1,040 ವಿಡಿಯೊ ಕ್ಯಾಸೆಟ್, 3 ಐರನ್ ಲಾಕರ್ ಮತ್ತು ₹ 1.93 ಕೋಟಿ ನಗದು ಸೇರಿ ಹಲವು ವಸ್ತುಗಳಿವೆ.

ರುಪ್ಸ ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ ತೀರ್ಮಾನ

'ಶಿಕ್ಷಣ ಇಲಾಖೆಯ ಭ್ರಷ್ಟಾಚಾರ: ಮತ್ತೆ ಪ್ರಧಾನಿಗೆ ಪತ್ರ'

ಬೆಂಗಳೂರು: ಆರ್‌ಟಿಇ ಶುಲ್ಕ ಮರುಪಾವತಿ, ಶಾಲೆಗಳ ಮಾನ್ಯತೆ ನವೀಕರಣ ಮತ್ತಿತರ ಪ್ರಕರಣಗಳಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿ ಪ್ರಧಾನಮಂತ್ರಿ ಮತ್ತು ರಾಷ್ಟ್ರಪತಿಗೆ ಮತ್ತೊಮ್ಮೆ ಪತ್ರ ಬರೆಯಲು ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘ (ರುಪ್ಸ) ನಿರ್ಣಯ ತೆಗೆದುಕೊಂಡಿದೆ.

> **ಭ್ರಷ್ಟಾಚಾರದ ಕುರಿತು ದಾಖಲೆಗಳ ಸಹಿತ ದೂರು ನೀಡಿದರೂ ಸರ್ಕಾರ ಯಾವುದೇ ಕ್ರಮಕೈಗೊಂಡಿಲ್ಲ. ಮುಖ್ಯಮಂತ್ರಿ, ಪ್ರಧಾನಿಗೆ ಈ ಹಿಂದೆಯೇ ಪತ್ರ ಬರೆದಿದ್ದೇವೆ**
> **ಲೋಕೇಶ್ ತಾಳಿಕಟ್ಟೆ,** ಅಧ್ಯಕ್ಷ, ರುಪ್ಸ

ಶಾಸಕರ ಭವನದಲ್ಲಿ ಬುಧವಾರ ನಡೆದ ಸಂಘದ ಕಾರ್ಯಕಾರಿ ಮಂಡಳಿಯ ಸಭೆಯ ಬಳಿಕ ಈ ವಿಷಯ ತಿಳಿಸಿದ ರುಪ್ಸ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, 'ಶಿಕ್ಷಣ ಇಲಾಖೆಯ ಅಧಿಕಾರಿಗಳ ಭ್ರಷ್ಟಾಚಾರ ಕುರಿತು ಮೂರು ವರ್ಷಗಳಿಂದ ಪ್ರಧಾನ ಮಂತ್ರಿ, ಮುಖ್ಯಮಂತ್ರಿ ಗಮನ ಸೆಳೆದಿದ್ದೇವೆ. ಶಿಕ್ಷಣ ಇಲಾಖೆಯ ಆಯುಕ್ತರಿಗೆ ಕೆಲವು ಸಾಕ್ಷ್ಯಗಳನ್ನು ಸಲ್ಲಿಸಿದರೂ, ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಬದಲಿಗೆ, ಹಲವು ಸುತ್ತೋಲೆ ಹೊರಡಿಸುವ ಮೂಲಕ ಶಿಕ್ಷಣ ಹಕ್ಕು ಕಾಯ್ದೆಯ ನಿಯಮಗಳಲ್ಲೇ ಗೊಂದಲ ಸೃಷ್ಟಿಸಲಾಗಿದೆ. ಭ್ರಷ್ಟಾಚಾರಿಗಳಿಗೆ ಹಣ ಮಾಡಲು ಅನುಕೂಲ ಮಾಡಿಕೊಡಲಾಗಿದೆ' ಎಂದು ಆರೋಪಿಸಿದರು.

'10 ವರ್ಷಗಳಿಗೆ ಒಮ್ಮೆ ಮಾನ್ಯತೆ ನವೀಕರಣ ಮಾಡಬೇಕೆಂದು ಇಲಾಖೆಯ ನಿಯಮ ಇದ್ದರೂ, ಅದನ್ನು ಐದು ಅಥವಾ ಪ್ರತಿವರ್ಷ ಎಂದು ಬದಲಾಯಿಸಲಾಗಿದೆ. ಶಾಲೆಗಳ ಆಡಳಿತ ಮಂಡಳಿ ಕೊಡುವ ಲಂಚದ ಗಾತ್ರದ ಮೇಲೆ ನವೀಕರಣದ ವರ್ಷಗಳು ನಿರ್ಧಾರವಾಗುತ್ತಿವೆ. ಆರ್‌ಟಿಇ ಶುಲ್ಕದ ಮರುಪಾವತಿಗೂ ಲಂಚ ನೀಡಬೇಕಿದೆ. ಕೇಂದ್ರ ಪಠ್ಯಕ್ರಮ ಅನುಸರಿಸುವ ಶಾಲೆಗಳು ನಿರಕ್ಷೇಪಣಾ ಪತ್ರ (ಎನ್‌ಒಸಿ) ಪಡೆಯಲು ಪ್ರಧಾನ ಕಾರ್ಯದರ್ಶಿಗಳ ಕಚೇರಿಯ ದೊಡ್ಡ ತಂಡವನ್ನೇ ನಿರ್ವಹಣೆ ಮಾಡಬೇಕಿದೆ. ಭ್ರಷ್ಟಾಚಾರದ ಕುರಿತು ದೂರು ಸಲ್ಲಿಸಿದ ನಂತರ 700 ಶಾಲೆಗಳಿಗೆ ಎನ್‌ಒಸಿ ನೀಡಿದ್ದ ದಾಖಲೆಗಳೇ ಮಾಯ ಆಗಿವೆ' ಎಂದು ಆರೋಪ ಮಾಡಿದರು.

'ಶಾಲೆ ನವೀಕರಣಕ್ಕೆ ಬಿಇಒದಿಂದ ಹಿಡಿದು ಹಿರಿಯ ಅಧಿಕಾರಿಗಳವರೆಗೆ ಲಂಚ ಕೊಡಲೇಬೇಕು. ಹೀಗಾದರೆ, ಬಜೆಟ್ ಖಾಸಗಿ ಶಾಲೆ ಉಳಿಯುವುದು ಹೇಗೆ? ಭ್ರಷ್ಟಾಚಾರದ ಬಗ್ಗೆ ದೂರು ನೀಡಿದರೆ, ಅಂಥ ಶಾಲೆಗಳ ವಿರುದ್ಧ ಸುಳ್ಳು ಮೊಕದ್ದಮೆ ದಾಖಲಿಸಲಾಗುತ್ತಿದೆ. ಅಧಿಕಾರಿಗಳಿಗೆ ಶಿಕ್ಷಣ ಸಚಿವರ ಸಹಕಾರವಿದೆ. ಬಿಇಒ, ಡಿಡಿಪಿಐ ಮತ್ತಿತರ ಅಧಿಕಾರಿಗಳ ವರ್ಗಾವಣೆಯಲ್ಲೂ ಹಣದ ವ್ಯವಹಾರ ನಡೆಯುತ್ತದೆ. ಈ ಎಲ್ಲ ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಿ, ಮತ್ತೊಮ್ಮೆ ಪ್ರಧಾನಿ ಮತ್ತು ರಾಷ್ಟ್ರಪತಿಗೆ ಪತ್ರ ಬರೆಯಲು ನಿರ್ಣಯಿಸಿದ್ದೇವೆ' ಎಂದು ವಿವರಿಸಿದರು.

18 ವರ್ಷದಿಂದ ಸ್ವಾಧೀನಕ್ಕೆ ಬಾರದ ನಿವೇಶನ: ಸುರೇಶ್‌ಕುಮಾರ್ ಪತ್ರ

ಬೆಂಗಳೂರು: ನೇತ್ರ ತಜ್ಞರಾಗಿರುವ ಡಾ. ವಿಶ್ವಮೂರ್ತಿ ಅವರಿಗೆ 2014ರಲ್ಲಿ ಹಂಚಿಕೆಯಾಗಿದ್ದ ನಿವೇಶನವನ್ನು ಈವರೆಗೂ ಹಸ್ತಾಂತರಿಸದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧಿಕಾರಿಗಳ ಧೋರಣೆ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿ ಪ್ರಾಧಿಕಾರದ ಆಯುಕ್ತರಿಗೆ ಪತ್ರ ಬರೆದಿರುವ ಶಾಸಕ ಎಸ್. ಸುರೇಶ್‌ಕುಮಾರ್, ಶೀಘ್ರವಾಗಿ ಸಮಸ್ಯೆ ಪರಿಹರಿಸುವಂತೆ ಕೋರಿದ್ದಾರೆ.

ಬಿಡಿಎ ಆಯುಕ್ತ ಜಿ. ಕುಮಾರ ನಾಯಕ್ ಅವರಿಗೆ ಬುಧವಾರ ಪತ್ರ ಬರೆದಿರುವ ಅವರು, 'ವಿಶ್ವಮೂರ್ತಿಯವರು ನಿವೇಶನ ಕೋರಿ 1984ರಲ್ಲಿ ಬಿಡಿಎಗೆ ಅರ್ಜಿ ಸಲ್ಲಿಸಿದ್ದರು. 2004ರಲ್ಲಿ ಬನಶಂಕರಿ ಆರನೇ ಹಂತದ ಬಡಾವಣೆಯಲ್ಲಿ ಅವರಿಗೆ ನಿವೇಶನ ಹಂಚಿಕೆ ಮಾಡಲಾಗಿತ್ತು. ಸದರಿ ನಿವೇಶನ ತಲಘಟ್ಟಪುರ ಕೆರೆ ಪಕ್ಕದಲ್ಲಿತ್ತು. 2015ರವರೆಗೂ ಅಲ್ಲಿಗೆ ಯಾವುದೇ ಮೂಲಸೌಕರ್ಯ ಕಲ್ಪಿಸಿರಲಿಲ್ಲ. 2016ರಲ್ಲಿ ಸುತ್ತಮುತ್ತಲಿನ ಗ್ರಾಮಸ್ಥರು ನಿವೇಶನವನ್ನು ಸ್ಮಶಾನ ಮಾಡಿಕೊಂಡಿದ್ದರು' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'2017ರಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ನೀಡಿದ ಆದೇಶದಿಂದ ನಿವೇಶನದ ಜಮೀನು ಕೆರೆಯ 'ಬಫರ್ ಝೋನ್' ವ್ಯಾಪ್ತಿಗೆ ಸೇರಿತು. ನಂತರ ಅದೇ ಬಡಾವಣೆಯ ಆರನೇ ಟಿ ಬ್ಲಾಕ್‌ನಲ್ಲಿ ಬದಲಿ ನಿವೇಶನ ಹಂಚಿಕೆ ಮಾಡಲಾಗಿತ್ತು. ಈಗ ಅದೇ ನಿವೇಶನವನ್ನು ಪತ್ರಕರ್ತರೊಬ್ಬರಿಗೆ ಹಂಚಿಕೆ ಮಾಡಿರುವ ಮಾಹಿತಿ ಬಿಡಿಎ ಅಧಿಕಾರಿಗಳಿಂದ ಲಭಿಸಿದೆ. ಪುನಃ ಬದಲಿ ನಿವೇಶನ ಕೋರಿ ವಿಶ್ವಮೂರ್ತಿ ಸಲ್ಲಿಸಿರುವ ಅರ್ಜಿ ಬಿಡಿಎ ವಿಚಕ್ಷಣಾ ದಳದಲ್ಲಿದೆ' ಎಂದು ಪ್ರಕರಣವನ್ನು ವಿವರಿಸಿದ್ದಾರೆ.

'ವಿಶ್ವಮೂರ್ತಿಯವರ ಪ್ರಕರಣ ಯಾರಿಗೇ ಆದರೂ ಬೇಸರ ತರುವಂಥದ್ದು. 1984ರಿಂದ ನಿವೇಶನ ಪಡೆಯಲು ಪ್ರಯತ್ನಿಸುತ್ತಲೇ ಇರುವ, ನಿವೇಶನ ಹಂಚಿಕೆಯಾದರೂ ಸ್ವಾಧೀನಕ್ಕೆ ಪಡೆಯಲಾಗದೆ ವಂಚಿತರಾಗಿರುವ ಅವರಿಗೆ ತ್ವರಿತವಾಗಿ ಬದಲಿ ನಿವೇಶನ ನೀಡಬೇಕು' ಎಂದು ಪತ್ರದಲ್ಲಿ ಸುರೇಶ್‌ಕುಮಾರ್ ಕೋರಿದ್ದಾರೆ.

ಬಿಬಿಎಂಪಿ 8 ವಲಯಗಳ ಖಾತಾ: 5 ಸಾವಿರ ಅರ್ಜಿ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 8 ವಲಯಗಳಲ್ಲಿ ಖಾತಾಗೆ ಸಂಬಂಧಿಸಿದ 5,232 ಪ್ರಕರಣಗಳು ಬಾಕಿ ಇದ್ದು, 2,199 ಅರ್ಜಿಗಳನ್ನು ವಿಲೇವಾರಿ ಮಾಡಬೇಕಾಗಿದೆ.

ದಕ್ಷಿಣ ವಲಯದಲ್ಲಿ ಮಾತ್ರ ಮೂರು ದಿನಗಳ 'ಖಾತಾ ಮೇಳ'ವನ್ನು ಹಮ್ಮಿಕೊಂಡಿದ್ದು, ಫೆ.3ರಿಂದ 5ರವರೆಗೆ ಎಲ್ಲ ಅರ್ಜಿಗಳನ್ನು ವಿಲೇವಾರಿ ಮಾಡಲು ಯೋಜಿಸಲಾಗಿದೆ.

ವಿಜಯನಗರ, ಪದ್ಮನಾಭನಗರ, ಚಿಕ್ಕಪೇಟೆ, ಬಸವನಗುಡಿ, ಜಯನಗರ ಮತ್ತು ಬಿಟಿಎಂ ಲೇಔಟ್ ವಿಧಾನಸಭೆ ಕ್ಷೇತ್ರಗಳಲ್ಲಿ 317 ಅರ್ಜಿಗಳು ವಿಲೇವಾರಿಗೆ ಬಾಕಿಯಿದೆ. ಎಲ್ಲಾ ನಾಗರಿಕರು ಎಲ್ಲಾ ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕು. ತಮ್ಮ ಆಸ್ತಿಗಳಿಗೆ ಖಾತೆ ಹಾಗೂ ಖಾತೆಗೆ ಸಂಬಂಧಿಸಿದ ಎಲ್ಲಾ ಕೆಲಸವನ್ನು ಮೇಳದಲ್ಲಿ ಪೂರ್ಣಗೊಳಿಸಿಕೊಳ್ಳಬಹುದು ಎಂದು ವಲಯ ಆಯುಕ್ತ ಜಯರಾಮ್ ರಾಯ್‌ಪುರ ಹೇಳಿದ್ದಾರೆ.

ಖಾತಾಗೆ ಸಂಬಂಧಿಸಿದ ಅರ್ಜಿಗಳ ಬಾಕಿ ವಿವರ

ಸೇವೆ	ಒಟ್ಟು ಬಾಕಿ	ಅರ್ಜಿ ಪಾವತಿಗೆ ಬಾಕಿ	ಬಾಕಿ
ಖಾತಾ ವರ್ಗಾವಣೆ	3,557	2,020	1,537
ಖಾತೆ ನೋಂದಣಿ	673	446	227
ಖಾತಾ ವಿಭಾಗ	863	515	348
ಖಾತಾ ಒಗ್ಗೂಡಿಸುವಿಕೆ	139	57	82
ಒಟ್ಟು	5,232	3,038	2,194

ಯಲಹಂಕ ವಲಯದಲ್ಲಿ 157, ಮಹದೇವಪುರ-459, ದಾಸರಹಳ್ಳಿ-124, ಆರ್.ಆರ್. ನಗರ-302, ಪಶ್ಚಿಮ-326, ದಕ್ಷಿಣ-317, ಪೂರ್ವ-389 ಹಾಗೂ ಬೊಮ್ಮನಹಳ್ಳಿ ವಲಯದಲ್ಲಿ 125 ಖಾತಾಗೆ ಸಂಬಂಧಿಸಿದ ಅರ್ಜಿಗಳು ಬಾಕಿ ಉಳಿದಿವೆ.

ಬಾಬು ಜಗಜೀವನರಾಮ್ ಸಂಶೋಧನಾ ಕೇಂದ್ರಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ


ಪ್ರೊ.ಸಮತಾ ಬಿ ದೇಶಮಾನೆ ಬರೆದ ವಿಶ್ವ ದಾಖಲೆಯ ಸೋಲಿಲ್ಲದ ಸರದಾರ ಬಾಬು ಜಗಜೀವನರಾಮ್ ಪುಸ್ತಕವನ್ನು ಕುಲಪತಿ ಡಾ.ಎಸ್.ಎಂ.ಜಯಕರ್ ಹಾಗೂ ನಿಕಟಪೂರ್ವ ಕುಲಪತಿ ಪ್ರೊ.ಕೆ.ಆರ್.ವೇಣುಗೋಪಾಲ್ ಬಿಡುಗಡೆಗೊಳಿಸಿದರು. ಕುಲಸಚಿವ ಮಹೇಶ್ ಬಾಬು, ಪ್ರೊ.ಗಂಗಾಧರ್ ಮತ್ತಿತರರು ಇದ್ದಾರೆ.

ಕೆಂಗೇರಿ: ಹಸಿರು ಕ್ರಾಂತಿಯ ಹರಿಕಾರರಾಗಿದ್ದ ಬಾಬು ಜಗಜೀವನ ರಾಮ್, ಬಾಲ್ಯದಿಂದಲೇ ಶೋಷಣೆ ಹಾಗೂ ಅಸ್ಪೃಶ್ಯತೆ ವಿರುದ್ಧ ಹೋರಾಟ ನಡೆಸಿದ್ದರು. ಅವರ ಹೋರಾಟದ ಜೀವನ ಯುವಜನಾಂಗಕ್ಕೆ ಎಂದಿಗೂ ಮಾದರಿ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ಎಂ.ಜಯಕರ್ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಡಾ.ಬಾಬು ಜಗಜೀವನ ರಾಮ್ ಅಧ್ಯಯನ ಹಾಗೂ ಸಂಶೋಧನಾ ಕೇಂದ್ರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಕುಲಸಚಿವ ಡಾ.ಎನ್.ಮಹೇಶ್ ಬಾಬು, ನಿಕಟಪೂರ್ವ ಕುಲಪತಿ ಡಾ.ಕೆ.ಆರ್. ವೇಣುಗೋಪಾಲ್ ಮಾತನಾಡಿದರು.

ಇದೇ ವೇಳೆ ಪ್ರೊ. ಸಮತಾ ಬಿ ದೇಶಮಾನೆ ಬರೆದ ವಿಶ್ವ ದಾಖಲೆಯ ಸೋಲಿಲ್ಲದ ಸರದಾರ ಸಮಾಜ ವಿಜ್ಞಾನಿ ಜಗಜೀವನರಾಮ್ ಪುಸ್ತಕವನ್ನು ಕುಲಪತಿ ಡಾ.ಜಯಕರ್ ಹಾಗೂ ನಿಕಟಪೂರ್ವ ಕುಲಪತಿ ಪ್ರೊ. ಕೆ.ಆರ್.ವೇಣುಗೋಪಾಲ್ ಬಿಡುಗಡೆ ಮಾಡಿದರು. ಹಣಕಾಸು ಅಧಿಕಾರಿ ಎಸ್. ಅಜಿತ್ ಕುಮಾರ್ ಹೆಗಡೆ, ಸಿಂಡಿಕೇಟ್ ಸದಸ್ಯ ಸುಧಾಕರ್, ಕುಲ ಸಚಿವ (ಮೌಲ್ಯ ಮಾಪನ) ಡಾ.ಜೆ.ಟಿ.ದೇವರಾಜ್, ಡಾ.ಬಾಬು ಜಗಜೀವನರಾಮ್ ಅಧ್ಯಯನ ಹಾಗೂ ಸಂಶೋಧನಾ ಕೇಂದ್ರದ ನಿರ್ದೇಶಕ ಪ್ರೊ.ಡಾ.ಬಿ.ಗಂಗಾಧರ್, ನಿಕಟ ಪೂರ್ವ ಸಿಂಡಿಕೇಟ್ ಸದಸ್ಯ ಸಿಂಹ, ಎಇಇ ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಎನ್‌ಎಲ್‌ಎಸ್‌ಐಯು: ತಿದ್ದುಪಡಿ ಕೋರಿ ಕಾನೂನು ಸಚಿವರಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ' (ಎನ್‌ಎಲ್‌ಎಸ್‌ಐಯು) ಕಾರ್ಯಕಾರಿ ಸಮಿತಿ ಮಂಡಳಿಯನ್ನು ಪುನರ್ ರಚಿಸಲು ಮತ್ತು ನೂತನ ಆಡಳಿತ ಮಂಡಳಿಯಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳನ್ನೂ ಒಳಗೊಂಡಂತೆ ನ್ಯಾಯಾಂಗ ವಲಯದ ಸ್ಥಳೀಯ ಪ್ರತಿನಿಧಿಗಳಿಗೂ ಸ್ಥಾನ ಕಲ್ಪಿಸಬೇಕು' ಎಂದು ಬೆಂಗಳೂರು ವಕೀಲರ ಸಂಘದ ನಿಕಟಪೂರ್ವ ಅಧ್ಯಕ್ಷ ಎ.ಪಿ.ರಂಗನಾಥ್ ಅವರು ಆಗ್ರಹಿಸಿದ್ದಾರೆ.

ಈ ಕುರಿತಂತೆ ಬೆಂಗಳೂರು ವಕೀಲರ ಸಂಘದ ಹಲವು ಸದಸ್ಯರ ಸಹಿಯನ್ನು ಒಳಗೊಂಡ ಮನವಿ ಪತ್ರವನ್ನು ಅವರು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಮಾಧುಸ್ವಾಮಿ ಅವರಿಗೆ ಸಲ್ಲಿಸಿದ್ದು, 'ಈ ಸಂಬಂಧದ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಕಾಯ್ದೆ–1986 ಹಾಗೂ ಕರ್ನಾಟಕ ಕಾಯ್ದೆಗೆ ತಿದ್ದುಪಡಿ ತರಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

'ರಾಷ್ಟ್ರೀಯ ಕಾನೂನು ಶಾಲೆಯಲ್ಲಿ ಕೇವಲ ನಾಮಕಾವಸ್ತೆಯ ಪ್ರಾತಿನಿಧ್ಯ ಸಾಲದು. ಕರ್ನಾಟಕ ಮೂಲದ ವಕೀಲರು ಮತ್ತು ಕಾನೂನು ವಿದ್ಯಾರ್ಥಿಗಳಿಗೂ ಪ್ರಾತಿನಿಧ್ಯ ದೊರಕುವಂತಾಗಬೇಕು. ಆದ್ದರಿಂದ, ಈ ನಿಟ್ಟಿನಲ್ಲಿ ಕಾನೂನು ತಿದ್ದುಪಡಿ ಮಾಡುವ ಕುರಿತಂತೆ ಮುಂಬರುವ ಅಧಿವೇಶನದಲ್ಲಿಯೇ ಕ್ರಮ ಕೈಗೊಳ್ಳಬೇಕು' ಎಂದು ಪತ್ರದಲ್ಲಿ ಒತ್ತಾಯಿಸಲಾಗಿದೆ.

'ರಾಷ್ಟ್ರೀಯ ಕಾನೂನು ಶಾಲೆಯಲ್ಲಿ ಸ್ಥಳೀಯರಿಗೆ ಶೇ 25ರಷ್ಟು ಮೀಸಲು ಕಲ್ಪಿಸಲು ಈ ಹಿಂದೆ ಶಾಸನ ರೂಪಿಸಲಾಗಿತ್ತು. ಆದರೆ, ಇದನ್ನು ಕರ್ನಾಟಕ ಹೈಕೋರ್ಟ್ ರದ್ದುಗೊಳಿಸಿತ್ತು. ನಂತರ ಎನ್‌ಎಲ್‌ಎಸ್‌ಐಯು ತನ್ನ 2021ರ ವಿಸ್ತರಣಾ ಯೋಜನೆಯಲ್ಲಿ ಸ್ಥಳೀಯ ವಿದ್ಯಾರ್ಥಿಗಳಿಗೆ ಶೇ 25ರಷ್ಟು ಮೀಸಲು ನೀಡಲು ಉದ್ದೇಶಿಸಿದೆ. ಆದರೆ ಇದನ್ನು ಇನ್ನೂ ಜಾರಿಗೊಳಿಸಿಲ್ಲ' ಎಂದು ಪತ್ರದಲ್ಲಿ ಗಮನ ಸೆಳೆಯಲಾಗಿದೆ.

ಅನಧಿಕೃತ ಬೋಧನೆ: ಆರ್ಕಿಡ್ ಶಾಲೆ ವಿರುದ್ಧ ಎಫ್‌ಐಆರ್

ಬೆಂಗಳೂರು: ಮಾನ್ಯತೆ ಪಡೆಯದೆಯೇ ಸಿಬಿಎಸ್‌ಇ ಪಠ್ಯವನ್ನು ಬೋಧಿಸಿದ ಆರೋಪದಡಿ ನಾಗರಬಾವಿಯ ಆರ್ಕಿಡ್ ಇಂಟರ್‌ನ್ಯಾಷನಲ್ ಶಾಲೆ ವಿರುದ್ಧ ಅನ್ನಪೂರ್ಣೇಶ್ವರಿ ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬೆಂಗಳೂರು ದಕ್ಷಿಣ ವಿಭಾಗದ ವಲಯ–1ರ ಬಿಇಒ ದೂರು ನೀಡಿದ್ದರು.

'1ರಿಂದ 8ನೇ ತರಗತಿಯವರೆಗೆ ರಾಜ್ಯ ಪಠ್ಯಕ್ರಮದಲ್ಲಿ ಶಾಲೆಯನ್ನು ನಡೆಸಲು ಆರ್ಕಿಡ್ ಇಂಟರ್‌ನ್ಯಾಷನಲ್ ಶಾಲೆಗೆ ಅನುಮತಿ ನೀಡಲಾಗಿತ್ತು. ಆದರೆ, ಈ ಶಾಲಾ ಆಡಳಿತ ಮಂಡಳಿ ಅನಧಿಕೃತವಾಗಿ ಸಿಬಿಎಸ್‌ಇ ಪಠ್ಯಕ್ರಮ ಬೋಧನೆ ಹಾಗೂ ಇಲಾಖೆಯ ಅನುಮತಿ ಇಲ್ಲದೆಯೇ 9 ಮತ್ತು 10ನೇ ತರಗತಿಗಳನ್ನು ನಡೆಸುತ್ತಿದೆ ಎಂದು ಅನುದಾನರಹಿತ ಶಾಲೆಗಳ ತಪಾಸಣೆಗೆ ನಿಯೋಜಿಸಲಾಗಿದ್ದ ತ್ರಿಸದಸ್ಯ ಸಮಿತಿ ವರದಿ ನೀಡಿತ್ತು. ಈ ಬಗ್ಗೆ ಶಾಲೆಗೆ ಎರಡು ಬಾರಿ ನೋಟಿಸ್ ಜಾರಿ ಮಾಡಲಾಗಿತ್ತು. ಈ ಬಗ್ಗೆ ಉತ್ತರಿಸಿದ್ದ ಪ್ರಾಂಶುಪಾಲರು, ರಾಜ್ಯ ಪಠ್ಯಕ್ರಮದಲ್ಲಿ ಶಾಲೆ ನಡೆಸುತ್ತಿದ್ದು, ಮಕ್ಕಳ ಪೂರಕ ಕಲಿಕೆಗೆ ಇತರೆ ಪುಸ್ತಕಗಳನ್ನು ಬೋಧಿಸುತ್ತಿರುವುದಾಗಿ ಸಮಜಾಯಿಷಿ ನೀಡಿದ್ದರು. ಕಾನೂನುಬಾಹಿರವಾಗಿ ಸಿಬಿಎಸ್‌ಇ ಪಠ್ಯ ಬೋಧಿಸುತ್ತಿರುವ ಬಗ್ಗೆ ಪೋಷಕರು ಸಹ ಜ.24ರಂದು ದೂರು ನೀಡಿದ್ದರು' ಎಂದು ಬಿಇಒ ದೂರಿನಲ್ಲಿ ತಿಳಿಸಿದ್ದಾರೆ. ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷ, ಪ್ರಾಂಶುಪಾಲ ಸೇರಿದಂತೆ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

'ಕಾನೂನುಬಾಹಿರವಾಗಿ ಸಿಬಿಎಸ್‌ಇ ಪಠ್ಯ ಬೋಧಿಸಿದ್ದಕ್ಕಾಗಿ ಶಾಲೆ ವಿರುದ್ಧ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ' ಎಂದು ಬೆಂಗಳೂರು ದಕ್ಷಿಣ ಡಿಡಿಪಿಐ ಬೈಲಾಂಜನಪ್ಪ ತಿಳಿಸಿದ್ದಾರೆ.

ಚಿತ್ರಾವಳಿ

ಸುಂದರ ಪ್ರಕಾಶನ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಿ.ವಿ. ಶಶಿಕುಮಾರ್ ಅವರ 'ಧ್ರುವ ತಾರೆಯ ದಿಕ್ಕಿನಲ್ಲಿ' ಪುಸ್ತಕ ಬಿಡುಗಡೆ ಮಾಡಲಾಯಿತು. ವಿಶ್ವವಾಣಿ ಪತ್ರಿಕೆ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಚಲನಚಿತ್ರ ನಿರ್ದೇಶಕ ಪಿ. ಶೇಷಾದ್ರಿ ಮತ್ತಿತರರು ಇದ್ದಾರೆ.

ಕೇಂದ್ರ ಕೈಮಗ್ಗಜವಳಿ ಸಚಿವಾಲಯ, ರಾಜ್ಯ ಕೈಮಗ್ಗ ಮತ್ತು ಜವಳಿ ಇಲಾಖೆ, ರಾಜ್ಯ ಕೈಮಗ್ಗ ನೇಕಾರರ ಮಹಾಮಂಡಳಿ ವತಿಯಿಂದ ಆಯೋಜಿಸಿದ್ದ ಹರ್ಷಕಲಾ ರಾಷ್ಟ್ರೀಯ ಕೈಮಗ್ಗ ಮೇಳವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಬಿಜೆಪಿ ಮುಖಂಡ ಎಂ.ಡಿ.ಲಕ್ಷ್ಮಿನಾರಾಯಣ, ಜವಳಿ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿರೂಪಾಕ್ಷಗೌಡ, ಕೈಮಗ್ಗ ಮತ್ತು ಜವಳಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ತೋಟಗಾರಿಕೆ ಸಚಿವ ಮುನಿರತ್ನ ಇದ್ದರು.

ಬೆಂಗಳೂರು ವಕೀಲರ ಸಂಘದ ವತಿಯಿಂದ ನೂತನ ನ್ಯಾಯಮೂರ್ತಿಗಳಿಗೆ ಸನ್ಮಾನ

'ಬರಲಿರುವ ಬ್ಯಾಟ್ಸ್‌ಮನ್ ಮೇಲೆ ಒತ್ತಡದ ನೊಗ'

ಬೆಂಗಳೂರು: ಆನೇವಾಲೆ ಬ್ಯಾಟ್ಸ್‌ಮನ್ ಪರ್ ಭಾರಿ ಮನೋವೈಜ್ಞಾನಿಕ್ ದಬಾವ್ ಹೈ...! (ಬರಲಿರುವ ಬ್ಯಾಟ್ಸ್‌ಮನ್ ಮೇಲೆ ಈಗ ಮಾನಸಿಕವಾದ ಭಾರಿ ಒತ್ತಡ ಇದೆ)

ಕ್ರಿಕೆಟ್ ಪಂದ್ಯದಲ್ಲಿ ಮೈದಾನಕ್ಕಿಳಿಯುತ್ತಿದ್ದ ಮುಂದಿನ ಬ್ಯಾಟ್ಸ್‌ಮನ್ ಕುರಿತು ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ ನೀಡುತ್ತಿದ್ದ ಖ್ಯಾತ ಸುಶೀಲ್ ದೋಶಿಯವರ ಸಾಲುಗಳನ್ನು ನೆನಪು ಮಾಡಿಕೊಂಡ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಅವರು ಬುಧವಾರ ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ಅಧಿಕಾರ ವಹಿಸಿಕೊಂಡ ರಾಮಚಂದ್ರ ಡಿ.ಹುದ್ದಾರ ಮತ್ತು ವೆಂಕಟೇಶ ಟಿ.ನಾಯಕ್ ಅವರ ಕುರಿತು ಆಡಿದ ಮಾತುಗಳಿವು.

ನೂತನ ನ್ಯಾಯಮೂರ್ತಿಗಳನ್ನು ಬೆಂಗಳೂರು ವಕೀಲರ ಸಂಘದ ವತಿಯಿಂದ ಹೈಕೋರ್ಟ್ ವಕೀಲರ ಸಭಾಂಗಣದಲ್ಲಿ ಸನ್ಮಾನಿಸಲಾಯಿತು. ಈ ವೇಳೆ ಮಾತನಾಡಿದ ಅವರು, 'ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿಗಳ ದೊಡ್ಡ ಕುಟುಂಬಕ್ಕೆ ಇವರಿಬ್ಬರ ಸೇರ್ಪಡೆ ಸ್ವಾಗತಾರ್ಹ. ಇಬ್ಬರೂ ತಮ್ಮ ಅವಧಿಯಲ್ಲಿ ಉತ್ತಮ ಕಾರ್ಯ ನಿರ್ವಹಿಸಲಿ' ಎಂದು ವರಾಳೆ ಆಶಿಸಿದರು.

ಇದೇ ವೇಳೆ ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಅವರು ಪ್ರಕರಣಗಳ ಪೋಸ್ಟಿಂಗ್ ಮತ್ತು ವಿಚಾರಣೆಗೆ ಪಟ್ಟಿ ನಿಗದಿಯಾಗುವಲ್ಲಿ ವಕೀಲರಿಗೆ ವಿಳಂಬವಾಗುತ್ತಿದ್ದು, ಇದನ್ನು ಬಗೆಹರಿಸಬೇಕೆಂದು ಮಾಡಿದ ಮನವಿಗೆ ಸ್ಪಂದಿಸಿದ ವರಾಳೆ ಅವರು, 'ಆಧುನಿಕ ತಂತ್ರಜ್ಞಾನದ ಮುಖಾಂತರ ಪ್ರಕರಣಗಳ ಪೋಸ್ಟಿಂಗ್ ಹಾಗೂ ಲಿಸ್ಟಿಂಗ್ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಲಾಗುವುದು' ಎಂದರು. ಪ್ರಾರ್ಥನೆ ಹಾಡಿದ ವಕೀಲ ಭಾರ್ಗವ ಅವರನ್ನು ವರಾಳೆ ಮನದುಂಬಿ ಶ್ಲಾಘಿಸಿದರು.

ಅಧಿಕಾರ ವಹಿಸಿಕೊಂಡ ರಾಮಚಂದ್ರ ಡಿ. ಹುದ್ದಾರ ಮಾತನಾಡಿ, 'ವಕೀಲರ ವೃಂದದಲ್ಲಿ ಕಿರಿಯ ವಕೀಲರು ಹಿರಿಯ ವಕೀಲರನ್ನು ಗೌರವದಿಂದ ನಡೆಸಿಕೊಳ್ಳಬೇಕು. ಈ ಪರಂಪರೆಯನ್ನು ಕಿರಿಯರು ಕಡೆಗಣಿಸುತ್ತಿದ್ದಾರೆ' ಎಂದು ವಿಷಾದಿಸಿದರು. ಅಂತೆಯೇ, 'ವಕೀಲರು ಓದುವ ಹವ್ಯಾಸವನ್ನು ಹೆಚ್ಚಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು. ನ್ಯಾಯಮೂರ್ತಿ ವೆಂಕಟೇಶ ಟಿ.ನಾಯಕ್ ಮಾತನಾಡಿದರು.

ಕರ್ನಾಟಕ ಹೈಕೋರ್ಟ್‌ಗೆ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ಪದನ್ನೋತಿ ಹೊಂದಿ ಬುಧವಾರ ಅಧಿಕಾರ ಸ್ವೀಕರಿಸಿದ ನ್ಯಾಯಮೂರ್ತಿ ರಾಮಚಂದ್ರ ಡಿ. ಹುದ್ದಾರ (ಎಡದಿಂದ ಎರಡನೆಯವರು) ಹಾಗೂ ನ್ಯಾಯಮೂರ್ತಿ ಟಿ. ವೆಂಕಟೇಶ್ ನಾಯಕ್ (ಎಡದಿಂದ ಐದನೆಯವರು) ಅವರಿಗೆ ಬೆಂಗಳೂರು ವಕೀಲರ ಸಂಘದ ವತಿಯಿಂದ ಸ್ವಾಗತಿಸಿ ಸನ್ಮಾನಿಸಲಾಯಿತು. ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ.ವರಾಳೆ, ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಜಿ. ರವಿ ಹಾಗೂ ಸಂಘದ ಹೈಕೋರ್ಟ್ ಘಟಕದ ಉಪಾಧ್ಯಕ್ಷ ಟಿ.ಬಾಲಕೃಷ್ಣ ಇದ್ದಾರೆ. ಪ್ರಜಾವಾಣಿ ಚಿತ್ರ

ನ್ಯೂಯಾರ್ಕ್‌ನಲ್ಲಿ ಜಲ ಸಮ್ಮೇಳನದ ನಿರ್ಣಯ ಪ್ರದರ್ಶನ

ಧಾರವಾಡ: 'ಅಂತರರಾಷ್ಟ್ರೀಯ ಜಲ ನಿರ್ವಹಣೆ ಮತ್ತು ಹವಾಮಾನ ಬದಲಾವಣೆ ಕುರಿತ ಸಮ್ಮೇಳನದ ನಿರ್ಣಯಗಳನ್ನು ಮಾರ್ಚ್ 2 ರಂದು ನ್ಯೂಯಾರ್ಕ್‌ನಲ್ಲಿ ನಡೆಯಲಿರುವ ವಿಶ್ವ ಸಂಸ್ಥೆಯ ಜಲ ಸಮ್ಮೇಳನದಲ್ಲಿ ಪ್ರದರ್ಶಿಸಲು ನೂರಕ್ಕೂ ಹೆಚ್ಚು ಜನರು ಭಾರತದಿಂದ ತೆರಳಲು ನಿರ್ಧರಿಸಲಾಗಿದೆ' ಎಂದು ಜಲತಜ್ಞ ಡಾ. ರಾಜೇಂದ್ರ ಸಿಂಗ್ ಹೇಳಿದರು.

ನೀರು ಮತ್ತು ನೆಲ ನಿರ್ವಹಣಾ ಸಂಸ್ಥೆ(ವಾಲ್ಮಿ) ಯಲ್ಲಿ ಬುಧವಾರ ಜರುಗಿದ ಅಂತರರಾಷ್ಟ್ರೀಯ 'ಜಲ ನಿರ್ವಹಣೆ ಮತ್ತು ಹವಾಮಾನ ಬದಲಾವಣೆ' ಕುರಿತ ಸಮ್ಮೇಳನದಲ್ಲಿನ ಮಾಧ್ಯಮ ಸಂವಾದದಲ್ಲಿ ಅವರು ಮಾತನಾಡಿದರು.

'ಸಮುದಾಯ ಆಧಾರಿತ ನೀರು ನಿರ್ವಹಣೆ ಯೋಜನೆಯು ಜಗತ್ತಿನ ಇಂದಿನ, ಭವಿಷ್ಯದ ಅಗತ್ಯ' ಎಂದರು.

‘ರಾಜ್ಯಪಾಲರ ಔತಣಕೂಟಕ್ಕೆ ಬಹಿಷ್ಕಾರ’

ಪ್ರಜಾವಾಣಿ ವಾರ್ತೆ

ಚೆನ್ನೈ: ಗಣರಾಜ್ಯೋತ್ಸವದ ಅಂಗವಾಗಿ ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು ಗುರುವಾರ ಆಯೋಜಿಸಿರುವ ಔತಣಕೂಟವನ್ನು ಬಹಿಷ್ಕರಿಸುವುದಾಗಿ ಆಡಳಿತಾರೂಢ ಡಿಎಂಕೆಯ ಮಿತ್ರ ಪಕ್ಷಗಳಾದ ಕಾಂಗ್ರೆಸ್ ಮತ್ತು ವಿಡುದಲೈ ಚಿರುತೈಗಳ್ ಕಟ್ಚಿ (ವಿಸಿಕೆ) ಹೇಳಿವೆ. ಆದರೆ ಈ ಬಗ್ಗೆ ಡಿಎಂಕೆ ಸ್ಪಷ್ಟ ನಿಲುವು ಪ್ರಕಟಿಸಿಲ್ಲ.

ಔತಣಕೂಟದಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಸಿಪಿಐ ಕೂಡ ಹೇಳಿದೆ ಎಂದು ಮೂಲಗಳು ತಿಳಿಸಿವೆ.

ಡಿಎಂಕೆ ನಿಲುವನ್ನು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಗುರುವಾರ ಬೆಳಿಗ್ಗೆ ಪ್ರಕಟಿಸುವರು ಎಂದು ಮೂಲಗಳು ತಿಳಿಸಿವೆ.

ಡಿಎಂಕೆ ಮತ್ತು ಮಿತ್ರ ಪಕ್ಷಗಳು ಈಚೆಗೆ ಪೊಂಗಲ್ ಅಂಗವಾಗಿ ರಾಜಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಬಹಿಷ್ಕರಿಸಿದ್ದವು.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ: ಪುಟಿದೇಳುವ ತವಕದಲ್ಲಿ ಕುಸುಮಾ

ಮುನಿರತ್ನ ಓಟ ತಡೆಯಲು ‘ಕೈ’ ತಂತ್ರ

• ವಿಜಯಕುಮಾರ್ ಎಸ್.ಕೆ.

ಪ್ರಜಾ ಮತ ಜನತಂತ್ರದ ಹಬ್ಬ | ಕರ್ನಾಟಕ ವಿಧಾನಸಭಾ ಚುನಾವಣೆ - 2023

ಬೆಂಗಳೂರು: ಕಾಂಗ್ರೆಸ್ ತೆಕ್ಕೆಯಿಂದ ಬಿಜೆಪಿಗೆ ಹೊರಳಿರುವ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದಲ್ಲಿ ಈಗ ಪಕ್ಷಕ್ಕಿಂತ, ಶಾಸಕ ಮುನಿರತ್ನ ಹಿಡಿತ ಹೆಚ್ಚಿದೆ. ಉಪ ಚುನಾವಣೆಯಲ್ಲಿ ಸೆಣಸಿ ಸೋತಿರುವ ಕುಸುಮಾ ಹುಮಂತರಾಯಪ್ಪ (ದಿವಂಗತ ಡಿ.ಕೆ.ರವಿ ಪತ್ನಿ) ಈ ಬಾರಿ ಪುಟಿದೇಳುವ ತವಕದಲ್ಲಿದ್ದಾರೆ.

ಜಾಲಹಳ್ಳಿ ವಿಲೇಜ್, ಬಾಹುಬಲಿ ನಗರ, ಮತ್ತಿಕೆರೆ, ಜೆ.ಪಿ.ಪಾರ್ಕ್, ಯಶವಂತಪುರ, ಲಕ್ಷ್ಮಿದೇವಿನಗರ, ಪೀಣ್ಯ, ಲಗ್ಗೆರೆ, ಮಲ್ಲತ್ತಹಳ್ಳಿ, ಕೊಟ್ಟಿಗೆಪಾಳ್ಯ, ಕೆಂಗುಂಟೆ, ಜ್ಞಾನಭಾರತಿ, ರಾಜರಾಜೇಶ್ವರಿನಗರವನ್ನು ಒಳಗೊಂಡ ವಿಶಾಲವಾದ ಕ್ಷೇತ್ರ ಇದು. ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತೆ ಇರುವ ಬಡಾವಣೆಗಳೇ ಹೆಚ್ಚಿದ್ದು, ಕಾರ್ಮಿಕ ಸಮುದಾಯವೇ ಹೆಚ್ಚಿನ ಸಂಖ್ಯೆಯಲ್ಲಿ ಈ ಕ್ಷೇತ್ರದ ಮತದಾರರು. ಬೃಹತ್ ಸಂಖ್ಯೆಯಲ್ಲಿ ವಲಸಿಗರು ಇರುವ ರಾಜರಾಜೇಶ್ವರಿನಗರದಲ್ಲಿ, ಉಡುಗೊರೆ ರಾಜಕಾರಣ ಪ್ರತಿ ಬಾರಿಯೂ ಜೋರಾಗಿ ಸದ್ದು ಮಾಡುತ್ತದೆ.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಈ ಕ್ಷೇತ್ರದಲ್ಲಿ 2013ರಿಂದ ಈವರೆಗೆ ನಡೆದಿರುವ ಮೂರು ಚುನಾವಣೆಯಲ್ಲಿ ಮುನಿರತ್ನ ಸತತ ಗೆಲುವು ಸಾಧಿಸಿದ್ದಾರೆ. ಅದಕ್ಕೂ ಮುನ್ನ 2008ರಲ್ಲಿ ಬಿಜೆಪಿಯಿಂದ ಎಂ.ಶ್ರೀನಿವಾಸ್ ಗೆದ್ದಿದ್ದರು. 2013 ಮತ್ತು 2018ರಲ್ಲಿ ಕಾಂಗ್ರೆಸ್‌ನಿಂದ ಮುನಿರತ್ನ ಗೆದ್ದಿದ್ದರು. ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಉರುಳಿಸಲು 2019ರಲ್ಲಿ ಬಿಜೆಪಿ ನಡೆಸಿದ ‘ಆಪರೇಷನ್ ಕಮಲ’ದಲ್ಲಿ ರಾಜೀನಾಮೆ ನೀಡಿ ಬಿಜೆಪಿಗೆ ಜಿಗಿದರು.

ಹೈಕೋರ್ಟ್‌ನಲ್ಲಿ ತಡೆಯಾಜ್ಞೆ ಇದ್ದಿದ್ದರಿಂದ ಈ ಕ್ಷೇತ್ರದ ಉಪಚುನಾವಣೆ 2020ರ ನವೆಂಬರ್‌ನಲ್ಲಿ ನಡೆಯಿತು. ಕುಸುಮಾ ಅವರು ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದರು. ಜೆಡಿಎಸ್‌ನಿಂದ ವಿ.ಕೃಷ್ಣಮೂರ್ತಿ ಕೂಡ ಸ್ಪರ್ಧೆ ಮಾಡಿದ್ದರು. ಕುಸುಮಾ ಅವರು 67 ಸಾವಿರ ಮತಗಳನ್ನು ಪಡೆದರೆ, ಮುನಿರತ್ನ 1.25 ಲಕ್ಷ ಮತಗಳನ್ನು ಪಡೆದು ವಿಜೇತರಾಗಿದ್ದರು. ವಿ.ಕೃಷ್ಣಮೂರ್ತಿ ಅವರಿಗೆ 10 ಸಾವಿರ ಮತಗಳಷ್ಟೇ ದೊರೆತಿದ್ದವು. ಕೆಲ ದಿನಗಳ ಬಳಿಕ ಮುನಿರತ್ನ ಸಚಿವರೂ ಆದರು.

ಕ್ಷೇತ್ರ ಸ್ಥಿತಿ–ಗತಿ

ಮುಂದಿನ ಚುನಾವಣೆಯಲ್ಲಿ ಬಿಜೆಪಿಯಿಂದ ಮುನಿರತ್ನ ಅವರೇ ಸ್ಪರ್ಧೆ ಮಾಡುವ ಸಾಧ್ಯತೆ ಇದೆ. 2018ರ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ 82 ಸಾವಿರ ಮತಗಳನ್ನು ಪಡೆದಿದ್ದ ತುಳಸಿ ಮುನಿರಾಜುಗೌಡ ಇಲ್ಲಿ ಮತ್ತೆ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಇಲ್ಲಿ ಮುನಿರತ್ನ ಅವರಿಗೆ ಅವಕಾಶ ನೀಡಿದರೆ, ಬೇರೆ ಯಾವುದಾದರೂ ಕ್ಷೇತ್ರದಿಂದ ಸ್ಪರ್ಧೆಗೆ ಅವಕಾಶ ನೀಡುವಂತೆ ಮುನಿರಾಜುಗೌಡ ಬೇಡಿಕೆ ಇಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.

ಕಾಂಗ್ರೆಸ್‌ನಿಂದ ಟಿಕೆಟ್ ಬಯಸಿ ಕುಸುಮಾ ಅವರು ಮಾತ್ರ ಅರ್ಜಿ ಸಲ್ಲಿಸಿದ್ದಾರೆ. ಆದ್ದರಿಂದ, ಅವರಿಗೆ ಕಾಂಗ್ರೆಸ್ ಟಿಕೆಟ್ ದೊರೆಯುವುದು ಖಚಿತ ಎಂಬ ಮಾತು ಪಕ್ಷದಲ್ಲಿ ಕೇಳಿಬರುತ್ತಿದೆ. 2019ರ ಲೋಕಸಭೆ ಚುನಾವಣೆಯಲ್ಲಿ ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರವೂ ಸೇರಿರುವ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಮಾತ್ರ ಕಾಂಗ್ರೆಸ್ ಗೆಲುವಿನ ದಡ ಸೇರಿತ್ತು. ಒಕ್ಕಲಿಗ ಮತದಾರರೇ ಹೆಚ್ಚಿರುವ ಕ್ಷೇತ್ರದಲ್ಲಿ ಕುಸುಮಾ ಅವರನ್ನು ಕಣಕ್ಕಿಳಿಸಿ ಗೆಲುವಿನ ಪತಾಕೆ ಹಾರಿಸಲು ಸಂಸದ ಡಿ.ಕೆ.ಸುರೇಶ್ ಬೆಂಬಲವಾಗಿ ನಿಂತಿದ್ದಾರೆ. ಈ ಬಾರಿಯ ವಿಧಾನಸಭೆ ಚುನಾವಣೆಯನ್ನು ಅವರು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ ಎನ್ನಲಾಗಿದೆ.

ಇನ್ನು ಜೆಡಿಎಸ್‌ನಿಂದ 2020ರ ಉಪ ಚುನಾವಣೆಯಲ್ಲಿ ಅಭ್ಯರ್ಥಿಯಾಗಿದ್ದ ಕೃಷ್ಣಮೂರ್ತಿ, ಸ್ಥಳೀಯ ಮುಖಂಡ ಗಿರೀಶ್ ಗೌಡ ಸೇರಿ ಹಲವು ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಈ ಕ್ಷೇತ್ರದ ಅಭ್ಯರ್ಥಿಯನ್ನು ಜೆಡಿಎಸ್ ಇನ್ನೂ ಘೋಷಣೆ ಮಾಡಿಲ್ಲ.

ರಾಜರಾಜೇಶ್ವರಿನಗರ ಕ್ಷೇತ್ರ



ಮುನಿರತ್ನ
ಹಾಲಿ ಶಾಸಕ (ಬಿಜೆಪಿ)

ಹಾಲಿ ಮತದಾರರ ವಿವರ

2,39,863 ಪುರುಷರು
2,22,473 ಮಹಿಳೆಯರು
4,26,423 ಒಟ್ಟು
87 ತೃತೀಯ ಲಿಂಗಿಗಳು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಬಿಜೆಪಿ	82,573	50,726	60,184
ಕಾಂಗ್ರೆಸ್	1,08,065	71,064	40,595
ಜೆಡಿಎಸ್	60,360	52,251	36,782

2020ರ ಉಪಚುನಾವಣೆ

ಮುನಿರತ್ನ (ಬಿಜೆಪಿ)	1,25,990
ಕುಸುಮಾ (ಕಾಂಗ್ರೆಸ್)	67,877
ಕೃಷ್ಣಮೂರ್ತಿ ವಿ. (ಜೆಡಿಎಸ್)	10,269

ಸುದ್ದಿ 2 ನಿಮಿಷ

ಪ್ರಚಾರ ಗಿಟ್ಟಿಸಲು ಬಿಜೆಪಿ ವಿರುದ್ಧ ಕಾಂಗ್ರೆಸ್ ದೂರು– ಟೀಕೆ

ಬೆಂಗಳೂರು: ಚುನಾವಣೆ ಸಮೀಪಿಸಿರುವ ಈ ಸಮಯದಲ್ಲಿ ಪ್ರಚಾರ ಗಿಟ್ಟಿಸಿಕೊಳ್ಳುವುದಕ್ಕಾಗಿ ಕಾಂಗ್ರೆಸ್‌ನವರು ಬಿಜೆಪಿ ನಾಯಕರ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದಾರೆ ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಛಲವಾದಿ ನಾರಾಯಣಸ್ವಾಮಿ ಟೀಕಿಸಿದರು.

ಮತದಾರರ ಖರೀದಿಗೆ ಸಂಚು ನಡೆಸಿರುವ ಆರೋಪದ ಮೇಲೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ವಿರುದ್ಧ ಕಾಂಗ್ರೆಸ್ ನಿಯೋಗವು ಪೊಲೀಸರಿಗೆ ದೂರು ನೀಡಿರುವ ಕುರಿತು ಸುದ್ದಿಗಾರರಿಗೆ ಬುಧವಾರ ಪ್ರತಿಕ್ರಿಯಿಸಿದ ಅವರು, ‘ಇವರಿಗೆ ಕಾನೂನಿನ ಅರಿವಿದೆಯೆ? ಯಾವ ಆಧಾರದಲ್ಲಿ ದೂರು ನೀಡಿದ್ದಾರೆ? ಸಿದ್ದರಾಮಯ್ಯ ಕುಕ್ಕರ್ ಹಂಚುತ್ತಿರುವುದು, ಡಿ.ಕೆ. ಶಿವಕುಮಾರ್ ಮಿಕ್ಸಿ ಹಂಚುತ್ತಿರುವುದರ ಹಿಂದೆ ಯಾರಿದ್ದಾರೆ’ ಎಂದು ಪ್ರಶ್ನಿಸಿದರು.

‘ಸಿದ್ದರಾಮಯ್ಯ ದೊಡ್ಡ ಕುತಂತ್ರಿ. ಮಲ್ಲಿಕಾರ್ಜುನ ಖರ್ಗೆಯವರನ್ನು ಸೋಲಿಸುವುದಕ್ಕಾಗಿ ಹಿಂದೆ ಉಮೇಶ್ ಜಾಧವ್ ಅವರ ರಾಜೀನಾಮೆಯನ್ನು ಅಂಗೀಕರಿಸಿದ್ದರು. 17 ಜನರನ್ನು ಬಿಜೆಪಿ ಕಳುಹಿಸಿ ಸಮ್ಮಿಶ್ರ ಸರ್ಕಾರ ಉರುಳಿಸಿದ್ದರ ಹಿಂದೆ ಇದ್ದವರೇ ಅವರು’ ಎಂದರು.

ರಾಜ್ಯದಲ್ಲಿ ನಿರುದ್ಯೋಗ ಹೆಚ್ಚಳ: ಶಾಸಕ ಕೃಷ್ಣಬೈರೇಗೌಡ

ಯಲಹಂಕ: ‘ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ಬಡಜನರ ಜನಜೀವನ ದುಸ್ತರವಾಗಿದೆ. ಕಾಂಗ್ರೆಸ್ ಸರ್ಕಾರವನ್ನು ಮತ್ತೆ ಅಧಿಕಾರಕ್ಕೆ ತರುವುದೊಂದೇ ಇದಕ್ಕೆ ಪರಿಹಾರವಾಗಿದೆ’ ಎಂದು ಶಾಸಕ ಕೃಷ್ಣಬೈರೇಗೌಡ ಹೇಳಿದರು.

ಬ್ಯಾಟರಾಯನಪುರ ಕ್ಷೇತ್ರದ ದೊಡ್ಡಜಾಲದಲ್ಲಿ ಆಯೋಜಿಸಿದ್ದ ಜಾಲಾ ಬ್ಲಾಕ್ ಕಾಂಗ್ರೆಸ್ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ’ರಾಜ್ಯದಲ್ಲಿ ನಿರುದ್ಯೋಗ, ಬೆಲೆ ಏರಿಕೆ ಸೇರಿದಂತೆ ಜ್ವಲಂತ ಸಮಸ್ಯೆಗಳು ಜನರನ್ನು ತೀವ್ರವಾಗಿ ಕಾಡುತ್ತಿವೆ’ ಎಂದರು.

‘ಶೇ40ರಷ್ಟು ಭ್ರಷ್ಟಾಚಾರದಲ್ಲಿ ತೊಡಗಿರುವ ಬಿಜೆಪಿ ಸರ್ಕಾರ, ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ ಗಮನಹರಿಸದೆ ಚುನಾವಣೆ ಸಿದ್ಧತೆಯಲ್ಲಿ ತೊಡಗಿದೆ. ಇದರಿಂದ, ಜನರ ಸಂಕಷ್ಟ ಎದುರಿಸುತ್ತಿದ್ದಾರೆ’ ಎಂದು ದೂರಿದರು.

ಜಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಕೆ.ಮಹೇಶ್ ಕುಮಾರ್ ಮಾತನಾಡಿ, ‘ಬೂತ್ ಮಟ್ಟದಲ್ಲಿ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಸಮಿತಿಗಳನ್ನು ರಚಿಸಲಾಗಿದೆ’ ಎಂದರು.

ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ರಾಜಕುಮಾರ್, ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲಗೌಡ, ಎನ್.ಎನ್. ಶ್ರೀನಿವಾಸಯ್ಯ, ದಾನೇಗೌಡ, ಬಿ.ಕೆ.ಮಂಜುನಾಥಗೌಡ, ಕೆ.ಅಶೋಕನ್, ಎಂ.ಹನುಮಂತೇಗೌಡ, ಶುಕೂರ್ ಅಹಮದ್, ಬಿ.ಕೆ.ನಾರಾಯಣಸ್ವಾಮಿ, ಕೋಗಿಲು ವೆಂಕಟೇಶ್ ಇದ್ದರು.

ಪ್ರಚಾರದ ವೈಖರಿ

ರಾಜರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರದ ಶಾಸಕ ಮುನಿರತ್ನ ಅವರು ಚರಂಡಿಯ ಮುಚ್ಚಳದ ಮೇಲೂ ತಮ್ಮ ಹೆಸರನ್ನು ಕೆತ್ತಿಸಿಕೊಂಡು ಪ್ರಚಾರದ ತುತ್ತತುದಿಯಲ್ಲಿದ್ದಾರೆ ಎಂದು ಮುತ್ಯಾಲನಗರದ ಪಾಮರ ಚಡಗ ಎಂಬುವವರು ಚಿತ್ರ ಕಳುಹಿಸಿದ್ದಾರೆ

‘ಚುನಾವಣೆಗೆ ಪ್ರತಿ ಮತ ನಿರ್ಣಾಯಕ’

ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮದಲ್ಲಿ ಗೆಹಲೋತ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಒಂದು ಮತದಿಂದ ಏನೂ ಆಗದು ಎಂಬ ಉದಾಸೀನ ಮನೋಭಾವ ತೊರೆಯಬೇಕು. ಒಂದು ಮತಕ್ಕೆ ದೇಶದ ಚಿತ್ರಣವನ್ನೇ ಬದಲಿಸುವ ಶಕ್ತಿ ಇರುತ್ತದೆ ಎನ್ನುವ ಸತ್ಯ ಅರಿತು ಮತದಾನದಲ್ಲಿ ಭಾಗವಹಿಸಬೇಕು’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ಭಾರತ ಚುನಾವಣಾ ಆಯೋಗ ಬುಧವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಹಲವು ಬಾರಿ ಸೋಲು, ಗೆಲುವಿನ ನಿರ್ಧಾರ ಒಂದು ಮತವನ್ನು ಅವಲಂಬಿಸಿರುತ್ತದೆ. ಚುನಾವಣೆ ಅರ್ಥಪೂರ್ಣಗೊಳಿಸಲು ಪ್ರತಿಯೊಂದು ಮತವೂ ನಿರ್ಣಾಯಕವಾಗಿರುತ್ತದೆ. ಎಚ್ಚರಿಕೆಯ ಹಾಗೂ ಜಾಗೃತ ಮತದಾರರು ಚುನಾವಣೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಮತದಾನ ಹಕ್ಕಲ್ಲ, ಕರ್ತವ್ಯ ಎಂದು ತಿಳಿದಾಗ ಪ್ರಜಾಪ್ರಭುತ್ವ ಮತ್ತಷ್ಟು ಗಟ್ಟಿಗೊಳ್ಳುತ್ತದೆ. ಸರ್ಕಾರವೂ ಜನರ ಆಶಯ, ಆಶೋತ್ತರಗಳಿಗೆ ಅನುಗುಣವಾಗಿ ಸರ್ಕಾರ ಕಾರ್ಯನಿರ್ವಹಿಸುತ್ತದೆ. ಭಾರತದಲ್ಲಿ 18 ವರ್ಷ ಮೇಲ್ಪಟ್ಟವರಿಗೆ ಮತದಾನದ ಹಕ್ಕು ನೀಡಲಾಗಿದ್ದರೂ, 18ರಿಂದ 24 ವರ್ಷದ ಒಳಗಿನವರು ಮತದಾನದಲ್ಲಿ ಹೆಚ್ಚು ಆಸಕ್ತಿ ವಹಿಸದೇ ಇರುವುದು ಬೇಸರದ ಸಂಗತಿ. ಚುನಾವಣಾ ಆಯೋಗ ಅರ್ಹ ಮತದಾರರ ಹೆಸರುಗಳು ಬಿಟ್ಟು ಹೋಗದಂತೆ ಜವಾಬ್ದಾರಿಯಿಂದ ಕೆಲಸ ಮಾಡುತ್ತಿದೆ’ ಎಂದರು.

ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮದಲ್ಲಿ ಮತದಾರರು ಪ್ರತಿಜ್ಞಾ ವಿಧಿ ಸ್ವೀಕರಿಸಿದರು

‘ಸ್ವತಂತ್ರ, ನ್ಯಾಯೋಚಿತ ಹಾಗೂ ಬಲಿಷ್ಠ ಚುನಾವಣಾ ಆಯೋಗವನ್ನು ಜ.25, 1950ರಂದು ಸ್ಥಾಪಿಸಲಾಯಿತು. ಭಾರತದ ಸಂವಿಧಾನ ಮತದಾರರಿಗೆ ಮಹತ್ತರವಾದ ಜವಾಬ್ದಾರಿ ನೀಡಿದೆ. ಅದಕ್ಕಾಗಿ ಭಾರತೀಯರು ಸಂವಿಧಾನ ರಚನಾಕಾರರಿಗೆ ಕೃತಜ್ಞತೆ ಸಲ್ಲಿಸಬೇಕು’ ಎಂದು ಹೇಳಿದರು.

ಚುನಾವಣೆ ನಿರ್ವಹಣೆ, ಸುಗಮ ಚುನಾವಣೆ, ಮತದಾರರ ಪಟ್ಟಿ ಪರಿಷ್ಕರಣೆ, ಮತದಾರರಿಗೆ ಅರಿವು ಮೂಡಿಸುವ ವಿಷಯಗಳಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಅಧಿಕಾರಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು.

ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಉಪಸ್ಥಿತರಿದ್ದರು.

ಸಶಸ್ತ್ರ ಪಡೆ ಸಿಬ್ಬಂದಿಗೆ 412 ಶೌರ್ಯ ಪ್ರಶಸ್ತಿ ಘೋಷಣೆ

ನವದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 74ನೇ ಗಣರಾಜ್ಯೋತ್ಸವದ ಮುನ್ನಾದಿನ ಬುಧವಾರದಂದು ಸಶಸ್ತ್ರಪಡೆಯ ಸಿಬ್ಬಂದಿಗೆ 6 ಕೀರ್ತಿ ಚಕ್ರಗಳು ಮತ್ತು 15 ಶೌರ್ಯ ಚಕ್ರಗಳು ಸೇರಿದಂತೆ ಒಟ್ಟು 412 ಶೌರ್ಯ ಪ್ರಶಸ್ತಿಗಳನ್ನು ಅನುಮೋದಿಸಿದ್ದಾರೆ.

ಆರು ಕೀರ್ತಿ ಚಕ್ರಗಳಲ್ಲಿ ನಾಲ್ಕು ಕೀರ್ತಿ ಚಕ್ರಗಳನ್ನು ಮರಣೋತ್ತರವಾಗಿ ಹಾಗೂ ಎರಡು ಶೌರ್ಯ ಚಕ್ರಗಳನ್ನು ಮರಣೋತ್ತರವಾಗಿ ನೀಡಲಾಗಿದೆ.

ರಾಷ್ಟ್ರೀಯ ರೈಫಲ್ಸ್‌ನ 62 ಬೆಟಾಲಿಯನ್‌ನ ಡೋಗ್ರಾ ರೆಜಿಮೆಂಟ್‌ನ ಮೇಜರ್ ಶುಭಾಂಗ್ ಮತ್ತು ರಾಷ್ಟ್ರೀಯ ರೈಫಲ್ಸ್‌ನ 44 ಬೆಟಾಲಿಯನ್‌ನ ರಜಪೂತ್ ರೆಜಿಮೆಂಟ್‌ನ ನಾಯಕ್ ಜಿತೇಂದ್ರ ಸಿಂಗ್ ಕೀರ್ತಿ ಚಕ್ರ ಪ್ರಶಸ್ತಿ ವಿಜೇತರು.

ಜಮ್ಮು ಮತ್ತು ಕಾಶ್ಮೀರ ಪೊಲೀಸ್‌ನ ರೋಹಿತ್ ಕುಮಾರ್, ಸಬ್ ಇನ್‌ಸ್ಪೆಕ್ಟರ್ ದೀಪಕ್ ಭಾರದ್ವಾಜ್ ಮತ್ತು ಹೆಡ್ ಕಾನ್‌ಸ್ಟೆಬಲ್‌ಗಳಾದ ಸೋಧಿ ನಾರಾಯಣ್ ಮತ್ತು ಶ್ರವಣ್ ಕಶ್ಯಪ್ ಅವರಿಗೆ ಮರಣೋತ್ತರವಾಗಿ ಕೀರ್ತಿ ಚಕ್ರಗಳನ್ನು ನೀಡಲಾಗಿದೆ.

ಶೌರ್ಯ ಚಕ್ರ ಪ್ರಶಸ್ತಿ: ರಾಷ್ಟ್ರೀಯ ರೈಫಲ್ಸ್‌ನ 50ನೇ ಬೆಟಾಲಿಯನ್‌ನ ಕುಮಾನ್ ರೆಜಿಮೆಂಟ್‌ನ ಮೇಜರ್ ಆದಿತ್ಯ ಭದೌರಿಯಾ, ರಾಷ್ಟ್ರೀಯ ರೈಫಲ್ಸ್‌ನ 13ನೇ ಬೆಟಾಲಿಯನ್‌ನ ಕುಮಾನ್ ರೆಜಿಮೆಂಟ್‌ನ ಕ್ಯಾಪ್ಟನ್ ಅರುಣ್ ಕುಮಾರ್, ರಾಷ್ಟ್ರೀಯ ರೈಫಲ್ಸ್‌ನ 9ನೇ ಬೆಟಾಲಿಯನ್‌ನ ಮೆಕ್ಯಾನೈಸ್ಡ್ ಇನ್‌ಫ್ಯಾಂಟ್ರಿಯ ಕ್ಯಾಪ್ಟನ್ ಯುದ್ವೀರ್ ಸಿಂಗ್, ಪ್ಯಾರಾಚೂಟ್ ರೆಜಿಮೆಂಟ್ (ವಿಶೇಷ ಪಡೆಗಳು) ಒಂಬತ್ತನೇ ಬೆಟಾಲಿಯನ್ ಕ್ಯಾಪ್ಟನ್ ರಾಕೇಶ್ ಟಿ.ಆರ್. ಅವರಿಗೆ ಶೌರ್ಯ ಚಕ್ರ ಪ್ರಶಸ್ತಿ ನೀಡಲಾಗಿದೆ.

ಜಮ್ಮು ಮತ್ತು ಕಾಶ್ಮೀರ ರೈಫಲ್ಸ್‌ನ 6ನೇ ಬೆಟಾಲಿಯನ್‌ನ ನಾಯಕ್ ಜಸ್ಬೀರ್ ಸಿಂಗ್ ಮತ್ತು ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ಕಾನ್‌ಸ್ಟೆಬಲ್ ಮುದಾಸಿರ್ ಅಹ್ಮದ್ ಶೇಖ್ ಅವರಿಗೆ ಮರಣೋತ್ತರವಾಗಿ ಶೌರ್ಯಚಕ್ರ ನೀಡಲಾಗಿದೆ ಎಂದು ರಕ್ಷಣಾ ಸಚಿವಾಲಯವು ತಿಳಿಸಿದೆ.

ಎಸ್.ಎಂ.ಕೃಷ್ಣಗೆ ಪದ್ಮವಿಭೂಷಣ, ಭೈರಪ್ಪಗೆ ಪದ್ಮಭೂಷಣ

ಒಂದನೇ ಪುಟದಿಂದ...

ಬೀದರ್‌ನ ಹಿರಿಯ ಕಲಾವಿದ ಷಾ ರಶೀದ್ ಅಹ್ಮದ್ ಖಾದ್ರಿ,, ಪುರಾತತ್ವ ಶಾಸ್ತ್ರಜ್ಞ ಎಸ್. ಸುಬ್ಬರಾಮನ್ ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆಯಾದ ಕರ್ನಾಟಕದ ಸಾಧಕರು.

ಒಕ್ಕಲಿಗ ಸಮುದಾಯದ ಪ್ರಭಾವಿ ನಾಯಕರಾದ ಎಸ್.ಎಂ.ಕೃಷ್ಣ ಅವರು ಕೆಲವು ವರ್ಷಗಳ ಹಿಂದೆ ಬಿಜೆಪಿಗೆ ಸೇರ್ಪಡೆಯಾಗಿದ್ದರು. ಇತ್ತೀಚೆಗೆ ಸಕ್ರಿಯ ರಾಜಕಾರಣದಿಂದ ನಿವೃತ್ತರಾಗಿದ್ದರು. ಅವರನ್ನು ದೇಶದ ದೇಶದ ಎರಡನೇ ಅತ್ಯುನ್ನತ ಪ್ರಶಸ್ತಿಯಾದ ಪದ್ಮವಿಭೂಷಣ ಕ್ಕೆ ಆಯ್ಕೆ ಮಾಡಲಾಗಿದೆ. ಏಪ್ರಿಲ್–ಮೇ ತಿಂಗಳಲ್ಲಿ ನಡೆಯಲಿರುವ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಒಕ್ಕಲಿಗ ಸಮುದಾಯದ ಮತಗಳನ್ನು ಸೆಳೆಯುವ ಉದ್ದೇಶದಿಂದ ಎಸ್.ಎಂ. ಕೃಷ್ಣ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ಆರಂಭವಾಗಿದೆ.

ಪದ್ಮವಿಭೂಷಣಕ್ಕೆ ಆರು ಮಂದಿ, ಪದ್ಮಭೂಷಣಕ್ಕೆ 9 ಸಾಧಕರು, ಪದ್ಮಶ್ರೀಗೆ 91 ಸಾಧಕರನ್ನು ಆಯ್ಕೆ ಮಾಡಲಾಗಿದೆ. ಇದರಲ್ಲಿ 19 ಮಹಿಳೆಯರು ಸೇರಿದ್ದಾರೆ. ಒಟ್ಟು ಏಳು ಜನರಿಗೆ ಮರಣೋತ್ತರವಾಗಿ ಪದ್ಮ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ. ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ರಾಷ್ಟ್ರಪತಿ ಭವನದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಈ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಕೇಂದ್ರ ಗೃಹ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಪದ್ಮವಿಭೂಷಣ ಪ್ರಶಸ್ತಿ: ಉದ್ಯಮಿ ಕುಮಾರ ಮಂಗಲಂ ಬಿರ್ಲಾ, ಮಂಗಳವಾರ ನಿಧನರಾದ ಗುಜರಾತ್‌ನ ವಾಸ್ತುಶಾಸ್ತ್ರಜ್ಞ ಬಾಲಕೃಷ್ಣ ದೋಶಿ, ಮಹಾರಾಷ್ಟ್ರದ ಕಲಾವಿದ ಜಾಕೀರ್ ಹುಸೇನ್, ಪಶ್ಚಿಮ ಬಂಗಾಳದ ವೈದ್ಯ (ಮರಣೋತ್ತರ) ದಿಲೀಪ್ ಮಹಲನಬೀಸ್, ಅಮೆರಿಕದಲ್ಲಿ ನೆಲೆಸಿರುವ ಶ್ರೀನಿವಾಸ ವರದಾನ್ (ವಿಜ್ಞಾನ ಮತ್ತು ತಂತ್ರಜ್ಞಾನ), ನಟಿ ರವೀನಾ ರವಿ ಟಂಡನ್ (ಕಲೆ), ಸಮಾಜವಾದಿ ಪಕ್ಷದ ಸಂಸ್ಥಾಪಕ ಮುಲಾಯಂ ಸಿಂಗ್ ಯಾದವ್ (ಮರಣೋತ್ತರ).

ಪದ್ಮಭೂಷಣ: ದೀಪಕ್ ಧಾರ್ (ವಿಜ್ಞಾನ ಮತ್ತು ತಂತ್ರಜ್ಞಾನ), ವಾಣಿ ಜಯರಾಮ್ (ಕಲೆ), ಸ್ವಾಮಿ ಚಿನ್ನ ಜೀಯರ್ (ಆಧ್ಯಾತ್ಮಿಕ), ಸುಮನ್ ಕಲ್ಯಾಣ್‌ಪುರ್ (ಕಲೆ), ಕಪಿಲ್ ಕಪೂರ್ (ಸಾಹಿತ್ಯ), ಕಮಲೇಶ್ ಡಿ. ಪಟೇಲ್ (ಆಧ್ಯಾತ್ಮ).

ಪದ್ಮಶ್ರೀ: ಅಂಡಮಾನ್ ಮತ್ತು ನಿಕೋಬಾರ್‌ನ ನಿವೃತ್ತ ವೈದ್ಯ ರತನ್ ಚಂದ್ರ ಕರ್, ಗುಜರಾತ್‌ನ ಸಿದ್ದಿ ಬುಡಕಟ್ಟು ಸಮುದಾಯದ ಏಳಿಗೆಗೆ ಶ್ರಮಿಸಿದ ಸಾಮಾಜಿಕ ಕಾರ್ಯಕರ್ತೆ ಹೀರಾಬಾಯಿ ಲೋಬಿ, ಮಧ್ಯಪ್ರದೇಶದ ವೈದ್ಯ ಮುನೀಶ್ವರ ಚಂದರ್ ದಾವರ್, ಅಸ್ಸಾಂನ ಸಾಮಾಜಿಕ ಕಾರ್ಯಕರ್ತ ರಾಮ್‌ಕ್ವಿಂಬಾವೆ ನೆಮ್ಮೆ, ಕೇರಳದ ಸಾಮಾಜಿಕ ಕಾರ್ಯಕರ್ತ ಹಾಗೂ ಸ್ವಾತಂತ್ರ್ಯ ಹೋರಾಟಗಾರ ವಿ.ಪಿ. ಅಪ್ಪುಕುಟ್ಟನ್ ಪೊಡುವಾಳ್, ಆಂಧ್ರ ಪ್ರದೇಶದ ಸಾಮಾಜಿಕ ಕಾರ್ಯಕರ್ತ ಸಂಕುರತ್ರಿ ಚಂದ್ರಶೇಖರ್, ಪ್ರಾಣಿಗಳ ಕಲ್ಯಾಣಕ್ಕಾಗಿ ಶ್ರಮಿಸಿದ ತಮಿಳುನಾಡಿನ ವಡಿವೇಲ್ ಗೋಪಾಲ್ ಮತ್ತು ಮಾಸಿ ಸಡೈಯನ್, ಸಿಕ್ಕಿಂನ ಸಾವಯವ ಕೃಷಿಕ ತೂಲಾ ರಾಮ್ ಉಪ್ರೇತಿ, ಹಿಮಾಚಲ ಪ್ರದೇಶದ ಸಾವಯವ ಕೃಷಿಕ ನೆಕ್ರಂ ಶರ್ಮ, ಜಾರ್ಖಂಡ್‌ನ ಲೇಖಕ ಜಾನುಂ ಸಿಂಗ್ ಸೋಯ್, ಪಶ್ಚಿಮ ಬಂಗಾಳದ ಧಾನಿರಾಮ್ ಟೊಟೊ, ತೆಲಂಗಾಣದ 80ರ ಹರೆಯದ ಭಾಷಾ ವಿದ್ವಾಂಸ ಬಿ.ರಾಮಕೃಷ್ಣ ರೆಡ್ಡಿ, ಛತ್ತೀಸಗಡದ ಅಜಯ್ ಕುಮಾರ್ ಮಾಂಡವಿ, ಮಿಜೊರಾಂನ ಕಲಾವಿದೆ ಕೆ.ಸಿ.ರುನ್‌ರೆಮ್ ಸಂಗಿ, ಪಶ್ಚಿಮ ಬಂಗಾಳದ ಕಲಾವಿದ ಮಂಗಲ ಕಾಂತಿ ರಾಯ್, ಛತ್ತೀಸಗಡದ ನೃತ್ಯಪಟು ದೋಮರ್ ಸಿಂಗ್ ಕುನ್ವಾರ್, ಮಹಾರಾಷ್ಟ್ರದ ರಂಗ ಕಲಾವಿದ ಪರಶುರಾಮ್ ಕೊಮಾಜಿ ಖೂನೆ, ಜಮ್ಮು ಮತ್ತು ಕಾಶ್ಮೀರದ ಸಂತೂರ್ ಕಲಾವಿದ ಗುಲಾಂ ಮಹಮ್ಮದ್ ಜಾಜ್, ಗುಜರಾತ್‌ನ ಕಲಾವಿದ ಭಾನುಬಾಯ್ ಚಿತಾರ, ಗುಜರಾತ್‌ನ ಕಲಾವಿದ ಪರೇಶ್ ರಾಥ್ವಾ, ಬಿಹಾರದ ಕಪಿಲ್ ದೇವ್ ಪ್ರಸಾದ್ ಅವರು ಸೇರಿದಂತೆ 91 ಸಾಧಕರು ಪದ್ಮ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ನಗರದಲ್ಲಿ ಇಂದು

ಭಾರತ ದರ್ಶನ ಸತ್ಸಂಗದ ಉದ್ಘಾಟನೆ: ನಿತ್ಯಸ್ಥಾನಂದ ಸ್ವಾಮೀಜಿ, ಅತಿಥಿಗಳು: ಮತ್ತೂರು ಕೇಶವ ಅವಧಾನಿಗಳ, ಆಯೋಜನೆ: ಭಾರತ ದರ್ಶನ, ಸ್ಥಳ: ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ, ಬಸವನಗುಡಿ, ಬೆಳಿಗ್ಗೆ 8

ಸಂಕ್ರಾಂತಿ ಸಮ್ಮಿಲನ: ಆಯೋಜನೆ ಮತ್ತು ಸ್ಥಳ: ಉತ್ತರ ಕರ್ನಾಟಕ ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ನಿವೇಶನ, ಮಾಗಡಿ ರಸ್ತೆ, ಗೊಲ್ಲರಹಟ್ಟಿ, ಬೆಳಿಗ್ಗೆ 9.30ರಿಂದ

ರಂಗಸ್ವಾಮಿ ಮೂಕನಹಳ್ಳಿ ಅವರ ‘ಷೇರು ಮಾರುಕಟ್ಟೆ’ ಪುಸ್ತಕ ಬಿಡುಗಡೆ: ಹರಿಪ್ರಕಾಶ್ ಕೋಣೆಮನೆ, ಎನ್. ರವಿಶಂಕರ್, ಸಂವಾದ ಹಾಗೂ ಪ್ರಶ್ನೋತ್ತರ: ನವೀನ್ ಕಟ್ಟಿ, ರಾಜೇಶ್ ಸತ್ರಸಾಲ, ರಂಗಸ್ವಾಮಿ ಮೂಕನಹಳ್ಳಿ, ಆಯೋಜನೆ: ಸಾವಣ್ಣ ಪ್ರಕಾಶನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ಸಭಾಂಗಣ, ಬಸವನಗುಡಿ, ಬೆಳಿಗ್ಗೆ 10

ಆರ್.ಪಿ.ಐ(ಬಿ) ಪಕ್ಷದ ಚಿಹ್ನೆ ಬಿಡುಗಡೆ ಸಮಾರಂಭ: ಆಯೋಜನೆ: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ(ಬಿ), ಸ್ಥಳ: ಲಿಡ್ಕರ್ ಭವನ, ವಸಂತನಗರ, ಬೆಳಿಗ್ಗೆ 11

ಮೀಟ್ ಯುವರ್ ಮಿನಿಸ್ಟರ್: ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ರೋಸ್ ವರ್ಗೀಸ್, ಬಿ.ಎಸ್. ರಾಮಪ್ರಸಾದ್, ಉಮಾಮಹೇಶ್ ಸತ್ಯನಾರಾಯಣ್, ಜಿ. ರಾಮಚಂದ್ರ, ಆಯೋಜನೆ ಮತ್ತು ಸ್ಥಳ: ಎಂ.ಎಸ್. ರಾಮಯ್ಯ ಕಾನೂನು ಮಹಾವಿದ್ಯಾಲಯದ ಆವರಣ, ಎಂ.ಎಸ್. ರಾಮಯ್ಯನಗರ, ಬೆಳಿಗ್ಗೆ 11

ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ: ಸಾನ್ನಿಧ್ಯ: ಚಂದ್ರಶೇಖರ ಸ್ವಾಮೀಜಿ, ಅಧ್ಯಕ್ಷತೆ: ಆರ್. ಅಶೋಕ್, ಅತಿಥಿಗಳು: ಶಶಿಕಲಾ ಜೊಲ್ಲೆ, ತೇಜಸ್ವಿಸೂರ್ಯ, ರಾಮಲಿಂಗಾ ರೆಡ್ಡಿ, ಆಯೋಜನೆ: ಬನಶಂಕರಿ ಸಾಮೂಹಿಕ ವಿವಾಹ ವೇದಿಕೆ, ಸ್ಥಳ: ಬನಶಂಕರಿ ದೇವಸ್ಥಾನದ ಆವರಣ, ಕನಕಪುರ ಮುಖ್ಯರಸ್ತೆ, ಬೆಳಿಗ್ಗೆ 11

‘ಧರ್ಮ ವಿಜಯ’ ನಾಟಕ ಪ್ರದರ್ಶನ: ಉದ್ಘಾಟನೆ: ಕೆ. ನಾಗೇಂದ್ರ ಪ್ರಸಾದ್, ಅಧ್ಯಕ್ಷತೆ: ಲಾವಣ್ಯ, ಅತಿಥಿಗಳು: ಜಗದೀಶ್, ಕುಸುಮಾ ಜಿ., ಪ್ರವೀಣ್, ಆಯೋಜನೆ: ವಿನಾಯಕ ಕಲಾ ಬಳಗ ಟ್ರಸ್ಟ್, ಸ್ಥಳ: ಜಿಂಕೆ ನರ್ಸರಿ ಆವರಣ, ಲಾಲ್‌ಬಾಗ್, ಬೆಳಿಗ್ಗೆ 11.30

‘ಅಂಟೋಣಿ ರಾಜ್’ ಅವರಿಗೆ ಸಂಗೀತ ನಮನ: ಆಯೋಜನೆ: ಸೃಜನ ಲಲಿತ ಕಲಾ ವೇದಿಕೆ, ಸ್ಥಳ: ಗುರು ವೇದಿಕೆ, ಬಸವನಗುಡಿ, ರಾಮಕೃಷ್ಣ ಮಠದ ಹತ್ತಿರ, ಮಧ್ಯಾಹ್ನ 3

ಮಹಾಕವಿ ರತ್ನಾಕರವರ್ಣಿ ಪ್ರಶಸ್ತಿ ಪ್ರದಾನ: ಚಂದ್ರಶೇಖರ ಕಂಬಾರ, ಪ್ರಶಸ್ತಿ ಪುರಸ್ಕೃತರು: ವೀಣಾ ಬಿ. ಆರ್. ಶೆಟ್ಟಿ, ಆಯೋಜನೆ: ದಕ್ಷಿಣ ಕನ್ನಡ ಜೈನ ಮೈತ್ರಿಕೂಟ, ಸ್ಥಳ: ಧರ್ಮಸ್ಥಳ ಮಂಜುನಾಥ ಸ್ವಾಮಿ ಕಲ್ಯಾಣ ಮಂಟಪ, ಬಸವನಗುಡಿ, ಮಧ್ಯಾಹ್ನ 3.30

ಸಂಗೀತ, ನೃತ್ಯೋತ್ಸವ ಮತ್ತು ‘ಪುರಂದರ’ ಪ್ರಶಸ್ತಿ ಪ್ರದಾನ ಸಮಾರಂಭದ ಉದ್ಘಾಟನೆ: ಆರ್. ಬಾಲಸುಬ್ರಮಣಿಯಂ, ಅಧ್ಯಕ್ಷತೆ: ಎಸ್.ಎನ್.ಎಸ್. ಮೂರ್ತಿ, ಬಿ.ಎನ್. ಗೋವಿಂದಪ್ರಸಾದ್, ಆಯೋಜನೆ ಮತ್ತು ಸ್ಥಳ: ಇಂದಿರಾನಗರ ಸಂಗೀತ ಸಭಾ, ಪುರಂದರ ಭವನ, ಇಂದಿರಾನಗರ 2ನೇ ಹಂತ, ಸಂಜೆ 4

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ: ಅತಿಥಿಗಳು: ಟಿ.ಎಲ್. ಸುಜಾತ ರಾಥೋಡ್, ರವಿಕುಮಾರ್, ‘ಮಧುಕರ ಶೆಟ್ಟಿ’ ಸ್ಮಾರಕ ಪ್ರಶಸ್ತಿ ಪುರಸ್ಕೃತರು: ಸುಧೀರ್ ಎಸ್. ಶೆಟ್ಟಿ, ಅಧ್ಯಕ್ಷತೆ: ಎಂ. ಮುರಲೀಧರ ಹೆಗ್ಡೆ, ಆಯೋಜನೆ: ಬಂಟರ ಸಂಘ, ಸ್ಥಳ: ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನ, ಬಂಟರ ಸಂಘ, ವಿಜಯನಗರ, ಸಂಜೆ 4 ರಿಂದ

500 ಆಟೊ ಟ್ಯಾಕ್ಸಿ ಚಾಲಕರಿಗೆ ₹10ಲಕ್ಷದ ವಿಮಾ ಬಾಂಡ್, ಸಮವಸ್ತ್ರ ವಿತರಣೆ: ಸಾನ್ನಿಧ್ಯ: ಮಾದಾರ ಚೆನ್ನಯ್ಯ ಸ್ವಾಮೀಜಿ, ಉದ್ಘಾಟನೆ: ಡಿ.ವಿ. ಸದಾನಂದಗೌಡ, ಅತಿಥಿ: ಎಂ.ಇ.ಐ ಆಟದ ಮೈದಾನ, ಬಾಗಲಗುಂಟೆ, ದಾಸರಹಳ್ಳಿ, ಸಂಜೆ 4

ಮೂಡ್ನಾಕೂಡು ಚಿನ್ನಸ್ವಾಮಿ ಅವರಿಗೆ ಸನ್ಮಾನ ಕಾರ್ಯಕ್ರಮ: ಉದ್ಘಾಟನೆ: ರವೀಂದ್ರ ಭಟ್ಟ, ಸನ್ಮಾನಿತರು: ಮೂಡ್ನಾಕೂಡು ಚಿನ್ನಸ್ವಾಮಿ, ಅತಿಥಿಗಳು: ಬರಗೂರು ರಾಮಚಂದ್ರಪ್ಪ, ಬೇಲೂರು ರಘುನಂದನ್, ಮರಿಸ್ವಾಮಿ, ಬಾಬುರಾವ್ ಮುಡಬಿ, ಹರಿರಾಮ್ ಎ., ಅಧ್ಯಕ್ಷತೆ: ಶ್ರೀನಿವಾಸ್ ಜಿ., ಶಿವಕುಮಾರ್, ಆಯೋಜನೆ: ಭಾರತೀಯ ವಿದ್ಯಾರ್ಥಿ ಸಂಘ, ಸ್ಥಳ: ಅಲುಮ್ನಿ ಅಸೋಸಿಯೇಷನ್ ಸಭಾಂಗಣ, ಕೆ.ಆರ್ ಸರ್ಕಲ್, ಸಂಜೆ 4.30

ಪುರಂದರದಾಸರ ಆರಾಧನಾ ಮಹೋತ್ಸವ: ಉದ್ಘಾಟನೆ: ಆರ್.ಕೆ. ಪದ್ಮನಾಭ, ಎನ್. ವಾದಿರಾಜಾಚಾರ್ಯ, ಪ್ರಾಸ್ತಾವಿಕ: ಬಿ. ಗೋಪಾಲಾಚಾರ್, ಎನ್. ವಾಗೀಷಾಚಾರ್ಯ, ಶ್ರೀಕಾಂತ ತಂತ್ರಿ, ಅತಿಥಿಗಳು: ವಿಜಯೇಂದ್ರ ಅವಧೂತ, ಎನ್. ಸಂತೋಷ್ ಹೆಗ್ಡೆ, ಶಂಕರ್ ಶಾನಭೋಗ್, ಆಯೋಜನೆ: ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ, ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಕೆಂಗೇರಿ ಉಪನಗರ, ಸಂಜೆ 4.45ರಿಂದ

ಕಂಬಾರ ನಾಟಕ ಚಕ್ರ: ಹಳವಂಡಗಳು ಮತ್ತು ಜಕ್ಕಣ ನಾಟಕ ಪ್ರದರ್ಶನ: ಆಯೋಜನೆ: ವೇದಿಕೆ ನಾಟಕಶಾಲೆ, ಸ್ಥಳ: ಸುಚಿತ್ರ ಫಿಲಂ ಸೊಸೈಟಿ, ಸಂಜೆ 7

ವಿವಿಧೆಡೆ ಗಣರಾಜ್ಯೋತ್ಸವ ದಿನಾಚರಣೆ

ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಅತಿಥಿಗಳು: ಪ್ರಮೀಳಾ ನಾಯ್ಡು ಆರ್., ವೂಡೇ ಪಿ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಸಮೂಹ ಸಂಸ್ಥೆಗಳು, ಶೇಷಾದ್ರಿಪುರ, ಬೆಳಿಗ್ಗೆ 7.30

ಧ್ವಜಾರೋಹಣ ಬೆಳಿಗ್ಗೆ 7.30ಕ್ಕೆ: ಎನ್. ವಾಗೀಶ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಸಂಜೆ 6ಕ್ಕೆ ‘ಗಣರಾಜ್ಯೋತ್ಸವ ಮತ್ತು ಸೌಹಾರ್ದತೆಯ ನೆಲೆಗಳು’ ಕುರಿತು ಉಪನ್ಯಾಸ: ಉಪನ್ಯಾಸಕರು: ವಡ್ಡಗೆರೆ ನಾಗರಾಜಯ್ಯ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಆವರಣ, ಹೊಂಬೇಗೌಡನಗರ

ಧ್ವಜಾರೋಹಣ: ರಾಕೇಶ್ ಸಿಂಗ್, ತುಷಾರ್ ಗಿರಿನಾಥ್, ಸ್ಥಳ: ಪಾಲಿಕೆ ಕೇಂದ್ರ ಕಚೇರಿ ಆವರಣ, ಬೆಳಿಗ್ಗೆ 7.45

ಗಣರಾಜ್ಯೋತ್ಸವ ಆಚರಣೆ: ಆಯೋಜನೆ: ಕಂದಾಯ ಇಲಾಖೆ, ಸ್ಥಳ: ಚಾಮರಾಜಪೇಟೆ ಮೈದಾನ, ಬೆಳಿಗ್ಗೆ 8

ಧ್ವಜಾರೋಹಣ: ಎನ್. ಕಾಮರಾಜ್, ಅತಿಥಿ: ಬಿ.ಎಂ. ಪಟೇಲ್ ಪಾಂಡು, ಭಾಷಣಕಾರರು: ಸುಜಾತ ಲಕ್ಷ್ಮೀಪುರ, ಅತಿಥಿಗಳು: ಬಿ.ಕೆ. ಜಯಕುಮಾರ್, ಬಿ.ಕೆ. ಅಶ್ವತ್ಥನಾರಾಯಣ, ಆಯೋಜನೆ ಮತ್ತು ಸ್ಥಳ: ಶಾರದಾ ವಿದ್ಯಾಪೀಠದ ಆವರಣ, ಬ್ಯಾಟರಾಯನಪುರ, ಬೆಳಿಗ್ಗೆ 8.30

ಗಣರಾಜ್ಯೋತ್ಸವ ದಿನಾಚರಣೆ: ಅತಿಥಿ: ಎಂ.ಎಸ್. ರೆಡ್ಡಿ, ಅಧ್ಯಕ್ಷತೆ: ಎ.ಎಚ್. ರಾಮರಾವ್, ಆಯೋಜನೆ: ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ, ಸ್ಥಳ: ನ್ಯಾಷನಲ್ ಹೈಸ್ಕೂಲ್ ಮೈದಾನ, ಬಸವನಗುಡಿ, ಬೆಳಿಗ್ಗೆ 8.30

ಧ್ವಜಾರೋಹಣ: ನಿರ್ಮಲ್‌ಕುಮಾರ್ ಕೆ.ಆರ್., ಉಪಸ್ಥಿತಿ: ಎನ್.ಎಸ್. ವಿಜಯ, ಎಂ. ಕೃಷ್ಣದಾಸ್, ಬಿ.ಎಲ್. ನಂದಿನಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಭಾರತ್ ವಿದ್ಯಾ ಸಂಸ್ಥೆಯ ಆಟದ ಮೈದಾನ, ಜಯನಗರ, ಬೆಳಿಗ್ಗೆ 8.30

ಗಣರಾಜ್ಯೋತ್ಸವ ದಿನ: ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 9

ಬೆಳಿಗ್ಗೆ 9ಕ್ಕೆ ಧ್ವಜಾರೋಹಣ, ಸಾಂಸ್ಕೃತಿಕ ಕಾರ್ಯಕ್ರಮಗಳು: ದೇಶಭಕ್ತಿ ಗೀತೆ: ಮಂಜುನಾಥ ಕೆ.ಎಸ್., ಮತ್ತು ತಂಡ, ಜಾನಪದ ಗಾಯನ: ಸಿದ್ಧರಾಮಯ್ಯ ಮತ್ತು ತಂಡ, ‘ಅಭಿಮನ್ಯು ಕಾಳಗ’ ಯಕ್ಷಗಾನ ನಾಟಕ ಪ್ರದರ್ಶನ: ಮೋಹನ್ ಕೆ. ಮತ್ತು ತಂಡ, ಗೊಂಬೆ ಕುಣಿತ: ಅಕ್ಬರ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಾಂಸ್ಕೃತಿಕ ಭವನ, ಕೆಂಪೇಗೌಡನಗರ, ಸಂಜೆ 5ರಿಂದ

ಧ್ವಜಾರೋಹಣ: ಥಾವರಚಂದ್ ಗೆಹಲೋತ್, ಸ್ಥಳ: ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನ, ಮಹಾತ್ಮ ಗಾಂಧಿ ರಸ್ತೆ, ಬೆಳಿಗ್ಗೆ 9

ಥಾವರಚಂದ್ ಗೆಹಲೋತ್

ಗಣರಾಜ್ಯೋತ್ಸವದ ಬಗ್ಗೆ ಅರಿವು ಕಾರ್ಯಕ್ರಮ: ಆಯೋಜನೆ: ಗೌರಿಶಂಕರ ಅಕಾಡೆಮಿ ಫಾರ್ ಕಲ್ಚರ್ ಆ್ಯಂಡ್ ಸ್ಪೋರ್ಟ್ಸ್ ಟ್ರಸ್ಟ್, ಸ್ಥಳ: ಕೃಷ್ಣರಾಜಪುರ, ಬೆಳಿಗ್ಗೆ 9

ಧ್ವಜಾರೋಹಣ: ಗೊ.ರು. ಚನ್ನಬಸಪ್ಪ, ಅಧ್ಯಕ್ಷತೆ: ಕೊಂಡಜ್ಜಿ ಬ. ಷಣ್ಮುಖಪ್ಪ, ಅತಿಥಿಗಳು: ಪಿ.ಜಿ. ಆರ್ ಸಿಂಧ್ಯಾ, ಎಂ.ಎ. ಖಾಲಿದ್, ಗೀತಾ ನಟರಾಜ್, ಚಿನ್ನಸ್ವಾಮಿ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ಕೇಂದ್ರ ಕಚೇರಿ, ಅರಮನೆ ರಸ್ತೆ, ಬೆಳಿಗ್ಗೆ 9

ಸಂಸ್ಕೃತಿ ಸಮಾಗಮ: ಉದ್ಘಾಟನೆ: ಕೆ.ವೈ. ವೆಂಕಟೇಶ್, ಅತಿಥಿಗಳು: ಹಿ.ಚಿ. ಬೋರಲಿಂಗಯ್ಯ, ಶ್ರೀಗಂಧ ಶ್ರೀನಿವಾಸಮೂರ್ತಿ, ಆಯೋಜನೆ ಮತ್ತು ಸ್ಥಳ: ಸೇಂಟ್ ಜೋಸೆಫ್ಸ್ ಸ್ಕೂಲ್, ವಿಠ್ಠಲಮಲ್ಯ ರಸ್ತೆ, ಬೆಳಿಗ್ಗೆ 9

ಧ್ವಜಾರೋಹಣ: ಬಿ.ಎಸ್. ಪಾಟೀಲ್, ಉಪಸ್ಥಿತಿ: ಕೆ.ಎನ್. ಫಣೀಂದ್ರ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಲೋಕಾಯುಕ್ತದ ಕಚೇರಿ, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 9

ಬಿ.ಎಸ್. ಪಾಟೀಲ್

ಧ್ವಜಾರೋಹಣ: ಎಸ್.ವಿ. ಸುರೇಶ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಳಿಗ್ಗೆ 9

ಗಣರಾಜ್ಯೋತ್ಸವ ಕಾರ್ಯಕ್ರಮ : ಅತಿಥಿ: ನ್ಯಾ. ಪದ್ಮರಾಜ್ ಎನ್. ದೇಸಾಯಿ, ಧ್ವಜಾರೋಹಣ: ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ವಕೀಲರ ಸಂಘ, ಸ್ಥಳ: ಹೈಕೋರ್ಟ್ ಆವರಣ, ಬೆಳಿಗ್ಗೆ 9

ಧ್ವಜಾರೋಹಣ: ನ್ಯಾ. ಪ್ರಸನ್ನ ಬಿ. ವರಾಳೆ, ಸ್ಥಳ: ಹೈಕೋರ್ಟ್, ಬೆಳಿಗ್ಗೆ 9.30

ನ್ಯಾ. ಪ್ರಸನ್ನ ಬಿ. ವರಾಳೆ

ಸಮಾರಂಭ: ಧ್ವಜಾರೋಹಣ: ವಿ. ಗೋಪಾಲಗೌಡ, ಅಧ್ಯಕ್ಷತೆ: ಎಚ್. ಶರಶ್ಚಂದ್ರ, ಅತಿಥಿ: ಷಡಕ್ಷರ ರೆಡ್ಡಿ, ಆಯೋಜನೆ: ವಿಲ್ಸನ್ ಗಾರ್ಡನ್ ವಿದ್ಯಾ ಸಂಸ್ಥೆ, ಸ್ಥಳ: ಹೊಂಬೇಗೌಡನಗರದ ಕೆಂಪು ಮೈದಾನ, ಬೆಳಿಗ್ಗೆ 9.30

ಧ್ವಜಾರೋಹಣ: ಆರ್.ಪಿ. ಮೋಹನ್, ಬಹುಮಾನ ವಿತರಣೆ: ಸುರೇಶ್ ಬಿ. ಮೈಕಲ್, ಅಧ್ಯಕ್ಷತೆ: ನರಸಿಂಹ ನಾಯ್ಕ, ಅತಿಥಿಗಳು: ಅನೂಪ್ ಸಿ. ನಾಯರ್, ಗುರುರಾಜ್ ಎಂ., ದೇವಪ್ರಿಯಂ ಹಂಸ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿ.ಇ.ಎಲ್., ಜಾಲಹಳ್ಳಿ, ಬೆಳಿಗ್ಗೆ 10

ಧ್ವಜಾರೋಹಣ: ಅತಿಥಿಗಳು: ಗೋಪಾಲ್ ಗೌಡ, ಬಿ.ಎಲ್. ಶಂಕರ್, ಸತೀಶ್ ಜಾರಕಿಹೊಳಿ, ಬರಗೂರು ರಾಮಚಂದ್ರಪ್ಪ, ‘ಭಾರತದ ವೈವಿಧ್ಯತೆಯ ಕಲ್ಪನೆ’ ಕುರಿತು ಚರ್ಚೆ: ಸಸಿಕಾಂತ್ ಸೆಂಥಿಲ್, ಶಬ್ನಮ್ ಹಾಶ್ಮಿ, ಮೃದುಲಾ ಮುಖರ್ಜಿ, ಸಬಾ ನಕ್ವಿ, ದಿನೇಶ್ ಗುಂಡೂರಾವ್, ರತ್ನಪ್ರಭ, ಭಾಸ್ಕರ್ ರಾವ್, ಬಂಜಗೆರೆ ಜಯಪ್ರಕಾಶ್, ಅಕ್ಕೈ ಪದ್ಮಶಾಲಿ, ಟಬು ರಾವ್, ರೀಟಾ ರೀನಿ ಎ., ಆಯೋಜನೆ: ಸೌಹಾರ್ದ ಭಾರತ, ಸ್ಥಳ: ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10ರಿಂದ

ಸಸಿಕಾಂತ್ ಸೆಂಥಿಲ್

ಅಕ್ಕೈ ಪದ್ಮಶಾಲಿ

ಪುಸ್ತಕ ಸುಗ್ಗಿಗೆ ಚಾಲನೆ: ಅಕ್ಷರ ಸುಗ್ಗಿ ಮಾತಿನ ಹುಗ್ಗಿ ಕವಿತೆ ಆತ್ಮಕತೆ ಮಾತುಕತೆ: ಸಂವಾದಕರು: ಆರ್. ದೊಡ್ಡೆಗೌಡ, ಅತಿಥಿಗಳು: ಮಲ್ಲೇಪುರಂ ಜಿ. ವೆಂಕಟೇಶ್, ಮೂಡ್ನಾಕೂಡು ಚಿನ್ನಸ್ವಾಮಿ, ಎಚ್.ಟಿ. ಪೋತೆ, ಜೋಗಿ, ವೈ.ಕೆ. ಮುದ್ದಕೃಷ್ಣ, ವಿದ್ಯಾರಶ್ಮಿ, ದಾದಾಪೀರ್ ಜೈಮನ್, ಗಿರಿಧರ ಕಜೆ, ಶ್ರೀಶೈಲ ನಾಗರಾಳ, ಸಿ. ಚಂದ್ರಪ್ಪ, ಜಗದೀಶ ಶರ್ಮಾ ಸಂಪ, ಮಾಕೋನಹಳ್ಳಿ ವಿನಯ್ ಮಾಧವ್, ಮಹಾಬಲ ಸೀತಾಳಭಾವಿ, ಆಯೋಜನೆ ಮತ್ತು ಸ್ಥಳ: ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಳಿಗ್ಗೆ 11



ಮೂಡ್ನಾಕೂಡು ಚಿನ್ನಸ್ವಾಮಿ

ಉದ್ಘಾಟನೆ: ಎಂ. ವೆಂಕಟಸ್ವಾಮಿ, ಅಧ್ಯಕ್ಷತೆ: ಅಶ್ವಥ್ ಅಂತ್ಯಜ, ಆಯೋಜನೆ: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಅಠವಳೆ), ಸ್ಥಳ: ನಾಗಸೇನಾ ವಿದ್ಯಾಲಯ, ಸದಾಶಿವನಗರ, ಬೆಳಿಗ್ಗೆ 11.30

‘ಸಂವಿಧಾನ ದಿನ’ ಆಚರಣೆ: ಅಧ್ಯಕ್ಷತೆ: ಸಾತಿ ಸುಂದರೇಶ್, ಭಾಷಣ: ನಾಗಮೋಹನದಾಸ್, ಬಿನೋಯ್ ವಿಶ್ವಂ, ಉಪಸ್ಥಿತಿ: ಸಿದ್ದನಗೌಡ ಪಾಟೀಲ, ಆಯೋಜನೆ: ಭಾರತ ಕಮ್ಯುನಿಸ್ಟ್ ಪಕ್ಷ, ಸ್ಥಳ: ಘಾಟೆ ಭವನ, ಸಂಜೆ 4

ಗಣರಾಜ್ಯೋತ್ಸವದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ: ಅಧ್ಯಕ್ಷತೆ: ಮುನಿರತ್ನ, ಚಾಲನೆ: ಸಂಧ್ಯಾ ಪಿ.ಎಚ್. ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಟಿ.ಎನ್. ಬಾಲಕೃಷ್ಣ ಬಯಲು ರಂಗಮಂದಿರ, ರಾಜರಾಜೇಶ್ವರಿನಗರ, ಸಂಜೆ 4.30

ಉದ್ಘಾಟನೆ: ಎಂ. ನಂಜುಂಡಸ್ವಾಮಿ, ಸಾನ್ನಿಧ್ಯ: ಬ್ರಹ್ಮಾಂಡ ಗುರೂಜಿ, ಎನ್. ಅರುಣ್ ಕುಮಾರ್, ಅಧ್ಯಕ್ಷತೆ: ತಲಕಾಡು ಚಿಕ್ಕರಂಗೇಗೌಡ, ಭಾಷಣ: ಎನ್. ಮೂರ್ತಿ, ಅತಿಥಿಗಳು: ಎಸ್. ನಾರಾಯಣ್, ವಿ. ನಾಗೇಂದ್ರ ಪ್ರಸಾದ್, ಆನಂದಕುಮಾರ್, ಆಯೋಜನೆ: ಮಲ್ಲೇಶ್ ಹೆಲ್ಪಿಂಗ್ ಟೀಂ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣ, ಗಾಂಧಿ ಸ್ಕೂಲ್ ಮುಂಭಾಗ, ಶ್ರೀರಾಮಪುರ, ಸಂಜೆ 5

ಜಾನಪದ ಕಲಾ ಪ್ರದರ್ಶನ ಸಾಂಸ್ಕೃತಿಕ ಕಾರ್ಯಕ್ರಮ: ಉಪಸ್ಥಿತಿ: ಬಸವರಾಜ ಬೊಮ್ಮಾಯಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ನಗರ, ಸಂಜೆ 5

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಸ್ಮರಣೋತ್ಸವ: ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಮಾಲಾರ್ಪಣೆ: ವಿ. ಸೋಮಣ್ಣ, ಉಪಸ್ಥಿತಿ: ಶೈಲಜಾ ಸೋಮಣ್ಣ, ಆಯೋಜನೆ: ವಿ. ಸೋಮಣ್ಣ ಪ್ರತಿಷ್ಠಾನ, ಸ್ಥಳ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ರೀಡಾಂಗಣ, ಮಾರೇನಹಳ್ಳಿ, ಸಂಜೆ 5

ಲಕ್ಷ್ಮೀನಾರಾಯಣ ಜಾಗತಿಕ ಸಂಗೀತೋತ್ಸವ: **ಪಿಟೀಲು:** ಎಲ್. ಸುಬ್ರಮಣ್ಯಂ, ಗಾಯನ: ಕವಿತಾ ಕೃಷ್ಣಮೂರ್ತಿ, ಆಯೋಜನೆ: ಸುಬ್ರಮಣ್ಯಂ ಫೌಂಡೇಷನ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6.30

ಜಿ.ಟಿ.ಮಾಲ್ ತೆರಿಗೆ: 10 ದಿನಗಳಲ್ಲಿ ಉತ್ತರಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಗಡಿ ರಸ್ತೆಯಲ್ಲಿನ ಜಿ.ಟಿ.ವರ್ಲ್ಡ್ ಶಾಪಿಂಗ್ ಮಾಲ್‌ಗೆ ವಿಧಿಸಲಾಗಿದ್ದ ಆಸ್ತಿ ತೆರಿಗೆ ಪ್ರಶ್ನಿಸಿ ಸಲ್ಲಿಸಲಾದ ಮಧ್ಯಂತರ ಅರ್ಜಿಗೆ ಸಂಬಂಧಿಸಿದಂತೆ ಹತ್ತು ದಿನಗಳ ಒಳಗೆ ಉತ್ತರಿಸಿ' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ ಜಿ.ಟಿ.ಸಿನೆಮಾಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಅಧ್ಯಕ್ಷ ಎಸ್.ಟಿ.ಆನಂದ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಕೆ.ವಿ.ಧನಂಜಯ, 'ಕೋವಿಡ್-19ರ ಕಾರಣಕ್ಕಾಗಿ ಕೇಂದ್ರ ಸರ್ಕಾರದ ನಿಯಮಾವಳಿ ಅನುಸಾರ ಜಿ.ಟಿ ಶಾಪಿಂಗ್ ಮಾಲ್ ಅನ್ನು 2019-20, 2020-2021 ಹಾಗೂ 2021-2022ರ ಮೂರು ವರ್ಷಗಳಲ್ಲಿ ಕ್ರಮವಾಗಿ 18, 253 ಮತ್ತು 102 ದಿವಸ ಬಂದ್ ಮಾಡಲಾಗಿದೆ. ಆದರೆ, ಬಿಬಿಎಂಪಿ ಕಾಯ್ದೆ-2020ರ ಕಲಂ 142 ಮತ್ತು 144ರ ಅನ್ವಯ ಆಸ್ತಿ ತೆರಿಗೆ ವಿಧಿಸಿರುವುದು ಕಾನೂನುಬಾಹಿರ' ಎಂದು ಆರೋಪಿಸಿದರು.

'ಕೇಂದ್ರ ಸರ್ಕಾರ ಹೊರಡಿಸಿದ ನಿಯಮಾವಳಿ ಅನುಸಾರವೇ ಅರ್ಜಿದಾರರು ಶಾಪಿಂಗ್ ಮಾಲ್ ಬಂದ್ ಮಾಡಿದ್ದು, ಈ ಅವಧಿಯಲ್ಲಿನ ತೆರಿಗೆ ಪಾವತಿಸುವಂತೆ ಕೇಳುವ ಅಧಿಕಾರ ಬಿಬಿಎಂಪಿಗೆ ಇಲ್ಲ. ಆಸ್ತಿ ಬಳಕೆ ಮಾಡಿದರಷ್ಟೇ ತೆರಿಗೆ ವಿಧಿಸಲು ರಾಜ್ಯ ಸರ್ಕಾರಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಆದರೆ, ಈ ಅವಧಿಯಲ್ಲಿ ಕೇಂದ್ರ ಸರ್ಕಾರದ ಆದೇಶದ ಅನುಸಾರ ಯಾವುದೇ ವಹಿವಾಟು ನಡೆಸದೆ ಬಂದ್ ಮಾಡಲಾಗಿತ್ತು ಎಂಬುದನ್ನು ರಾಜ್ಯ ಸರ್ಕಾರ ನಿರ್ಲಕ್ಷಿಸಿದೆ. ಇತ್ತೀಚೆಗೆ ಬಿಬಿಎಂಪಿ ಅಧಿಕಾರಿಗಳು ಮಾಲ್ ಬಂದ್ ಮಾಡುವ ಬಲವಂತದ ಕ್ರಮಕ್ಕೆ ಮುಂದಾಗಿದ್ದಾರೆ' ಎಂದು ಆಕ್ಷೇಪಿಸಿದರು.

ಇದಕ್ಕೆ ಬಿಬಿಎಂಪಿ ವಕೀಲರು ಸೂಕ್ತ ವಿವರಣೆ ಪಡೆದು ನ್ಯಾಯಾಲಯಕ್ಕೆ ನೀಡುವುದಾಗಿ ತಿಳಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಹತ್ತು ದಿನಗಳ ಕಾಲ ವಿಚಾರಣೆ ಮುಂದೂಡಿದೆ.

ವಿಶೇಷ ಪ್ರಾಸಿಕ್ಯೂಟರ್ ಆಗಿ ನೇಮಕ

ಬೆಂಗಳೂರು: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್ಐ) ನಿಷೇಧ ಪ್ರಶ್ನಿಸಲಾದ ಮೊಕದ್ದಮೆಗಳ ವಿಚಾರಣೆಯಲ್ಲಿ ರಾಜ್ಯ ಸರ್ಕಾರವನ್ನು ಪ್ರತಿನಿಧಿಸುವ ವಿಶೇಷ ಪ್ರಾಸಿಕ್ಯೂಟರ್ ಆಗಿ ಹೈಕೋರ್ಟ್ ವಕೀಲ ಪಿ.ಪ್ರಸನ್ನ ಕುಮಾರ್ ಅವರನ್ನು ನೇಮಕ ಮಾಡಿ ರಾಜ್ಯ ಗೃಹ ಇಲಾಖೆ ಬುಧವಾರ ಆದೇಶ ಹೊರಡಿಸಿದೆ.

ಕಾರು ಗುದ್ದಿ ಪೇಂಟರ್ ಸಾವು

ಬೆಂಗಳೂರು: ಬೇಗೂರು ಕೊಪ್ಪ ಮುಖ್ಯರಸ್ತೆಯಲ್ಲಿ ಕಾರೊಂದು ಗುದ್ದಿ ಪಾದಚಾರಿ ರಾಧೇಶ್ಯಾಮ್ (48) ಎಂಬುವವರು ಮೃತಪಟ್ಟಿದ್ದಾರೆ.

'ವಡ್ಡರಪಾಳ್ಯ ವೈಎಸ್‌ಆರ್ ಬಡಾವಣೆ ನಿವಾಸಿ ರಾಧೇಶ್ಯಾಮ್, ಪೇಂಟರ್ ಆಗಿದ್ದರು. ಬುಧವಾರ ಬೆಳಿಗ್ಗೆ ಮುಖ್ಯರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸರು ಹೇಳಿದರು.

'ಚಾಲಕ ಸುಬ್ರತ್ ಅವಸ್ಥಿ, ಕಾರನ್ನು ಅತಿ ವೇಗವಾಗಿ ನಿರ್ಲಕ್ಷ್ಯದಿಂದ ಚಲಾಯಿಸಿದ್ದ. ರಸ್ತೆಬದಿಯಲ್ಲಿದ್ದ ರಾಧೇಶ್ಯಾಮ್ ಅವರಿಗೆ ಕಾರು ಗುದ್ದಿತ್ತು. ಇದರಿಂದಾಗಿ ಅವರ ತಲೆ ಹಾಗೂ ದೇಹದ ವಿವಿಧ ಭಾಗಗಳಿಗೆ ತೀವ್ರ ಗಾಯಗಳಾಗಿದ್ದವು' ಎಂದು ತಿಳಿಸಿದರು.

'ಅಪಘಾತಕ್ಕೆ ಕಾರಣವಾದ ಆರೋಪದಡಿ ಸುಬ್ರತ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆತನನ್ನು ಬಂಧಿಸಿ, ಕಾರು ಜಪ್ತಿ ಮಾಡಲಾಗಿದೆ' ಎಂದರು.

₹ 44 ಲಕ್ಷ ಮೌಲ್ಯದ ಗಾಂಜಾ ಜಪ್ತಿ

ಬೆಂಗಳೂರು: ಆಂಧ್ರಪ್ರದೇಶದಿಂದ ಗಾಂಜಾ ತಂದು ನಗರದಲ್ಲಿ ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶದ ಪಲ್ಲ ನಾಗರಾಜ್ (30) ಹಾಗೂ ನೇಗುಲ ನೊಗರಾಜು (26) ಬಂಧಿತರು. ಇವರಿಂದ ₹ 44 ಲಕ್ಷ ಮೌಲ್ಯದ 116 ಕೆ.ಜಿ. ಗಾಂಜಾ ಹಾಗೂ ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಸಣ್ಣಪುಟ್ಟ ಕೆಲಸ ಮಾಡುತ್ತಿದ್ದ ಆರೋಪಿಗಳಿಗೆ, ಅದರಿಂದ ಬರುತ್ತಿದ್ದ ಹಣ ಸಾಲುತ್ತಿರಲಿಲ್ಲ. ಐಷಾರಾಮಿ ಜೀವನ ನಡೆಸಲು ಹಣ ಹೊಂದಿಸಲು ಗಾಂಜಾ ಮಾರಾಟಕ್ಕೆ ಇಳಿದಿದ್ದರು. ಊರಿನಿಂದ ಬೆಂಗಳೂರಿಗೆ ಗಾಂಜಾ ತಂದು, ಮಧ್ಯವರ್ತಿಗಳ ಮೂಲಕ ಗ್ರಾಹಕರಿಗೆ ತಲುಪಿಸುತ್ತಿದ್ದರು' ಎಂದಿದ್ದಾರೆ.





TENDERS INVITED BY ELECTRONICS CITY INDUSTRIAL TOWNSHIP AUTHORITY (ELCITA), BANGALORE

ELECTRONICS CITY INDUSTRIAL TOWNSHIP AUTHORITY (ELCITA), having its office at Sy. No. 7 (P), West Phase, Electronics City, Bangalore-560 100 has invited tenders as detailed below:

Sl. No.	Tender Name	Tender Number	Last date to apply	Closing timings hrs
1	Construction of 30KL Roof top rain water harvesting Sump in KSSIDC complex block 3, West Phase, Electronics city, Bengaluru -560100	ELCITA/ UDD/ 2022-23/ OW/ WORK INDENT 1851	06.02.2023	17:00 hrs
2	Design, Supply, Installation, Testing, and Commissioning including Warranty of Grid Connected 150 KWP Solar Rooftop Plant at 16 TPD SWM Facility, East Phase, Electronics City, Bengaluru-560100.	ELCITA/ UDD/ 2022-23/ 150KWP Solar plant	07.02.2023	17:00 hrs

Details of the Tenders can be downloaded from the e-procurement website: **eproc.karnataka.gov.in** under **Urban Development Department - Electronics city Industrial Township Authority. Also, details are available in www.elcita.in**

For queries Contact:
080-4660 2222 / write to : projects4@elcita.in

ಬಿಎಂಟಿಸಿ ಸಿಬ್ಬಂದಿಗೆ ಹೆಚ್ಚುವರಿ ವೇತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವತ್ರಿಕ ರಜೆ ಅಥವಾ ಹಬ್ಬದ ದಿನಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗೆ ಹೆಚ್ಚುವರಿ ವೇತನ ಪಾವತಿಸಲು ಬಿಎಂಟಿಸಿ ನಿರ್ಧರಿಸಿದೆ.

2023ರ ಜನವರಿಯಿಂದ 2023ರ ಜೂನ್ ಅವಧಿಯಲ್ಲಿ ಬರುವ ರಜಾ ದಿನಗಳಂದು ಜನದಟ್ಟಣೆಗೆ ಅನುಗುಣವಾಗಿ ಬಸ್‌ಗಳನ್ನು ಕಾರ್ಯಾಚರಣೆ ಮಾಡಲಾಗುತ್ತದೆ. ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗೆ ಹೆಚ್ಚುವರಿ ವೇತನ ಪಾವತಿಸಲು ಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ ಆದೇಶ ಹೊರಡಿಸಿದ್ದಾರೆ. ಈ ಪದ್ಧತಿ ಮೊದಲೇ ಇತ್ತು ಅದನ್ನು ಮುಂದು-ವರಿಸಲಾಗಿದೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

PVR CINEMAS | INOX CINEMAS | CINEPOLIS CINEMAS | GOPALANS CINEMAS | ROCKLINE CINEMAS | BHARATH CINEMAS {Mangalore | Manipal} | MIRAJ CINEMAS | INNOVATIVE MULTIPLEX | DRC CINEMAS {Mysore} | MYSURU VISION {Mysore} | MOVIE TIME {Davangere | Bellary} & Other Cinemas.

farnaz

28ರಿಂದ ಹಿಂದೂ ರಾಷ್ಟ್ರ ಅಧಿವೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಜ. 28, 29ರಂದು 'ಹಿಂದೂ ರಾಷ್ಟ್ರ ಅಧಿ-ವೇಶನ'ವನ್ನು ಬೆಂಗಳೂರಿನ ಬಸವೇಶ್ವರ ನಗರದಲ್ಲಿರುವ ಗಂಗಮ್ಮ ತಿಮ್ಮಯ್ಯ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಲಾಗಿದೆ.

'ಈ ಅಧಿವೇಶನದಲ್ಲಿ ಲವ್ ಜಿಹಾದ್, ಹಲಾಲ್ ಜಿಹಾದ್, ಲ್ಯಾಂಡ್ ಜಿಹಾದ್, ಹಿಂದೂ ಕಾರ್ಯಕರ್ತರ ಹತ್ಯೆ, ಇತಿಹಾಸದ ವಿಕೃತೀಕರಣ, ಹಿಂದೂ ಧರ್ಮ ಪರಂಪರೆಗಳ ಮೇಲೆ ಆಘಾತ, ದೇವಸ್ಥಾನಗಳ ಸರ್ಕಾರೀಕರಣ, ಗೋರಕ್ಷಣೆ ಸೇರಿ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಯಲಿದೆ' ಎಂದು ಸಮಿತಿಯ ವಕ್ತಾರ ಮೋಹನ್ ಗೌಡ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಚಕ್ರವರ್ತಿ ಸೂಲಿಬೆಲೆ, ಹಿಂದೂ ಜನಜಾಗೃತಿ ಸಮಿತಿಯ ರಾಷ್ಟ್ರೀಯ ವಕ್ತಾರ ರಮೇಶ ಶಿಂಧೆ, ಎಸ್.ಆರ್. ಲೀಲಾ, ಸಂದೀಪ್ ಬಾಲಕೃಷ್ಣನ್, ಅಡ್ಡಂಡ ಕಾರ್ಯಪ್ಪ, ನಿರ್ದೇಶಕ ಪ್ರಕಾಶ್ ಬೆಳವಾಡಿ, ಕಿರಣ ಬೆಟ್ಟದಪುರ ಅವರು ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಅಧಿವೇಶ-ನದಲ್ಲಿ 100ಕ್ಕೂ ಅಧಿಕ ಹಿಂದೂ ಸಂಘಟನೆಗಳ 500ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ' ಎಂದು ಹೇಳಿದರು.

ಬಿಬಿಎಂಪಿ ಹೆಸರಿನಲ್ಲಿ ವಿದ್ಯಾರ್ಥಿಗಳಿಗೆ ವಂಚನೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಸಮಾಜ ಕಲ್ಯಾಣ ವಿಭಾಗದಿಂದ ಉಚಿತ ಲ್ಯಾಪ್‌ಟಾಪ್ ಕೊಡಿಸುವುದಾಗಿ ಹೇಳಿ ವಿದ್ಯಾರ್ಥಿಗಳನ್ನು ವಂಚಿಸಿದ್ದ ಮೂವರು ಆರೋಪಿಗಳನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವಿದ್ಯಾರಣ್ಯಪುರ ಕಾವೇರಿ ಬಡಾವಣೆಯ ಎಂ. ಹರ್ಷ (20), ವಿಜಯನಗರದ ಡಿ. ರೂಪೇಶ್ (18) ಹಾಗೂ ಬಾಪೂಜಿ ನಗರದ ಆರ್. ಮೋಹನ್ ಅಲಿಯಾಸ್ ಬೋರಾ (21) ಬಂಧಿತರು. ಇವರಿಂದ ಸಿಮ್‌ಕಾರ್ಡ್‌ಗಳು ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಿಬಿಎಂಪಿ ವತಿಯಿಂದ ವಿದ್ಯಾ-ರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ನೀಡುತ್ತಿರುವುದಾಗಿ ಆರೋಪಿಗಳು ಹಲವರ ಬಳಿ ಹೇಳುತ್ತಿದ್ದರು. ಅದನ್ನು ನಂಬಿ ಕೆಲ ವಿದ್ಯಾರ್ಥಿಗಳು ಆರೋಪಿಗಳನ್ನು ಸಂಪರ್ಕಿಸಿದ್ದರು. ಅರ್ಜಿ ಶುಲ್ಕ ಹಾಗೂ ನೋಂದಣಿ ಶುಲ್ಕದ ಹೆಸರಿನಲ್ಲಿ ಆರೋಪಿಗಳು ಹಣ ಸಂಗ್ರಹಿಸುತ್ತಿದ್ದರು' ಎಂದು ತಿಳಿಸಿದರು.

'ಲ್ಯಾಪ್‌ಟಾಪ್ ಹೆಸರಿನಲ್ಲಿ ವಿದ್ಯಾರ್ಥಿಗಳಿಂದ ₹ 40,500 ಹಣ ಪಡೆದು ವಂಚಿಸಿದ್ದ ಬಗ್ಗೆ ವ್ಯಕ್ತಿಯೊಬ್ಬರು ದೂರು ನೀಡಿದ್ದರು. ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಕೃತ್ಯದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಹೊಂಬಾಳೆ, ಅಶ್ವಿನಿ, ತಾರಾಗೆ ಚಿತ್ರವಾಣಿ ವಿಶೇಷ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಚಲನಚಿತ್ರ ಪ್ರಚಾರ ಸಂಸ್ಥೆ ಶ್ರೀರಾಘವೇಂದ್ರ ಚಿತ್ರವಾಣಿಯ 25ನೇ ವಾರ್ಷಿಕ ವಿಶೇಷ ಪ್ರಶಸ್ತಿಗಳನ್ನು ಹೊಂಬಾಳೆ ಫಿಲ್ಮ್ಸ್, ನಟ ದಿವಂಗತ ಪುನೀತ್ ರಾಜ್‌ಕುಮಾರ್ ಪತ್ನಿ ಅಶ್ವಿನಿ ಮತ್ತು ನಟಿ ತಾರಾ ಅನುರಾಧಾ ಅವರಿಗೆ ಬುಧವಾರ ಪ್ರದಾನ ಮಾಡಲಾಯಿತು.

ಚಾಮರಾಜಪೇಟೆಯ ಕನ್ನಡ ಚಲನಚಿತ್ರ ಕಲಾವಿದರ ಸಂಘದಲ್ಲಿ ಚಿತ್ರವಾಣಿ ಸಂಸ್ಥೆಯ ಸಂಸ್ಥಾಪಕ ದಿವಂಗತ ಡಿ.ವಿ. ಸುಧೀಂದ್ರ ಅವರ ಜನ್ಮದಿನದ ಪ್ರಯುಕ್ತ ನಡೆದ ಸಮಾರಂಭದಲ್ಲಿ ಸಂಸ್ಥೆಯ ಮುಖ್ಯಸ್ಥ ಸುಧೀಂದ್ರ ವೆಂಕಟೇಶ್ ಮತ್ತು ಇತರ ಗಣ್ಯರು ಈ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

'ಕೆಜಿಎಫ್ 2' ಮತ್ತು 'ಕಾಂತಾರ' ಚಿತ್ರಗಳನ್ನು ನಿರ್ಮಿಸಿ, ಕನ್ನಡ ಚಿತ್ರರಂಗಕ್ಕೆ ಕೀರ್ತಿ ತಂದ ನಿರ್ಮಾಣ ಸಂಸ್ಥೆ ಎಂಬ ಕಾರಣಕ್ಕೆ ಹೊಂಬಾಳೆ ಫಿಲ್ಮ್ಸ್‌ಗೆ, ಕಳೆದ ವರ್ಷ ಬಿಡುಗಡೆಯಾದ ನಟ ದಿವಂಗತ ಪುನೀತ್ ರಾಜ್‌ಕುಮಾರ್ ಭಾಗಿಯಾದ 'ಗಂಧದ ಗುಡಿ' ಡಾಕ್ಯುಚಿತ್ರದ ನಿರ್ಮಾಣಕ್ಕಾಗಿ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರಿಗೆ, ಕನ್ನಡ ಚಿತ್ರರಂಗಕ್ಕೆ ನೀಡಿದ ವಿಶೇಷ ಕೊಡುಗೆಗಾಗಿ ತಾರಾ ಅನುರಾಧಾ ಅವರಿಗೆ ಈ ವಿಶೇಷ ಪ್ರಶಸ್ತಿಗಳು ಸಂದಿವೆ. ಹೊಂಬಾಳೆ ಫಿಲ್ಮ್ಸ್‌ನ ಮುಖ್ಯಸ್ಥ ವಿಜಯ್ ಕಿರಗಂದೂರು ಪರವಾಗಿ ಅವರ ಪತ್ನಿ ಶೈಲಜಾ ವಿಜಯ್ ಕಿರಗಂದೂರು ಪ್ರಶಸ್ತಿ ಸ್ವೀಕರಿಸಿದರು.

ಇತರ ಪ್ರಶಸ್ತಿ ಪುರಸ್ಕೃತರು: 2021ನೇ ಸಾಲಿನ ಶ್ರೀರಾಘವೇಂದ್ರ ಚಿತ್ರವಾಣಿ ಪ್ರಶಸ್ತಿ: ಪಿ. ಧನರಾಜ್ (ಹಿರಿಯ ನಿರ್ಮಾಪಕ ಅವರ ಪರವಾಗಿ ಪುತ್ರ ಶ್ರೀಕಾಂತ್ ಪ್ರಶಸ್ತಿ ಸ್ವೀಕರಿಸಿದರು.), ಈಶ್ವರ ದೈತೋಟ (ಹಿರಿಯ ಪತ್ರಕರ್ತ).

2022ನೇ ಸಾಲಿನ ಪ್ರಶಸ್ತಿ: ಕುಮಾರ ಗೋವಿಂದ್ (ನಟ, ನಿರ್ಮಾಪಕ), ಸದಾಶಿವ ಶೆಣೈ (ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ), ರಾಜೇಶ್ ಕೃಷ್ಣನ್ (ಹಿನ್ನೆಲೆ ಗಾಯಕ - ಡಾ. ರಾಜ್‌ಕುಮಾರ್ ಪ್ರಶಸ್ತಿ), ಸಾಯಿಪ್ರಕಾಶ್ ಹಿರಿಯ ನಿರ್ದೇಶಕ, ನಿರ್ಮಾಪಕ (ಆರ್. ಶೇಷಾದ್ರಿ ಸ್ಮರಣಾರ್ಥ ಪ್ರಶಸ್ತಿ), ತುಳಸಿ (ಹಿರಿಯ ನಟಿ. ಇವರಿಗೆ ನಟಿ ಡಾ. ಜಯಮಾಲಾ ಎಚ್.ಎಂ.ರಾಮಚಂದ್ರ ಪ್ರಶಸ್ತಿ), ನೋಬಿನ್ ಪಾಲ್ (ಅತ್ಯುತ್ತಮ ಸಂಗೀತ ನಿರ್ದೇಶನ, '777 ಚಾರ್ಲಿ' ಚಿತ್ರಕ್ಕಾಗಿ ಎಂ.ಎಸ್. ರಾಮಯ್ಯ ಮೀಡಿಯಾ ಅಂಡ್ ಎಂಟರ್‌ಟೇನ್‌ಮೆಂಟ್ ಪ್ರೈ ಲಿ. ಪ್ರಶಸ್ತಿ), ಮಧುಚಂದ್ರ (ಅತ್ಯುತ್ತಮ ಕಥಾಲೇಖಕರು, 'ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ' ಚಿತ್ರಕ್ಕಾಗಿ ನಿರ್ದೇಶಕ-ನಿರ್ಮಾಪಕ ಕೆ.ವಿ. ಜಯರಾಂ ಪ್ರಶಸ್ತಿ), ಎಂ.ಜಿ. ಶ್ರೀನಿವಾಸ್ (ಶ್ರೀನಿ) (ಅತ್ಯುತ್ತಮ ಸಂಭಾಷಣೆ, 'ಓಲ್ಡ್ ಮಾಂಕ್' ಚಿತ್ರಕ್ಕಾಗಿ ಚಿತ್ರಸಾಹಿತಿ ಹುಣಸೂರು ಕೃಷ್ಣಮೂರ್ತಿ ಸ್ಮರಣಾರ್ಥ), ಕಿರಣ್ ರಾಜ್ ('777 ಚಾರ್ಲಿ' ಚೊಚ್ಚಲ ಚಿತ್ರದ ನಿರ್ದೇಶನಕ್ಕಾಗಿ ಹಿರಿತೆರೆ-ಕಿರುತೆರೆ ನಿರ್ದೇಶಕ ಬಿ. ಸುರೇಶ ಪ್ರಶಸ್ತಿ ಅವರ ಪರವಾಗಿ ಪರಂವಃ ಸ್ಟುಡಿಯೋದ ಶಮಂತ್ ಜೈನ್ ಪ್ರಶಸ್ತಿ ಸ್ವೀಕರಿಸಿದರು.), ಪ್ರಮೋದ್ ಮರವಂತೆ ('ಕಾಂತಾರ' ಚಿತ್ರದ 'ಸಿಂಗಾರ ಸಿರಿಯೇ ...' ಗೀತರಚನೆಗಾಗಿ ಹಿರಿಯ ಪತ್ರಕರ್ತ ಪಿ.ಜಿ. ಶ್ರೀನಿವಾಸಮೂರ್ತಿ ಅವರ ಸ್ಮರಣಾರ್ಥ ಪ್ರಶಸ್ತಿ), ಶ್ರೀನಿವಾಸಮೂರ್ತಿ (ಹಿರಿಯ ಪೋಷಕ ಕಲಾವಿದರು, ಹಿರಿಯ ಪತ್ರಕರ್ತ ಸಿ. ಸೀತಾರಾಂ ಸ್ಮರಣಾರ್ಥ ಪ್ರಶಸ್ತಿ).

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮ. ಹರೀಶ್, ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಇದ್ದರು.

ನಟ ದಿವಂಗತ ಪುನೀತ್ ರಾಜ್‌ಕುಮಾರ್ ಭಾಗಿಯಾದ 'ಗಂಧದ ಗುಡಿ' ಡಾಕ್ಯು ಚಿತ್ರದ ನಿರ್ಮಾಣಕ್ಕಾಗಿ ಪಿಆರ್‌ಕೆ ಸ್ಟುಡಿಯೋಸ್‌ನ ಮುಖ್ಯಸ್ಥೆ, ನಿರ್ಮಾಪಕಿ ಅಶ್ವಿನಿ ಪುನೀತ್ ರಾಜಕುಮಾರ್ ಅವರಿಗೆ ಶ್ರೀರಾಘವೇಂದ್ರ ಚಿತ್ರವಾಣಿ ಸಂಸ್ಥೆಯ ವತಿಯಿಂದ ವಾರ್ಷಿಕ ವಿಶೇಷ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಂಸ್ಥೆಯ ಮುಖ್ಯಸ್ಥ ಸುಧೀಂದ್ರ ವೆಂಕಟೇಶ್, ನಟಿ ತಾರಾ ಅನುರಾಧಾ, ಹೊಂಬಾಳೆ ಫಿಲ್ಮ್ಸ್‌ನ ಶೈಲಜಾ ವಿಜಯ್ ಕಿರಗಂದೂರು ಇದ್ದರು –ಪ್ರಜಾವಾಣಿ ಚಿತ್ರ

74th Republic Day
Government of India
Azadi Ka Amrit Mahotsav
G20 भारत 2023 INDIA
ONE EARTH • ONE FAMILY • ONE FUTURE



ಎಲ್ಲಾ ನಾಗರಿಕರಿಗೆ
ಗಣರಾಜ್ಯೋತ್ಸವದ ಶುಭಾಶಯಗಳು
ಜೈ ಹಿಂದ್

"ನಾವು ಕರ್ತವ್ಯದ ಹಾದಿಯಲ್ಲಿ ನಡೆದಾಗ ಮಾತ್ರ ಸಮಾಜ ಮತ್ತು ದೇಶವನ್ನು ಸಶಕ್ತಗೊಳಿಸಲು ಸಾಧ್ಯ. ಕರ್ತವ್ಯಗಳ ಬಗ್ಗೆ ಸಮರ್ಪಣಾ ಮನೋಭಾವ ಮತ್ತು ಗಂಭೀರತೆ ಇದ್ದರೆ, ಒಬ್ಬ ವ್ಯಕ್ತಿ ಕೂಡ ಇಡೀ ಸಮಾಜದ ಭವಿಷ್ಯವನ್ನು ಬದಲಾಯಿಸಬಹುದು."

–ನರೇಂದ್ರ ಮೋದಿ

cbc 22201/13/0155/2223

ದೂರದರ್ಶನ ನೆಟ್‌ವರ್ಕ್‌ನಲ್ಲಿ ಬೆಳಿಗ್ಗೆ 9: 00 ರಿಂದ ಕರ್ತವ್ಯ ಪಥದಿಂದ ಗಣರಾಜ್ಯೋತ್ಸವ ಕಾರ್ಯಕ್ರಮದ ನೇರ ಪ್ರಸಾರ

ನಗರದಲ್ಲಿ ಬುಧವಾರ ನಡೆದ ಆಮ್ ಆದ್ಮಿ ಪಕ್ಷದ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ರಾಜ್ಯ ಘಟಕದ ಅಧ್ಯಕ್ಷರಾಗಿ ಮರುನೇಮಕವಾದ ಪೃಥ್ವಿರೆಡ್ಡಿ ಅವರಿಗೆ ಶಾಸಕ ದಿಲೀಪ್ ಪಾಂಡೆ ಪತ್ರ ನೀಡಿದರು. 'ಮುಖ್ಯಮಂತ್ರಿ' ಚಂದ್ರು ಇದ್ದರು.

ಪ್ರಾಮಾಣಿಕರಿಗೆ ಮಾತ್ರ ಟಿಕೆಟ್: ಎಎಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಆಮ್ ಆದ್ಮಿ ಪಾರ್ಟಿ ಪ್ರಾಮಾಣಿಕ ವ್ಯಕ್ತಿಗಳಿಗೆ ಟಿಕೆಟ್ ನೀಡಲಿದೆ' ಎಂದು ಪಕ್ಷದ ರಾಜ್ಯ ಚುನಾವಣಾ ಉಸ್ತುವಾರಿ ಹಾಗೂ ದೆಹಲಿ ಶಾಸಕ ದಿಲೀಪ್ ಪಾಂಡೆ ತಿಳಿಸಿದರು.

ನಗರದಲ್ಲಿ ಬುಧವಾರ ನಡೆದ ಪಕ್ಷದ ರಾಜ್ಯ ಮತ್ತು ಜಿಲ್ಲೆಗಳ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, 'ಎಲ್ಲ 224 ಕ್ಷೇತ್ರಗಳಲ್ಲೂ ಸ್ಪರ್ಧಿಸಲು ಸಾಮಾಜಿಕ ಕಾರ್ಯಕರ್ತರು, ವಿವಿಧ ಕ್ಷೇತ್ರಗಳ ಸಾಧಕರು ಹಾಗೂ ಸಾರ್ವಜನಿಕರೊಂದಿಗೆ ಉತ್ತಮ ಸಂಪರ್ಕ ಹೊಂದಿರುವ ಅನೇಕ ನಾಯಕರು ಆಸಕ್ತಿ ತೋರುತ್ತಿದ್ದಾರೆ. ಎಲ್ಲ ಆಕಾಂಕ್ಷಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಟಿಕೆಟ್ ನೀಡಲಾಗುವುದು' ಎಂದರು.

'ಉಳಿದ ಪಕ್ಷಗಳಿಂದ ಭ್ರಷ್ಟರು, ಕ್ರಿಮಿನಲ್ ಹಿನ್ನೆಲೆಯವರು, ಸುಳ್ಳು ಹೇಳುವವರು ಸ್ಪರ್ಧಿಸಿದರೆ, ಆಮ್ ಆದ್ಮಿ ಪಾರ್ಟಿಯಿಂದ ಪ್ರಾಮಾಣಿಕ ವ್ಯಕ್ತಿಗಳು ಚುನಾವಣಾ ಕಣಕ್ಕೆ ಧುಮುಕಲಿದ್ದಾರೆ. ಕರ್ನಾಟಕದಲ್ಲಿ ಭ್ರಷ್ಟ ಬಿಜೆಪಿ ಸರ್ಕಾರದ ಆಡಳಿತವನ್ನು ಅಂತ್ಯಗೊಳಿಸಿ, ಆಮ್ ಆದ್ಮಿ ಪಾರ್ಟಿಯ ಪಾರದರ್ಶಕ ಹಾಗೂ ಪ್ರಾಮಾಣಿಕ ಆಡಳಿತವನ್ನು ತರಲಾಗುವುದು' ಎಂದು ಹೇಳಿದರು.

ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಮಾತನಾಡಿ, 'ಕಳೆದ ಹತ್ತು ವರ್ಷಗಳಲ್ಲಿ ಆಡಳಿತ ನಡೆಸಿದ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಸರ್ಕಾರಿ ಶಾಲೆಗಳು ಹಾಗೂ ಆರೋಗ್ಯ ಕೇಂದ್ರಗಳಲ್ಲಿ ಸುಧಾರಣೆ ತರುವ ಪ್ರಯತ್ನವನ್ನೇ ಮಾಡಿಲ್ಲ. ಕೇವಲ ದುಡ್ಡು ಮಾಡುವ ಉದ್ದೇಶದಿಂದ ಅಧಿಕಾರಕ್ಕೆ ಬರುವ ಈ ಪಕ್ಷಗಳಿಗೆ ಶಿಕ್ಷಣ ಹಾಗೂ ಆರೋಗ್ಯದ ಮಹತ್ವವೇ ಗೊತ್ತಿಲ್ಲ. ಇದೇ ಅವಧಿಯಲ್ಲಿ ದೆಹಲಿಯಲ್ಲಿ ಆಡಳಿತ ನಡೆಸಿದ ಆಮ್ ಆದ್ಮಿ ಪಾರ್ಟಿಯು ವಿಶ್ವದರ್ಜೆಯ ಸೌಲಭ್ಯಗಳನ್ನು ಶಿಕ್ಷಣ ಹಾಗೂ ಆರೋಗ್ಯ ವಲಯದಲ್ಲಿ ಅಳವಡಿಸಿಕೊಂಡಿದೆ. ದೆಹಲಿಯಲ್ಲಿ ಸಾಧ್ಯವಾಗಿದ್ದು ಇಲ್ಲಿ ಏಕೆ ಸಾಧ್ಯವಾಗಿಲ್ಲ ಎನ್ನುವುದನ್ನು ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳನ್ನು ಜನತೆ ಪ್ರಶ್ನಿಸಬೇಕಿದೆ' ಎಂದರು.

ಚಿತ್ರಾವಳಿ

ಹುಂಡೈ ಕಂಪನಿಯ ಹೊಸ 'ಗ್ರ್ಯಾಂಡ್ ಐ10 ನಿಯೊಸ್' ಕಾರನ್ನು ಅದ್ವೈತ್ ಹುಂಡೈ ಕಂಪನಿಯ ರೆಸಿಡೆನ್ಸಿ ರಸ್ತೆಯ ಶೋರೂಂನಲ್ಲಿ ಚಿತ್ರನಟಿ ಶರಣ್ಯಾ ಶೆಟ್ಟಿ, ಅದ್ವೈತ್ ಹುಂಡೈನ ಮಾರುಕಟ್ಟೆ ಹಾಗೂ ಮಾರಾಟ ವಿಭಾಗದ ನಿರ್ದೇಶಕ ಅಜಯ್ ಸಿಂಗ್, ಹುಂಡೈ ಮೋಟರ್ಸ್‌ನ ಸಾಹಿಲ್ ಕುಮಾರ್ ಸಮ್ಮುಖದಲ್ಲಿ ಬುಧವಾರ ಅನಾವರಣಗೊಳಿಸಲಾಯಿತು.

ನಗರದ ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನೂತನವಾಗಿ ನಿರ್ಮಿಸಿರುವ ಕೆಂಗಲ್ ಹನುಮಂತಯ್ಯ ರಂಗಮಂದಿರವನ್ನು ಶಾಸಕ ಎಂ. ಕೃಷ್ಣಪ್ಪ ಬುಧವಾರ ಲೋಕಾರ್ಪಣೆಗೊಳಿಸಿದರು. ಕಾಲೇಜಿನ ಪ್ರಾಂಶುಪಾಲ ವೈ. ವೆಂಕಟೇಶಪ್ಪ, ರಂಗ ನಿರ್ದೇಶಕ ಸಿ. ಬಸವಲಿಂಗಯ್ಯ, ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷ ಎಚ್.ಸಿ. ಗೋಪಾಲ್ ಇದ್ದರು. –ಪ್ರಜಾವಾಣಿ ಚಿತ್ರ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಹೃದಯ ವಿಶಾಲವಾಗಿದ್ದರೆ ಮಾತ್ರ ಅಲ್ಲಿ ನಿಜವಾದ ಜ್ಞಾನ ಹೊಮ್ಮುತ್ತದೆ.

–ಸ್ವಾಮಿ ವಿವೇಕಾನಂದ

ಐ.ಟಿ. ನಿಯಮಕ್ಕೆ ತಿದ್ದುಪಡಿ ಉದ್ದೇಶ ಪ್ರಜಾತಂತ್ರ ವಿರೋಧಿ ಕ್ರಮ

ಕೇಂದ್ರ ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಕರಡು ಐ.ಟಿ. ನಿಯಮಗಳು–2021ಕ್ಕೆ ತರಲು ಉದ್ದೇಶಿಸಿರುವ ತಿದ್ದುಪಡಿಗಳು ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ವಾಕ್ ಸ್ವಾತಂತ್ರ್ಯವನ್ನು ಉಲ್ಲಂಘಿಸುವಂತೆ ಇವೆ. ಕೇಂದ್ರ ಸರ್ಕಾರದ ಅಧೀನದಲ್ಲಿರುವ ಪ್ರೆಸ್ ಇನ್ಫರ್ಮೇಷನ್ ಬ್ಯೂರೊ (ಪಿಐಬಿ) ಯಾವ ಸುದ್ದಿಗಳನ್ನು 'ಸುಳ್ಳು' ಎಂದು ವರ್ಗೀಕರಿಸುತ್ತದೆಯೋ ಆ ಸುದ್ದಿಗಳನ್ನು ಸಾಮಾಜಿಕ ಜಾಲತಾಣ ಕಂಪನಿಗಳು ತಮ್ಮ ಜಾಲತಾಣಗಳಿಂದ ತೆಗೆದುಹಾಕಬೇಕು ಎಂದು ಈ ಉದ್ದೇಶಿತ ತಿದ್ದುಪಡಿ ಹೇಳುತ್ತದೆ. ಸರ್ಕಾರದ ಅಧೀನದಲ್ಲಿ ಕೆಲಸ ಮಾಡುವ ಸಂಸ್ಥೆಯಾಗಿರುವ ಪಿಐಬಿ, ಒಂದು ಸುದ್ದಿಯು ಅಸಲಿಯೋ ನಕಲಿಯೋ ಎಂಬುದನ್ನು ತೀರ್ಮಾನಿಸುವ ಅಧಿಕಾರ ಹೊಂದಿಲ್ಲ. ಸುದ್ದಿಯು ಅಸಲಿಯೋ ಅಥವಾ ನಕಲಿಯೋ ಎಂಬುದನ್ನು ಪರಿಶೀಲಿಸುವ ಅಧಿಕಾರವನ್ನು ಪಿಐಬಿ ಅಥವಾ ಬೇರೆ ಯಾವುದೇ ಸಂಸ್ಥೆಗೆ ನೀಡುವ ಅವಕಾಶವನ್ನು ಉದ್ದೇಶಿತ ತಿದ್ದುಪಡಿಯು ಸರ್ಕಾರಕ್ಕೆ ನೀಡುತ್ತದೆ. ಉದ್ದೇಶಿತ ತಿದ್ದುಪಡಿಗಳು ನಿಯಮವಾಗಿ ಜಾರಿಗೆ ಬಂದ ಸಂದರ್ಭದಲ್ಲಿ, ಪಿಐಬಿಯ ಪರಿಶೀಲನಾ ತಂಡವು 'ನಕಲಿ' ಎಂದು ಹೇಳಿದ ಯಾವುದೇ ಸುದ್ದಿಯ ವೆಬ್ ಕೊಂಡಿಯನ್ನು ಹಾಗೂ ಸುದ್ದಿಯ ವಿಡಿಯೊವನ್ನು ಫೇಸ್‌ಬುಕ್, ಟ್ವಿಟರ್, ಯುಟ್ಯೂಬ್‌ನಂತಹ ಆನ್‌ಲೈನ್ ಮಾಧ್ಯಮಗಳಿಂದ ತೆಗೆಯಬೇಕಾಗುತ್ತದೆ.

ವ್ಯಕ್ತಿಯನ್ನು 'ಸುದ್ದಿಯ ಮೂಲದ ವಿಚಾರದಲ್ಲಿ ತಪ್ಪುದಾರಿಗೆ ಎಳೆಯುವ ಅಥವಾ ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿಯನ್ನು ಹರಡುವ ಯಾವುದನ್ನೂ' ಓದುಗ ಹಾಗೂ ಸುದ್ದಿಮೂಲದ ನಡುವೆ ಮಧ್ಯವರ್ತಿಯಾಗಿ ಕೆಲಸ ಮಾಡುವ ವೇದಿಕೆಗಳು ಪ್ರಕಟಿಸುವಂತೆ ಇಲ್ಲ ಎಂದು ಕೂಡ ತಿದ್ದುಪಡಿ ಹೇಳುತ್ತದೆ.

ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳ, ತಪ್ಪು ಮಾಹಿತಿಗಳ, ಬೇಜವಾಬ್ದಾರಿಯಿಂದ ಕೂಡಿದ ಹಾಗೂ ಉತ್ತರದಾಯಿತ್ವ ಇಲ್ಲದ ವಸ್ತು–ವಿಷಯಗಳ ಪ್ರವಾಹವೇ ಇದೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಅವುಗಳನ್ನು ತೊಡೆಯಲು 'ಹತ್ತಿಕ್ಕುವ ಅಸ್ತ್ರ'ವನ್ನು ಬಳಸುವ ಕೆಲಸವನ್ನು ಸರ್ಕಾರ ಮಾಡಬಾರದು. ಪಿಐಬಿ ಮಾಡಬೇಕಿರುವ ಕೆಲಸ 'ಸರ್ಕಾರದ ನೀತಿಗಳು, ಕಾರ್ಯಕ್ರಮಗಳು, ಯೋಜನೆಗಳು ಮತ್ತು ಸಾಧನೆಗಳ ಬಗ್ಗೆ ಮುದ್ರಣ ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮಗಳಿಗೆ ಮಾಹಿತಿ ಒದಗಿಸುವುದು'. ಸುದ್ದಿಯನ್ನು ಪರಿಶೀಲಿಸುವ, ಅದರ ಮೌಲ್ಯಮಾಪನ ಮಾಡುವ ಅಥವಾ ಸುದ್ದಿಯ ಬಗ್ಗೆ ತೀರ್ಮಾನ ಹೇಳುವ ನೈಪುಣ್ಯವು ಪಿಐಬಿಗೆ ಇಲ್ಲ. ಸರ್ಕಾರಕ್ಕೆ ಸಂಬಂಧಿಸಿದ ಸುದ್ದಿಗಳ ಸಾಚಾತನವನ್ನು ಪರಿಶೀಲಿಸಲು ಪ್ರತ್ಯೇಕ ತಂಡವೊಂದನ್ನು ಮೂರು ವರ್ಷಗಳ ಹಿಂದೆ ರಚಿಸಲಾಗಿದೆ. ಆದರೆ ಆ ತಂಡದ ಕೆಲಸಗಳು ತೃಪ್ತಿಕರ ಮಟ್ಟದಲ್ಲಿ ಇಲ್ಲ. ಅದು ದೊಡ್ಡ ತಪ್ಪುಗಳನ್ನು ಮಾಡಿರುವುದೂ ಇದೆ. ಸರ್ಕಾರದ ವಿರುದ್ಧ ಇರುವ ಹಾಗೂ ಸರ್ಕಾರದ ಬಗ್ಗೆ ಟೀಕೆಗಳನ್ನು ಮಾಡುವ ವಿಷಯಗಳನ್ನು ಅದು ತಪ್ಪು ಮಾಹಿತಿ ಎಂದು ಪರಿಗಣಿಸಿ, ಅವುಗಳನ್ನು ತೆಗೆದುಹಾಕಬೇಕು ಎಂದು ಹೇಳುತ್ತದೆ. ಸರ್ಕಾರದ ಸಂಸ್ಥೆಗಳು ಅವುಗಳಿಗೆ ನಿಗದಿ ಮಾಡಿದ ನಿಯಮ–ನಿಬಂಧನೆಗಳಿಗೆ ಅನುಗುಣವಾಗಿ ಮಾತ್ರ ಆಲೋಚಿಸುತ್ತವೆ. ದೇಶದಲ್ಲಿ ಸ್ವಾಧೀನಕಾರರ ಧೋರಣೆಗಳು ಬಲಗೊಳ್ಳುತ್ತಿರುವ ಈಗಿನ ವಾತಾವರಣದಲ್ಲಿ ಇದು ಹೆಚ್ಚು ಪ್ರಸ್ತುತವಾಗುತ್ತದೆ. ಸರ್ಕಾರ ಈಗ ಪ್ರಸ್ತಾಪಿಸಿರುವುದು ಸುದ್ದಿಯನ್ನು ನಿರ್ಬಂಧಿಸುವ ಕ್ರಮ. ಆದರೆ ಅದು ಆ ಪದವನ್ನು ಬಳಸಿಲ್ಲ, ಅಷ್ಟೇ. ಪಿಐಬಿಯಂತಹ ಸಂಸ್ಥೆಯ ಮೂಲಕ ಕೇಂದ್ರ ಸರ್ಕಾರವು ಸಾಮಾಜಿಕ ಜಾಲತಾಣಗಳನ್ನು ನಿಯಂತ್ರಿಸುವ ಆಲೋಚನೆ ಹೊಂದಿರುವುದು ವಿಚಿತ್ರವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಕಲಿ, ಅಸಲಿ ಯಾವುದು ಎಂಬುದನ್ನು ಪರಿಶೀಲಿಸಿ, ತೀರ್ಮಾನಿಸುವ ಹಾಗೂ ಅವುಗಳ ವಿರುದ್ಧ ಕ್ರಮ ತೆಗೆದುಕೊಳ್ಳುವ ಅಧಿಕಾರಗಳೆಲ್ಲ ಕೇಂದ್ರ ಸರ್ಕಾರದ ಬಳಿ ಇರಲಿವೆ. ಭಾರತದ ಸಂಪಾದಕರ ಒಕ್ಕೂಟವು ಹೇಳಿರುವಂತೆ, 'ಸರ್ಕಾರವು ತನ್ನದೇ ಕೆಲಸಗಳ ವಿಚಾರದಲ್ಲಿ ಯಾವುದು ಅಸಲಿ, ಯಾವುದು ನಕಲಿ ಎಂಬುದನ್ನು ತೀರ್ಮಾನಿಸುವ ಸಂಪೂರ್ಣ ಅಧಿಕಾರವನ್ನು ತನಗೇ ಕೊಟ್ಟುಕೊಂಡಿದೆ'.

> ಇಂತಹ ಅಧಿಕಾರವನ್ನು ಸರ್ಕಾರವು ಬಳಸಲು ಆರಂಭಿಸುವುದರಿಂದ ಸಮಾಜದಲ್ಲಿ ಮಾಹಿತಿಯ ಮುಕ್ತ ಹರಿವನ್ನು ತಡೆದಂತಾಗುತ್ತದೆ

ಇಂತಹ ಅಧಿಕಾರವನ್ನು ಸರ್ಕಾರವು ತನಗೆ ತಾನೇ ಕೊಟ್ಟುಕೊಂಡು, ಅಧಿಕಾರವನ್ನು ಬಳಸಲು ಆರಂಭಿಸುವುದರಿಂದ ಸಮಾಜದಲ್ಲಿ ಮಾಹಿತಿಯ ಮುಕ್ತ ಹರಿವನ್ನು ತಡೆದಂತಾಗುತ್ತದೆ. ಅದು ಪತ್ರಿಕಾ ವೃತ್ತಿಗೂ ಕೆಡುಕು ಉಂಟುಮಾಡುತ್ತದೆ. ಅಭಿವ್ಯಕ್ತಿ ಸ್ವಾತಂತ್ರ್ಯವು ಪ್ರಜೆಗಳ ಮೂಲಭೂತ ಹಕ್ಕುಗಳಲ್ಲಿ ಒಂದು. ಮುಕ್ತ ಮಾಧ್ಯಮಗಳು ಮುನ್ನಡೆಯುವಂತೆ ಕಾಪಾಡುವುದು ಇದೇ ಹಕ್ಕು. ಪ್ರಜಾತಂತ್ರ ವ್ಯವಸ್ಥೆಯ ಮೂಲಭೂತ ಅಗತ್ಯಗಳಲ್ಲಿ ಒಂದು ಮುಕ್ತ ಮಾಧ್ಯಮ ವ್ಯವಸ್ಥೆ. ವಾಸ್ತವದಲ್ಲಿ ಮುಕ್ತ ಮಾಧ್ಯಮ ಎಂಬುದು ಪ್ರಜಾತಂತ್ರಕ್ಕೆ ಇರುವ ಪರ್ಯಾಯ ಪದವೂ ಹೌದು. ಸರ್ಕಾರದ ಪ್ರಸ್ತಾವವು ಪ್ರಜಾತಂತ್ರ ವಿರೋಧಿ ಕ್ರಮ. ಇದನ್ನು ಸರ್ಕಾರ ಕೈಬಿಡಬೇಕು.

ಗಿರಿಧಾಮಗಳ ಧಾರಣಶಕ್ತಿ ಕುರಿತ ಅಧ್ಯಯನಗಳು ತ್ವರಿತಗತಿಯಲ್ಲಿ ನಡೆಯಬೇಕಿದೆ

ಪರ್ವತಗಳು ಕರೆಯುತ್ತಿಲ್ಲ, ನೀವು ಬರಬೇಡಿ

ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

'ಮೌಂಟೆನ್ಸ್ ಆರ್ ಕಾಲಿಂಗ್, ಐ ಮಸ್ಟ್ ಗೋ'- ಇದು ಅಮೆರಿಕದ ಸಾಹಸಿ ನಿಸರ್ಗಾಸಕ್ತ, ಜೀವವಿಜ್ಞಾನಿ, ಪರಿಸರ ಚಿಂತಕ, ಲೇಖಕ, ರಾಷ್ಟ್ರೀಯ ಉದ್ಯಾನಗಳ ಪಿತಾಮಹ ಎಂಬ ಹಿರಿಮೆಯ ಜಾನ್ ಮ್ಯುರ್ ಅವರ ಪ್ರಸಿದ್ಧ ಸಾಲು. ಹೊರಾಂಗಣ ಸಾಹಸ ಉತ್ಸಾಹಿಗಳನ್ನು ಪ್ರಕೃತಿಯತ್ತ ಸೆಳೆಯುವ ಮೋಹಕ ಮಂತ್ರ. ಪ್ರಪಂಚದ ದ್ಯಂತ ನಿಸರ್ಗ ಪ್ರವಾಸೋದ್ಯಮದ ಎಲ್ಲ ಮಳಿಗೆಗಳ ಆಕರ್ಷಕ ಉತ್ಪನ್ನಗಳ ಮೇಲೆ ತಪ್ಪದೇ ಕಾಣಿಸುವ ಪ್ರೇರಣಾತ್ಮಕ ಸಂದೇಶ.

'ಮೌಂಟೆನ್ಸ್ ಆರ್ ನಾಟ್ ಕಾಲಿಂಗ್, ಪ್ಲೀಸ್ ಡೋಂಟ್ ಕಮ್'- ಇದು, ಮೂರು ವರ್ಷಗಳ ಹಿಂದೆ ಹಿಮಾಚಲ ಪ್ರದೇಶದ ಪರಿಸರಾಸಕ್ತ ನಾಗರಿಕರು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಟ್ಟ ತದ್ವಿರುದ್ಧ ವಾದ ಸಂದೇಶ. ಪ್ರವಾಸಿ ಋತುವಿನಲ್ಲಿ, ನಮ್ಮ ದೇಶದ ಅನೇಕ ಗಿರಿಧಾಮಗಳಲ್ಲಿ ಇಂತಹ ಕಳಕಳಿಯ ಕೋರಿಕೆ ಇದೀಗ ಮತ್ತೆ ಮತ್ತೆ ಬರಲು ಪ್ರಾರಂಭವಾಗಿದೆ.

ಒಂದು ಕಾಲದಲ್ಲಿ ಶಿಮ್ಲಾ, ಹಿಮಾಲಯದ ಚೆಲುವಿನ ಮುಕುಟ ಹಾಗೆ ಮಲಗಿದ್ದಂತಹ ಪುಟ್ಟ, ಸುಂದರ ಪಟ್ಟಣ. ಬೆಟ್ಟದ ಬೆನ್ನಮೇಲೆ ಸಾಲುಮರಗಳಿಂದ ಅಲಂಕೃತವಾಗಿ ನಿಧಾನವಾಗಿ ಏರುವ ರಸ್ತೆಗಳು, ಸ್ಟ್ರಾಬೆರಿ, ರಾಸ್ಪ್‌ಬೆರಿ, ಚೆರ್ರಿಗಳಂತಹ ಹಣ್ಣಿನ ತೋಟಗಳು, ಹೂಗಳಿಂದ ತುಂಬಿದ ಕಾಲುದಾರಿಗಳು, ಬ್ರಿಟಿಷ್ ಕಾಲದ ವಿಶಾಲವಾದ ಹುಲ್ಲುಹಾಸಿನ ಬಂಗಲೆಗಳು ಬಹು ಪ್ರಸಿದ್ಧ. ಆದರೆ 90ರ ದಶಕದಿಂದ ಪ್ರಾರಂಭವಾಗಿ, ವರ್ಷ ವರ್ಷವೂ ಪ್ರವಾಹ ದೋಪಾದಿಯಲ್ಲಿ ಏರುತ್ತಿರುವ ಪ್ರವಾಸಿಗರಿಂದ ಈ ಎಲ್ಲವೂ ಕಣ್ಮರೆಯಾಗುವ ಹಂತ ತಲುಪುತ್ತಿವೆ. ಈ ಪ್ರವಾಸಿಗರಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಲು ಹೋಟೆಲುಗಳು, ವಸತಿಗೃಹಗಳು, ಹೋಮ್‌ಸ್ಟೇಗಳು, ರೆಸಾರ್ಟ್‌ಗಳು ಯಾವುದೇ ನಿಯಮ, ನಿಯಂತ್ರಣ ಗಳಿಲ್ಲದೇ ಅಣಬೆಗಳಂತೆ ಬೆಳೆದಿವೆ. ತೀವ್ರವಾದ ನೀರಿನ ಕೊರತೆ, ತ್ಯಾಜ್ಯ ವಿಲೇವಾರಿ, ವಾಹನಗಳ ವಿಪರೀತ ದಟ್ಟಣೆ, ವಾಯುಮಾಲಿನ್ಯದಂತಹ ಸಮಸ್ಯೆಗಳು ಕೈಮೀರಿ ಬೆಳೆಯುತ್ತಿವೆ.

ಹಿಮಾಲಯದ ಸೂಕ್ಷ್ಮ ಪರ್ವತ ಪ್ರದೇಶದಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಕಾಮಗಾರಿಗಳು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತಿವೆ. ಇದು ಕೇವಲ ಶಿಮ್ಲಾದ ಚಿತ್ರಣವಲ್ಲ. ಡಾಲ್‌ಹೌಸಿ, ಮನಾಲಿ, ಕಸೌಲಿ, ಮಸ್ಸೂರಿ, ನೈನಿತಾಲ್, ರಾಣಿಖೇತ್, ಮಹಾಬಲೇಶ್ವರ, ದಕ್ಷಿಣದ ಕೊಡೈಕೆನಾಲ್, ಊಟಿ, ಮಡಿಕೇರಿಯ ಕಥೆಯೂ ಇದೇ. ಹಿಮಾಲಯದ ಪರ್ವತಶ್ರೇಣಿಯಲ್ಲಿರುವ ಪವಿತ್ರ ಯಾತ್ರಾ ಸ್ಥಳಗಳೂ ಇದಕ್ಕೆ ಹೊರತಲ್ಲ. ಆಕರ್ಷಕ ಕಂಬಳಿಹುಳು ಮನಮೋಹಕ ಬಣ್ಣದ ಚಿಟ್ಟೆಯಾಗಿ ಪರಿವರ್ತಿತವಾಗುವುದು ನಿಸರ್ಗದ ಅದ್ಭುತ ಪ್ರಕ್ರಿಯೆ. ಆದರೆ ಅಂತಹ ವರ್ಣಮಯ ಚಿಟ್ಟೆ ತನ್ನೆಲ್ಲ ಸೌಂದರ್ಯವನ್ನು ಕಳೆದುಕೊಂಡು ಕಂಬಳಿಹುಳುವಾದರೆ? ನಮ್ಮ ದೇಶದ ಬಹುತೇಕ ಗಿರಿಧಾಮಗಳಲ್ಲಿ ಆಗುತ್ತಿರುವುದು ಇದೇ ವಿಪರ್ಯಾಸದ ಬೆಳವಣಿಗೆ ಎನ್ನುವುದು 60 ವರ್ಷಗಳಿಂದ ಮಸ್ಸೂರಿಯ ನಿವಾಸಿಯಾದ ಪ್ರಸಿದ್ಧ ಲೇಖಕ ರಸ್ಕಿನ್ ಬಾಂಡ್ ಮಾತುಗಳು.

ಇದೀಗ ಸುದ್ದಿಯಲ್ಲಿರುವ ಜೋಶಿಮಠವನ್ನೇ ಪರಿಗಣಿಸಿ. ಈ ಪಟ್ಟಣದ ಸ್ಥಳೀಯ ಜನಸಂಖ್ಯೆ 25,000. ಆದರೆ 2017ರಲ್ಲಿ ಜೋಶಿಮಠದಲ್ಲಿ ತಂಗಿದ್ದು, ಮುಂದೆ ಬದರಿನಾಥ, ಹೇಮಕುಂಡ್ ಸಾಹಿಬ್, ಹೂ ಕಣಿವೆ, ಸ್ಕೀಯಿಂಗ್ ತಾಣ ಔಲಿಗಳತ್ತ ಸಾಗಿದ ಪ್ರವಾಸಿಗರ ಸಂಖ್ಯೆ 2.4 ಲಕ್ಷ. 2018ರಲ್ಲಿ 4.3 ಲಕ್ಷವಾದರೆ, 2019ರಲ್ಲಿ 4.9 ಲಕ್ಷ. 2022ರಲ್ಲಿ ಸುಮಾರು 10 ಲಕ್ಷ! ಜೋಶಿಮಠಕ್ಕೆ ಈ ಪ್ರಮಾಣದ ಪ್ರವಾಸಿಗರ ಒತ್ತಡವನ್ನು ತಡೆಯುವ ಸಾಮರ್ಥ್ಯವೇ ಇಲ್ಲವೆಂಬುದು ಸಾಮಾನ್ಯ ಅಭಿಪ್ರಾಯ.

ಇನ್ನು ಒಟ್ಟಾರೆಯಾಗಿ ಉತ್ತರಾಖಂಡದ ಪರಿಸ್ಥಿತಿ ಮತ್ತಷ್ಟು ಗಾಬರಿ ಹುಟ್ಟಿಸುವಂತಿದೆ. 2022ರ ಅಂತ್ಯದ ವೇಳೆಗೆ ಉತ್ತರಾಖಂಡ ರಾಜ್ಯದ ಸೂಕ್ಷ್ಮ ಪರ್ವತ ಪ್ರದೇಶದ ತಾಣಗಳಿಗೆ ಭೇಟಿಯಿತ್ತ ಪ್ರವಾಸಿಗರ ಸಂಖ್ಯೆ ಸುಮಾರು 5 ಕೋಟಿ. ಇವರಲ್ಲದೇ ಹರಿದ್ವಾರ, ಗೋಮುಖ ಮತ್ತು ಗಂಗೋತ್ರಿಯಿಂದ ಪವಿತ್ರ ಗಂಗಾ ನದಿಯ ನೀರನ್ನು ಒಯ್ಯುವ 4 ಕೋಟಿ ಶಿವಭಕ್ತ ಕನ್ವರ್ ಯಾತ್ರಿಗಳು. ಚಾರ್‌ಧಾಮ್‌ಗಳಿಗೆ ಭೇಟಿಯಿತ್ತ 45 ಲಕ್ಷ ಭಕ್ತರು! ಒಟ್ಟಾರೆ ಸುಮಾರು 10 ಕೋಟಿ. ಕೇದಾರನಾಥದಲ್ಲಿ ಈ ಜನದಟ್ಟಣೆಯಿಂದ ಉತ್ಪನ್ನವಾದ ಘನ ತ್ಯಾಜ್ಯದ ಪ್ರಮಾಣ ಪ್ರತಿದಿನ 10,000 ಕಿಲೋಗ್ರಾಮ್‌ಗಳು. ಕೇದಾರನಾಥದಿಂದ 10 ಕಿ.ಮೀ. ದೂರದಲ್ಲಿರುವ ಗೌರಿಕುಂಡ್ ಬಳಿ, ಐದು ಅಡಿ ಆಳದ ಗುಂಡಿಗಳನ್ನು ಅಗೆದು, ಬಿಸ್ಕತ್ತು ಮತ್ತು ಹೊಗೆಸೊಪ್ಪಿನ ಪ್ಲಾಸ್ಟಿಕ್ ಹೊರತೊಟ್ಟೆಗಳನ್ನು ಹೂಳಲಾಗುತ್ತಿದೆ. ಅಪಾರ ಪ್ರಮಾಣದ ತ್ಯಾಜ್ಯವನ್ನು ನೇರವಾಗಿ ಗಂಗಾ, ಅಲಕಾನಂದ ನದಿಗಳಿಗೆ ಸುರಿಯಲಾಗುತ್ತಿದೆ. ಕುಲು ಮತ್ತು ಮನಾಲಿ ಮುನಿಸಿಪಲ್ ಕೌನ್ಸಿಲ್‌ಗಳು, ಪ್ರವಾಸಿ ಋತುವಿನಲ್ಲಿ ಪ್ರತಿದಿನ ಉತ್ಪತ್ತಿಯಾಗುವ 50,000 ಕೆ.ಜಿ. ಯಷ್ಟು ಘನತ್ಯಾಜ್ಯವನ್ನು ಬಿಯಾಸ್ ನದಿಗೆ ಸುರಿಯುತ್ತವೆ.

ದೇಶದ ಬಹುತೇಕ ಎಲ್ಲ ಗಿರಿಧಾಮಗಳ ಕಥೆಯೂ ಇದೇ. 2022ರ ಜುಲೈ ಅಂತ್ಯದ ವೇಳೆಗೆ, 60 ದಿವಸಗಳ ಅವಧಿಯಲ್ಲಿ ಬದರಿನಾಥ, ಕೇದಾರನಾಥ, ಗಂಗೋತ್ರಿ, ಯಮುನೋತ್ರಿಗಳಿಗೆ ಭೇಟಿ ನೀಡಿದ್ದ ಯಾತ್ರಾರ್ಥಿಗಳ ಸಂಖ್ಯೆ 28 ಲಕ್ಷ. ಹಿಮಾಲಯದ ಆಂತರಿಕ ರಚನೆ, ಅಸ್ಥಿರತೆ, ನಿರಂತರ ಸ್ಥಿತ್ಯಂತರಗಳು ಸಾಮಾನ್ಯಜ್ಞಾನ. ಪ್ರಪಂಚದ ಅತಿ ಕಿರಿಯ ವಯಸ್ಸಿನ ಪರ್ವತ ಶ್ರೇಣಿಯ ತಾಣಗಳಲ್ಲಿ ಈ ಸಂಖ್ಯೆಯ ಪ್ರವಾಸಿಗರಿಂದ ಆತಂಕಕ್ಕೆ ಒಳಗಾದ ವಾಡಿಯಾ 'ಇನ್‌ಸ್ಟಿಟ್ಯೂಟ್ ಆಫ್ ಹಿಮಾಲಯನ್ ಜಿಯಾಲಜಿ' ಸಂಸ್ಥೆಯ ವಿಜ್ಞಾನಿಗಳು ಅಪಾಯದ ಸಾಧ್ಯತೆಗಳ ಬಗ್ಗೆ ಎಚ್ಚರಿಸಿ, ಈ ತಾಣಗಳ ಪ್ರವಾಸಿ ಧಾರಣಶಕ್ತಿಯ ಬಗ್ಗೆ ಆ ಕೂಡಲೇ ಅಧ್ಯಯನ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದರು. ಮುಂದಿನ ನಾಲ್ಕೇ ತಿಂಗಳಿನಲ್ಲಿ ಜೋಶಿಮಠದ ಭೂಕುಸಿತ ಸಂಭವಿಸಿದೆ.

ಆಹಾರ, ನೀರು, ಆವಾಸ ಮುಂತಾದವುಗಳ ಆಧಾರದ ಮೇಲೆ ನಿರ್ದಿಷ್ಟ ಪ್ರದೇಶ ಅಥವಾ ಪರಿಸರವೊಂದು ಪೋಷಿಸಬಹುದಾದ ಜೀವಿಗಳ ಗರಿಷ್ಠ ಸಂಖ್ಯೆಯೇ ಆ ಪ್ರದೇಶದ ಧಾರಣಶಕ್ತಿ. ಈ ಪೋಷಿಸುವ ಪ್ರಕ್ರಿಯೆ ಸುಸ್ಥಿರವಾಗಿರಬೇಕು. ಅಂದರೆ ಈ ಪ್ರಕ್ರಿಯೆಯ ಯಾವ ಹಂತದಲ್ಲೂ ಪರಿಸರದ ಗುಣಮಟ್ಟ ಹಾಳಾಗಬಾರದು. ವನ್ಯಜೀವಿ ನಿರ್ವಹಣೆಯ ಭಾಗವಾಗಿ ವ್ಯಾಪಕವಾಗಿ ಬಳಕೆಗೆ ಬಂದ ಈ ಪರಿಕಲ್ಪನೆಯನ್ನು, ಪ್ರವಾಸಿ ತಾಣಗಳು ಭರಿಸಬಹುದಾದ ಪ್ರವಾಸಿಗರ ಗರಿಷ್ಠ ಸಂಖ್ಯೆಯನ್ನು ನಿರ್ಧರಿಸಲು ಬಳಸುವ ಪ್ರಯತ್ನಗಳು 70-80ರ ದಶಕಗಳಲ್ಲಿ ಯುರೋಪ್ ಮತ್ತು ಅಮೆರಿಕದಲ್ಲಿ ಪ್ರಾರಂಭವಾದವು.

2018ರಲ್ಲಿ ಎಲ್ಲ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು ಆಯಾ ರಾಜ್ಯಗಳ ಪರಿಸರ ಸೂಕ್ಷ್ಮ ವಲಯಗಳಲ್ಲಿ (ಇಕೊ ಸೆನ್ಸಿಟಿವ್ ಜೋನ್) ಧಾರಣಶಕ್ತಿಯ ಅಧ್ಯಯನ ಕೈಗೊಳ್ಳುವಂತೆ ಆದೇಶ ನೀಡಿತು. ನಮ್ಮ ದೇಶದಲ್ಲಿ ರಾಷ್ಟ್ರೀಯ ಉದ್ಯಾನ, ಅಭಯಾರಣ್ಯದಂತಹ ರಕ್ಷಿತ ಪ್ರದೇಶಗಳ ಸುತ್ತಲಿನ 10 ಕಿ.ಮೀ. ವ್ಯಾಪ್ತಿಯ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯವೆಂದು ಘೋಷಿಸಲಾಗಿದೆ. ಅನೇಕ ರಾಜ್ಯಗಳು ಈ ಆದೇಶ ಪಾಲನೆಯಲ್ಲಿ ವಿಳಂಬ ನೀತಿ ಅನುಸರಿಸಿದ್ದರಿಂದ, 2022ರ ಮಾರ್ಚ್‌ನಲ್ಲಿ ಹಸಿರು ನ್ಯಾಯಮಂಡಳಿಯು ರಾಜ್ಯಗಳಿಗೆ ಎಚ್ಚರಿಕೆ ನೀಡಿತ್ತು, ಇದೀಗ ಈ ಕೆಲಸ ಪ್ರಾರಂಭವಾಗಿದೆ. ಧಾರಣಶಕ್ತಿಯ ಅರ್ಥವ್ಯಾಪ್ತಿ ಇಂದು ವಿಸ್ತಾರಗೊಂಡಿದ್ದು, ಯಾವುದೇ ಪ್ರದೇಶದಲ್ಲಿ ನಡೆಸಬಹುದಾದ ಜೈವಿಕ, ಕೃಷಿ, ಅಭಿವೃದ್ಧಿ, ಕೈಗಾರಿಕೆ, ಪ್ರವಾಸೋದ್ಯಮದ ಗರಿಷ್ಠ ಮಿತಿಯನ್ನು ಅದು ಸೂಚಿಸುವುದರಿಂದ, ಪ್ರವಾಸಿಗರ ತೀವ್ರ ಒತ್ತಡವಿರುವ ಎಲ್ಲ ಸೂಕ್ಷ್ಮ ವಲಯಗಳಲ್ಲೂ ಅಧ್ಯಯನ ನಡೆಯಲಿದೆ.

ದೇಶದ ಆರ್ಥಿಕತೆಯ ದೃಷ್ಟಿಯಿಂದ ಪ್ರವಾಸೋದ್ಯಮ ಬಹಳ ಮುಖ್ಯವಾದ ವಲಯ. 2030ರ ವೇಳೆಗೆ ದೇಶದ ಜಿಡಿಪಿಗೆ ₹ 20 ಲಕ್ಷ ಕೋಟಿ ಹಾಗೂ ವಿದೇಶಿ ವಿನಿಮಯಕ್ಕೆ ₹ 4.5 ಲಕ್ಷ ಕೋಟಿ ಕೊಡುಗೆ ನೀಡುವ ಅಂದಾಜಿರುವ ಈ ವಲಯ ಸುಮಾರು 14 ಕೋಟಿ ಉದ್ಯೋಗಗಳನ್ನು ಸೃಷ್ಟಿಸಲಿದೆ. ಮಿತಿಮೀರಿದ ಪ್ರವಾಸಿಗರ ಸಂಖ್ಯೆಯಿಂದ ಪ್ರವಾಸಿ ತಾಣಗಳು ಕುಸಿದು ನಾಶವಾಗದಂತೆ ಕಾಪಾಡಿದರೆ ಮಾತ್ರ ಇದು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಗಿರಿಧಾಮಗಳ ಧಾರಣಶಕ್ತಿಯನ್ನು ಗೊತ್ತುಪಡಿಸುವ ಅಧ್ಯಯನಗಳು ತ್ವರಿತಗತಿಯಲ್ಲಿ ನಡೆಯಬೇಕಾದ ಅಗತ್ಯವಿದೆ.

ವಿಶ್ವವಿಖ್ಯಾತ ತಾಜ್‌ಮಹಲಿಗೆ ಪ್ರತಿನಿತ್ಯ 40,000 ಪ್ರವಾಸಿಗರಿಗೆ ಮಾತ್ರ ಪ್ರವೇಶಾವಕಾಶ ಕಲ್ಪಿಸಿರುವ ಭಾರತೀಯ ಪುರಾತತ್ವ ಇಲಾಖೆಯ ವಿವೇಕದ ನಿರ್ಧಾರ ಈಗ ಜಾರಿಯಲ್ಲಿದೆ. ಹಿಮಾಲಯವೂ ಸೇರಿದಂತೆ, ಪ್ರವಾಸಿಗರ ತೀವ್ರ ಒತ್ತಡವಿರುವ ಎಲ್ಲ ಗಿರಿಧಾಮಗಳಿಗೂ ಈ ರೀತಿಯ ನಿರ್ಬಂಧ ವಿಧಿಸುವುದು ಸಾಧ್ಯವಾದರೂ, ಚಾರ್‌ಧಾಮ್‌ನಂತಹ ಧಾರ್ಮಿಕ ಯಾತ್ರಾ ಸ್ಥಳಗಳಲ್ಲಿ ಜಾರಿಗೆ ತರುವುದು ಸ್ವಲ್ಪ ಕಷ್ಟವಾಗಬಹುದು. ಆದರೆ ಪರ್ವತ ಪ್ರದೇಶಗಳ ಸೂಕ್ಷ್ಮ ಪರಿಸರ ಮತ್ತು ಸ್ಥಳೀಯ ನಿವಾಸಿಗಳ ಒಳಿತಿನ ದೃಷ್ಟಿಯಿಂದ ಅಂತಹ ಕ್ರಮ ತೀರಾ ಅಗತ್ಯ.

ಚುರುಮುರಿ

ಭಾಗ್ಯಾಸ್ತ್ರ ಪ್ರಯೋಗ

• ನಾರಾಯಣ ರಾಯಚೂರ್

'ಭಾಗ್ಯವಂತರು... ನಾವು ಭಾಗ್ಯವಂತರು...'

'ಸ್ವಲ್ಪ ರೇಡಿಯೊ ವಾಲ್ಯೂಮ್ ಕಡಿಮೆ ಮಾಡಿದ್ರೆ, ಪೇಪರ್‌ನಲ್ಲಿ ಬಂದಿರೋ ಭಾಗ್ಯಗಳ ಪಟ್ಟಿಯನ್ನ ಗಟ್ಟಿಯಾಗಿ ಓದಬಹುದು'.

'ಏನ್ರೀ, ಭಾಗ್ಯಗಳ ಪಟ್ಟಿ?!'

'ಚುನಾವಣೆ ಬಂದ್ರೆ ಮತದಾರನಿಗೆ ಭಾಗ್ಯದ ಕಾಲವೇ ಅಲ್ಲವೆ? ಪ್ರಜಾಪ್ರಭುತ್ವದಲ್ಲಿ ಮತದಾರ 'ಪ್ರಭು'ವಾಗಿ ಮೆರೆಯೋದು ಚುನಾವಣೆ ಹತ್ತಿರ ಬಂದಾಗ ಮಾತ್ರ ತಾನೇ?'

'ಏನೇನು ಭಾಗ್ಯಗಳಿವೆಯೋ ಆ ಪಟ್ಟಿಯಲ್ಲಿ?'

'ಪ್ರವಾಸ ಭಾಗ್ಯ, ಸೀರೆ ಭಾಗ್ಯ, ಕುಕ್ಕರ್ ಭಾಗ್ಯ, ಮೂಗುತಿ ಭಾಗ್ಯ, ತೀರ್ಥಯಾತ್ರೆ ಭಾಗ್ಯ, ಶ್ರೀನಿವಾಸ ಕಲ್ಯಾಣ ಭಾಗ್ಯ... ಸಾಕಾ?'

'ಭ್ರಷ್ಟಾಚಾರ ಬಿಟ್ಟು, ಆಲಸ್ಯ ತೊರೆದು, ನಿಯತ್ತಿನಿಂದ ಐದು ವರ್ಷ ಕೆಲಸ ಮಾಡಿಬಿಟ್ಟರೆ ಅದಕ್ಕಿಂತ ದೊಡ್ಡ ಭಾಗ್ಯ ಇನ್ನ್ಯಾವುದಿದೇರಿ? ಈ ತರಹ ಆಮಿಷ, ಖರೀದಿ... ಇದಕ್ಕೇನೂ ನೀತಿ ನಿಯಮ ಇಲ್ವಾ?'

'ಇದೆ, ಚುನಾವಣೆ ಘೋಷಣೆ ಆಗಿ ನೀತಿ ಸಂಹಿತೆ ಜಾರಿಯಾಗಿಬಿಟ್ಟರೆ ಕಷ್ಟ, ಅದಕ್ ಮುಂಚೇನೆ ಬೇಳೆ ಬೇಯಿಸಿಕೊಂಡು ಬಿಡಬೇಕೂಂತ ಆಕಾಂಕ್ಷಿಗಳು, ಪಕ್ಷಗಳು ಭಾಗ್ಯಾಸ್ತ್ರ ಪ್ರಯೋಗಿಸ್ತಾಯಿರೋದು'.

'ಎಲ್ಲ ಖರೀದಿ, ಹರಾಜು... ಕ್ರಿಕೆಟ್ ಆಟಗಾರರು, ಜನಪ್ರತಿನಿಧಿಗಳು, ಪಕ್ಷಗಳು ಎಲ್ಲ... ಈಗ ಮತದಾರರ ಮೂಗಿಗೆ ತುಪ್ಪ!'

'ಮೂಗಿಗೆ ತುಪ್ಪ ಮಾತ್ರವಲ್ಲ, ಚಿನ್ನದ ಮೂಗುತೀನೆ ಸಿಗುತ್ತಂತೆ. ಎದುರಾಳಿಗಳ ಜೊತೆ ಪೈಪೋಟಿಗೆ ಬಿದ್ದು 'ಅವರು ಮೂರು ಸಾವಿರ ಕೊಟ್ಟರೆ, ನಾವು ಆರು ಸಾವಿರ ಕೊಡ್ತೀವಿ ಅಂತ, ಅಷ್ಟೇ ಅಲ್ಲ, ಮೊಬೈಲ್‌ಗೆ ಒ.ಟಿ.ಪಿ ಬರುತ್ತಂತೆ, ಅದನ್ನ ತೋರಿಸಿದರೆ ಒಂದು 'ಗಿಫ್ಟ್' ಪ್ರತ್ಯಕ್ಷ!'

'ಗಿಫ್ಟ್ ತಗೊಂಡವರು ತಮ್ಮ ನಿರ್ಧಾರ ಶಿಫ್ಟ್ ಮಾಡಿದರೆ?'

'ಯಾತ್ರಾ ಸ್ಥಳ ಪ್ರವಾಸ ಇರೋದೇ ಅದಕ್ಕೆ. ದೇವರೆದುರು ಪ್ರಮಾಣಾನೂ ಮಾಡಿಸ್ಕೊತಾರಂತೆ'.

'ಓಹ್! ಪ್ರಮಾಣದ ಪ್ರಾಮಾಣಿಕತೆ!'

'ಯಾರಿಗೆ ಬೇಕ್ರೀ ಪ್ರಾಮಾಣಿಕತೆ, 'ಸತ್ಯವಂತರಿಗಿದು ಕಾಲವಲ್ಲ' ಅಂತ ದಾಸರೇ ಹೇಳಿದ್ದಾರಲ್ಲ!'

ರೇಡಿಯೊ ವಾಲ್ಯೂಮ್ ಜಾಸ್ತಿಯಾಗಿ 'ಉಡುಗೊರೆಯೊಂದ ತಂದಾ, ನನ್ನಯ ಮತದಾನಂದಾ...!'

ದಿನದ ಟ್ವೀಟ್

ಕನಸು ಸಾಕಾರ

ಮಹಿಳೆಯರ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಆಯೋಜನೆ ಸಾಕಾರಗೊಂಡಿರುವುದು ಸಂತಸ ತಂದಿದೆ. ಭಾರತದಲ್ಲಿ ಮಹಿಳೆಯರ ಕ್ರಿಕೆಟ್‌ಗೆ ಮಾನ್ಯತೆ ದೊರಕಿಸಲು ಮತ್ತು ಅದರ ಬೆಳವಣಿಗೆಗೆ ತೆಗೆದುಕೊಂಡ ಅದ್ಭುತ ನಿರ್ಣಯ ಇದಾಗಿದೆ. ಅದಕ್ಕಾಗಿ ಬಿಸಿಸಿಐ ಮತ್ತು ಜಯ್ ಶಾ ಅವರಿಗೆ ಧನ್ಯವಾದಗಳು. ಈ ನಿರ್ಣಯವು ಭಾರತದಲ್ಲಿ ಕ್ರಿಕೆಟ್‌ನ ಚಿತ್ರಣವನ್ನೇ ಬದಲಿಸಲಿದೆ.

ದೀಪ್ತಿ ಶರ್ಮಾ, ಭಾರತ ಕ್ರಿಕೆಟ್ ತಂಡದ ಆಟಗಾರ್ತಿ

ಕಿಡಿನುಡಿ

ಹರಿಯಾಣದ ಬಿಜೆಪಿ ನಾಯಕರು ಮತ್ತು ಇತರರು ಆನ್‌ಲೈನ್ ಮೂಲಕ ಗುರ್ಮೀತ್ ರಾಮ್ ರಹೀಮ್ ಅವರ ಸತ್ಸಂಗ ಕಾರ್ಯಕ್ರಮದಲ್ಲಿ ಖುಷಿಯಿಂದ ಪಾಲ್ಗೊಂಡು ಅವರ 'ಆಶೀರ್ವಾದ' ಪಡೆಯುತ್ತಿದ್ದಾರೆ! ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಅಪರಾಧಿಯಾಗಿ ಮತ್ತೊಮ್ಮೆ ಪೆರೋಲ್ ಮೇಲೆ ಹೊರಬಂದಿರುವ ವ್ಯಕ್ತಿಯಿಂದ ಆಶೀರ್ವಾದ! ಇದು ನ್ಯಾಯದ ಅಣಕದಂತಿದೆ ಹಾಗೂ ನೈತಿಕವಾಗಿ ಭ್ರಷ್ಟವಾಗಿರುವ ರಾಜಕೀಯ ವ್ಯವಸ್ಥೆಗೆ ಸ್ಪಷ್ಟ ನಿದರ್ಶನವಾಗಿದೆ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ

ಸೋಮವಾರ, 26-1-1998

• ಹೆಚ್ಚಿದ ಭ್ರಷ್ಟಾಚಾರ, ಹಿಂಸೆ ರಾಷ್ಟ್ರಪತಿ ತೀವ್ರ ಕಳವಳ

ನವದೆಹಲಿ, ಜ– 25 (ಪಿಟಿಐ, ಯುಎನ್‌ಐ)– ದೇಶದಲ್ಲಿ ಕೋಮುವಾದ, ಜಾತಿವಾದ, ಭ್ರಷ್ಟಾಚಾರ, ಹಿಂಸೆ ಹಾಗೂ ರಾಜಕೀಯದಲ್ಲಿ ಅಪರಾಧೀಕರಣ ತಡೆಯಿಲ್ಲದೇ ಬೆಳೆಯುತ್ತಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ರಾಷ್ಟ್ರಪತಿ ಕೆ. ಆರ್. ನಾರಾಯಣನ್ ಅವರು, ಈ ದುಷ್ಟಶಕ್ತಿಗಳ ವಿರುದ್ಧ ಹೋರಾಡುವಂತೆ ಜನತೆಗೆ ಕರೆ ನೀಡಿದ್ದಾರೆ.

ಗಣರಾಜ್ಯೋತ್ಸವದ ಸಂದರ್ಭದಲ್ಲಿ ರಾಷ್ಟ್ರವನ್ನು ಉದ್ದೇಶಿಸಿ ಅವರು ಮಾತನಾಡಿದರು.

• ಪಾಲ್ಖೀವಾಲ, ಲಕ್ಷ್ಮೀ ಸೆಹಗಲ್‌ಗೆ ಪದ್ಮವಿಭೂಷಣ; ಅನಂತಮೂರ್ತಿ, ಎಸ್. ಚಂದ್ರಶೇಖರ್‌ಗೆ ಪದ್ಮಭೂಷಣ

ನವದೆಹಲಿ, ಜ. 25 (ಪಿಟಿಐ, ಯುಎನ್‌ಐ)– ಖ್ಯಾತ ನ್ಯಾಯವಾದಿ ನಾನಿ ಪಾಲ್ಖೀವಾಲ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರ್ತಿ ಲಕ್ಷ್ಮೀ ಸೆಹಗಲ್ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಕರ್ನಾಟಕದ ಖ್ಯಾತ ಸಾಹಿತಿ ಯು.ಆರ್. ಅನಂತಮೂರ್ತಿ, ಪ್ರೊ. ಶಿವರಾಮಕೃಷ್ಣನ್ ಚಂದ್ರಶೇಖರ್ (ವಿಜ್ಞಾನ- ಎಂಜಿನಿಯರಿಂಗ್ ಕಂಪ್ಯೂಟರ್) ಅವರೂ ಸೇರಿದಂತೆ 18 ಮಂದಿ ಗಣ್ಯರಿಗೆ ಪದ್ಮಭೂಷಣ ಪ್ರಶಸ್ತಿ ನೀಡಲಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 26-1-1973

• 'ಶಾಂತಿ ನೆಲೆಸುವಂತೆ ಮಾಡಿ'

ನವದೆಹಲಿ, ಜ. 25– ರಾಷ್ಟ್ರಪತಿ ವಿ.ವಿ. ಗಿರಿಯವರು ಆಂಧ್ರ ಪ್ರದೇಶದ ಪರಿಸ್ಥಿತಿ ಬೆಳವಣಿಗೆ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿ 'ಈ ಸಮಸ್ಯೆಯ ಬಗ್ಗೆ ಮನಃಪೂರ್ವಕವಾಗಿ ಮತ್ತು ಪೂರ್ವಭಾವಿ ಷರತ್ತಿಲ್ಲದೆ ಮಾತುಕತೆ ಆರಂಭಿಸಲು ರಾಜ್ಯದಲ್ಲಿ ಸಾಧ್ಯವಾದಷ್ಟು ಶೀಘ್ರವಾಗಿ ಶಾಂತ ಪರಿಸ್ಥಿತಿ ನೆಲೆಸುವಂತೆ ಮಾಡಬೇಕು' ಎಂದು ಸೂಚಿಸಿದರು.

• ಡಾ. ರಾಜಾರಾಮಣ್ಣ ಅವರಿಗೆ ಪದ್ಮಭೂಷಣ

ನವದೆಹಲಿ, ಜ. 25– ಯುಜಿಸಿ ಮಾಜಿ ಅಧ್ಯಕ್ಷ ಡಾ. ಡಿ.ಎಸ್. ಕೊಠಾರಿ, ಸ್ವಾತಂತ್ರ್ಯ ಹೋರಾಟಗಾರರಾದ ಬಸಂತಿದೇವಿ ಮತ್ತು ನೆಲ್ಲೀ ಸೇನ್‌ಗುಪ್ತಾ ಅವರೂ ಸೇರಿದಂತೆ ಆರು ಮಂದಿಗೆ ಗಣರಾಜ್ಯ ದಿನೋತ್ಸವದ ಸಂದರ್ಭದಲ್ಲಿ ಪದ್ಮವಿಭೂಷಣ ಪ್ರಶಸ್ತಿಗಳನ್ನು ನೀಡಲಾಗಿದೆ.

ಕಾಂಗ್ರೆಸ್ ಮಾಜಿ ಅಧ್ಯಕ್ಷ ಯು.ಎನ್. ಢೇಬರ್, ಮುಖ್ಯ ಚುನಾವಣಾ ಕಮಿಷನರ್ ಡಾ. ನಾಗೇಂದ್ರ ಸಿಂಗ್ ಮತ್ತು ಕೇಂದ್ರ ಸಂಪುಟ ಮಾಜಿ ಕಾರ್ಯದರ್ಶಿ ಟಿ. ಸ್ವಾಮಿನಾಥನ್ ಪದ್ಮವಿಭೂಷಣ ಪಡೆದ ಇತರ ಮೂವರು. ಪ್ರಖ್ಯಾತ ಪತ್ರಿಕೋದ್ಯಮಿ ಪೋತನ್ ಜೋಸೆಫ್ ಅವರಿಗೆ ಮರಣೋತ್ತರ 'ಪದ್ಮಭೂಷಣ' ಪ್ರಶಸ್ತಿ ನೀಡಲಾಗಿದೆ. ವಿಜ್ಞಾನಿ ಡಾ. ರಾಜಾರಾಮಣ್ಣ ಅವರಿಗೆ ಪದ್ಮಭೂಷಣ ಪ್ರಶಸ್ತಿ ಕೊಡಲಾಗಿದೆ.

ಸಂಗತ

ಕರ್ತವ್ಯ ಮೊದಲಿರಲಿ, ಬಳಿಕ ಹಕ್ಕು!

ಗಣರಾಜ್ಯೋತ್ಸವದ ಈ ಸಂದರ್ಭದಲ್ಲಿ, ನಾವು ರಾಷ್ಟ್ರದ ಪರವಾಗಿ ನಮ್ಮ ಕರ್ತವ್ಯಗಳನ್ನು ಎಷ್ಟರಮಟ್ಟಿಗೆ ನಿರ್ವಹಿಸುತ್ತಿದ್ದೇವೆ ಎಂಬುದರ ಕುರಿತು ಆತ್ಮಾವಲೋಕನ ಮಾಡಿಕೊಳ್ಳೋಣ

• ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ

ಮೂರು ವರ್ಷ ಹನ್ನೊಂದು ತಿಂಗಳು ಹದಿನೆಂಟು ದಿನಗಳ, ಸಂವಿಧಾನ ರಚನಾ ಸಭೆಯ 299 ಜನಪ್ರತಿನಿಧಿಗಳ ಕಠಿಣ ಪರಿಶ್ರಮದ ಫಲವಾಗಿ ರಚಿತವಾದ ಭಾರತ ಸಂವಿಧಾನವು 1950ರಲ್ಲಿ ಜನವರಿ 26ನೇ ತಾರೀಖು ಜಾರಿಗೆ ಬಂದಿತು. ಭಾರತವು ಸಾರ್ವಭೌಮ, ಸಮಾಜವಾದಿ, ಮತಧರ್ಮನಿರಪೇಕ್ಷ, ಜನಸತ್ತಾತ್ಮಕ ಗಣರಾಜ್ಯವಾಗಿ ಜನ್ಮತಾಳಿದ್ದು ಅದೇ ದಿನ. ನಾವು ಪ್ರತಿವರ್ಷ ಗಣರಾಜ್ಯೋತ್ಸವವನ್ನು ಆಚರಿಸುವುದು ಅದರ ನೆನಪಿಗಾಗಿಯೇ ಎಂದು ನಮಗೆಲ್ಲಾ ಗೊತ್ತಿದೆ. ಈ ಆಚರಣೆಯು ಸಾರ್ಥಕವಾಗಬೇಕು ಎಂದರೆ, ನಾವು ಈ ದಿನದಂದು ಸಂವಿಧಾನದ ಯಾವುದಾದರೂ ಒಂದು ಅಂಶದ ಕುರಿತು ಪುನರ್ ಅವಲೋಕನ ಮಾಡಬಹುದು.

ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು ಮತ್ತು ರಾಜ್ಯನೀತಿಯ ನಿರ್ದೇಶಕ ತತ್ವಗಳು- ಇವು ಸಂವಿಧಾನದ ಮೂರು ಆಧಾರ ಸ್ತಂಭಗಳು ಎಂದು ಹೇಳಲಾಗುತ್ತದೆ. 'ಭಾರತದ ಜನತೆಯಾದ ನಾವು' ಜನಸತ್ತಾತ್ಮಕ ಪ್ರಕ್ರಿಯೆಯ ಮೂಲಕ ರಚಿಸಿಕೊಂಡು ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡ ಸಂವಿಧಾನದ ವಸ್ತುವಿನ ದೃಷ್ಟಿಯಿಂದ ಮೊದಲ ಮಹತ್ವದ, ಭಾಗ ಮೂರರ ವಿಧಿ 12ರಿಂದ 35, ಭಾರತದ ಪ್ರತಿಯೊಬ್ಬ ನಾಗರಿಕರಿಗೆ ಕೊಡಮಾಡಿರುವ ಮೂಲಭೂತ ಹಕ್ಕುಗಳ ಬಗ್ಗೆ ಹೇಳುತ್ತವೆ. ಅವುಗಳೆಂದರೆ, ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು ಹಾಗೂ ಸಂವಿಧಾನಾತ್ಮಕ ಪರಿಹಾರಗಳ ಹಕ್ಕು. ಇವುಗಳನ್ನು ಧರ್ಮ, ಜಾತಿ, ಲಿಂಗ, ಜನ್ಮಸ್ಥಳ ಹೀಗೆ ಯಾವುದೇ ತಾರತಮ್ಯವಿಲ್ಲದೆ ಪ್ರತಿಯೊಬ್ಬ ನಾಗರಿಕರಿಗೆ ನೀಡಲಾಗಿದೆ.

ಸಂವಿಧಾನದ ಭಾಗ 4, ರಾಜ್ಯನೀತಿಯ ನಿರ್ದೇಶಕ ತತ್ವಗಳ ಕುರಿತಾಗಿದೆ. ಮೂರನೇ ಭಾಗದಲ್ಲಿ ನೀಡಲಾಗಿರುವ ಹಕ್ಕುಗಳನ್ನು ಪೂರೈಸುವಲ್ಲಿ ಸರ್ಕಾರವು ಬದ್ಧವಾಗಿರುತ್ತದೆ. ಹಾಗೆ ಮಾಡದೇ ಇದ್ದಾಗ ಅದು ತನ್ನ ಹೊಣೆಗಾರಿಕೆಯಲ್ಲಿ ಸೋತ ಹಾಗಾಗುತ್ತದೆ. ನ್ಯಾಯಾಲಯಗಳು ಅಂಥ ಹೊಣೆಗಾರಿಕೆಗಳನ್ನು ಸರ್ಕಾರದ ಮೇಲೆ ಹೇರಬಹುದು. ಆದರೆ, ಭಾಗ 4ರಲ್ಲಿ ಇರುವ ನಿರ್ದೇಶಕ ತತ್ವಗಳನ್ನು ನ್ಯಾಯಾಲಯದ ಮೂಲಕ ಜಾರಿಗೊಳಿಸಲು ಬರುವುದಿಲ್ಲ. ಆದಾಗ್ಯೂ, ಈ ಭಾಗದಲ್ಲಿ ಹೇಳಲಾಗಿರುವ ತತ್ವಗಳು ದೇಶದ, ರಾಜ್ಯಗಳ ಆಡಳಿತ ನಿರ್ವಹಣೆಯಲ್ಲಿ ಮೂಲಭೂತವಾಗಿರುತ್ತವೆ ಮತ್ತು ಕಾನೂನುಗಳನ್ನು ಮಾಡುವಲ್ಲಿ ಈ ತತ್ವಗಳನ್ನು ಅನ್ವಯಿಸುವುದು ಸರ್ಕಾರದ ಕರ್ತವ್ಯವಾಗಿರಲಿ ಎಂದು ಸಂವಿಧಾನವು ಆಶಿಸುತ್ತದೆ.

1976ರ ಸಂವಿಧಾನದ 42ನೇ ತಿದ್ದುಪಡಿಯ ಭಾಗವಾಗಿ ಸೇರಿಸಲಾದ ಭಾಗ 4ಎಯ ವಿಧಿ 51ಎಯಲ್ಲಿ ಪ್ರತಿಯೊಬ್ಬ ನಾಗರಿಕರ 'ಮೂಲಭೂತ ಕರ್ತವ್ಯ'ಗಳ ಕುರಿತು ಹೇಳಲಾಗಿದೆ. ಮೂಲಭೂತ ಹಕ್ಕುಗಳು ಮತ್ತು ಮೂಲಭೂತ ಕರ್ತವ್ಯಗಳ ಭಾಗಗಳು ಒಂದು ರೀತಿಯಲ್ಲಿ ಪ್ರಭುತ್ವ ಮತ್ತು ನಾಗರಿಕರ ನಡುವಿನ ಸಂಬಂಧವನ್ನು ಮತ್ತು ಪರಸ್ಪರ ಬದ್ಧತೆಯನ್ನು ನಿರೂಪಿಸುತ್ತವೆ.

ಭಾರತದ ನಾಗರಿಕರಾಗಿ ನಾವೆಲ್ಲರೂ ಪಾಲಿಸುತ್ತೇವೆ ಎಂದು ಈ ಭಾಗದಲ್ಲಿ ಅಂಗೀಕರಿಸಿರುವ ಕರ್ತವ್ಯಗಳಲ್ಲಿ ಪ್ರಮುಖವಾದವು ಎಂದರೆ: ಎ. ಸಂವಿಧಾನಕ್ಕೆ ಬದ್ಧವಾಗಿರುವುದು ಹಾಗೂ ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜವನ್ನು ಹಾಗೂ ರಾಷ್ಟ್ರಗೀತೆಯನ್ನು ಗೌರವಿಸುವುದು. ಬಿ. ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾಗಿದ್ದ ಉದಾತ್ತ ಆದರ್ಶಗಳನ್ನು ಗೌರವಿಸುವುದು ಮತ್ತು ಅನುಸರಿಸುವುದು. ಸಿ. ಭಾರತದ ಸಾರ್ವಭೌಮತ್ವವನ್ನು, ಏಕತೆ ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು. ಡಿ. ದೇಶವನ್ನು ರಕ್ಷಿಸುವುದು ಮತ್ತು ಕರೆ ಬಂದಾಗ ರಾಷ್ಟ್ರಕ್ಕೆ ಸೇವೆ ಸಲ್ಲಿಸುವುದು. ಇ. ಧಾರ್ಮಿಕ, ಭಾಷೆ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭೇದಭಾವಗಳನ್ನು ಮೀರಿ ಭಾರತದ ಎಲ್ಲಾ ಜನರಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು ಮತ್ತು

ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಗಳನ್ನು ಬಿಟ್ಟುಬಿಡುವುದು. ಎಫ್. ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು. ಜಿ. ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿಗೊಳಿಸುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು. ಎಚ್. ವೈಜ್ಞಾನಿಕ ಮನೋವೃತ್ತಿ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣೆಯ ಮನೋಭಾವವನ್ನು ಬೆಳೆಸುವುದು. ಐ. ಸಾರ್ವಜನಿಕ ಸ್ವತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು. ಜೆ. ರಾಷ್ಟ್ರವು ನಿರಂತರವಾಗಿ ಸಾಧನೆಯ ಮತ್ತು ಸಿದ್ಧಿಯ ಉನ್ನತ ಮಟ್ಟಗಳನ್ನು ತಲುಪಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಯ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿ ಉನ್ನತಿಗಾಗಿ ಶ್ರಮಿಸುವುದು. ಕೆ. ತಂದೆ-ತಾಯಿ ಅಥವಾ ಪೋಷಕರು, ಆರರಿಂದ ಹದಿನಾಲ್ಕು ವಯಸ್ಸಿನ ತಮ್ಮ ಮಕ್ಕಳಿಗೆ ಶಿಕ್ಷಣ ಪಡೆಯಲು ಅವಕಾಶಗಳನ್ನು ಒದಗಿಸುವುದು.

ಕರ್ತವ್ಯಗಳೇ ಹಕ್ಕುಗಳ ನಿಜವಾದ ಮೂಲವಾಗಿವೆ. ಈ ಬಾರಿಯ ಗಣರಾಜ್ಯೋತ್ಸವವನ್ನು ಆಚರಿಸುವಾಗ ನಾವು ಪ್ರತಿಯೊಬ್ಬರೂ ಎಷ್ಟರಮಟ್ಟಿಗೆ ಈ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದೇವೆ ಎಂಬುದರ ಕುರಿತು ಸ್ವಾವಲೋಕನ ಮಾಡಿಕೊಳ್ಳೋಣ. ಏಕೆಂದರೆ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರು ಹೇಳುವ ಹಾಗೆ, 'ಸಾಂವಿಧಾನಿಕ ನೈತಿಕತೆಯು ನೈಜವಾದ ಭಾವನೆಯಲ್ಲ, ಅದನ್ನು ಪ್ರಜ್ಞಾಪೂರ್ವಕವಾಗಿ ಬೆಳೆಸಿಕೊಳ್ಳಬೇಕಾಗುತ್ತದೆ'.

ವಾಚಕರ ವಾಣಿ

ಸಮಾಜ ತಲೆತಗ್ಗಿಸಬೇಕಾದ ವಿಷಯ

ಬೆಳಗಾವಿ ಜಿಲ್ಲೆಯಲ್ಲಿ ವಯೋವೃದ್ಧೆಯೊಬ್ಬರನ್ನು ಸಂಬಂಧಿಕರು ದಟ್ಟ ಅರಣ್ಯದಲ್ಲಿ ಬಿಟ್ಟುಹೋಗಿರುವ ದೃಶ್ಯವನ್ನು ಕಂಡು (ಪ್ರ.ವಾ., ಜ. 24) ಮನ ಕಲಕಿತು. ಇಂದಿನ ಪೀಳಿಗೆಯವರಲ್ಲಿ ಪ್ರೀತಿ, ವಾತ್ಸಲ್ಯ ಮರೀಚಿಕೆಯಾಗುತ್ತಿದೆಯೇ ಎಂಬ ಪ್ರಶ್ನೆ ಮೂಡಿತು. ತಂದೆ ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸುವವರನ್ನು ಕಂಡಿದ್ದೇವೆ. ಆದರೆ, ಕಾಟ ಕೊಡುವ ನಾಯಿ, ಬೆಕ್ಕುಗಳನ್ನು ಸಾಕಲಾರದೆ ದೂರ ಬಿಟ್ಟುಬರುವ ರೀತಿಯಲ್ಲಿ ವಯೋವೃದ್ಧೆಯನ್ನು ನೀರು, ನೆರಳು ಇಲ್ಲದಿರುವ ಜಾಗದಲ್ಲಿ ಬಿಟ್ಟು ಹೋಗಿರುವುದು ಅತ್ಯಂತ ಅಮಾನವೀಯ ಹಾಗೂ ಖಂಡನೀಯ. ಇದು, ಸಮಾಜ ನಾಚಿಕೆಯಿಂದ ತಲೆತಗ್ಗಿಸಬೇಕಾದ ವಿಷಯ. ಸಾಕಲಾಗದಿದ್ದರೆ ವೃದ್ಧಾಶ್ರಮಕ್ಕೆ ಸೇರಿಸಬಹುದಿತ್ತು. ಅದುಬಿಟ್ಟು ಹುಳ ಹುಪ್ಪಟೆಗಳು ಇರುವ ಹುಲ್ಲುಗಾವಲಿನಂಥ ಸ್ಥಳದಲ್ಲಿ ಕಸವನ್ನು ಎಸೆಯುವ ರೀತಿಯಲ್ಲಿ ತ್ಯಜಿಸಿ ಹೋಗಿರುವುದು ಹೃದಯಹೀನ ವರ್ತನೆ. ಒಬ್ಬ ವೃದ್ಧೆಯನ್ನು ಸಾಕಲಾರದಷ್ಟು ಹೀನಾಯ ಸ್ಥಿತಿಯಲ್ಲಿದ್ದರೇ ಆಕೆಯ ಸಂಬಂಧಿಕರು? ಊರಿನ ಜನರಾದರೂ ಅವರಿಗೆ ಬುದ್ಧಿ ಹೇಳಲಿಲ್ಲವೇ? ವೃದ್ಧೆಯ ನರಳಾಟ ಕೇಳಿ ಉಪಚರಿಸಿ, ಆಸ್ಪತ್ರೆಗೆ ಸೇರಿಸಿದ ವ್ಯಕ್ತಿಗಳು ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದಿರುವುದು ಪ್ರಶಂಸನೀಯ.

ಪ.ಚಂದ್ರಕುಮಾರ ಗೌನಹಳ್ಳಿ, ಹಿರಿಯೂರು

ನಿರೀಕ್ಷೆ ತರ್ಕಬದ್ಧವಾಗಿರಲಿ

ಅಮೆರಿಕದಲ್ಲಿ ಕೆಲಸ ಕಳೆದುಕೊಂಡಿರುವ 80,000 ಭಾರತೀಯರಲ್ಲಿ ಹೆಚ್ಚಿನವರು ನರೇಂದ್ರ ಮೋದಿ ಅವರ ಅಭಿಮಾನಿಗಳಾಗಿದ್ದು, ಅವರಿಗೆ ಭಾರತದಲ್ಲಿ ಕೆಲಸದ ಅವಕಾಶಗಳನ್ನು ಒದಗಿಸಬೇಕೆಂದು ಚಿತ್ರ ನಿರ್ಮಾಪಕಿ ಸಂಘಮಿತ್ರ ಅವರು ನಿರೀಕ್ಷಿಸಿದ್ದಾರೆ (ಟ್ವೀಟ್, ಪ್ರ.ವಾ., ಜ. 25). ಈ ತರ್ಕವು ಎಷ್ಟು ಸಮಂಜಸ? ವಿದ್ಯೆ ಕಲಿತ ದೇಶವನ್ನು, ಹೆತ್ತವರನ್ನು ಬಿಟ್ಟು, ಡಾಲರ್ ಮೋಹಕ್ಕೆ ಒಳಗಾಗಿ ಅಮೆರಿಕದಲ್ಲಿ ನೆಲೆಯೂರಿರುವ, ಆ ದೇಶದ ಉನ್ನತಿಗಾಗಿ ಶ್ರಮಿಸುತ್ತಿರುವವರು ಅವರು.

ಅವರು ಸ್ವದೇಶದಲ್ಲೇ ಉಳಿದು ಭಾರತವನ್ನು ಮುಂಚೂಣಿ ರಾಷ್ಟ್ರವನ್ನಾಗಿಸಲು ಪ್ರಯತ್ನಿಸಬಹುದಿತ್ತು. ಈಗ ಕೆಲಸ ಕಳೆದುಕೊಂಡ ಮೇಲೆ, ಮೋದಿ ಅವರ ಅಭಿಮಾನಿಗಳು ಅನ್ನುವ ಕಾರಣಕ್ಕೆ ಅವರಿಗೆಲ್ಲಾ ನಮ್ಮ ದೇಶದಲ್ಲಿ ಉದ್ಯೋಗ ಅವಕಾಶವನ್ನು ಕಲ್ಪಿಸುವುದು ಮುಖ್ಯವೋ ಅಥವಾ ನಮ್ಮ ದೇಶದಲ್ಲಿಯೇ ಇರುವ ಯುವಕರಿಗೆ ಉದ್ಯೋಗ ಸೃಷ್ಟಿಸುವುದು ಸಮಂಜಸವೋ? ಈ ಬಗ್ಗೆ ಸಂಘಮಿತ್ರ ಅವರು ಆತ್ಮಾವಲೋಕನ ಮಾಡಿಕೊಳ್ಳಬೇಕು.

ಚೇತನ ಕೊಟ್ಟೂರ್, ಹುಬ್ಬಳ್ಳಿ

ವಿಧಾನಸೌಧದ ಘನತೆ ಹೆಚ್ಚಿಸಿ

'ಬಿಜೆಪಿ ನೇತೃತ್ವದ ಸರ್ಕಾರದ ಆಯಸ್ಸು ಇನ್ನು 40 ದಿನ ಮಾತ್ರ. ಅವರು ನಿರ್ಗಮಿಸಿದ ಮೇಲೆ ವಿಧಾನ ಸೌಧವನ್ನು ಗಂಜಲ ಹಾಕಿ ತೊಳೆಯುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ (ಪ್ರ.ವಾ., ಜ. 25). ಆದರೆ ವಿಧಾನಸೌಧ ಕೊಳೆಯಾಗಿರುವುದು ಬಿಜೆಪಿ ನಾಯಕರಿಂದ ಮಾತ್ರ ಅಲ್ಲ. ಅಪ್ರಾಮಾಣಿಕ, ಕೊಳಕು ಮನಃಸ್ಥಿತಿಯ ರಾಜಕಾರಣಿಗಳು ಯಾವುದೇ ಪಕ್ಷಕ್ಕೆ ಸೇರಿರಲಿ ಅವರಿಂದ ಸೌಧ ಮಲಿನವಾಗಿದೆ ಮತ್ತು ಈ ರೀತಿಯ ರಾಜಕಾರಣಿಗಳು ಎಲ್ಲ ಪಕ್ಷಗಳಲ್ಲಿಯೂ ಇದ್ದಾರೆ ಎಂಬುದನ್ನು ಅವರು ಮರೆತಿರುವಂತಿದೆ.

ವಿಧಾನಸೌಧವನ್ನು ಗಂಜಲದಿಂದಲೋ ಅಥವಾ ಇನ್ನಾವುದರಿಂದಲೋ ತೊಳೆಯುವುದರಿಂದ ಪ್ರಯೋಜನವಿಲ್ಲ. ಬದಲಿಗೆ ನಮ್ಮ ಜನಪ್ರತಿನಿಧಿಗಳ ಮನಃಪರಿವರ್ತನೆಯಿಂದ ಅದು ಸಾಧ್ಯ. ಜನಪರವಾಗಿ ಯೋಚಿಸುವ, ಕಿಂಚಿತ್ ಪ್ರಾಮಾಣಿಕತೆ ರೂಢಿಸಿಕೊಳ್ಳುವುದರಿಂದ ಸಾಧ್ಯ. ಅಂಥವರು ಹೆಚ್ಚಿನ ಸಂಖ್ಯೆಯಲ್ಲಿ ವಿಧಾನಸೌಧ ಪ್ರವೇಶಿಸಿದರೆ ಅದರ ಘನತೆ, ಗೌರವ ತಾನಾಗಿಯೇ ಹೆಚ್ಚಾಗುತ್ತದೆ. ವಿಧಾನಸೌಧವನ್ನು ಯಾರೋ ಅಪ್ರಾಮಾಣಿಕರು ಕಟ್ಟಿಲ್ಲ, ಅದರಲ್ಲಿ ಪ್ರಾಮಾಣಿಕ ಶ್ರಮಜೀವಿಗಳ ಶ್ರಮ ಅಡಗಿದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ.

ಹುಸೇನಬಾಷಾ ತಳೇವಾಡ, ಹುಬ್ಬಳ್ಳಿ

ನೋಟಿನ ಸುರಿಮಳೆ ತಂದ ನೆನಪು

ಬೆಂಗಳೂರಿನ ಕೆ.ಆರ್. ಮಾರುಕಟ್ಟೆ ಬಳಿಯ ಮೇಲ್ಸೇತುವೆಯಿಂದ ವ್ಯಕ್ತಿಯೊಬ್ಬರು ಪ್ರಚಾರಕ್ಕೆಂದು ಹಣ ಚೆಲ್ಲಿದ ಸುದ್ದಿ ಓದಿ ನನಗೆ 1979- 80ರಲ್ಲಿ ಹೊಸಪೇಟೆಯಲ್ಲಿ ರಾಷ್ಟ್ರೀಕೃತ ಬ್ಯಾಂಕೊಂದರ ಸೇವೆಯಲ್ಲಿದ್ದಾಗ 'ಆಗಸದಿಂದ ನೋಟಿನ ಸುರಿಮಳೆ' ಆದ ಘಟನೆ ನೆನಪಾಯಿತು. ನಮ್ಮ ಬ್ಯಾಂಕ್ ಮೊದಲು ಹೊಸಪೇಟೆಯ ಮೇನ್ ಬಜಾರಿನ ಹಳೆಯ ಕಟ್ಟಡವೊಂದರಲ್ಲಿ ಮೊದಲ ಮಹಡಿಯ ಮೇಲಿತ್ತು. ಆ ಒಂದು ದಿನ ಪಾದರಕ್ಷೆ ವ್ಯಾಪಾರಿಯೊಬ್ಬರು ಬ್ಯಾಂಕಿನಿಂದ ₹ 2000 ಮೌಲ್ಯದ ಡ್ರಾಫ್ಟ್ ಪಡೆಯಲು ₹ 5ರ ನೋಟಿನ ಎರಡು ಕಂತೆ ಹಾಗೂ ₹ 10ರ ನೋಟಿನ ಒಂದು ಕಂತೆಯನ್ನು ತಮ್ಮ ಕರವಸ್ತ್ರದಲ್ಲಿ ಕಟ್ಟಿಕೊಂಡು ರಸ್ತೆಯಲ್ಲಿ ಬರುತ್ತಿದ್ದರು. ಆಗ ಬ್ಯಾಂಕಿನ ಮೆಟ್ಟಿಲು ಹತ್ತಿ ಬರುತ್ತಿದ್ದ ಅವರ ಕೈಯಲ್ಲಿದ್ದ ಕರವಸ್ತ್ರದ ಗಂಟನ್ನು ಮಂಗವೊಂದು ಕ್ಷಣಾರ್ಧದಲ್ಲಿ ಕಸಿದುಕೊಂಡು ಕಟ್ಟಡದ ಮೇಲಕ್ಕೆ ಓಡಿಹೋಯಿತು. ನಾವ್ಯಾರೂ ಬಳಿಗೆ ಹೋಗಲಾರದಷ್ಟು ತುದಿಯಲ್ಲಿ ಕುಳಿತಿದ್ದ ಮಂಗ, ಕರವಸ್ತ್ರ ಹರಿದು ಹಾಕಿದ್ದಲ್ಲದೆ ನೋಟಿನ ಕಂತೆಗೆ ಹಾಕಿದ್ದ ರಬ್ಬರ್ ಬ್ಯಾಂಡ್ ಕಿತ್ತು ಹಾಕಿತು. ಕೂಡಲೇ ರಸ್ತೆಯಲ್ಲಿ ನೋಟುಗಳ ಮಳೆ.

ಬಹುಮಹಡಿ ಕಟ್ಟಡದಿಂದ ಬೀಳುವ ನೋಟುಗಳು ಗಾಳಿಗೆ ಅತ್ತಿಂದಿತ್ತ ತೇಲಾಡುತ್ತಿದ್ದಾಗ, ರಸ್ತೆಯಲ್ಲಿ ಹೋಗುತ್ತಿದ್ದವರು ಬ್ಯಾಂಕಿನ ಹಣ ಎಂದು ಬಾಚಿಕೊಂಡು ಜೇಬಿಗೆ ಸೇರಿಸಿದರು. ಇನ್ನು ಕೆಲವರು, 'ಅದು ಬಡ ಗ್ರಾಹಕನ ಹಣ, ವಾಪಸ್ ಕೊಡಿ' ಎಂಬ ನಮ್ಮ ಕರೆಗೆ ಅಷ್ಟಿಷ್ಟು ಸಂಗ್ರಹಿಸಿ ಒಂದು ಸಾವಿರದಷ್ಟು ಹಣವನ್ನು ಆ ನತದೃಷ್ಟನಿಗೆ ಮರಳಿಸಿದರು. ಅದೇ ದಿನ ಪ್ರಧಾನಿ ಚೌಧರಿ ಚರಣಸಿಂಗ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಮರುದಿನ ಪತ್ರಿಕೆಯೊಂದರಲ್ಲಿ 'ಚರಣ್‌ಸಿಂಗ್ ಅವರ ರಾಜೀನಾಮೆಯಿಂದಾಗಿ ಆಗಸದಿಂದ ನೋಟಿನ ಸುರಿಮಳೆಗರೆದ ಮಂಗಗಳು' ಎಂದು ಬರೆದಿದ್ದುದು ಇನ್ನೂ ನೆನಪಿದೆ.

ರಘುನಾಥರಾವ್ ತಾಪ್ಸೆ, ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಪ್ಪತಗುಡ್ಡ

ಪ್ರಸ್ತಾವ ಮರುಪರಿಶೀಲನೆಗೆ ಸೂಚಿಸಿದ ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ

ಮತ್ತೆ ಚಿನ್ನದ ಗಣಿಗಾರಿಕೆ ಆತಂಕ

ಕಪ್ಪತಗುಡ್ಡ ಅಭಯಾರಣ್ಯದಲ್ಲಿ ಚಿನ್ನದ ಗಣಿಗಾರಿಕೆ ಆರಂಭಿಸಲು ರಾಮಗಢ ಮಿನರಲ್ಸ್ ಅಂಡ್ ಮೈನ್ಸ್ ಲಿಮಿಟೆಡ್ ಸಲ್ಲಿಸಿದ್ದ ಪ್ರಸ್ತಾವವನ್ನು ತಿರಸ್ಕರಿಸಲು ಶಿಫಾರಸು ಮಾಡಿ ಅರಣ್ಯ ಸಂರಕ್ಷಣಾಧಿಕಾರಿಗಳು ವರದಿ ಸಲ್ಲಿಸಿದ್ದರು. ಈ ಪ್ರಸ್ತಾವವನ್ನು ಯಾವ ಕಾರಣಕ್ಕೂ ಒಪ್ಪಿಕೊಳ್ಳಬಾರದು ಎಂದು ಅರಣ್ಯ ಸಂರಕ್ಷಣಾಧಿಕಾರಿಗಳು ತಮ್ಮ ಉನ್ನತಾಧಿಕಾರಿ ಶಿಫಾರಸು ಮಾಡಿದ್ದರು. ಆದರೆ, ಈಗ ಕಂಪನಿಯು ಸರ್ಕಾರಕ್ಕೆ ಮತ್ತೆ ಇಂತಹ ಪ್ರಸ್ತಾವ ಸಲ್ಲಿಸಿದೆ. ಅದೇ ಪ್ರಸ್ತಾವವನ್ನು ಮರುಪರಿಶೀಲಿಸಿ ವರದಿ ನೀಡಿ, ಎಂದು ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಇಲಾಖೆಯ ಉನ್ನತಾಧಿಕಾರಿ ವಾರದ ಹಿಂದಷ್ಟೇ ಮತ್ತೆ ಪತ್ರ ಬರೆದಿದ್ದಾರೆ



ಕಪ್ಪತಗುಡ್ಡ ಜೀವವೈವಿಧ್ಯ

- ಚಿರತೆ
- ಕಿರುಬ
- ತೋಳ
- ಕಾಡುಬೆಕ್ಕು
- ನಾಲ್ಕು ಕೊಂಬಿನ ಕೊಂಡುಕುರಿ
- ಲಂಗೂರ್
- ಚಿಪ್ಪುಹಂದಿ
- ಮುಳ್ಳುಹಂದಿ
- ಕೃಷ್ಣಮೃಗ
- ಗೋಸುಂಬೆ
- ಹೆಬ್ಬಾವು
- ಚುಕ್ಕಿಜಿಂಕೆ
- ನವಿಲು
- ಮಂಗಟ್ಟೆ

ಪ್ರಜಾವಾಣಿ ವಾರ್ತೆ

'ಕಪ್ಪತಗುಡ್ಡ ಅಭಯಾರಣ್ಯ ವ್ಯಾಪ್ತಿಯಲ್ಲಿ ಬರುವ ಶಿರಹಟ್ಟಿ ತಾಲ್ಲೂಕಿನ ಜಲ್ಲಿಗೇರಿ ಗ್ರಾಮದ ಸರ್ವೆ ಸಂಖ್ಯೆ 45, 49 ಮತ್ತು 50ರ ಒಟ್ಟು 39.90 ಎಕರೆಯಷ್ಟು ಪ್ರದೇಶದಲ್ಲಿ ಚಿನ್ನದ ಗಣಿಗಾರಿಕೆ ನಡೆಸಲು ಭೂಪರಿವರ್ತನೆ ಮಾಡಿಕೊಡಿ' ಎಂದು ರಾಮಗಢ ಮಿನರಲ್ಸ್ ಅಂಡ್ ಮೈನ್ಸ್ ಲಿಮಿಟೆಡ್ ಕಂಪನಿಯು 2020ರ ಜೂನ್ 26ರಂದು ಪ್ರಸ್ತಾವವನ್ನು ಸಲ್ಲಿಸಿತ್ತು. ಈ ಪ್ರಸ್ತಾವವನ್ನು ತಿರಸ್ಕರಿಸುವಂತೆ 2021ರ ಮೇ 5ರಂದು ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿಗಳು ರಾಜ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ವರದಿ ಸಲ್ಲಿಸಿದ್ದರು. ಅಭಯಾರಣ್ಯದಲ್ಲಿ ಚಿನ್ನದ ಗಣಿಗಾರಿಕೆ ಆರಂಭವಾಗುವುದಿಲ್ಲ ಎಂದೇ ಕಪ್ಪತಗುಡ್ಡ ಸಂರಕ್ಷಣೆಗಾಗಿ ಹೋರಾಟಕ್ಕೆ ಇಳಿದಿದ್ದ ಕಾರ್ಯಕರ್ತರು, ಸಂಘಟನೆಗಳು ಸಂಭ್ರಮಿಸಿದ್ದವು.

ಆದರೆ, ಚಿನ್ನದ ಗಣಿಗಾರಿಕೆ ನಡೆಸಲು ಅದೇ ಜಾಗದಲ್ಲಿ ಭೂಪರಿವರ್ತನೆ ಮಾಡಿಕೊಡಿ ಎಂದು ರಾಮಗಢ ಮಿನರಲ್ಸ್ ಅಂಡ್ ಮೈನ್ಸ್ ಕಂಪನಿಯು 2022ರ ಜುಲೈ 26ರಂದು ಮತ್ತೆ ಪ್ರಸ್ತಾವ ಸಲ್ಲಿಸಿದೆ. ಈ ಪ್ರಸ್ತಾವವನ್ನು ಪರಿಶೀಲಿಸಿ, ನಿಮ್ಮ ಅಭಿಪ್ರಾಯದೊಂದಿಗೆ ತಕ್ಷಣವೇ ವರದಿಯನ್ನು ಸಲ್ಲಿಸಿ ಎಂದು ರಾಜ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ಪತ್ರದ ಪ್ರತಿಯು ಪ್ರಜಾವಾಣಿಗೆ ಲಭ್ಯವಾಗಿದೆ. ಇದೇ 20ರಂದು ಈ ಪತ್ರ ಬರೆಯಲಾಗಿದೆ. ರಾಮಗಢ ಮೈನ್ಸ್ ಕಂಪನಿಯ ಪ್ರಸ್ತಾವನ್ನು ಈ ಹಿಂದೆ ತಿರಸ್ಕರಿಸಲು ಶಿಫಾರಸು ಮಾಡಲಾಗಿತ್ತು. ಅದಕ್ಕೆ ಸಂಬಂಧಿಸಿದ ದಾಖಲೆ ಮತ್ತು ಕಂಪನಿ ಮತ್ತೆ ಸಲ್ಲಿಸಿರುವ ಪ್ರಸ್ತಾವನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ಈ ಪ್ರಸ್ತಾವನೆಯನ್ನು ಮರುಪರಿಶೀಲಿಸಿ ನಿಮ್ಮ ಸಮಂಜಸವಾದ, ಸ್ಪಷ್ಟ ಅಭಿಪ್ರಾಯ/ವರದಿಯನ್ನು ಕೂಡಲೇ ಕಳುಹಿಸಿ ಎಂದು ಪತ್ರದಲ್ಲಿ ಸೂಚನೆ ನೀಡಲಾಗಿದೆ.

'ಕಪ್ಪತಗುಡ್ಡ ಅಭಯಾರಣ್ಯ ಪ್ರದೇಶದಲ್ಲಿ ಯಾವ ಕಾರಣಕ್ಕೂ ಚಿನ್ನದ ಗಣಿಗಾರಿಕೆಗೆ ಅವಕಾಶ ನೀಡಬಾರದು. ಅಂತಹ ಯಾವ ಪ್ರಸ್ತಾವನ್ನೂ ಕರ್ನಾಟಕ ಸರ್ಕಾರ ಒಪ್ಪಿಕೊಳ್ಳಬಾರದು' ಎಂದು 2021ರ ಮೇ 5ರಂದು ಧಾರವಾಡ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಸಲ್ಲಿಸಿದ್ದ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದರು. ಹೀಗಿದ್ದೂ ಅದೇ ಪ್ರಸ್ತಾವದ ಬಗ್ಗೆ ಮತ್ತೆ, 'ಸಮಂಜಸವಾದ, ಸ್ಪಷ್ಟ ಅಭಿಪ್ರಾಯ/ವರದಿಯನ್ನು ಸಲ್ಲಿಸಿ' ಎಂದು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಂದ ಸೂಚನೆ ಹೊರಡಿಸಲಾಗಿದೆ. ಪ್ರಸ್ತಾವ ಮರುಪರಿಶೀಲನೆಗೆ ಸೂಚಿಸಿರುವುದಕ್ಕೆ ಕಪ್ಪತಗುಡ್ಡ ಸಂರಕ್ಷಣಾ ಹೋರಾಟಗಾರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪ್ರಸ್ತಾವ ತಿರಸ್ಕಾರ ಶಿಫಾರಸಿಗೆ ಕಾರಣಗಳು

ಈ ಪ್ರಸ್ತಾವವನ್ನು ಪರಿಶೀಲಿಸಿದ್ದ ಗದಗ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಧಾರವಾಡ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಪ್ರಸ್ತಾವವನ್ನು ಏಕೆ ತಿರಸ್ಕರಿಸಬೇಕು ಎಂಬುದನ್ನು ತಮ್ಮ ವರದಿಯಲ್ಲಿ ವಿವರಿಸಿದ್ದರು. ಆ ವರದಿಯ ಮುಖ್ಯಾಂಶಗಳು ಇಂತಿವೆ

- ಪರಿವರ್ತನೆಗೆ ಕೋರಿರುವ ಅರಣ್ಯ ಪ್ರದೇಶವು, ಮಣ್ಣಿನ ಸವಕಳಿಯ ಅಪಾಯವಿರುವ ಪ್ರದೇಶವಾಗಿದೆ. ಗಣಿಗಾರಿಕೆಯಿಂದ ಇಲ್ಲಿನ ಭೂಮಿಯ ಮೇಲ್ಮೈ ಲಕ್ಷಣಗಳಿಗೆ ಹಾನಿಯಾಗುತ್ತದೆ. ಇದು ಅತ್ಯಂತ ಸೂಕ್ಷ್ಮ ಪರಿಸರ ಪ್ರದೇಶವಾಗಿದೆ. ಇಲ್ಲಿನ ಪರಿಸರ ವ್ಯವಸ್ಥೆಗೆ ಧಕ್ಕೆಯಾದರೆ, ಅದನ್ನು ಮರುಸ್ಥಾಪಿಸಲು ಸಾಧ್ಯವೇ ಇಲ್ಲ
- ಗಣಿಗಾರಿಕೆಯನ್ನು ಅದಿರು ತೆಗೆಯುವ ಚಟುವಟಿಕೆ ಎಂದು ಸರಳವಾಗಿ ಪರಿಗಣಿಸಬಾರದು. ಗಣಿಸ್ಫೋಟ, ರಸ್ತೆ ನಿರ್ಮಾಣ, ವಾಹನಗಳ ಓಡಾಟದಿಂದ ಶಬ್ದ ಮಾಲಿನ್ಯ ಮತ್ತು ವಾಯು ಮಾಲಿನ್ಯ ಉಂಟಾಗುತ್ತದೆ. ಗಣಿಗಾರಿಕೆಯಿಂದ ತೊರೆಗಳ ಪಾತ್ರವೂ ಬದಲಾಗಲಿದೆ. ಇಲ್ಲಿನ ಪರಿಸರ ವ್ಯವಸ್ಥೆಗೆ ಭಾರಿ ಹಾನಿಯಾಗಲಿದೆ
- ಕಪ್ಪತಗುಡ್ಡ ಅಭಯಾರಣ್ಯವು ಗದಗ ಜಿಲ್ಲೆಯ, ಈ ಪ್ರದೇಶಕ್ಕಷ್ಟೇ ಸೀಮಿತವಾದ ಮತ್ತು ವಿಶಿಷ್ಟವಾದ ವಾತಾವರಣ ಹಾಗೂ ಪರಿಸರ ವ್ಯವಸ್ಥೆಯನ್ನು ಹೊಂದಿದೆ. ಇಲ್ಲಿ ಗಣಿಗಾರಿಕೆ ನಡೆಸುವುದರಿಂದ, ಇಲ್ಲಿಗೇ ವಿಶಿಷ್ಟವಾದ ಪರಿಸರಕ್ಕೆ ಧಕ್ಕೆಯಾಗುತ್ತದೆ
- ಕಪ್ಪತಗುಡ್ಡ ಅಭಯಾರಣ್ಯದ ಎಲ್ಲಾ ಪ್ರದೇಶದಲ್ಲಿ ವನ್ಯಜೀವಿಗಳ ಸಮತೋಲನದ ಹಂಚಿಕೆ ಇದೆ. ಕೆಲವು ಮೃಗಗಳು ಬೆಟ್ಟದ ತುದಿಗಳಲ್ಲಿ ನೆಲೆಸಿದ್ದರೆ, ಕೆಲವು ಜೀವಿಗಳು ಬೆಟ್ಟದ ಇಳಿಜಾರಿನಲ್ಲಿ, ಇನ್ನೂ ಕೆಲವು ವನ್ಯಜೀವಿಗಳು ಬೆಟ್ಟದ ತಪ್ಪಲಿನಲ್ಲಿ ನೆಲೆಸಿವೆ. ಅಭಯಾರಣ್ಯದ ಹುಲ್ಲುಗಾವಲನ್ನು ಕೆಲವು ಜೀವಿಗಳು ಆಶ್ರಯಿಸಿವೆ. ಇಲ್ಲಿ ಒಂದು ಸ್ವರೂಪದ ಮೇಲ್ಮೈಗೆ ಹಾನಿಯಾದರೂ, ಇಡೀ ವ್ಯವಸ್ಥೆಗೆ ಧಕ್ಕೆಯಾಗಲಿದೆ. ಪ್ರಾಣಿಗಳ ಆಹಾರ ಸರಪಳಿಗೆ ಧಕ್ಕೆಯಾಗಲಿದೆ. ಚಿರತೆ, ಕಿರುಬ ಮತ್ತು ತೋಳದಂತಹ ಬೇಟೆ ಪ್ರಾಣಿಗಳು, ಆಹಾರ ಹುಡುಕಿಕೊಂಡು ಸುತ್ತಲಿನ ಗ್ರಾಮಗಳಿಗೆ ಬರುವ ಅಪಾಯವಿದೆ. ಇದು ಮಾನವ-ವನ್ಯಜೀವಿ ಸಂಘರ್ಷಕ್ಕೆ ಕಾರಣವಾಗಬಹುದು

'ಯಾವ ಕಾರಣಕ್ಕೂ ಗಣಿಗಾರಿಕೆಗೆ ಅನುಮತಿ ನೀಡಬಾರದು'

ರಾಮಗಢ ಮಿನರಲ್ಸ್ ಅಂಡ್ ಮೈನ್ಸ್ ಸಂಸ್ಥೆಯವರು ಕಪ್ಪತಗುಡ್ಡ ಅಭಯಾರಣ್ಯದಲ್ಲಿ ಹೇಗಾದರೂ ಮಾಡಿ ಚಿನ್ನದ ಗಣಿಗಾರಿಕೆ ಆರಂಭಿಸಲು ಮಾಡುತ್ತಿರುವ ಕಸರತ್ತು ಹೊಸದಲ್ಲ. 2009ರಿಂದಲೂ ಸತತವಾಗಿ ಅವರು ಯತ್ನಿಸುತ್ತಿದ್ದಾರೆ. ಗಣಿಗಾರಿಕೆಯಿಂದ ಪರಿಸರ ಹಾಗೂ ವನ್ಯಜೀವಿಗಳಿಗೆ ಅಪಾರ ಹಾನಿ ಸಂಭವಿಸುತ್ತದೆ ಎಂಬ ಕಾರಣಕ್ಕೆ ನಾವು ಪ್ರತಿ ಬಾರಿಯೂ ಹೋರಾಟ ಮಾಡಿ, ಅವರ ಯತ್ನವನ್ನು ವಿಫಲಗೊಳಿಸುತ್ತಾ ಬಂದಿದ್ದೇವೆ. ಆದರೂ ಪಟ್ಟು ಬಿಡದ ಅವರು, ಅಧಿಕಾರಿಗಳ ಜೊತೆ ಶಾಮೀಲಾಗಿ ಮತ್ತೆ ಮತ್ತೆ ಅರ್ಜಿ ಸಲ್ಲಿಸುವ ಯತ್ನಕ್ಕೆ ಮುಂದಾಗುತ್ತಿದ್ದಾರೆ. ಗಣಿಗಾರಿಕೆಗೆ ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು ಎಂದು ಆರ್‌ಎಫ್‌ಒ ಹಾಗೂ ಡಿಎಫ್‌ಒ ಸ್ಪಷ್ಟವಾಗಿ ವರದಿ ಸಲ್ಲಿಸಿದ ಬಳಿಕವೂ ಮತ್ತೆ ಮನವಿ ಸಲ್ಲಿಕೆಯಾಗುತ್ತಿವೆ. ಸರ್ಕಾರಗಳು ಹಾಗೂ ಅಧಿಕಾರಿಗಳು ಬದಲಾದಂತೆಲ್ಲಾ, ಹೊಸದಾಗಿ ಅರ್ಜಿ ಸಲ್ಲಿಸುವ ಪ್ರವೃತ್ತಿ ರೂಢಿಸಿಕೊಂಡಿದ್ದಾರೆ. ಹೇಗಾದರೂ ಮಾಡಿ ಗಣಿಗಾರಿಕೆಗೆ ಅನುಮತಿ ಪಡೆಯುವುದೊಂದೇ ಅವರ ಮುಖ್ಯ ಉದ್ದೇಶವಾಗಿದೆ.

ಗಣಿಗಾರಿಕೆಯಿಂದಾಗಿ ಬಳ್ಳಾರಿ ಹಾಗೂ ಸಂಡೂರಿನ ಗುಡ್ಡಗಳನ್ನು ಕಳೆದುಕೊಂಡಿರುವ ನಾವು, ಈಗ ಕಪ್ಪತಗುಡ್ಡವನ್ನು ಕಳೆದುಕೊಳ್ಳಲು ಸಿದ್ಧವಿಲ್ಲ. ಗದಗ ಸುತ್ತಮುತ್ತಲಿನ ಜಿಲ್ಲೆಯ ಜನರಿಗೆ ಆಮ್ಲಜನಕ ನೀಡುತ್ತಿರುವ ಹಸಿರು ಗುಡ್ಡವನ್ನು ಗಣಿಗಾರಿಕೆಗೆ ಬಲಿ ಕೊಡಲು ಸಾಧ್ಯವಿಲ್ಲ. ಜೀವ, ಜಲಕ್ಕೆ ಆಸರೆಯಾಗಿರುವ ಕಪ್ಪತಗುಡ್ಡದಲ್ಲಿ ಚಿನ್ನದ ಗಣಿಗಾರಿಕೆಗೆ ಯಾವ ಕಾರಣಕ್ಕೂ ಸರ್ಕಾರ ಅವಕಾಶ ನೀಡಬಾರದು. ಗುಂಡಿ ತೋಡಿದರೆ ಅಂತರ್ಜಲ ವೃದ್ಧಿಯಾಗುತ್ತದೆ ಎಂಬಂತಹ ಸುಳ್ಳುಗಳನ್ನು ಹೆಣೆಯುತ್ತಿರುವ ಮೈನ್ಸ್ ಕಂಪನಿಯವರು ಗುಡ್ಡವನ್ನು ಕರಗಿಸುವ ಎಲ್ಲ ಅಪಾಯಗಳಿವೆ. ಮುಖ್ಯಮಂತ್ರಿಗಳು ಕಪ್ಪತಗುಡ್ಡ ವ್ಯಾಪ್ತಿಯ ಜಿಲ್ಲೆಗಳ ಎಲ್ಲ ಜನರ ಅಭಿಪ್ರಾಯವನ್ನು ಪಡೆದುಕೊಳ್ಳಬೇಕು. ಜನಾಭಿಪ್ರಾಯಕ್ಕೆ ವಿರುದ್ಧವಾದ ನಿಲುವು ತೆಗೆದುಕೊಂಡಿದ್ದೇ ಆದಲ್ಲಿ, ಚುನಾವಣೆಯಲ್ಲಿ ಜನರೇ ಪಾಠ ಕಲಿಸಲಿದ್ದಾರೆ

ಶಿವಕುಮಾರ ಸ್ವಾಮೀಜಿ, ಕಪ್ಪತಗುಡ್ಡ ಶ್ರೀ ನಂದಿವೇರಿ ಸಂಸ್ಥಾನಮಠ, ಡೋಣಿ-ಗದಗ

'ಮತ್ತೆ ಪರಿಶೀಲನೆಗೆ ಸೂಚಿಸಿದ್ದೇಕೆ?'

ಅರಣ್ಯ ಇಲಾಖೆ ಈ ಹಿಂದೆಯೇ ಗಣಿಗಾರಿಕೆ ಪ್ರಸ್ತಾವನೆಯನ್ನು ತಿರಸ್ಕರಿಸಲು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಪ್ರಸ್ತಾವನೆ ಕುರಿತು ಮತ್ತೊಮ್ಮೆ ಅಭಿಪ್ರಾಯವನ್ನು ಸಲ್ಲಿಸುವಂತೆ ಅರಣ್ಯ ಇಲಾಖೆಗೆ ಏಕೆ ಸೂಚಿಸಿದೆ ಎಂಬುದು ತಿಳಿದಿಲ್ಲ. ಆದರೆ ಒಂದಂತೂ ಸ್ಪಷ್ಟ, ಜೂನ್ 2022ರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿನ ಅನ್ವಯ ಅಭಯಾರಣ್ಯದ ವ್ಯಾಪ್ತಿಯಲ್ಲಿ ಗಣಿಗಾರಿಕೆಗೆ ಅವಕಾಶ ನೀಡಲು ಬರುವುದಿಲ್ಲ

ಗಿರಿಧರ ಕುಲಕರ್ಣಿ
ವನ್ಯಜೀವಿ ಸಂರಕ್ಷಣಾವಾದಿ

ಮಾಹಿತಿ: ಯತೀಶ್ ಕುಮಾರ್ ಜಿ.ಡಿ, ಜಯಸಿಂಹ ಆರ್., ಅಮೃತಕಿರಣ್ ಬಿ.ಎಂ.

ಆಧಾರ: ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಅವರ ಪತ್ರ, ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಅವರ ವರದಿ

ಸಿನಿ ಬಿಟ್ಸ್

ಚಂದದ ಹೆಜ್ಜೆ ಇಟ್ಟ ಸ್ವತಿಷ್ಠ

'ಗತವೈಭವ' ಪ್ರಾಜೆಕ್ಟ್ ನಡುವೆಯೇ ನಿರ್ದೇಶಕ 'ಸಿಂಪಲ್' ಸುನಿ, ತಮ್ಮ ಹೊಸ ಚಿತ್ರದ ತಯಾರಿ ಆರಂಭಿಸಿದ್ದಾರೆ. ಸರಳ ಪ್ರೇಮಕಥೆ ಹೆಣೆದು ವಿನಯ್ ರಾಜ್‌ಕುಮಾರ್ ಅವರಿಗೆ ಆ್ಯಕ್ಷನ್ ಕಟ್ ಹೇಳುವುದಕ್ಕೆ ಸಜ್ಜಾಗಿ, ವಿನಯ್‌ಗೆ ಜೋಡಿಯೊಂದನ್ನೂ ಆಯ್ಕೆ ಮಾಡಿದ್ದಾರೆ.

ಮ್ಯೂಸಿಕಲ್ ಲವ್‌ಸ್ಟೋರಿ ಸಬ್ಜೆಕ್ಟ್ ಒಳಗೊಂಡ ಈ ಚಿತ್ರದ ಮೂಲಕ ತಮಿಳಿನ ಹಿಟ್ ಸಿನಿಮಾ 'ವಿಕ್ರಮ್'ನಲ್ಲಿ ನಟಿಸಿದ್ದ ಸ್ವತಿಷ್ಠ ಕೃಷ್ಣನ್ ಚಂದನವನಕ್ಕೆ ಪ್ರವೇಶಿಸುತ್ತಿದ್ದಾರೆ. ಧಾರವಾಡ ಮೂಲದ ಸ್ವತಿಷ್ಠ ಸದ್ಯ ತಮಿಳು ಚಿತ್ರರಂಗದಲ್ಲಿ ಸಕ್ರಿಯರಾಗಿದ್ದಾರೆ.

'ಗತವೈಭವ ಚಿತ್ರದ ಅಂತಿಮ ಹಂತದ ಚಿತ್ರೀಕರಣ ಮೇ ತಿಂಗಳಲ್ಲಿ ನಡೆಯಲಿದೆ. ಹೀಗಾಗಿ ಇದರ ಬಿಡುಗಡೆಯೂ ವಿಳಂಬವಾಗಲಿದೆ. ಹೊಸ ಪ್ರಾಜೆಕ್ಟ್ ಅನ್ನು ಫೆಬ್ರುವರಿಯಲ್ಲೇ ಕೈಗೆತ್ತಿಕೊಳ್ಳಲಿದ್ದೇನೆ. ಪ್ರಿ ಪ್ರೊಡಕ್ಷನ್ ಕೆಲಸಗಳು ಪೂರ್ಣಗೊಂಡಿದೆ. ಚಿತ್ರದಲ್ಲಿ ವಿನಯ್ ಅವರಿಗಿಂತ ವಯಸ್ಸಿನಲ್ಲಿ ದೊಡ್ಡವರಾಗಿ ಕಾಣುವ ಒಬ್ಬರು ನಟಿಯ ಅವಶ್ಯಕತೆ ಇತ್ತು. ಚಂದನವನದ ಹಲವು ಖ್ಯಾತ ನಟಿಯರನ್ನೂ ಈ ಪಾತ್ರಕ್ಕಾಗಿ ಕೇಳಿದ್ದೆವು. ಕೊನೆಯಲ್ಲಿ ಸ್ವತಿಷ್ಠ ಅವರನ್ನು ಆಯ್ಕೆ ಮಾಡಲಾಗಿದೆ. ಎರಡನೇ ನಾಯಕಿಯ ಪಾತ್ರ ಉತ್ತರ ಭಾರತೀಯಳದ್ದಾಗಿದ್ದು, ಇದಕ್ಕಾಗಿ ಹುಡುಕಾಟ ನಡೆದಿದೆ' ಎಂದರು ಸುನಿ. ಚಿತ್ರಕ್ಕೆ ಪ್ರಸನ್ನ ಕಥೆ ಬರೆದಿದ್ದು, ಚಿತ್ರಕಥೆ, ಸಂಭಾಷಣೆ ಬರೆದು ಸುನಿ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಚಿತ್ರದ ಪ್ರಿ ಪ್ರೊಡಕ್ಷನ್ ಕೆಲಸದಲ್ಲಿ ನಿರತವಾಗಿರುವ ಸುನಿ ಸದ್ಯದಲ್ಲೇ ಸಿನಿಮಾದ ತಾರಾಬಳಗ ಎಲ್ಲದರ ಬಗ್ಗೆ ಅಧಿಕೃತ ಮಾಹಿತಿ ಹಂಚಿಕೊಳ್ಳುತ್ತೇನೆ ಎಂದಿದ್ದಾರೆ. ಚಿತ್ರಕ್ಕೆ ಮೈಸೂರು ರಮೇಶ್ ಬಂಡವಾಳ ಹೂಡುತ್ತಿದ್ದು, ವೀರ್ ಸಮರ್ಥ್ ಸಂಗೀತ ನಿರ್ದೇಶನ, ಸಭಾ ಛಾಯಾಗ್ರಹಣವಿದೆ.

'ಲಾಂಗ್‌ಡ್ರೈವ್' ಹೊರಟ ಅರ್ಜುನ್

ನಟ ಅರ್ಜುನ್ ಯೋಗಿ ನಟನೆಯ ರೊಮ್ಯಾಂಟಿಕ್ ಥ್ರಿಲ್ಲರ್ ಕಥಾಹಂದರದ ಸಿನಿಮಾ 'ಲಾಂಗ್‌ಡ್ರೈವ್' ಫೆ.10ರಂದು ತೆರೆಕಾಣಲಿದೆ.

ಗುಡ್‌ವಿಲ್ ಪ್ರೊಡಕ್ಷನ್ಸ್ ಬ್ಯಾನರ್‌ನಡಿ ಮಂಜುನಾಥ್ ಗೌಡ ಬಿ.ಆರ್.(ಶಬರಿ ಮಂಜು) ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ಅನುಭವಗಳ ಸುತ್ತವೇ ಈ ಚಿತ್ರದ ಕಥೆಯನ್ನು ಹೆಣೆಯಲಾಗಿದೆ. ಸಹಾಯಕ ನಿರ್ದೇಶಕರಾಗಿ ಚಂದನವನದಲ್ಲಿ ಕಾರ್ಯನಿರ್ವಹಿಸಿದ್ದ ಶ್ರೀರಾಜ್ ಅವರ ನಿರ್ದೇಶನದ ಚೊಚ್ಚಲ ಚಿತ್ರ ಇದಾಗಿದೆ.

ಚಿತ್ರದ ಕುರಿತು ಮಾಹಿತಿ ನೀಡಿದ ಅರ್ಜುನ್, 'ಪೂರ್ಣ ಪ್ರಮಾಣದ ನಾಯಕ ನಟನಾಗಿ ಇದು ನನ್ನ ಮೂರನೇ ಸಿನಿಮಾ. ಆದರೆ ಇದು ನನ್ನ ಮೊದಲ ಪೂರ್ಣ ಪ್ರಮಾಣದ ಕಮರ್ಷಿಯಲ್ ಸಿನಿಮಾ. ಅಪ್ಪು ಅವರ 'ಅಣ್ಣಾಬಾಂಡ್' ಸಿನಿಮಾದಲ್ಲಿ ಜ್ಯೂನಿಯರ್ ಆರ್ಟಿಸ್ಟ್ ಆಗಿದ್ದ ನನಗೆ ಚಿತ್ರರಂಗದ ಪರಿಚಯವೇ ಇರಲಿಲ್ಲ. ಅಲ್ಲಿಂದ ಪಯಣ ಇಲ್ಲಿಯವರೆಗೂ ಸಾಗಿದೆ. ಈ ಚಿತ್ರದಲ್ಲಿ 'ಅರ್ಜುನ್' ಎಂಬ ಪಾತ್ರದಲ್ಲಿ ನಟಿಸಿದ್ದೇನೆ. ಈತ ಮುಗ್ಧನಾಗಿದ್ದರೂ, ತನ್ನ ಜೀವಕ್ಕೆ ಅಪಾಯ ಬಂದಾಗ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಾನೆ' ಎಂದರು. ಈ ಚಿತ್ರದ ಮುಖಾಂತರ ಕಿರುತೆರೆ ನಟಿ ತೇಜಸ್ವಿನಿ ಶೇಖರ್ ಬೆಳ್ಳಿತೆರೆ ಪ್ರವೇಶಿಸುತ್ತಿದ್ದಾರೆ.

ತೇಜಸ್ವಿನಿ ಶೇಖರ್, ಅರ್ಜುನ್ ಯೋಗಿ, ಸುಪ್ರೀತಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net/

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **ಮುಂದಿನ ಚುನಾವಣೆಯಲ್ಲಿ** ಕಾಂಗ್ರೆಸ್-ಬಿಜೆಪಿ ನಡುವೆ ಒಪ್ಪಂದ ಏರ್ಪಟ್ಟಿದೆ ಎಂದು ಹೇಳಲಾಗುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಸ್ಪೀಕರ್ ಓಂ ಬಿರ್ಲಾ, ಗೃಹಸಚಿವ ಅಮಿತ್ ಶಾ, ಕಾಂಗ್ರೆಸ್ ಮುಖಂಡ ಅಧಿರ್ ರಂಜನ್ ಚೌಧರಿ ಅವರು 'ರಹಸ್ಯ ಸಭೆ' ನಡೆಸುತ್ತಿದ್ದಾರೆ' ಎಂದು ಚಿತ್ರಕ್ಕೆ ಅಡಿಬರಹ ನೀಡಲಾಗಿದೆ. '2024ರಲ್ಲೂ ಮೋದಿ ಅವರು ಪ್ರಧಾನಿಯಾಗಿ ಮುಂದುವರಿಯಲು ಕಾಂಗ್ರೆಸ್ ಅವಕಾಶ ಮಾಡಿಕೊಡಲಿದೆ. ಮುಸ್ಲಿಮರು ಕಾಂಗ್ರೆಸ್‌ಗೆ ಬಹಿಷ್ಕಾರ ಹಾಕಬೇಕು. ಏಕೆಂದರೆ ಇಂತಹ ಒಪ್ಪಂದವೊಂದು ನಡೆದಿದ್ದು, ಕಾಂಗ್ರೆಸ್‌ಗೆ ಮತ ಹಾಕಿದರೆ ಮುಸ್ಲಿಮರು ನಾಶವಾಗುತ್ತಾರೆ' ಎಂದು ಟ್ವಿಟರ್ ಬಳಕೆದಾರರೊಬ್ಬರು ಉಲ್ಲೇಖಿಸಿದ್ದಾರೆ. ಆದರೆ ಇದು ಸುಳ್ಳು ಸುದ್ದಿ.

✓ **2021ರ ಆಗಸ್ಟ್ 12ರಂದು** ದೆಹಲಿಯಲ್ಲಿ ನಡೆದ ಸರ್ವಪಕ್ಷ ಸಭೆಯ ಚಿತ್ರವಿದು ಎಂದು 'ಪಿಟಿಐ' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಲೋಕಸಭೆ ಕಲಾಪ ಮುಂದೂಡಿಕೆ ಬಳಿಕ, ಸ್ಪೀಕರ್ ಓಂ ಬಿರ್ಲಾ ಅವರು ಕರೆದಿದ್ದ ಸರ್ವಪಕ್ಷಗಳ ಸಭೆ ಕುರಿತ ಈ ಚಿತ್ರವು, ಅಂದು ಬಹುತೇಕ ಪತ್ರಿಕೆಗಳಲ್ಲಿ ಹಾಗೂ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು. ಬಿರ್ಲಾ ಅವರೂ ಈ ಸಭೆಯ ವಿಚಾರವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದರು. 2021ರ ಚಿತ್ರವನ್ನು ಕಾಂಗ್ರೆಸ್-ಬಿಜೆಪಿ ನಡುವಿನ ರಹಸ್ಯ ಒಪ್ಪಂದದ ಚಿತ್ರ ಎಂಬುದಾಗಿ ತಪ್ಪಾಗಿ ಅರ್ಥೈಸಲಾಗಿದೆ ಎಂದು ಪಿಟಿಐ ವರದಿ ಮಾಡಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಸರ್ವಾತ್ಮತೆಯ ಅಭ್ಯಾಸ

ಚಿರಶಿಕ್ಷೆಯಿಂ ನಿನಗೆ ಸರ್ವಾತ್ಮತಾಭ್ಯಾಸ |
ಸರಳ ಸಹಜವದಹುದು ಮೂಗಿನುಸಿರವೊಲು ||
ಪರ ನಿಯತಿಯಿರದು ಸ್ವತಸಿದ್ಧ ನಿಯತಿಯಿರೆ |
ಹೊರಸಡಿಲಕೊಳಹಿಡಿತ - ಮಂಕುತಿಮ್ಮ || 808 ||

ಪದ-ಅರ್ಥ: ಚಿರಶಿಕ್ಷೆಯಿಂ = ದೀರ್ಘಕಾಲದ ಶಿಕ್ಷೆಯಿಂದ, ಸರ್ವಾತ್ಮತಾಭ್ಯಾಸ = ಎಲ್ಲವೂ ತನ್ನ ಆತ್ಮವೇ ಎಂಬ ಭಾವವನ್ನು ಅಭ್ಯಾಸಮಾಡುವುದು, ಸಹಜವದಹುದು = ಸಹಜವು + ಅದು + ಅಹುದು, ಮೂಗಿನುಸಿರವೊಲು = ಮೂಗಿನ ಉಸಿರಿನಂತೆ, ಪರ = ಹೊರಗಿನ, ನಿಯತಿಯಿರದು = ನಿಯಮವಿರದು, ಹೊರಸಡಿಲಕೊಳಹಿಡಿತ = ಹೊರಸಡಿಲ(- ಹೊರಗೆ ಸಡಿಲ) + ಒಳಹಿಡಿತ.

ವಾಚ್ಯಾರ್ಥ: ದೀರ್ಘವಾದ ಶಿಕ್ಷೆಯಿಂದ ನಿನಗೆ, ಎಲ್ಲವೂ ನಿನ್ನ ಆತ್ಮವೇ ಎಂಬುದು ಅಭ್ಯಾಸವಾಗುತ್ತದೆ. ಅದು ಉಸಿರಾಟದಂತೆ ಸರಳ, ಸಹಜವಾದದ್ದು. ಅಂತರಂಗದ ಹಿಡಿತವಿದ್ದರೆ ಹೊರಗಿನ ನಿಯಮಗಳು ಬೇಕಿಲ್ಲ, ಅದಕ್ಕೇ ಹೊರಗಿನ ಸಡಿಲತೆ ಮತ್ತು ಅಂತರಂಗದ ಬಿಗಿ ಬೇಕು.

ವಿವರಣೆ: ನನಗೆ ಗುಜರಾತಿನ ಸ್ವಾಮಿಗಳೊಬ್ಬರ ಪರಿಚಯವಿತ್ತು. ಅವರನ್ನು ಜನ ದೇವರಂತೆ ಕಾಣುತ್ತಿದ್ದರು. ಅದು ಎಷ್ಟರಮಟ್ಟಿನ ಗೌರವವೆಂದರೆ ಅವರು ಕಾರು ಹೋದ ಮೇಲೆ ಅದರ ಗಾಲಿಗಳು ಮಣ್ಣಿನಲ್ಲಿ ಮೂಡಿಸಿದ ಗುರುತುಗಳನ್ನು ಕಾಗದದಲ್ಲಿ ಕಟ್ಟಿಕೊಂಡು ಹೋಗಿ ಪೂಜಿಸುತ್ತಿದ್ದರು. ಸ್ವಾಮಿಗಳು ಒಂದು ದಿನವೂ ಯಾರನ್ನೂ ತೆಗಳಿದವರಲ್ಲ, ಗಡುಸಾಗಿ ಮಾತನಾಡಿಸಿದವರಲ್ಲ. ಅವರ ಕಣ್ಣುಗಳಲ್ಲಿ ಸದಾ ಪ್ರೀತಿಯ ಹೊನಲು. ಅವರನ್ನು ಟೀಕಿಸಿದವರಿಗೂ ಅದೇ ಪ್ರೀತಿ. ಅವರ ಶಿಷ್ಯ ವರ್ಗ ತುಂಬ ದೊಡ್ಡದು. ಅಮೇರಿಕೆಯಲ್ಲಿ ಅವರು ಬೆರಳು ತೋರಿಸಿದರೆ ಸಾಕು ಸಾವಿರ ಮಂದಿ ಶ್ರೀಮಂತ ಶಿಷ್ಯರು ಅವರಿಗಾಗಿ ಏನನ್ನಾದರೂ ಮಾಡಲು ಸಿದ್ಧವಿದ್ದರು. ಸ್ವಾಮಿಗಳ ಬದುಕು ತೀರಾ ಸರಳ ಮತ್ತು ಸಹಜ. ಕೃತಕತೆ ಅವರ ಬಳಿ ಸುಳಿಯಲೇ ಇಲ್ಲ. ಯಾರಾದರೂ ಒಂದು ವಿಷಯವನ್ನು ಹೇಳಿದರೆ, "ಓ, ಹೌದಾ? ಎಷ್ಟು ಚೆನ್ನಾಗಿ ಹೇಳಿದಿರಿ. ನನಗೆ ಗೊತ್ತೇ ಇರಲಿಲ್ಲ" ಎಂದು ಮಗುವಿನಂತೆ ಕಣ್ಣರಳಿಸಿ ಕೇಳುವರು. ಈ ಮಗುತನ, ಈ ನಿರ್ಮಲತೆ ಅವರಲ್ಲಿ ಹೇಗೆ ಬಂದಿತು ಎಂದು ನಾನು ಆಶ್ಚರ್ಯಪಡುತ್ತಿದ್ದೆ. ಒಂದು ದಿನ ಅವರನ್ನೇ ಕೇಳಿದೆ, "ಸ್ವಾಮೀಜಿ, ಈ ಸರಳತೆ ನಿಮಗೆ ಹೇಗೆ ಬಂದಿತು? ಮೊದಲಿನಿಂದಲೂ ನೀವು ಹೀಗೆಯೇ ಇದ್ದಿರಾ?" ಅವರು ಹೇಳಿದ್ದು ಇನ್ನೂ ಅದ್ಭುತ. "ಅಯ್ಯೋ ಸರಳತೆ ನನಗೆಲ್ಲಿದೆ? ಇನ್ನೂ ಸರಳವಾಗಲು ಸತತ ಪ್ರಯತ್ನ ಮಾಡುತ್ತೇನೆ. ನನಗೆ ಮೊದಲು ಬಹಳ ಅಹಂಕಾರವಿತ್ತು. ನನಗೆ ಏನು ಮಾಡಬೇಕೆಂಬುದು ತೋಚದೆ ನನ್ನ ಗುರುಗಳ ಪಾದ ಹಿಡಿದುಕೊಂಡುಬಿಟ್ಟೆ. ಅವರು ಶೌಚಾಲಯಗಳನ್ನು ತೊಳೆಯುವುದರಿಂದ ಹಿಡಿದು ಎಲ್ಲ ಕಾರ್ಯಗಳನ್ನು ಮಾಡಿಸಿ ಅಹಂಕಾರ ಕಿತ್ತೊಗೆಯಲು ಕಾರಣರಾದರು. ಇನ್ನೂ ಪೂರ್ತಿ ಅಹಂಕಾರ ಹೋಗಿಲ್ಲ. ಆಗಾಗ ಬರುತ್ತದೆ. ಗುರುಗಳೇ ಪ್ರತಿಯೊಬ್ಬರಲ್ಲಿ ದೇವರನ್ನು ಕಾಣಲು ಕಲಿಸಿದರು. ಎಲ್ಲರೂ ದೇವರೇ ಆದ ಮೇಲೆ ನನಗೆ ಯಾರ ಮೇಲೆ ಕೋಪ, ಅಸಹನೆ ಬರಬೇಕು?". ಇದು ಈ ಕಗ್ಗದ ಮಾತುಗಳಿಗೆ ವಿವರಣೆಯಂತಿದೆ. ಎಲ್ಲರಲ್ಲೂ ತನ್ನ ಆತ್ಮವನ್ನೇ ಕಾಣುವುದು ಸಾಧ್ಯವಾಗುವುದು ದೀರ್ಘವಾದ ಪ್ರಯತ್ನದಿಂದ. ಆಗ ಅದು ಉಸಿರಾಡುವಷ್ಟು ಸರಳ ಮತ್ತು ಸಹಜವಾಗುತ್ತದೆ. ಇದು ಹೊರಗಿನಿಂದ ಬಂದ ಒತ್ತಡದಿಂದ, ನಿಯಮಗಳಿಂದ ಸಾಧ್ಯವಾಗುವುದಿಲ್ಲ. ಆಂತರಿಕವಾದ ಸಂಯಮ, ಇಂದ್ರಿಯ ನಿಗ್ರಹ, ಭಕ್ತಿ, ಶ್ರದ್ಧೆ ಇವುಗಳ ಹಿಡಿತಗಳ ಅಭ್ಯಾಸದಿಂದ ಬಂದದ್ದು. ಹೊರಗಡೆ ನಿರಾಳ, ಸಡಿಲ, ಆದರೆ ಆಂತರಿಕವಾದ ಬಿಗಿತನ ಇವುಗಳಿಂದ, ದೀರ್ಘ ಮಪ್ರಯತ್ನದಿಂದ, ಈ ಸರ್ವಾತ್ಮತೆ ಸಾಧ್ಯವಾಗುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜನವರಿ 26, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಶುಕ್ಲ ಪಂಚಮಿ ಗಂ. 10-29 ನಕ್ಷತ್ರ: ಉತ್ತರಾಭಾದ್ರಾ ಗಂ. 18-57 ಯೋಗ: ಶಿವ ಗಂ. 15-29, ಕರಣ: ಬಾಲವ ಗಂ. 10-29, ಮಕರ ಮಾಸದ 12 ನೇ ದಿನ. ರಾಹುಕಾಲ : ಮಧ್ಯಾಹ್ನ 01-30 -03-00 ಸೂರ್ಯೋದಯ : 07-01 ಸೂರ್ಯಾಸ್ತ : 06-24
ಮುಸ್ಲಿಂ ದಿನಾಂಕ : 03 ರಜಬ್, ದಿನ ವಿಶೇಷ : ಶ್ರೀ ಪಂಚಮಿ, ಸರಸ್ವತಿ ಪೂಜೆ, ವಸಂತ ಪಂಚಮಿ, ಗಣರಾಜ್ಯೋತ್ಸವ ದಿನಾಚರಣೆ
ಅದೃಷ್ಟ ಸಂಖ್ಯೆ : 2, 8

ಮೇಷ: ವೃತ್ತಿರಂಗದಲ್ಲಿ ವಿಚಾರಗಳನ್ನು ಅವಲೋಕಿಸಿ ಮುಂದಿನ ಹೆಜ್ಜೆ ಇಡುವಿರಿ. ರಾಜಕೀಯ ವ್ಯಕ್ತಿಗಳಿಗೆ ಬಿಡುವಿಲ್ಲದ ಓಡಾಟ. ಆರ್ಥಿಕ ವಿಚಾರದಲ್ಲಿ ಧನಾಗಮನದಿಂದ ಕಾರ್ಯಾನುಕೂಲಕ್ಕೆ ಹೆಚ್ಚಿನ ಬಲ.

ವೃಷಭ: ಪ್ರೇಮಿಗಳಿಗೆ ಜೀವನ ನಿರ್ಣಯಿಸಲು ಉತ್ತಮ ಅವಕಾಶ ಬರಲಿದೆ. ಅಬಕಾರಿ ಇಲಾಖೆಯವರಿಗೆ ಹೆಚ್ಚಿನ ಕೆಲಸ. ಕಾನೂನಿಗೆ ವಿರುದ್ಧ ಕೆಲಸ ನಿಮ್ಮಿಂದ ಸಂಭವಿಸಬಹುದು. ತಪ್ಪು ಮಾಡದಂತೆ ಗಮನದಲ್ಲಿರಿ.

ಮಿಥುನ: ಯಾವುದೇ ಅಡಚಣೆಗಳು ಇಲ್ಲದೆ, ಅಪಾರವಾದ ಜನಬಲ ದೊರೆತು ದೊಡ್ಡ ಕಾರ್ಯಗಳನ್ನು ಸಾಧಿಸುವಿರಿ. ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆನಿಸಿದ್ದರೂ ಅದು ಅಷ್ಟು ಸುಲಭವಲ್ಲ. ಸಾಗಣೆ ಒಪ್ಪಂದ ಏರ್ಪಡಲಿದೆ.

ಕರ್ಕಾಟಕ: ಅಪವಾದಗಳು ನಿಮ್ಮಿಂದ ದೂರವಾಗಲಿವೆ. ಯಾರ ನೆರವೂ ಇಲ್ಲದೆ ನಿಮ್ಮೆಲ್ಲ ಕಾರ್ಯಗಳನ್ನು ಸ್ವಯಂ ನಿರ್ವಹಿಸುವಂತಾಗಲಿದೆ. ಗೃಹ ತಾಪತ್ರಯಗಳಿಂದಲೂ ಮುಕ್ತರಾಗಿ ನಿಶ್ಚಿಂತತೆ ತೋರಿ ಬರುತ್ತದೆ.

ಸಿಂಹ: ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳು ಅರಸಿ ಬರಲಿದೆ. ಸರ್ಕಾರಿ ಸಂಸ್ಥೆಗಳಲ್ಲಿ ಉಪನ್ಯಾಸ ಕೈಗೊಳ್ಳುವ ಅವಕಾಶವಿದೆ. ಮಗಳ ಮದುವೆ ಮುಂತಾದ ಮಂಗಳ ಕಾರ್ಯಗಳ ಯೋಚಿಸಿ.

ಕನ್ಯಾ: ಬಹು ವಿಧದ ಉದ್ಯೋಗಾವಕಾಶಗಳು ನಿಮ್ಮ ಪಾಲಿಗೆ ಬರಲಿದೆ. ಅದನ್ನು ಸದುಪಯೋಗಪಡಿಸಿಕೊಳ್ಳುವಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಳ್ಳಿ. ಕೆಲವು ನಿಗೂಢ ಸಂಗತಿಗಳನ್ನು ಬಯಲಿಗೆ ತರುವ ಪ್ರಯತ್ನ ನಿಮ್ಮಿಂದ ನಡೆಯಲಿದೆ.

ತುಲಾ: ಪ್ರಿಯ ವ್ಯಕ್ತಿಯೊಂದಿಗೆ ವಿಚಾರ ವಿನಿಮಯ ಸೂಕ್ತ ರೀತಿಯಲ್ಲಿ ಮಾಡಿಕೊಳ್ಳುವಿರಿ. ಪ್ರಭಾವಶಾಲಿ ವ್ಯಕ್ತಿಯೊಂದಿಗಿನ ಭೇಟಿಯನ್ನು ತಳ್ಳಿಹಾಕದೆ ವೃತ್ತಿ ಕ್ಷೇತ್ರಕ್ಕೆ ಲಾಭ ಉಂಟಾಗುವಂತೆ ನೋಡಿಕೊಳ್ಳಿ.

ವೃಶ್ಚಿಕ: ರಂಗ ನಟರಿಗೆ ಚಲನಚಿತ್ರಗಳಲ್ಲಿ ನಟಿಸಲು ಅವಕಾಶಗಳು ಸಿಗಲಿದೆ. ತೋಟ ಮತ್ತು ಎಸ್ಟೇಟ್ ಕೆಲಸಗಾರರಿಗೆ ಸಂಪಾದನೆ ಹೆಚ್ಚಲಿದೆ. ಹವಾಮಾನದ ವ್ಯತ್ಯಾಸದಿಂದಾಗಿ ಅನಾರೋಗ್ಯದ ಭೀತಿ ಉಂಟಾಗುವುದು.

ಧನು: ವೃತ್ತಿ ಬದುಕಿನಲ್ಲಿ ಅಪೂರ್ವ ಅವಕಾಶಗಳು ನಿಮ್ಮದಾಗಲಿವೆ. ಧನಾಗಮನಕ್ಕೆ ಒಂದಲ್ಲಾ ಒಂದು ರೀತಿಯಲ್ಲಿ ಅನುಕೂಲವು ಆಗುತ್ತದೆ. ಶ್ರೀಮಹಾಲಕ್ಷ್ಮಿಯನ್ನು ಆರಾಧಿಸಿದಲ್ಲಿ ಎಲ್ಲವೂ ಶುಭದತ್ತ ಸಾಗುವುದು.

ಮಕರ: ಮೋಸ ಮಾಡುವ ಬುದ್ಧಿ, ಅನ್ಯಾಯ ಮಾಡುವ ಯೋಚನೆ ಕಡಿಮೆ ಮಾಡಿಕೊಳ್ಳಿ. ಎಂಜಿನಿಯರಿಂಗ್ ಶಿಕ್ಷಣದಲ್ಲಿನ ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ವಿಶೇಷ ಸಾಧನೆ ತೋರಿರುವುದರಿಂದ ವಿದೇಶಕ್ಕೆ ತೆರಳುವ ಸಂಭವವಿದೆ.

ಕುಂಭ: ಕ್ರೀಡಾಪಟುಗಳಿಗೆ, ಸಂಗೀತಗಾರರಿಗೆ ಸಾಧನೆಯ ಅವಕಾಶ ಸಿಕ್ಕಿದರೂ ಅನಾರೋಗ್ಯ ಎದುರಾಗಬಹುದು. ಮಕ್ಕಳ ಸರ್ವತೋಮುಖ ಪ್ರಗತಿಯಿಂದ ಹರ್ಷವಿರುವುದು. ತಂದೆ- ತಾಯಿಯ ಆರೋಗ್ಯದ ಬಗ್ಗೆ ಕಾಳಜಿವಹಿಸಿ.

ಮೀನ: ಮನೆಯಲ್ಲಿ ಶುಭ ಕಾರ್ಯಗಳು ಕೈಗೂಡಿದ್ದು ಜವಾಬ್ದಾರಿ ಹೆಚ್ಚಿದೆ. ಕೊಡು ಕೊಳ್ಳುವ ವಿಚಾರಗಳಲ್ಲಿ ಒಬ್ಬರೇ ತೀರ್ಮಾನ ಕೈಗೊಳ್ಳುವುದು ಸೂಕ್ತವಲ್ಲ. ಶ್ರೀ ವಿಘ್ನೇಶ್ವರನ ಸ್ತೋತ್ರ ಪಠಿಸಿ.

ಪದಬಂಧ 5211

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹೊಚ್ಚ ಹೊಸದಾದುದು (4)
3.ಶಿರ ಮೇಲೆತ್ತಿಕೊಂಡು ಬರುತ್ತಿರುವ ಧೂರ್ತ! (4)
5.ಅಕ್ಕಿ ತೊಳೆದ ನೀರು (4)
7.ಈತ ಕೆಲಸಕ್ಕೆ ಬಾರದವನು (4)
9.ಗಂಡು ಕೋಳಿ ಇಲ್ಲದೆ (2)
10.ನ್ಯಾಯಾಲಯದ ತೀರ್ಪು (2)
11.ನಯವಾದ ಮಾತು (4)
14.ಹಾಲು ಮಾರುವವನು (4)
17.ದಷ್ಟ ಪುಷ್ಟವಾದುದನ್ನು ಹೀಗೆನ್ನಿ(4)
18.ಮನಸ್ಸಿನ ಪ್ರೇರಣೆ (4))

ಮೇಲಿಂದ ಕೆಳಕ್ಕೆ
1.ಈತ ನೃತ್ಯ ಮಾಡುವವನು (3)
2.ಸುಲಭಸಾಧ್ಯವಲ್ಲದುದು ಉಲ್ಟಾ ಕಾಣುತ್ತಿದೆ (3)
3.ನಿಧಾನದಿಂದಾದ ತಬ್ಬಿಬ್ಬು! (4)
4.ದೊಡ್ಡ ಅಲೆ (3)
6.ಬೋಜನ ಸಮಾರಂಭಕ್ಕೆ ಬೇಕಾದ ಸಾಮಗ್ರಿ (4)
7.ಸದಭಿಪ್ರಾಯ ಸಂಪಾದನೆಗಾಗಿ ಕೊಡುವ ಹಣ (3)
8.ಮಿಡಿ ಹಿಡಿದಿದ್ದಕ್ಕೇ ಈ ಸಿಟ್ಟು !(4)
12.ವಿಶೇಷಾರ್ಥವುಳ್ಳ ಪದಪುಂಜ (4)
13.ಊರ ಮುಂದೆ ಕಾಣಿಸಿದ ಹಾವು (3)
15.ವಿಷ್ಣುವಿನ ಐದನೆಯ ಅವತಾರ (3)
16.ಗಾಳಿ ಬೆಳಕು ಬರಲು ಮಾಡಿರುವ ಕಿಂಡಿ (3)



5210 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆನೆ 3.ವಿದೂಷಕ
5.ಪುರುಷ 7.ನಡುಮನೆ
9.ಬಯಲು 10.ಸರಳು
11.ದಿನಕರ 13.ಕಂಪನ
15.ಕಡವರ 16.ಗ್ರಹ

ಮೇಲಿಂದ ಕೆಳಕ್ಕೆ:
2.ನೆನಪು 3.ವಿಶೇಷ
4.ಕರಡು 6.ರುಮಾಲು
8.ನೆರಳು 9.ಬಸದಿ
10.ಸಮೀಪ 12.ಕನಕ
13.ಕಂದರ 14.ನಖಾಗ್ರ

ಸುಡೊಕು 5597

7		4		5				3
			1		9	6		5
6		5		3				
2					4	1		9
9	7	1		8			4	
4			9		2	3		7
	4		3		7		2	
						7		
1	3			2			6	

5596 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಮಹಿಳಾ ಐಪಿಎಲ್: ಐದು ತಂಡಗಳ ಬಿಡ್; ತಂಡ ಖರೀದಿಸಿದ ಆರ್‌ಸಿಬಿ

ಬಿಸಿಸಿಐಗೆ ₹ 4669.99 ಕೋಟಿ

ಮುಂಬೈ (ಪಿಟಿಐ): ಇದೇ ಮೊದಲ ಬಾರಿ ನಡೆಯಲಿರುವ ಮಹಿಳೆಯರ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ತಂಡಗಳ ಹರಾಜು ಪ್ರಕ್ರಿಯೆಯಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ನಿರೀಕ್ಷೆಗಿಂತಲೂ ಹೆಚ್ಚಿನ ಲಾಭ ಹರಿದುಬಂದಿತು.

ಬುಧವಾರ ನಡೆದ ಪ್ರಕ್ರಿಯೆಯಲ್ಲಿ ಐದು ತಂಡಗಳಿಂದ ಒಟ್ಟು ₹4669.99 ಕೋಟಿ ಬಿಸಿಸಿಐ ಬೊಕ್ಕಸ ಸೇರಿತು.

ಅದಾನಿ ಸ್ಪೋರ್ಟ್ಸ್‌ಲೈನ್ ಸಂಸ್ಥೆಯು ₹1,289 ಕೋಟಿ ವ್ಯಯಿಸಿ ಅಹಮದಾಬಾದ್ ತಂಡವನ್ನು ತನ್ನದಾಗಿಸಿಕೊಂಡಿತು. ಇದೇ ಬಿಡ್‌ನಲ್ಲಿ ಅತಿ ಹೆಚ್ಚಿನ ಮೌಲ್ಯ ನೀಡಿದ ಸಂಸ್ಥೆ ಇದಾಗಿದೆ.

ಪುರುಷರ ಐಪಿಎಲ್ ತಂಡಗಳ ಮಾಲೀಕತ್ವ ಹೊಂದಿರುವ ಮುಂಬೈ ಇಂಡಿಯನ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಡೆಲ್ಲಿ ಕ್ಯಾಪಿಟಲ್ ತಂಡಗಳು ತಲಾ ಒಂದು ತಂಡವನ್ನು ಖರೀದಿಸಿದವು. ಕ್ಯಾಪ್ರಿ ಗ್ಲೋಬಲ್ ಹೋಲ್ಡಿಂಗ್ಸ್ ಸಂಸ್ಥೆಯು ಲಖನೌ ಫ್ರಾಂಚೈಸಿಯನ್ನು ತನ್ನದಾಗಿಸಿಕೊಂಡಿತು.

'ಇವತ್ತು ಕ್ರಿಕೆಟ್ ಕ್ಷೇತ್ರದ ಐತಿಹಾಸಿಕ ದಿನ. ಚೊಚ್ಚಲ ಡಬ್ಲ್ಯುಪಿಎಲ್ ತಂಡಗಳ ಬಿಡ್ ಪ್ರಕ್ರಿಯೆಯು ಹೊಸ ದಾಖಲೆ ಮಾಡಿದೆ. 2008ರಲ್ಲಿ ಮೊದಲ ಸಲ ನಡೆದಿದ್ದ ಪುರುಷರ ಐಪಿಎಲ್ ಬಿಡ್ ದಾಖಲೆಗಳನ್ನು ಮೀರಿದೆ. ತಂಡಗಳನ್ನು ಪಡೆದುಕೊಂಡವರಿಗೆ ಅಭಿನಂದನೆಗಳು. ₹ 4669.99 ಕೋಟಿಯ ಒಟ್ಟು ಬಿಡ್ ಆಗಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಟ್ವೀಟ್ ಮಾಡಿದ್ದಾರೆ.

ಬಿಡ್ ಪಡೆದವರು	ನಗರ	ಮೊತ್ತ (₹ಕೋಟಿ)
ಅದಾನಿ ಸ್ಪೋರ್ಟ್ಸ್‌ಲೈನ್	ಅಹಮದಾಬಾದ್	1289
ಇಂಡಿಯಾವಿನ್ ಸ್ಪೋರ್ಟ್ಸ್	ಮುಂಬೈ	912.99
ರಾಯಲ್ ಚಾಲೆಂಜರ್ಸ್ ಸ್ಪೋರ್ಟ್ಸ್	ಬೆಂಗಳೂರು	901
ಜೆಎಸ್‌ಡಬ್ಲ್ಯು ಜಿಎಂಆರ್ ಕ್ರಿಕೆಟ್	ದೆಹಲಿ	810
ಕ್ಯಾಪ್ರಿ ಗ್ಲೋಬಲ್ ಹೋಲ್ಡಿಂಗ್ಸ್	ಲಖನೌ	757

* ಈ ಎಲ್ಲ ಸಂಸ್ಥೆಗಳೂ ಪ್ರೈವೇಟ್ ಲಿಮಿಟೆಡ್

ಪುರುಷರ ಚೊಚ್ಚಲ ಐಪಿಎಲ್‌ನಲ್ಲಿ ಎಂಟು ತಂಡಗಳ ಬಿಡ್ ಆಗಿದ್ದವು. ಆಗ ಒಟ್ಟು ₹5890 ಕೋಟಿಗೆ ತಂಡಗಳು ಮಾರಾಟವಾಗಿದ್ದವು.

'ಇತ್ತೀಚೆಗೆ ಡಬ್ಲ್ಯುಪಿಎಲ್ ಮಾಧ್ಯಮ ಹಕ್ಕುಗಳನ್ನು ಬಿಸಿಸಿಐ ಬಿಡ್ ಮಾಡಿತ್ತು. ವಯಾಕಾಮ್ 18 ಸಂಸ್ಥೆಯು ₹951 ಕೋಟಿಗೆ ಖರೀದಿಸಿತ್ತು. ಇದರಿಂದಾಗಿ ಐದು ವರ್ಷಗಳ ಅವಧಿಯಲ್ಲಿ ಪ್ರತಿಯೊಂದು ಪಂದ್ಯಕ್ಕೆ ₹7.09 ಕೋಟಿಯು ಬಿಸಿಸಿಐಗೆ ಸಿಗಲಿದೆ. ಮುಂದಿನ ತಿಂಗಳು ತಂಡದ ಆಟಗಾರ್ತಿಯರ ಆಯ್ಕೆಯ ಬಿಡ್ ಪ್ರಕ್ರಿಯೆ ನಡೆಯಲಿದೆ. ಮಾರ್ಚ್‌ನಲ್ಲಿ ಮೊದಲ ಆವೃತ್ತಿಯ ಟೂರ್ನಿ ನಡೆಯಲಿದೆ. 22 ಪಂದ್ಯಗಳು ನಡೆಯಲಿವೆ.

'ಮಹಿಳೆಯರ ಕ್ರಿಕೆಟ್‌ನಲ್ಲಿ ಆಗಬೇಕಾಗಿರುವ ಮಹತ್ವದ ಬದಲಾಣೆಗಳು ಮತ್ತು ಪ್ರಗತಿಯ ಪ್ರಕ್ರಿಯೆಗೆ ಮುಂದೆ ಇನ್ನಷ್ಟು ವೇಗ ಸಿಗಲಿದೆ. ಪ್ರತಿಯೊಬ್ಬರಿಗೂ ಇದರ ಲಾಭವಾಗಲಿದೆ' ಎಂದು ಶಾ ಬರೆದಿದ್ದಾರೆ.

17 ತಾಂತ್ರಿಕ ಬಿಡ್‌ಗಳು ಸಲ್ಲಿಕೆಯಾಗಿದ್ದವು. ಪುರುಷರ ಐಪಿಎಲ್ ಟೂರ್ನಿಯ ಏಳು ಫ್ರ್ಯಾಂಚೈಸಿಗಳು ಸ್ಪರ್ಧೆಯಲ್ಲಿದ್ದವು. ಬುಧವಾರ ಪಂಚತಾರಾ ಹೋಟೆಲ್‌ನಲ್ಲಿ ಬಿಡ್ ನಡೆಯಿತು.

ಪಂಜಾಬ್ ಕಿಂಗ್ಸ್, ಕೋಲ್ಕತ್ತ ನೈಟ್ ರೈಡರ್ಸ್, ರಾಜಸ್ಥಾನ್ ರಾಯಲ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ಫ್ರ್ಯಾಂಚೈಸಿಗಳ ಪ್ರಯತ್ನ ಕೈಗೂಡಲಿಲ್ಲ. ಸಿಹಿತಿನಿಸುಗಳ ಉದ್ಯಮವಾಗಿರುವ ಹಳದಿರಾಮ್ಸ್ ಕೂಡ ಬಿಡ್ ಸಲ್ಲಿಸಿತ್ತು. ಈ ಬಿಡ್‌ಗಳಿಗೆ ಬಿಸಿಸಿಐ ಯಾವುದೇ ಮೂಲಬೆಲೆಯನ್ನು ನಿಗದಿ ಮಾಡಿರಲಿಲ್ಲ.

'ಈ ಹೊಸ ಮಹಿಳಾ ಲೀಗ್ ಟೂರ್ನಿಯು ಮತ್ತೊಮ್ಮೆ ದೇಶದ ಹುಡುಗಿಯರ ಶಕ್ತಿ, ಪ್ರತಿಭೆ ಮತ್ತು ಸಾಮರ್ಥ್ಯವನ್ನು ವಿಶ್ವಕ್ಕೆ ತೋರ್ಪಡಿಸಲಿದೆ. ನಮ್ಮ ಮುಂಬೈ ಇಂಡಿಯನ್ಸ್ ತಂಡವು ನಿರ್ಭೀತ ಮತ್ತು ಮನರಂಜನಾಭರಿತ ಕ್ರಿಕೆಟ್ ಆಡಲಿದೆ' ಎಂದು ಮುಂಬೈ ಇಂಡಿಯನ್ಸ್ ತಂಡದ ಮಾಲೀಕರಾದ ನೀತಾ ಅಂಬಾನಿ ಹೇಳಿದ್ದಾರೆ. ಮುಂಬೈ ಫ್ರಾಂಚೈಸಿಯು ಯುಎಇಯಲ್ಲಿ ನಡೆಯುತ್ತಿರುವ ಐಎಲ್‌ಟಿ20 ಮತ್ತು ದಕ್ಷಿಣ ಆಫ್ರಿಕಾ ಎಸ್‌ಎ20 ಟೂರ್ನಿಯಲ್ಲಿಯೂ ತಂಡಗಳ ಮಾಲೀಕತ್ವ ಹೊಂದಿದೆ.

ದೇವದತ್ತ ಶತಕ: ಕರ್ನಾಟಕಕ್ಕೆ ಮುನ್ನಡೆ

ರಣಜಿ ಕ್ರಿಕೆಟ್: ಶರತ್ ಅರ್ಧಶತಕ, ಶಹಬಾಜ್ ನದೀಮ್‌ಗೆ ಐದು ವಿಕೆಟ್

ಜೆಮ್ಶೆಡ್‌ಪುರ: ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ದಾಖಲಿಸಿದ ಚೆಂದದ ಶತಕದ ಬಲದಿಂದ ಕರ್ನಾಟಕ ತಂಡವು ಜಾರ್ಖಂಡ್ ಎದುರಿನ ರಣಜಿ ಪಂದ್ಯದಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತು.

ಕೀನಾನ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸಿ ಗುಂಪಿನ ಪಂದ್ಯದ ಎರಡನೇ ದಿನವಾದ ಬುಧವಾರ ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ 89.1 ಓವರ್‌ಗಳಲ್ಲಿ 300 ರನ್ ಗಳಿಸಿತು. ಇದರೊಂದಿಗೆ 136 ರನ್‌ಗಳ ಮುನ್ನಡೆ ಸಾಧಿಸಿತು.

ಎರಡನೇ ಇನಿಂಗ್ಸ್ ಆರಂಭಿಸಿದ ಆತಿಥೇಯ ಜಾರ್ಖಂಡ್ ತಂಡವು ದಿನದಾಟದ ಕೊನೆಗೆ 28 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 85 ರನ್ ಗಳಿಸಿದೆ. ಕುಮಾರ್ ಸೂರಜ್ (ಬ್ಯಾಟಿಂಗ್ 34) ಮತ್ತು ಕುಮಾರ್ ಕುಶಾಗ್ರ (ಬ್ಯಾಟಿಂಗ್ 24) ಕ್ರೀಸ್‌ನಲ್ಲಿದ್ದಾರೆ. ಪಂದ್ಯದಲ್ಲಿ ಇನ್ನೂ ಎರಡು ದಿನಗಳ ಆಟ ಬಾಕಿ ಇದೆ. ಮಯಂಕ್ ಅಗರವಾಲ್ ಬಳಗವು ಗೆಲುವಿನ ಕನಸು ಕಾಣುತ್ತಿದ್ದು ಬಿಗಿಹಿಡಿತ ಸಾಧಿಸಿದೆ. ಆದರೂ ಜಾರ್ಖಂಡ್ ತಂಡದ ಬ್ಯಾಟರ್‌ಗಳು ತಾಳ್ಮೆಯಿಂದ ಆಡಿ ಸೋಲು ತಪ್ಪಿಸಿಕೊಳ್ಳುವ ಅವಕಾಶವೂ ಇದೆ.

ದೇವದತ್ತ ಸೊಗಸಾದ ಶತಕ: ಅನಾರೋಗ್ಯದಿಂದಾಗಿ ಕೆಲವು ತಿಂಗಳುಗಳ ಕಾಲ ದೇವದತ್ತ ಕ್ರಿಕೆಟ್‌ನಿಂದ ದೂರವುಳಿದಿದ್ದರು. ಈ ರಣಜಿ ಟ್ರೋಫಿ ಟೂರ್ನಿಯ ಆರಂಭದ ಪಂದ್ಯಗಳಲ್ಲಿಯೂ ಆಡಿರಲಿಲ್ಲ. ಇದು ಅವರಿಗೆ ಮೂರನೇ ಪಂದ್ಯವಾಗಿದೆ.

ದೇವದತ್ತ ಪಡಿಕ್ಕಲ್

ರಾಜಸ್ಥಾನ ಮತ್ತು ಕೇರಳ ವಿರುದ್ಧದ ಪಂದ್ಯಗಳಲ್ಲಿ ಅವರು ದೊಡ್ಡ ಮೊತ್ತ ಗಳಿಸುವ ಪ್ರಯತ್ನದಲ್ಲಿ ಸಫಲರಾಗಿರಲಿಲ್ಲ. ಆದರೆ ಇಲ್ಲಿ ಮಿಂಚಿದರು.

ಜಾರ್ಖಂಡ್ ಸ್ಪಿನ್ನರ್ ಶಹಬಾಜ್ ನದೀಂ (141ಕ್ಕೆ5) ಅವರ ದಾಳಿಯ ಮುಂದೆ ಕರ್ನಾಟಕದ ಅದೂ ಪ್ರಮುಖ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದ ಹೊತ್ತಿನಲ್ಲಿ ಒತ್ತಡವನ್ನು ಮೀರಿ ನಿಂತರು. ಪ್ರಥಮದರ್ಜೆ ಕ್ರಿಕೆಟ್‌ನಲ್ಲಿ ಎರಡನೇ ಶತಕ (114; 175ಎ, 4X7, 6X5) ದಾಖಲಿಸಿದರು.

ಪಂದ್ಯದ ಮೊದಲ ದಿನದಾಟವಾದ ಮಂಗಳವಾರ ಜಾರ್ಖಂಡ್ ತಂಡವು 64.2 ಓವರ್‌ಗಳಲ್ಲಿ 164 ರನ್ ಗಳಿಸಿ ಆಲೌಟ್ ಆಗಿತ್ತು. ಕರ್ನಾಟಕವು ದಿನದಾಟದ ಅಂತ್ಯಕ್ಕೆ 27 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 80 ರನ್ ಗಳಿಸಿತ್ತು. ದೇವದತ್ತ ಪಡಿಕ್ಕಲ್ (ಬ್ಯಾಟಿಂಗ್ 20) ಮತ್ತು ನಿಕಿನ್ ಜೋಸ್ (ಬ್ಯಾಟಿಂಗ್ 8) ಕ್ರೀಸ್‌ನಲ್ಲಿದ್ದರು. ಬುಧವಾರ ನಿಕಿನ್ ಜೋಸ್, ಮನೀಷ್ ಪಾಂಡೆ, ಶ್ರೇಯಸ್ ಗೋಪಾಲ್ ಮತ್ತು ಕೃಷ್ಣಪ್ಪ ಗೌತಮ್ ಬ್ಯಾಟ್‌ನಿಂದ ರನ್‌ಗಳು ಹರಿಯಲಿಲ್ಲ.

ಈ ಸಂದರ್ಭದಲ್ಲಿ ತಾಳ್ಮೆಯಿಂದ ಆಡಿದ ದೇವದತ್ತ ಅವರು ಯುವಪ್ರತಿಭೆ ಶುಭಾಂಗ್ ಹೆಗಡೆ (35; 74ಎ, 4X5) ಅವರೊಂದಿಗೆ ಆರನೇ ವಿಕೆಟ್ ಜೊತೆಯಾಟದಲ್ಲಿ 90 ರನ್ ಸೇರಿಸಿದರು. ಶುಭಾಂಗ್ ಔಟಾದ ನಂತರ ದೇವದತ್ತ ಮತ್ತು ಬಿ.ಆರ್. ಶರತ್ (60; 75ಎ, 4X10) ಏಳನೇ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿದರು.

76ನೇ ಓವರ್‌ನಲ್ಲಿ ಪಡಿಕ್ಕಲ್ ಅವರ ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದ ಅನುಕೂಲ್ ರಾಯ್ ಜೊತೆಯಾಟವನ್ನೂ ಮುರಿದರು. ಬದಲೀ ಫೀಲ್ಡರ್ ಉತ್ಕರ್ಷ್‌ಸಿಂಗ್ ಪಡೆದ ಕ್ಯಾಚ್‌ಗೆ ಪಡಿಕ್ಕಲ್ ನಿರ್ಗಮಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಜಾರ್ಖಂಡ್: 64.2 ಓವರ್‌ಗಳಲ್ಲಿ 164. ಕರ್ನಾಟಕ: 89.1 ಓವರ್‌ಗಳಲ್ಲಿ 300 (ದೇವದತ್ತ ಪಡಿಕ್ಕಲ್ 114, ಶುಭಾಂಗ್ ಹೆಗಡೆ 35, ಬಿ.ಆರ್. ಶರತ್ 60, ಶಹಬಾಜ್ ನದೀಮ್ 141ಕ್ಕೆ5, ಅನುಕೂಲ್ ರಾಯ್ 66ಕ್ಕೆ3) ಎರಡನೇ ಇನಿಂಗ್ಸ್: ಜಾರ್ಖಂಡ್:28 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 85 (ಕುಮಾರ್ ದೇವವ್ರತ್ 20, ಕುಮಾರ್ ಸೂರಜ್ ಬ್ಯಾಟಿಂಗ್ 34, ಕುಮಾರ್ ಕುಶಾಗ್ರ ಬ್ಯಾಟಿಂಗ್ 24, ವಾಸುಕಿ ಕೌಶಿಕ್ 8ಕ್ಕೆ1, ಕೃಷ್ಣಪ್ಪ ಗೌತಮ್ 21ಕ್ಕೆ1)

ವಿಶ್ವಕಪ್ ಹಾಕಿ: ಕ್ವಾರ್ಟರ್ ಫೈನಲ್‌ನಲ್ಲಿ ಎಡವಿದ ಕೊರಿಯಾ, ಇಂಗ್ಲೆಂಡ್

ಸೆಮಿ ಪ್ರವೇಶಿಸಿದ ನೆದರ್ಲೆಂಡ್ಸ್, ಜರ್ಮನಿ

ಭುವನೇಶ್ವರ: ಸೊಗಸಾದ ಪ್ರದರ್ಶನ ನೀಡಿದ ನೆದರ್ಲೆಂಡ್ಸ್ ಮತ್ತು ಜರ್ಮನಿ ತಂಡಗಳು ಎಫ್‌ಐಎಚ್ ವಿಶ್ವಕಪ್ ಹಾಕಿ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದವು.

ಬುಧವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ನೆದರ್ಲೆಂಡ್ಸ್ 5–1 ಗೋಲುಗಳಿಂದ ದಕ್ಷಿಣ ಕೊರಿಯಾ ತಂಡವನ್ನು ಮಣಿಸಿದರೆ, ಜರ್ಮನಿ ಪೆನಾಲ್ಟಿ ಶೂಟೌಟ್‌ನಲ್ಲಿ 4–3 ರಲ್ಲಿ ಇಂಗ್ಲೆಂಡ್ ವಿರುದ್ಧ ಗೆದ್ದಿತು.

ಆಕ್ರಮಣಕಾರಿ ಆಟವಾಡಿದ ನೆದರ್ಲೆಂಡ್ಸ್ ತಂಡದ ಪರ ಕೊಯೆನ್ ಬಿಜೆನ್ (26 ಮತ್ತು 30ನೇ ನಿ.) ಎರಡು ಗೋಲುಗಳನ್ನು ತಂದಿತ್ತರು. ಇತರ ಗೋಲುಗಳನ್ನು ಜಸ್ಟಿನ್ ಬ್ಲಾಕ್, ಸ್ಟೆಯ್ನ್ ವಾನ್ ಹೈನಿಗೆನ್, ಟ್ಯುನ್ ಬೈನ್ಸ್ ತಂದಿತ್ತರು. ಕೊರಿಯಾ ತಂಡದ ಗೋಲನ್ನು ಇನ್‌ವೂ ಸಿಯೊ ಗಳಿಸಿದರು.

ನೆದರ್ಲೆಂಡ್ಸ್ ಆಟಗಾರರ ಸಂಭ್ರಮ –ಪಿಟಿಐ ಚಿತ್ರ

ಇಂಗ್ಲೆಂಡ್– ಜರ್ಮನಿ ಪಂದ್ಯ ನಿಗದಿತ ಅವಧಿಯಲ್ಲಿ 2–2 ಗೋಲುಗಳಿಂದ ಸಮಬಲದಲ್ಲಿತ್ತು. ಪೆನಾಲ್ಟಿ ಶೂಟೌಟ್‌ನಲ್ಲಿ ಜರ್ಮನಿಗೆ ಅದೃಷ್ಟ ಒಲಿಯಿತು.

ಇಂದಿನ ಪಂದ್ಯ (9ರಿಂದ 16ನೇ ಸ್ಥಾನ)

ಪಂದ್ಯ	ಸಮಯ
ದಕ್ಷಿಣ ಆಫ್ರಿಕಾ Vs ಮಲೇಷ್ಯಾ	ಬೆಳಿಗ್ಗೆ 11.00
ವೇಲ್ಸ್ Vs ಫ್ರಾನ್ಸ್	ಮಧ್ಯಾಹ್ನ 4.00
ಚಿಲಿ Vs ಅರ್ಜೆಂಟೀನಾ	ಮಧ್ಯಾಹ್ನ 4.30
ಭಾರತ Vs ಜಪಾನ್	ಸಂಜೆ 5.00

ಲೈವ್: ಸ್ಟಾರ್ ಸ್ಪೋರ್ಟ್ಸ್

ಅಂಪೈರ್‌ಗೆ ಗಾಯ: ನೆದರ್ಲೆಂಡ್ಸ್– ದಕ್ಷಿಣ ಕೊರಿಯಾ ಪಂದ್ಯದ ವೇಳೆ ಜರ್ಮನಿಯ ಅಂಪೈರ್ ಬೆನ್ ಗೊಯೆಂಟನ್ ಅವರ ಮುಖಕ್ಕೆ ಚೆಂಡು ಬಡಿದು ಗಾಯಗೊಂಡರು. ಕೊರಿಯಾದ ಆಟಗಾರನ ಡ್ರ್ಯಾಗ್‌ಫ್ಲಿಕ್ ವೇಳೆ ಚೆಂಡು, ನೆದರ್ಲೆಂಡ್ಸ್ ಆಟಗಾರನ ಸ್ಟಿಕ್‌ಗೆ ತಾಗಿ ಅಂಪೈರ್ ಮುಖಕ್ಕೆ ಅಪ್ಪಳಿಸಿದೆ.

ಅವರನ್ನು ಕೂಡಲೇ ಚಿಕಿತ್ಸೆಗಾಗಿ ಕರೆದೊಯ್ಯಲಾಯಿತು. ಪಂದ್ಯದ 28ನೇ ನಿಮಿಷದಲ್ಲಿ ಈ ಘಟನೆ ನಡೆಯಿತು. ಆ ಬಳಿಕ ಭಾರತದ ರಘು ಪ್ರಸಾದ್ ಅಂಪೈರ್ ಆಗಿ ಕಾರ್ಯನಿರ್ವಹಿಸಿದರು.

ಭಾರತ– ಜಪಾನ್ ಸೆಣಸು: ಕ್ವಾರ್ಟರ್ ಫೈನಲ್ ಪ್ರವೇಶಿಸಲು ವಿಫಲವಾಗಿರುವ ಭಾರತ ತಂಡ 9 ರಿಂದ 16ರ ವರೆಗಿನ ಸ್ಥಾನವನ್ನು ನಿರ್ಣಯಿಸಲು ಗುರುವಾರ ನಡೆಯುವ ಪಂದ್ಯದಲ್ಲಿ ಜಪಾನ್ ತಂಡವನ್ನು ಎದುರಿಸಲಿದೆ.

ಬ್ಯಾಸ್ಕೆಟ್‌ಬಾಲ್: ಕ್ವಾರ್ಟರ್ ಫೈನಲ್‌ಗೆ ಕರ್ನಾಟಕ

ಬೆಂಗಳೂರು: ಕೊನೆಯ ಲೀಗ್ ಪಂದ್ಯದಲ್ಲಿ ಉತ್ತರ ಪ್ರದೇಶ ಎದುರು ಸೋತರೂ ಕರ್ನಾಟಕ ಬಾಲಕರ ತಂಡ 72ನೇ ರಾಷ್ಟ್ರೀಯ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಎರಡನೇ ಪಂದ್ಯದಲ್ಲಿ ಉತ್ತರ ಪ್ರದೇಶ 94–66 ರಲ್ಲಿ ಗೆದ್ದಿತು. 27 ಪಾಯಿಂಟ್ಸ್ ಗಳಿಸಿದ ಅಮನ್ ಕೌಶಿಕ್ ಅವರು ಉತ್ತರ ಪ್ರದೇಶ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ತಲಾ ಒಂದು ಗೆಲುವು ಹಾಗೂ ಸೋಲು ಪಡೆದ ಕರ್ನಾಟಕ ತಂಡ 'ಎಫ್' ಗುಂಪಿನಲ್ಲಿ ಎರಡನೇ ಸ್ಥಾನ ಪಡೆಯಿತು. ಗುರುವಾರ ನಡೆಯುವ ಕ್ವಾರ್ಟರ್ ಫೈನಲ್‌ನಲ್ಲಿ ಆತಿಥೇಯ ತಂಡ ರಾಜಸ್ಥಾನದ ಸವಾಲು ಎದುರಿಸಲಿದೆ.

ಬಾಲಕರ ವಿಭಾಗದ ಇತರ ಪಂದ್ಯಗಳಲ್ಲಿ ರಾಜಸ್ಥಾನ 86–50 ರಲ್ಲಿ ಮಿಜೋರಾಂ ವಿರುದ್ಧ; ಚಂಡೀಗಢ 67–59 ರಲ್ಲಿ ತಮಿಳುನಾಡು ವಿರುದ್ಧ; ಮಧ್ಯಪ್ರದೇಶ 79–69 ರಲ್ಲಿ ಪಂಜಾಬ್ ವಿರುದ್ಧ ಗೆದ್ದವು.

ಉತ್ತರ ಪ್ರದೇಶದ ಅಮನ್ ಕೌಶಿಕ್ (ಎಡ) ಪಾಯಿಂಟ್ ಗಳಿಸಲು ಪ್ರಯತ್ನಿಸಿದರು –ಪ್ರಜಾವಾಣಿ ಚಿತ್ರ

ಮೈಸೂರು ತಂಡಕ್ಕೆ ಗೆಲುವಿನ ಆರಂಭ

ಮೈಸೂರು: ಸಚಿನ್ ಅವರ ಉತ್ತಮ ಆಟದ ನೆರವಿನಿಂದ ಆತಿಥೇಯ ಮೈಸೂರು ತಂಡದವರು ರಾಜ್ಯಮಟ್ಟದ 25ನೇ ವಾಲಿಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದರು.

ಇಲ್ಲಿನ ಮೈಸೂರು ವಿಶ್ವವಿದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಬುಧವಾರ ಆರಂಭವಾದ ಚಾಂಪಿಯನ್‌ಷಿಪ್‌ನ ಉದ್ಘಾಟನಾ ಪಂದ್ಯದಲ್ಲಿ ಮೈಸೂರು ತಂಡವು 27–25, 25–23ರಿಂದ ಉತ್ತರ ಕನ್ನಡ ತಂಡವನ್ನು ಮಣಿಸಿತು.

ಪೈಪೋಟಿಯಿಂದ ಕೂಡಿದ ಪಂದ್ಯದಲ್ಲಿ ಸಚಿನ್ ಅತ್ಯುತ್ತಮ ಸರ್ವ್, ಬ್ಲಾಕಿಂಗ್ ಹಾಗೂ ಪಾಸಿಂಗ್ ಮೂಲಕ ಮೈಸೂರು ಗೆಲುವಿಗೆ ನೆರವಾದರು.

ಷೇರುಪೇಟೆ ವಹಿವಾಟು ▼ 773



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,118
ಇಂದಿನ ಅಂತ್ಯ	17,892
▼	226
ದಿನದ ಗರಿಷ್ಠ	18,100

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹520
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹520

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1615)
ಸೋಯಾ (ರಿಫೈನ್ಡ್)	₹1170 (1180)
ಸೂರ್ಯಕಾಂತಿ (ರಿಫೈನ್ಡ್)	₹1190 (1200)
ಪಾಮೋಲಿನ್	₹895 (908)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹139
ಆರ್‌ಎಸ್‌ಎಸ್-5	₹134
ಗುಡ್ ಲಾಟ್	₹129

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹000-000
ದ್ವಿತಳಿ (ಬಿ.ವಿ)	₹000-000

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಪುತ್ತೂರು	₹4500-7500
ತಿಪಟೂರು	₹10100-11000
ತುರುವೇಕೆರೆ	₹10700-10900

ಇಪಿಎಫ್‌ಒ: ಕುಂದು ಕೊರತೆ ಪರಿಹರಿಸಲು ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ತನ್ನ ಸದಸ್ಯರು, ಉದ್ಯೋಗದಾತರು ಹಾಗೂ ಪಿಂಚಣಿ ಪಡೆಯುವವರನ್ನು ಸಂಪರ್ಕಿಸುವ 'ನಿಧಿ ಆಪ್‌ಕೆ ನಿಕಟ್ 2.0' ಹೆಸರಿನ ಬೃಹತ್ ಅಭಿಯಾನ ಹಮ್ಮಿಕೊಂಡಿದೆ.

ದೇಶದಾದ್ಯಂತ ಪ್ರತಿ ಜಿಲ್ಲೆಯಲ್ಲಿಯೂ ಇದು ನಡೆಯಲಿದೆ. ಎಲ್ಲ ಜಿಲ್ಲೆಗಳಲ್ಲಿ ಏಕಕಾಲದಲ್ಲಿ, ಸದಸ್ಯರ ಹಾಗೂ ಪಿಂಚಣಿ ಪಡೆಯುವವರ ಕುಂದುಕೊರತೆ ಪರಿಹರಿಸುವ ಕಾರ್ಯ ಈ ಅಭಿಯಾನದ ಮೂಲಕ ನಡೆಯಲಿದೆ ಎಂದು ಇಪಿಎಫ್‌ಒ ಪ್ರಕಟಣೆ ತಿಳಿಸಿದೆ.

ಬೆಂಗಳೂರಿನಲ್ಲಿ ಇದು ರಾಜರಾಜೇಶ್ವರಿ ನಗರ ಪ್ರಾದೇಶಿಕ ಕಚೇರಿ ವತಿಯಿಂದ ಶುಕ್ರವಾರ (ಜ. 27) ಬೆಳಿಗ್ಗೆ 9 ಗಂಟೆಯಿಂದ ನಡೆಯಲಿದೆ.

ಬೆಂಗಳೂರಿನ ಮೈಸೂರು ರಸ್ತೆಯ ಕೆಂಚೇನಹಳ್ಳಿಯ ಅರ್ವಿಂದ್ ಲಿಮಿಟೆಡ್ ಆವರಣದಲ್ಲಿ ಹಾಗೂ ರಾಮನಗರ ಜಿಲ್ಲೆಯ ಬಿಡದಿಯ ಹಿಂದುಸ್ತಾನ್ ಕೋಕಾ ಕೋಲಾ ಬೆವರೇಜಸ್ ಲಿಮಿಟೆಡ್ ಆವರಣದಲ್ಲಿ ನಡೆಯಲಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	350-400
ನಡುಗೋಲು	480-500
ರಾಶಿ	550-600
ರಾಶಿ ಉತ್ತಮ	650-700
ಜರಡಿ	700-750
ಹೆರಕಿದ್ದು	1150-1200
ಹಸಿರು ಸಾಧಾರಣ	700-750
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1350-1450
ಕಾಳು ಮೆಣಸು	500
ಬಂಟ್ವಾಳ	
ಕೋಕ	12500-25000
ಹಳತು	48000-54500
ಹೊಸತು	22500-40000
ಕಾರ್ಕಳ	
ಹೊಸತು	30000-40000
ಹಳತು	40000-54500
ಕುಮಟ	
ಚಿಪ್ಪು	26569-32599
ಕೋಕ	17509-30569
ಫ್ಯಾಕ್ಟರಿ	11569-19929
ಹಳೆಚಾಲಿ	34209-37079
ಹೊಸಚಾಲಿ	36899-40299
ಪುತ್ತೂರು	
ಕೋಕ	11000-26000
ಹೊಸತು	33000-40000
ಶಿವಮೊಗ್ಗ	
ಬೆಟ್ಟೆ	46569-52200
ಗೊರಬಲು	17080-36399
ರಾಶಿ	39009-47309
ಸರಕು	42009-78200
ಸಿದ್ದಾಪುರ	
ಬಿಳಿಗೋಟು	28699-33899
ಚಾಲಿ	38599-41109
ಕೋಕ	27119-33289
ಕೆಂಪುಗೋಟು	32189-37289
ರಾಶಿ	43209-46989
ತಟ್ಟಿಬೆಟ್ಟೆ	38369-42269
ಶಿರಸಿ	
ಬೆಟ್ಟೆ	37319-42890
ಬಿಳಿಗೋಟು	24111-33899
ಚಾಲಿ	36151-42552
ಕೆಂಪುಗೋಟು	24099-35626
ರಾಶಿ	41849-46299

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14200	14100	14100	159.85 ಸೆಂಟ್ಸ್
ಎಸಿ	6775	6850	6050	
ಆರ್‌ಪಿ	8750	8600	8100	ಲಂಡನ್
ಆರ್‌ಸಿ	4590	168 on OT	4275	1943 ಡಾಲರ್ಸ್

ವಾಯಿದಾ ವಹಿವಾಟು, ವಿದೇಶಿ ಬಂಡವಾಳ ಹೊರಹರಿವು ಪರಿಣಾಮ

ಶೇ 1ಕ್ಕೂ ಹೆಚ್ಚು ಕುಸಿದ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ಬ್ಯಾಂಕಿಂಗ್ ಮತ್ತು ಹಣಕಾಸು ವಲಯದ ಷೇರುಗಳು ಬುಧವಾರ ಅತಿಯಾದ ಮಾರಾಟದ ಒತ್ತಡಕ್ಕೆ ಒಳಗಾದವು. ಇದರಿಂದಾಗಿ ದೇಶಿ ಷೇರುಪೇಟೆಗಳು ಶೇಕಡ 1ಕ್ಕೂ ಹೆಚ್ಚಿನ ನಷ್ಟ ಕಾಣುವಂತಾಯಿತು.

ಸರ್ಕಾರಿ ಬಾಂಡ್‌ಗಳ ಜನವರಿ ತಿಂಗಳ ವಾಯಿದಾ ವಹಿವಾಟು ಗುರುವಾರ ಮುಕ್ತಾಯ ಆಗಲಿರುವುದು ಸಹ ವಹಿವಾಟಿನ ಮೇಲೆ ಪರಿಣಾಮ ಬೀರಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 773 ಅಂಶ ಕುಸಿತ ಕಂಡು 60,205 ಅಂಶಗಳಿಗೆ ತಲುಪಿತು. ದಿನದ ವಹಿವಾಟು ನಿಧಾನಗತಿಯಲ್ಲಿ ಆರಂಭ ಆಯಿತು, ಒಂದು ಹಂತದಲ್ಲಿ 900 ಅಂಶಗಳವರೆಗೆ ಕುಸಿತ ಕಂಡು ದಿನದ ಕನಿಷ್ಠ ಮಟ್ಟವಾದ 60,081 ಅಂಶಗಳಿಗೆ ತಲುಪಿತ್ತು. ಆ ಬಳಿಕ ಇಳಿಕೆ ಪ್ರಮಾಣ ತುಸು ಕಡಿಮೆ ಆಯಿತು.

ಕಂಪನಿಗಳ ನಷ್ಟ (%)

ಎಸ್‌ಬಿಐ	4.3
ಇಂಡಸ್‌ಇಂಡ್ ಬ್ಯಾಂಕ್	4.26
ಎಚ್‌ಡಿಎಫ್‌ಸಿ ಬ್ಯಾಂಕ್	2.78
ಎಕ್ಸಿಸ್ ಬ್ಯಾಂಕ್	2.02

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 226 ಅಂಶ ಇಳಿಕೆ ಕಂಡು 17,892 ಅಂಶಗಳಿಗೆ ತಲುಪಿತು.

'ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮಾರಾಟಕ್ಕೆ ಒತ್ತು ನೀಡಿದ್ದರಿಂದ ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆಯುವಂತಾಯಿತು. ಜಾಗತಿಕ ಆರ್ಥಿಕ ಬೆಳವಣಿಗೆಯ ದುರ್ಬಲ ಆಗಿರಲಿದೆ ಎನ್ನುವ ಮುನ್ನೋಟವು ಆರ್ಥಿಕ ಹಿಂಜರಿತದ ಆತಂಕವನ್ನು ಹೆಚ್ಚಿಸಿದೆ. ಹೀಗಾಗಿ ಜಾಗತಿಕ ಷೇರುಪೇಟೆಗಳಲ್ಲಿ ವಹಿವಾಟು ಇಳಿಕೆ ಕಾಣುವಂತಾಯಿತು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬಿಎಸ್‌ಇ ಮಿಡ್‌ಕ್ಯಾಪ್ ಶೇ 1.52ರಷ್ಟು ಮತ್ತು ಸ್ಮಾಲ್‌ಕ್ಯಾಪ್ ಶೇ 0.94ರಷ್ಟು ಇಳಿಕೆ ಕಂಡಿತು. ಬಿಎಸ್‌ಇನಲ್ಲಿ ವಲಯವಾರು ವಿದ್ಯುತ್ ಶೇ 2.72, ಯುಟಿಲಿಟಿ ಶೇ 2.87, ಬ್ಯಾಂಕಿಂಗ್ ಶೇ 2.42, ಹಣಕಾಸು ಸೇವೆಗಳು ಶೆ 2.11ರಷ್ಟು ಇಳಿಕೆ ಕಂಡವು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 0.31ರಷ್ಟು ಇಳಿಕೆ ಆಗಿ ಒಂದು ಬ್ಯಾರಲ್‌ಗೆ 85.86 ಡಾಲರ್‌ಗೆ ತಲುಪಿತು.

ಷೇರುಪೇಟೆಯಲ್ಲಿ ಇರುವ ಮಾಹಿತಿಯ ಪ್ರಕಾರ, ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಬುಧವಾರದ ವಹಿವಾಟಿನಲ್ಲಿ ₹ 2,394 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

'ಡಿಜಿಟಲೀಕರಣಕ್ಕೆ ಡೇಟಾ ದರ ಹೆಚ್ಚಳ ಅಡ್ಡಿ'

ನವದೆಹಲಿ (ಪಿಟಿಐ): ಡೇಟಾ ಮತ್ತು ಸಾಧನಗಳ ದರ ಹೆಚ್ಚಳವು ಡಿಜಿಟಲೀಕರಣದ ತ್ವರಿತಗತಿಯ ಬೆಳವಣಿಗೆಗೆ ಅಡ್ಡಿಯಾಗುವ ಆತಂಕ ಎದುರಾಗಿದೆ ಎಂದು ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಬುಧವಾರ ಹೇಳಿದ್ದಾರೆ.

ಕಾರ್ಯಕ್ರಮವೊಂದರ ಸಂದರ್ಭದಲ್ಲಿ ಮಾತನಾಡಿದ ಅವರು, '2025ರ ವೇಳೆಗೆ 120 ಕೋಟಿ ಭಾರತೀಯರನ್ನು ಆನ್‌ಲೈನ್ ವ್ಯಾಪ್ತಿಗೆ ತರುವ ಗುರಿಯನ್ನು ಹೊಂದಿದ್ದೇವೆ. ಡೇಟಾ ಶುಲ್ಕ ಹೆಚ್ಚಾಗುತ್ತಿರುವುದು, ಸಾಧನಗಳ ದರದಲ್ಲಿ ಆಗುವ ಏರಿಕೆಯು ಇದಕ್ಕೆ ಅಡ್ಡಿ' ಎಂದು ತಿಳಿಸಿದ್ದಾರೆ.

ದರ ಹೆಚ್ಚಳದ ಕುರಿತು ದೂರ ಸಂಪರ್ಕ ನಿಯಂತ್ರಣ ಪ್ರಾಧಿಕಾರದ ಜೊತೆ ಮಾತುಕತೆ ನಡೆಸುವುದಾಗಿಯೂ ಅವರು ಹೇಳಿದ್ದಾರೆ.

ಭಾರ್ತಿ ಏರ್‌ಟೆಲ್ ಕಂಪನಿಯು 28 ದಿನಗಳ ಅವಧಿಯ ರಿಚಾರ್ಜ್ ಯೋಜನೆಯ ಶುಲ್ಕವನ್ನು ಕರ್ನಾಟಕ ಸೇರಿದಂತೆ ಒಟ್ಟು ಎಂಟು ದೂರಸಂಪರ್ಕ ವೃತ್ತಗಳಲ್ಲಿ ಹೆಚ್ಚಿಸಿದೆ. ಹೊಸ ಶುಲ್ಕ₹ 155 ಆಗಿದೆ. ಇದು ಈ ಹಿಂದಿನ ಶುಲ್ಕಕ್ಕೆ ಹೋಲಿಸಿದರೆ ಶೇಕಡ 57ರಷ್ಟು ಹೆಚ್ಚು.

ರಾಜ್ಯದಲ್ಲಿ ₹ 3,455 ಕೋಟಿ ಮೊತ್ತದ ಹೂಡಿಕೆ ಪ್ರಸ್ತಾವಗಳಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಏಕಗವಾಕ್ಷಿ ಅನುಮೋದನೆ ಸಮಿತಿಯು ₹3,455.39 ಕೋಟಿ ಮೊತ್ತದ ಹೂಡಿಕೆ ಪ್ರಸ್ತಾವದ 59 ಯೋಜನೆಗಳಿಗೆ ಮಂಗಳವಾರ ಒಪ್ಪಿಗೆ ನೀಡಿದೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ಆರ್. ನಿರಾಣಿ ಅಧ್ಯಕ್ಷತೆಯಲ್ಲಿ ನಡೆದ ಏಕಗವಾಕ್ಷಿ ಅನುಮೋದನೆ ಸಮಿತಿ ಸಭೆಯಲ್ಲಿ ಈ ಹೂಡಿಕೆ ಪ್ರಸ್ತಾವಗಳಿಗೆ ಒಪ್ಪಿಗೆ ನೀಡಲಾಗಿದೆ. ಈ ಯೋಜನೆಗಳಿಂದ ರಾಜ್ಯದಲ್ಲಿ ಒಟ್ಟು 18,567 ಉದ್ಯೋಗಗಳು ಸೃಜನೆಯಾಗಲಿವೆ ಎಂದು ಅಂದಾಜಿಸಲಾಗಿದೆ.

'₹ 50 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತದ ಹೂಡಿಕೆಯ 11 ಬೃಹತ್ ಹಾಗೂ ಮಧ್ಯಮ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಈ ಯೋಜನೆಗಳಲ್ಲಿ ಒಟ್ಟು ₹ 2,186.70 ಕೋಟಿ ಹೂಡಿಕೆಯಾಗಲಿದ್ದು, 10,599 ಉದ್ಯೋಗಗಳು ಸೃಜನೆಯಾಗಲಿವೆ. ₹ 15 ಕೋಟಿಯಿಂದ ₹ 50 ಕೋಟಿವರೆಗಿನ ಹೂಡಿಕೆಯ 46 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಈ ಯೋಜನೆಗಳಲ್ಲಿ ಒಟ್ಟು ₹ 1,049.19 ಕೋಟಿ ಹೂಡಿಕೆಯಾಗಲಿದ್ದು, 8,008 ಉದ್ಯೋಗಗಳ ಸೃಜನೆಯಾಗಲಿದೆ' ಎಂದು ನಿರಾಣಿ ತಿಳಿಸಿದ್ದಾರೆ.

ಮುಖ್ಯಾಂಶಗಳು

- 18,567 ಉದ್ಯೋಗ ಸೃಷ್ಟಿ ಅಂದಾಜು
- 11 ಬೃಹತ್, ಮಧ್ಯಮ ಯೋಜನೆಗಳಿಗೆ ಅನುಮೋದನೆ

ಒಟ್ಟು ₹ 219.50 ಮೊತ್ತದ ಎರಡು ಹೆಚ್ಚುವರಿ ಹೂಡಿಕೆ ಪ್ರಸ್ತಾವಗಳಿಗೂ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಅನುಮೋದನೆಗೊಂಡಿರುವ ಯೋಜನೆಗಳ ವಿವರ: ಮೈಸೂರು ಸ್ಟೀಲ್ಸ್ ಲಿಮಿಟೆಡ್‌ನಿಂದ ಮೈಸೂರಿನ ಮೇಟಗಾನಹಳ್ಳಿಯಲ್ಲಿ ₹ 405.43 ಕೋಟಿ ಹೂಡಿಕೆ (200 ಉದ್ಯೋಗ ಸೃಷ್ಟಿ), ಎನ್‌ಐಡಿಸಿ ಇಂಡಸ್ಟ್ರಿಯಲ್ ಆಟೊಮೋಷನ್ ಇಂಡಿಯಾ ಲಿಮಿಟೆಡ್‌ನಿಂದ ಬೇಲೂರು ಕೈಗಾರಿಕಾ ಪ್ರದೇಶದ ಕೋಟೂರ್‌ನಲ್ಲಿ ₹ 350 ಕೋಟಿ ಹೂಡಿಕೆ (730 ಉದ್ಯೋಗ ಸೃಷ್ಟಿ), ಧಾರವಾಡದ ಎಫ್‌ಎಂಸಿಜಿ ಕ್ಲಸ್ಟರ್‌ನಲ್ಲಿ ಸಿಲಾನ್ ಬೆವರೇಜಸ್‌ನಿಂದ ₹ 256.3 ಕೋಟಿ ಹೂಡಿಕೆ (200 ಉದ್ಯೋಗ ಸೃಷ್ಟಿ), ಬೆಳಗಾವಿ ಜಿಲ್ಲೆಯ ಕಣಗಲ್ ಕೈಗಾರಿಕಾ ಪ್ರದೇಶದಲ್ಲಿ ಬಾಲಾಜಿ ವೇರ್ ಹೌಸ್ ಪ್ರೈವೇಟ್ ಲಿಮಿಟೆಡ್‌ನಿಂದ ₹ 252.25 ಕೋಟಿ ಹೂಡಿಕೆ (500 ಉದ್ಯೋಗ), ಚಾಮರಾಜನಗರ ಬಡಗುಪ್ಪೆ, ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಮಂಜುಶ್ರೀ ಟೆಕ್ನೋಪಾರ್ಕ್ ಲಿಮಿಟೆಡ್‌ನಿಂದ ₹ 253 ಕೋಟಿ ಹೂಡಿಕೆ (500 ಉದ್ಯೋಗ).

ತುಮಕೂರು ಜಿಲ್ಲೆಯ ಶಿರಾ ಕೈಗಾರಿಕಾ ಪ್ರದೇಶದಲ್ಲಿ ಕ್ರಿಸೋಡ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನಿಂದ ₹ 138 ಕೋಟಿ ಹೂಡಿಕೆ (160 ಉದ್ಯೋಗ), ಬಳ್ಳಾರಿ ಜಿಲ್ಲೆಯ ಬೆಳಗಲ್ ಗ್ರಾಮದಲ್ಲಿ ಮಹಾಮಾನವ್ ಇನ್‌ಸ್ಪಾಟ್ ಪ್ರೈವೇಟ್ ಲಿಮಿಟೆಡ್‌ನಿಂದ ₹ 90 ಕೋಟಿ ಹೂಡಿಕೆ (90 ಉದ್ಯೋಗ), ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನಲ್ಲಿ ಎ.ಸಿ.ಆರ್. ಪ್ರಾಜೆಕ್ಟ್‌ನಿಂದ ₹ 85 ಕೋಟಿ ಹೂಡಿಕೆ (350 ಉದ್ಯೋಗ), ಧಾರವಾಡದ ಮಮ್ಮಿಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ ನಿಯೋಬಿ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್‌ನಿಂದ ₹ 50 ಕೋಟಿ ಹೂಡಿಕೆ (563 ಉದ್ಯೋಗ), ಕೊಪ್ಪಳ ಜಿಲ್ಲೆಯ ಗಬಾರ ಗ್ರಾಮದಲ್ಲಿ ಅಭಯ್ ಆಗ್ರೋ ಫುಡ್ ಪ್ರೈವೇಟ್ ಲಿಮಿಟೆಡ್‌ನಿಂದ ₹ 32.65 ಕೋಟಿ ಹೂಡಿಕೆ (35 ಉದ್ಯೋಗ).

ಅದಾನಿ: ಲೆಕ್ಕಪತ್ರ 'ವಂಚನೆ'

ಒಂದನೇ ಪುಟದಿಂದ

ಅದಾನಿ ಸಮೂಹಕ್ಕೆ ಸೇರಿದ ಅದಾನಿ ಎಂಟರ್‌ಪ್ರೈಸಸ್ ಕಂಪನಿಯು ತನ್ನ ಷೇರುಗಳ ಮಾರಾಟ ಮೂಲಕ ₹ 20 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಮುಂದಾಗಿರುವ ಹೊತ್ತಿನಲ್ಲಿ ಸಂಸ್ಥೆ ಈ ವರದಿಯನ್ನು ಬಿಡುಗಡೆ ಮಾಡಿದೆ.

ಬಂಡವಾಳ ಸಂಗ್ರಹ ಉದ್ದೇಶದಿಂದ ಮಾಡುತ್ತಿರುವ ಷೇರು ಮಾರಾಟವು (ಎಫ್‌ಪಿಒ) ಜನವರಿ 27ರಿಂದ 31ರ ವರೆಗೆ ಜಾರಿಯಲ್ಲಿ ಇರಲಿದೆ. ವಾಸ್ತವ ತಿಳಿದುಕೊಳ್ಳಲು ತನ್ನನ್ನು ಸಂಪರ್ಕಿಸುವ ಯಾವ ಯತ್ನವನ್ನೂ ಮಾಡದೆ ಈ ವರದಿಯನ್ನು ಬಹಿರಂಗಪಡಿಸಲಾಗಿದೆ ಎಂದು ಸಮೂಹವು ಆಕ್ರೋಶ ವ್ಯಕ್ತಪಡಿಸಿದೆ.

'ತಪ್ಪು ಮಾಹಿತಿ, ಆಧಾರವಿಲ್ಲದ ಹಾಗೂ ವಿಶ್ವಾಸಾರ್ಹವಲ್ಲದ ಮಾಹಿತಿಯನ್ನು ಕೆಟ್ಟ ಉದ್ದೇಶದಿಂದ ಒಗ್ಗೂಡಿಸಿ ಈ ವರದಿ ಸಿದ್ಧಪಡಿಸಲಾಗಿದೆ. ಇಂತಹ ತಪ್ಪು ಮಾಹಿತಿಗಳು ದೇಶದ ಅತ್ಯುನ್ನತ ನ್ಯಾಯಾಲಯಗಳಲ್ಲಿ ಪರಿಶೀಲನೆಗೆ ಒಳಗಾಗಿ, ತಿರಸ್ಕೃತಗೊಂಡಿವೆ' ಎಂದು ಸಮೂಹವು ಹೇಳಿದೆ.

ಎಫ್‌ಪಿಒ ಶುರುವಾಗುವ ಹೊತ್ತಿನಲ್ಲಿ ಪ್ರಕಟವಾಗಿರುವ ಈ ವರದಿಯು 'ನಮ್ಮ ಸಮೂಹದ ಪ್ರತಿಷ್ಠೆಯನ್ನು ಹಾಳು ಮಾಡುವ ಹಾಗೂ ಎಫ್‌ಪಿಒಗೆ ಧಕ್ಕೆ ತರುವ ಗುರಿ ಹೊಂದಿರುವ ಲಜ್ಜೆಗೇಡಿತನವನ್ನು, ಕೆಟ್ಟ ಉದ್ದೇಶವನ್ನು ಸ್ಪಷ್ಟವಾಗಿ ತೋರಿಸುತ್ತಿದೆ' ಎಂದು ಕಿಡಿಕಾರಿದೆ.

'ಅದಾನಿ ಸಮೂಹದ ಸಂಸ್ಥಾಪಕ ಹಾಗೂ ಅಧ್ಯಕ್ಷ ಗೌತಮ್ ಅದಾನಿ ಅವರ ಆಸ್ತಿಯ ಒಟ್ಟು ಮೌಲ್ಯವು ಸರಿಸುಮಾರು 120 ಬಿಲಿಯನ್ ಅಮೆರಿಕನ್ ಡಾಲರ್ (₹ 9.78 ಲಕ್ಷ ಕೋಟಿ). ಕಳೆದ ಮೂರು ವರ್ಷಗಳಲ್ಲಿ ಅವರ ಆಸ್ತಿ ಮೌಲ್ಯವು 100 ಬಿಲಿಯನ್ ಡಾಲರ್‌ಗಳಷ್ಟು (₹ 8.15 ಲಕ್ಷ ಕೋಟಿ) ಹೆಚ್ಚಾಗಿದೆ. ಇದಕ್ಕೆ ಪ್ರಮುಖ ಕಾರಣ ಈ ಅವಧಿಯಲ್ಲಿ ಏಳು ಪ್ರಮುಖ ಕಂಪನಿಗಳ ಷೇರುಮೌಲ್ಯದಲ್ಲಿ ಆದ ಹೆಚ್ಚಳ. ಈ ಕಂಪನಿಗಳ ಷೇರುಮೌಲ್ಯವು ಮೂರು ವರ್ಷಗಳಲ್ಲಿ ಸರಾಸರಿ ಶೇ 819ರಷ್ಟು ಹೆಚ್ಚಾಗಿದೆ' ಎಂದು ವರದಿ ವಿವರಿಸಿದೆ.

ಕೆರಿಬಿಯನ್ ದೇಶಗಳು, ಮಾರಿಷಸ್, ಸಂಯುಕ್ತ ಅರಬ್ ಎಮಿರೇಟ್ಸ್ (ಯುಎಇ) ಸೇರಿದಂತೆ ತೆರಿಗೆ ವಂಚಕರ ಪಾಲಿಗೆ ಸ್ವರ್ಗವೆಂದು ಕರೆಸಿಕೊಂಡಿರುವ ಹಲವೆಡೆಗಳಲ್ಲಿ ಅದಾನಿ ಕುಟುಂಬ ಹೊಂದಿರುವ ಶೆಲ್ ಕಂಪನಿಗಳ ಬಗ್ಗೆಯೂ ವರದಿಯಲ್ಲಿ ಉಲ್ಲೇಖವಾಗಿದೆ. ಈ ಕಂಪನಿಗಳನ್ನು ಬಳಸಿ ಭ್ರಷ್ಟಾಚಾರ ಎಸಗಲಾಗಿದೆ, ಹಣದ ಅಕ್ರಮ ವರ್ಗಾವಣೆ ನಡೆಸಲಾಗಿದೆ, ಷೇರುಪೇಟೆಯಲ್ಲಿ ನೋಂದಾಯಿತವಾಗಿರುವ ಸಮೂಹದ ಕಂಪನಿಗಳಿಂದ ಹಣವನ್ನು ಅಕ್ರಮವಾಗಿ ಬೇರೆಡೆ ಒಯ್ಯಲಾಗಿದೆ ಎಂದು ಕೂಡ ವರದಿಯಲ್ಲಿ ಆರೋಪಿಸಲಾಗಿದೆ.

'ಸಂಶೋಧನೆಯ ಭಾಗವಾಗಿ ನಾವು ಅದಾನಿ ಸಮೂಹದ ಮಾಜಿ ಹಿರಿಯ ಕಾರ್ಯನಿರ್ವಾಹಕರ ಜೊತೆ ಮಾತುಕತೆ ನಡೆಸಿದ್ದೇವೆ, ಸಹಸ್ರಾರು ಕಡತಗಳನ್ನು ಪರಿಶೀಲಿಸಿದ್ದೇವೆ ಮತ್ತು ಸರಿಸುಮಾರು 6 ದೇಶಗಳಲ್ಲಿ ಕ್ಷೇತ್ರ ಭೇಟಿಯನ್ನು ಕೂಡ ಮಾಡಿದ್ದೇವೆ' ಎಂದು ಸಂಸ್ಥೆ ತಿಳಿಸಿದೆ.

'ನಮ್ಮ ಸಂಶೋಧನೆಯ ಮೂಲಕ ಕಂಡುಕೊಂಡಿದ್ದನ್ನು ಪಕ್ಕಕ್ಕೆ ಇಟ್ಟು, ಅದಾನಿ ಸಮೂಹದ ಹಣಕಾಸಿನ ಸ್ಥಿತಿಯನ್ನು ಗಮನಿಸಿದರೂ, ಸಮೂಹದ ಪ್ರಮುಖ ಏಳು ಕಂಪನಿಗಳ ಮೌಲ್ಯವು ಶೇ 85ರಷ್ಟು ಕುಸಿಯುವ ಸಾಧ್ಯತೆ ಇದೆ' ಎಂದು ವರದಿ ತಿಳಿಸಿದೆ. 'ಸಮೂಹದ ಪ್ರಮುಖ ಕಂಪನಿಗಳು ದೊಡ್ಡ ಪ್ರಮಾಣದಲ್ಲಿ ಸಾಲ ಮಾಡಿವೆ, ಸಾಲಕ್ಕಾಗಿ ತಮ್ಮ ಹೆಚ್ಚಿನ ಬೆಲೆಯ ಷೇರುಗಳನ್ನು ಅಡಮಾನ ಇರಿಸಿವೆ, ಇಡೀ ಸಮೂಹದ ಹಣಕಾಸಿನ ಸ್ಥಿತಿಯನ್ನು ಅಪಾಯಕ್ಕೆ ನೂಕಿವೆ' ಎಂದು ವರದಿಯಲ್ಲಿ ಬೊಟ್ಟು ಮಾಡಲಾಗಿದೆ.

ಚಿನ್ನದ ದರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನದ ದರ 10 ಗ್ರಾಂಗೆ ₹198ರಷ್ಟು ಇಳಿಕೆ ಕಂಡು ₹56,972ರಂತೆ ಮಾರಾಟವಾಯಿತು. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಕಂಡಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ. ಬೆಳ್ಳಿ ಕೆ.ಜಿಗೆ ₹270 ಇಳಿಕೆ ಕಂಡು ₹68,625ಕ್ಕೆ ತಲುಪಿತು.

ಮುಂಬೈ ಧಾರಣೆ

ಶೇಂಗಾ

25–1–2023

ಜಾವಾ 70/80(ಹೊಸ)	12050-12100
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	10400-10450
ದಪ್ಪ ಗುಜರಾತ್(ಹೊಸ)	11500-11550

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1625)
ಒಂದು ವಾರದ ಡೆಲಿವರಿ	1595 (1620)
ಸೋಯಾ ಕಚ್ಚಾ	1090 (1110)
ಪಾಮ್ ವಾರದ ಡೆಲಿವರಿ	893 (906)
ಸೂರ್ಯಕಾಂತಿ ಎಣ್ಣೆ ಕಚ್ಚಾ	1070 (1100)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 56,850 (57,000)

ಬೆಳ್ಳಿ ಕೆ.ಜಿ 67,800 (68,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಟ್ರೆವಾಲಿಯಸ್ ಗೆಲ್ಲುವ ನಿರೀಕ್ಷೆ

ಬೆಂಗಳೂರು ಚಳಿಗಾಲದ ಡರ್ಬಿ ರೇಸ್ ಇಂದು; ಕಣದಲ್ಲಿ 11 ಕುದುರೆಗಳು

ಅಶ್ವ ಮಗಧೀರ

ಡಿಸ್ಟ್ರಪ್ಟರ್

ಜಾರ್ಜ್ ಎವರೆಸ್ಟ್

ಲಾಸ್ಟ್ ವಿಶ್

ಪ್ರಾಗ್


ಸ್ಪ್ಲೆಂಡಿಡೊ


ಸ್ಟಾರ್ಮಿ ಓಷನ್

ಟ್ರಾಂಕ್ವಿಲೊ

ಲಾ ರೀನ

ವಿಕ್ಟೋರಿಯಾ ಪಂಚ್

• ರವಿಕುಮಾರ್

ಬೆಂಗಳೂರು: ರೇಸ್ ಪ್ರಿಯರ ಕುತೂಹಲಕ್ಕೆ ಕಾರಣವಾಗಿರುವ ಪ್ರತಿಷ್ಠಿತ ಚಳಿಗಾಲದ ಬೆಂಗಳೂರು ಡರ್ಬಿ ರೇಸ್ ಗುರುವಾರ ಸಂಜೆ 4.30ಕ್ಕೆ ನಡೆಯಲಿದೆ.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ನಡೆಯುವ ಡರ್ಬಿ ರೇಸ್‌ನಲ್ಲಿ 9 ಗಂಡು ಮತ್ತು 2 ಹೆಣ್ಣು ಕುದುರೆಗಳು ಸ್ಪರ್ಧೆಯಲ್ಲಿವೆ.

ಪ್ರಮುಖ ಕುದುರೆಗಳಾದ ಮೈಸೂರು ಡರ್ಬಿ ವಿಜೇತ ಒನ್ಸ್ ಯು ಗೋ ಬ್ಲ್ಯಾಕ್, ಬೆಂಗಳೂರು ಓಕ್ಸ್ ವಿಜೇತ ಮಿರ್ರಾ ಮತ್ತು ಚೆನ್ನೈ ಡರ್ಬಿಯಲ್ಲಿ ಎರಡನೇ ಸ್ಥಾನ ಪಡೆದಿರುವ ಶ್ಯಾಮ್‌ರಾಕ್ ಅನುಪಸ್ಥಿತಿಯಲ್ಲಿ ಡರ್ಬಿ ನಡೆಯಲಿದೆ. ಕಣದಲ್ಲಿರುವ 11 ಕುದುರೆಗಳನ್ನು 'ಸಾಮಾನ್ಯ ದರ್ಜೆಯ' ಕುದುರೆಗಳೆಂದು ಭಾವಿಸಲಾಗಿದೆ.

ಕೋಲ್ಕತ್ತ ಡರ್ಬಿ ರೇಸ್‌ನಲ್ಲಿ 'ಸಕ್ಸಸ್' ನಂತಹ ನುರಿತ ಕುದುರೆಗೆ ಕೇವಲ ಅರ್ಧ ಲೆಂತ್ ಅಂತರದಲ್ಲಿ ಸೋತಿರುವ ಟ್ರೆವಾಲಿಯಸ್ ಕುದುರೆ ಇಂದಿನ ಡರ್ಬಿ ಗೆಲ್ಲುವ ಫೇವರಿಟ್ ಎನಿಸಿಕೊಂಡಿದೆ.

ಜೇಮ್ಸ್ ಮೆಕ್ ಆನ್ ಅವರಿಂದ ತರಬೇತಿ ಪಡೆದಿರುವ ಟ್ರೆವಾಲಿಯಸ್ ಕುದುರೆಗೆ ಶ್ರೀನಾಥ್ ಅವರು ಜಾಕಿ ಆಗಿದ್ದಾರೆ. ಹೈದರಾಬಾದ್ ಡರ್ಬಿ ಮತ್ತು ಚೆನ್ನೈ 2000 ಗಿನ್ನೀಸ್‌ನಲ್ಲಿ ಉತ್ತಮ ಪ್ರದರ್ಶನ ನೀಡಿರುವ ಅಶ್ವಮಗಧೀರ ಕುದುರೆಯು, ಟ್ರೆವಾಲಿಯಸ್‌ಗೆ ಪ್ರಬಲ ಪೈಪೋಟಿ ನೀಡುವ ನಿರೀಕ್ಷೆಯಿದೆ.

ಅಶ್ವಮಗಧೀರ ಕುದುರೆಯನ್ನು ದೇಶದ ಪ್ರಮುಖ ಜಾಕಿಗಳಲ್ಲಿ ಒಬ್ಬರಾಗಿರುವ ಸೂರಜ್ ನರೇಡು ಅವರು ಓಡಿಸಲಿದ್ದಾರೆ.

ಕೊನೆಯಲ್ಲಿ ಪ್ರವೇಶ ಪಡೆದಿರುವ ಲಾ ರೀನ ಕೂಡಾ ಕಣದಲ್ಲಿರುವ ಇನ್ನೊಂದು ಪ್ರಮುಖ ಸ್ಪರ್ಧಿ. ಟ್ರಾಂಕ್ವಿಲೊ ಮತ್ತು ಸ್ಪ್ಲೆಂಡಿಡೊ ಕೂಡಾ ಉತ್ತಮ ಹೋರಾಟದ ಸಾಮರ್ಥ್ಯ ಹೊಂದಿವೆ. ವಿಕ್ಟೋರಿಯಾ ಪಂಚ್ ಕೂಡಾ ಈ ರೇಸ್‌ಗೆ ಕೊನೆಯದಾಗಿ ಪ್ರವೇಶ ಪಡೆದಿದೆ.

'ಈಗಾಗಲೇ ಚಳಿಗಾಲದ ಕ್ಲಾಸಿಕ್ ರೇಸ್‌ಗಳಾದ 1000 ಗಿನ್ನೀಸ್, 2000 ಗಿನ್ನೀಸ್ ಮತ್ತು ಬೆಂಗಳೂರು ಓಕ್ಸ್ ರೇಸ್‌ಗಳನ್ನು ಪ್ರಾಯೋಜಿಸಿರುವ ವೂಲ್ಫ್ 777 ಕ್ರೀಡಾ ಸಂಸ್ಥೆಯು ಚಳಿಗಾಲದ ಡರ್ಬಿ ಪ್ರಾಯೋಜಿಸಲು ಮುಂದೆ ಬಂದಿರುವುದು ಸಂತಸದ ವಿಷಯ. ಸಂಸ್ಥೆಯಿಂದ ಮುಂದಿನ ದಿನಗಳಲ್ಲೂ ಪ್ರಾಯೋಜಕತ್ವ ನಿರೀಕ್ಷಿಸುತ್ತೇವೆ' ಎಂದು ಟರ್ಫ್ ಕ್ಲಬ್ ಅಧ್ಯಕ್ಷ ಹಾಗೂ ಹಿರಿಯ ಸ್ಟೀವರ್ಡ್ ಶಿವಕುಮಾರ್ ಖೇಣಿ ತಿಳಿಸಿದ್ದಾರೆ.

2,400 ಮೀ. ದೂರದ ಓಟವನ್ನು ಕಣ್ತುಂಬಿಕೊಳ್ಳಲು ರೇಸ್‌ಪ್ರಿಯರು ಕಾತರರಾಗಿದ್ದಾರೆ. ಕೋವಿಡ್ ಬಳಿಕ ನಡೆದಿದ್ದ ಬೆಂಗಳೂರು ಬೇಸಿಗೆ ಡರ್ಬಿಯನ್ನು ಸಾವಿರಾರು ರೇಸ್ ಪ್ರಿಯರು ಕಣ್ತುಂಬಿಕೊಂಡಿದ್ದರು.

ಟ್ರೆವಾಲಿಯಸ್

₹ 1.49 ಕೋಟಿ ಬಹುಮಾನ ಮೊತ್ತ

ಈ ಬಾರಿಯ ಡರ್ಬಿರೇಸ್ ಸುಮಾರು ₹ 1.49 ಕೋಟಿ ಬಹುಮಾನ ಮೊತ್ತ ಒಳಗೊಂಡಿದೆ. ಗೆಲ್ಲುವ ಕುದುರೆಗೆ ₹ 2 ಲಕ್ಷ ಮೌಲ್ಯದ ಟ್ರೋಫಿ ಹಾಗೂ ಮೊದಲ ಬಹುಮಾನ ₹ 73.25 ಲಕ್ಷ ದೊರೆಯಲಿದೆ.

ಡರ್ಬಿ ಸ್ಪರ್ಧಿಗಳ ವಿವರ

ಸಂಖ್ಯೆ	ಕುದುರೆ ಹೆಸರು	ಟ್ರೇನರ್	ಜಾಕಿ	ಡ್ರಾ ಸಂಖ್ಯೆ	ಕುದುರೆ ಹೊರುವ ತೂಕ
1	ಅಶ್ವಮಗಧೀರ	ಎಸ್.ನರೇಡು	ಸೂರಜ್ ನರೇಡು	1	57 ಕೆ.ಜಿ
2	ಡಿಸ್ಟ್ರಪ್ಟರ್	ಅತೋಲಾಹಿ	ಅಕ್ಷಯ್‌ಕುಮಾರ್	5	57 ಕೆ.ಜಿ
3	ಜಾರ್ಜ್ ಎವರೆಸ್ಟ್	ನೀಲ್ ದಾರಾಶ	ಎಸ್.ಜರ್ವಾನ್	6	57 ಕೆ.ಜಿ
4	ಲಾಸ್ಟ್ ವಿಶ್	ನೀಲ್ ಬಿ.ದೇವಾನಿ	ಸಿ.ಎಸ್.ಜೋಧ	3	57 ಕೆ.ಜಿ
5	ಪ್ರಾಗ್	ಅತೋಲಾಹಿ	ಟ್ರೆವರ್ ಪಟೇಲ್	4	57 ಕೆ.ಜಿ
6	ಸ್ಪ್ಲೆಂಡಿಡೊ	ಪದ್ಮನಾಭನ್	ಎ.ಸಂದೇಶ್	2	57 ಕೆ.ಜಿ
7	ಸ್ಟಾರ್ಮಿ ಓಷನ್	ಡಾರಿಯಸ್ ಬೈರಾಮ್ಜಿ	ಇಮ್ರಾನ್ ಚಿಸ್ತಿ	9	57 ಕೆ.ಜಿ
8	ಟ್ರಾಂಕ್ವಿಲೊ	ಅರ್ಜುನ್ ಮಂಗ್ಳೋರ್‌ಕರ್	ಆಂಥೋಣಿ ರಾಜ್	8	57 ಕೆ.ಜಿ
9	ಟ್ರೆವಾಲಿಯಸ್	ಜೇಮ್ಸ್ ಮೆಕ್‌ಆನ್	ಶ್ರೀನಾಥ್	11	57 ಕೆ.ಜಿ
10	ಲಾ ರೀನ	ಪದ್ಮನಾಭನ್	ನೀರಜ್ ರಾವಲ್	10	55.5 ಕೆ.ಜಿ
11	ವಿಕ್ಟೋರಿಯಾ ಪಂಚ್	ಇರ್ಫಾನ್ ಘಟಾಲ	ಸಕ್ಲೈನ್	7	55.5 ಕೆ.ಜಿ

ಸಿ.ಕೆ.ನಾಯ್ಡು ಟ್ರೋಫಿ: ಹಿಮಾಚಲ ಪ್ರದೇಶಕ್ಕೆ ನಿರಾಸೆ

ರೋಹಿತ್ ಮಿಂಚು: ಕರ್ನಾಟಕಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಮೈಸೂರು: ರೋಹಿತ್ ಕುಮಾರ್ ಮಿಂಚಿನ ಬೌಲಿಂಗ್ ದಾಳಿಯ (37ಕ್ಕೆ 5) ಬಲದಿಂದ ಕರ್ನಾಟಕ ತಂಡದವರು ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಹಿಮಾಚಲ ಪ್ರದೇಶದ ವಿರುದ್ಧ 66 ರನ್‌ಗಳ ಭರ್ಜರಿ ಜಯ ಸಾಧಿಸಿದರು.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ನಾಲ್ಕನೇ ದಿನವಾದ ಬುಧವಾರ ಹಿಮಾಚಲ ತಂಡವು 185 ರನ್‌ಗಳಿಗೆ ಆಲೌಟ್ ಆಯಿತು.

ರೋಹಿತ್ ಮಿಂಚು: 251ರನ್‌ಗಳ ಗೆಲುವಿನ ಗುರಿಯೊಂದಿಗೆ ಅಂಗಳಕ್ಕಿಳಿದ ಹಿಮಾಚಲ ಪ್ರದೇಶ ತಂಡವು ಆರಂಭದಲ್ಲಿಯೇ ವೈಭವ್ ಶರ್ಮಾ (10), ಎ.ಎ.ವಾಲಿಯಾ (0) ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಆಗ, ನಾಯಕ ಆರ್.ಐ.ಠಾಕೂರ್ (43) ಹಾಗೂ ಹಾಗೂ ಎಸ್.ಜಿ.ಅರೋರಾ (32) ಭರವಸೆ ಮೂಡಿಸಿದರು. ಈ ವೇಳೆ ದಾಳಿಗಿಳಿದ ಎ.ಸಿ.ರೋಹಿತ್ ಕುಮಾರ್ ಎದುರಾಳಿ ತಂಡದ ಲೆಕ್ಕಾಚಾರಗಳನ್ನು ಬುಡಮೇಲು ಮಾಡಿದರು.

ರೋಹಿತ್ ಕುಮಾರ್ ಚೆಂಡನ್ನು ತೋರಿಸಿ ಸಂಭ್ರಮಿಸಿದರು

ಮಧ್ಯಮ ಹಾಗೂ ಕೆಳ ಕ್ರಮಾಂಕದ ಆಟಗಾರರಿಗೆ ಪೆವಿಲಿಯನ್ ದಾರಿ ತೋರಿದ ರೋಹಿತ್ 5 ವಿಕೆಟ್ ಪಡೆದರು. ರಾಜ್ಯ ತಂಡಕ್ಕೆ ಗೆಲುವಿನ ಸಿಹಿ ನೀಡಿದರು. ಮುಕುಲ್ ನೇಗಿ (29) ಹಾಗೂ ದೀಪಿಂದರ್ ಸಿಂಗ್ ರಾಣಾ (20) ಕೊಂಚ ಪ್ರತಿರೋಧ ತೋರಿದರಾದರೂ ರೋಹಿತ್ ಅವರ ಸ್ಪಿನ್ ಮೋಡಿಗೆ ಔಟಾದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಕರ್ನಾಟಕ 166. ಹಿಮಾಚಲ ಪ್ರದೇಶ 214. ಎರಡನೇ ಇನಿಂಗ್ಸ್: ಕರ್ನಾಟಕ 89.4 ಓವರ್‌ಗಳಲ್ಲಿ 299 ಹಿಮಾಚಲ ಪ್ರದೇಶ: 62.4 ಓವರ್‌ಗಳಲ್ಲಿ 185 (ಆರ್.ಐ.ಠಾಕೂರ್ 43, ಎ.ಸಿ. ರೋಹಿತ್ ಕುಮಾರ್ 37ಕ್ಕೆ 5, ಶಶಿಕುಮಾರ್ 11ಕ್ಕೆ 2)

ಮೂವರು ಕೋಚ್‌ಗಳಿಗೆ ಪದ್ಮಶ್ರೀ ಗೌರವ

ನವದೆಹಲಿ: ವಿವಿಧ ಕ್ರೀಡೆಗಳ ಮೂವರು ಕೋಚ್‌ಗಳು ಕೇಂದ್ರ ಸರ್ಕಾರದ ಪದ್ಮಶ್ರೀ ಗೌರವಕ್ಕೆ ಪಾತ್ರರಾಗಿದ್ದಾರೆ.

ಕ್ರಿಕೆಟ್ ಕೋಚ್ ದೆಹಲಿಯ ಗುರುಚರಣ್ ಸಿಂಗ್. 'ತಾಂಗ್ ತಾ' ಸಮರ ಕಲೆಯ ತರಬೇತುದಾರರಾದ ಮಣಿಪುರದ ಸಂತೋಬಿಯ ಶರ್ಮ ಮತ್ತು 'ಕಳರಿಪಯಟ್ಟು' ಸಮರಕಲೆಯ ಕೋಚ್ ಕೇರಳದ ಎಸ್.ಆರ್.ಡಿ. ಪ್ರಸಾದ್ ಅವರ ಸಾಧನೆಯನ್ನು ಗುರುತಿಸಿ ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಸಂತೋಬಿಯ ಮತ್ತು ಪ್ರಸಾದ್ ಅವರು ತಮ್ಮ ತಮ್ಮ ರಾಜ್ಯಗಳಲ್ಲಿ ಹಲವು ವರ್ಷಗಳಿಂದ ಸಮರ ಕಲೆಯನ್ನು ಜನಪ್ರಿಯಗೊಳಿಸಲು ಶ್ರಮಿಸುತ್ತಿದ್ದಾರೆ.

ಬೆಂಗಳೂರು ರೇಸ್

ಡರ್ಬಿ ದಿನದ ಆಯ್ಕೆಗಳು

ಡರ್ಬಿ ರೇಸ್ ಸೇರಿದಂತೆ ಗುರುವಾರ ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಎಂಪೈರ್ ಆಫ್ ಡ್ರೀಮ್ಸ್ 1, ಮೈಟಿ ಸ್ವಾಲೊ 3, ಸ್ಲಿಂಗ್ ಶಾಟ್ 10
2ನೇ ರೇಸ್: ರೀಗಲ್ ಫ್ಲೋರ್ಸ್ 14, ಬಾರೊನೆಸ್ 2, ಸ್ಪಿರಿಟ್ ಡ್ಯಾನ್ಸರ್ 4
3ನೇ ರೇಸ್: ಟ್ರಿಪಿಟಾಕ 1, ಶೀರ್ ಬ್ಲಿಸ್ 3, ಸಿಂಗ್‌ಸಾಬ್ 4
4ನೇ ರೇಸ್: ಕ್ರೌನ್ ವಿಟ್‌ನೆಸ್ 1, ಡೆಲ್ ಪಿಕೊ 2, ರೂಲಿಂಗ್ ಡೈನಾಸ್ಟಿ 3
5ನೇ ರೇಸ್: ಇನ್‌ಯುವಿಬಿಲೀವ್ 3, ರೇಪಿಡಸ್ 4, ರೌಡಿ 1
6ನೇ ರೇಸ್: ಪಾಲಿಶ್ಡ್ ಗರ್ಲ್ 5, ಈಸ್‌ನಾಟ್ ಶೀ ಬ್ಯೂಟಿಫುಲ್ 12, ಅಜ್‌ಟೆಕ್ ಕ್ವೀನ್ 3
7ನೇ ರೇಸ್: ಟ್ರೆವಾಲಿಯಸ್ 9, ಅಶ್ವಮಗಧೀರ 1, ಲಾ ರೀನ 10
8ನೇ ರೇಸ್: ಮಿಸ್ಟಿಕ್ ಐ 6. ಫರ್ನೆಟ್ ಬ್ರ್ಯಾಂಕ 2, ಸ್ಮಿತ್ಸೋನಿಯನ್ 4
9ನೇ ರೇಸ್: ಅಮ್ರೇಲಿ 3. ಅಲ್ಸಿಡಸ್ ಸಿನರ್ಜಿ 4, ಅಲಾಸ್ಕನ್ ಜ್ಯೂಯೆಲ್ 5

ಉತ್ತಮ ಬೆಟ್: ಇನ್‌ಯುವಿಬಿಲೀವ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ಟೈಸನ್ ಮೇಲೆ ಅತ್ಯಾಚಾರ ಆರೋಪ

ನ್ಯೂಯಾರ್ಕ್ (ಎಪಿ): ಹೆವಿವೇಟ್ ಬಾಕ್ಸಿಂಗ್ ಕ್ರೀಡೆಯ ಮಾಜಿ ಚಾಂಪಿಯನ್ ಮೈಕ್ ಟೈಸನ್ ಅವರು ತಮ್ಮ ಮೇಲೆ 1990ರಲ್ಲಿ ಅತ್ಯಾಚಾರವೆಸಗಿದ್ದರು ಎಂದು ಮಹಿಳೆಯೊಬ್ಬರು ದೂರು ದಾಖಲಿಸಿದ್ದಾರೆ.

₹ 40 ಕೋಟಿಯ ಪರಿಹಾರವನ್ನೂ ಕೊಡಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ. 'ಅಲ್ಬಾನಿಯ ನೈಟ್ ಕ್ಲಬ್‌ನಲ್ಲಿ ಟೈಸನ್ ಅವರನ್ನು ಭೇಟಿ ಮಾಡಿದ್ದೆ. ಲಿಮೊಸಿನ್ ಕಾರಿನಲ್ಲಿ ತಮ್ಮ ಮೇಲೆ ಅತ್ಯಾಚಾರವೆಸಗಿದ್ದರು. ಅದರಿಂದಾಗಿ ದೈಹಿಕ ಹಾಗೂ ಮಾನಸಿಕವಾಗಿ ನಾನು ಅಪಾರವಾಗಿ ಘಾಸಿಗೊಂಡಿದ್ದೇನೆ' ಎಂದು ಅವರೂ ಅಫಿಡವಿಟ್‌ನಲ್ಲಿ ಉಲ್ಲೇಖಿಸಿದ್ದಾರೆ. ಅಮೆರಿಕದ ಅಡಲ್ಟ್ ಸರ್ವೈವರ್ಸ್ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ.


ಮೈಕ್ ಟೈಸನ್

'ಲಿಮೊಸಿನ್ ಕಾರ್‌ನಲ್ಲಿ ಕುಳಿತಿದ್ದಾಗಲೇ ಟೈಸನ್ ನನ್ನ ಮೈಕೈ ಮುಟ್ಟಿ ಅಸಭ್ಯವಾಗಿ ವರ್ತಿಸಲು ಆರಂಭಿಸಿದರು. ನಾನು ವಿರೋಧಿಸಿದೆ. ಎಚ್ಚರಿಕೆಯನ್ನೂ ಕೊಟ್ಟೆ. ಆದರೂ ಅವರು ನನ್ನ ಮೇಲೆ ದಾಳಿಯನ್ನು ಮುಂದುವರಿಸಿದರು. ನನ್ನನ್ನು ವಿವಸ್ತ್ರಗೊಳಿಸಿ ಅತ್ಯಾಚಾರವೆಸಗಿದರು' ಎಂದು ದೂರಿದ್ದಾರೆ.

+ Based on TVSM internal test conditions. As compared to BS-IV models. T&C apply. ^ Mobile charger is available in select variants. ^^ Ex-showroom price of XL100 Comfort Kick Start variant. *Offer valid for a limited period only. T&C apply. #Finance at the sole discretion of the financier. Schemes cannot be clubbed. T&C apply.

TVS 3 YEAR WARRANTY TVS CREDIT L&T Financial Services IDFC FIRST Bank ALWAYS YOU FIRST SHRIRAM City IndusInd Bank

FOR ALL INSTITUTIONAL/BULK REQUIREMENTS PLEASE MAIL corporate.customersupport@tvsmotor.com

dentsu/pjv blr/01/23

ಗುರುವಾರ, ಜನವರಿ 26, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani
ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗಣರಾಜ್ಯೋತ್ಸವದ ಶುಭಾಶಯಗಳು

ಮೂಲಸೌಕರ್ಯವಿಲ್ಲದೇ ಪರದಾಟ 4

ಸ್ಪರ್ಧಾವಾಣಿ
ಎಲ್‌ಐಸಿಯಲ್ಲಿ ಖಾಲಿಯಿರುವ ಎಎಒ ಹುದ್ದೆಗಳ ಭರ್ತಿಗಾಗಿ ನಡೆಯುವ ಪರೀಕ್ಷಾ ವಿವರ ಇಲ್ಲಿದೆ.

ಇಂದಿನಿಂದಲೇ ಲಭ್ಯ: ಸಿಜೆಐ ಡಿ.ವೈ.ಚಂದ್ರಚೂಡ್ ಘೋಷಣೆ

ಪ್ರಾದೇಶಿಕ ಭಾಷೆ: 'ಸುಪ್ರೀಂ' ತೀರ್ಪು

ನವದೆಹಲಿ (ಪಿಟಿಐ): ಕನ್ನಡ ಸೇರಿದಂತೆ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನ ಪ್ರತಿಗಳನ್ನು ಒದಗಿಸುವ ಆನ್‌ಲೈನ್ ಸೇವೆಗೆ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರು ಬುಧವಾರ ಚಾಲನೆ ನೀಡಿದ್ದಾರೆ. ಈ ಸೇವೆ ಗುರುವಾರದಿಂದಲೇ (ಗಣರಾಜ್ಯೋತ್ಸವದ ದಿನ) ಕಾರ್ಯಗತಗೊಳ್ಳಲಿದೆ.

'ಎಲೆಕ್ಟ್ರಾನಿಕ್-ಸುಪ್ರೀಂ ಕೋರ್ಟ್ ರಿಪೋರ್ಟ್ಸ್ (ಇ-ಎಸ್‌ಸಿಆರ್) ಯೋಜನೆಯ ಭಾಗವಾಗಿ ನ್ಯಾಯಾಲಯವು ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಉಚಿತವಾಗಿ ಸುಪ್ರೀಂ ಕೋರ್ಟ್ ತೀರ್ಪಿನ ಪ್ರತಿಗಳನ್ನು ಒದಗಿಸಲು ನಿರ್ಧರಿಸಿದೆ' ಎಂದು ಸಿಜೆಐ ಚಂದ್ರಚೂಡ್ ಅವರು ಬುಧವಾರ ನ್ಯಾಯಾಲಯದ ಕಲಾಪದಲ್ಲಿ ಭಾಗವಹಿಸಿದ್ದ ವಕೀಲರಿಗೆ ತಿಳಿಸಿದ್ದಾರೆ.

'ಇ-ಎಸ್‌ಸಿಆರ್ ಯೋಜನೆಯಡಿ ಸದ್ಯ ಸುಮಾರು 34 ಸಾವಿರ ತೀರ್ಪುಗಳನ್ನು ಕ್ರೋಡೀಕರಿಸಲಾಗಿದೆ. ಜೊತೆಗೆ 1,091 ತೀರ್ಪುಗಳು ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯ ಇದ್ದು, ಇವು ಗುರುವಾರದಿಂದ ಎಲ್ಲರಿಗೂ ದೊರೆಯುತ್ತವೆ. ಕನ್ನಡದಲ್ಲಿ 17, ಒಡಿಯಾದಲ್ಲಿ 21, ಮರಾಠಿಯಲ್ಲಿ 14, ಅಸ್ಸಾಮಿಯಲ್ಲಿ 4, ಮಲೆಯಾಳದಲ್ಲಿ 29, ನೇಪಾಳಿಯಲ್ಲಿ 3, ಪಂಜಾಬಿಯಲ್ಲಿ 4, ತೆಲುಗಿನಲ್ಲಿ 28, ಉರ್ದುವಿನಲ್ಲಿ 3 ಹಾಗೂ ತಮಿಳಿನಲ್ಲಿ 52 ತೀರ್ಪುಗಳು ಈಗಾಗಲೇ ಲಭ್ಯ ಇವೆ' ಎಂದು ಅವರು ಮಾಹಿತಿ ನೀಡಿದ್ದಾರೆ.

'22 ಪ್ರಾದೇಶಿಕ ಭಾಷೆಗಳಲ್ಲೂ ತೀರ್ಪಿನ ಪ್ರತಿ ಒದಗಿಸುವ ಗುರಿಯನ್ನು ಸುಪ್ರೀಂ ಕೋರ್ಟ್ ಹೊಂದಿದೆ. ತೀರ್ಪುಗಳ ಆನ್‌ಲೈನ್ ಪ್ರತಿಗಳು ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್, ಮೊಬೈಲ್ ಆ್ಯಪ್ ಹಾಗೂ ನ್ಯಾಷನಲ್ ಜ್ಯುಡಿಷಿಯಲ್ ಡಾಟಾ ಗ್ರಿಡ್‌ನ (ಎನ್‌ಜೆಡಿಜಿ) ಜಡ್ಜ್‌ಮೆಂಟ್ ಪೋರ್ಟಲ್‌ನಲ್ಲಿ ಲಭ್ಯ ಇರಲಿವೆ' ಎಂದಿದ್ದಾರೆ.

'ದೇಶದ ವಿವಿಧ ಭಾಗಗಳಲ್ಲಿ ಇರುವ ವಕೀಲರು, ಕಾನೂನು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಚಿತವಾಗಿ ಈ ಸೇವೆಯ ಪ್ರಯೋಜನ ಪಡೆದುಕೊಳ್ಳಬಹುದು. 'ಸರ್ಚ್ ಎಂಜಿನ್' ಅನ್ನು ಸುಧಾರಿಸುವ ಕಾರ್ಯಕ್ಕೂ ನಾವು ಮುಂದಾಗಿದ್ದೇವೆ. ಸದ್ಯದ ಮಟ್ಟಿಗೆ ಈ ವರ್ಷದ ಜನವರಿ 1ರವರೆಗಿನ ತೀರ್ಪುಗಳ ಪ್ರತಿಗಳು ಪ್ರತಿಯೊಬ್ಬರಿಗೂ ದೊರೆಯುವ ವ್ಯವಸ್ಥೆ ಮಾಡಲಾಗಿದೆ' ಎಂದೂ ಅವರು ತಿಳಿಸಿದ್ದಾರೆ.

ಆನ್‌ಲೈನ್‌ನಲ್ಲಿ ತೀರ್ಪಿನ ಪ್ರತಿ

ನ್ಯಾಯಾಲಯದ ತೀರ್ಪುಗಳ ಪ್ರತಿಗಳನ್ನು ಆನ್‌ಲೈನ್ ಮೂಲಕ ಒದಗಿಸುವ ಉದ್ದೇಶದಿಂದ ಸುಪ್ರೀಂ ಕೋರ್ಟ್ ಜನವರಿ 2ರಂದು ಇ-ಎಸ್‌ಸಿಆರ್ ಯೋಜನೆ ಜಾರಿಗೊಳಿಸಿತ್ತು.

ಜೊತೆಗೆ ರಾಷ್ಟ್ರೀಯ ಮಾಹಿತಿ ಕೇಂದ್ರದ (ಎನ್‌ಐಸಿ) ನೆರವಿನೊಂದಿಗೆ ಸರ್ಚ್ ಎಂಜಿನ್ ಕೂಡ ಅಭಿವೃದ್ಧಿಪಡಿಸಿತ್ತು.

ದೇಶದೆಲ್ಲೆಡೆ ವಕೀಲರು, ಕಾನೂನು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ದೊರೆಯುತ್ತಿರುವ ಉಚಿತ ಸೇವೆ ಇದು. ಎಲ್ಲರೂ ಇದರ ಪ್ರಯೋಜನ ಪಡೆಯಬಹುದು

ಡಿ.ವೈ.ಚಂದ್ರಚೂಡ್, ಸಿಜೆಐ

‘ಹೈದರಾಬಾದ್ ಎಕ್ಸ್‌ಪ್ರೆಸ್’ ಸಿರಾಜ್‌ಗೆ ಕಿರೀಟ

2 ಜೋಶ್ ಹ್ಯಾಜಲ್‌ವುಡ್ (ಆಸ್ಟ್ರೇಲಿಯಾ) ರೇಟಿಂಗ್ 727



3 ಟ್ರೆಂಟ್ ಬೌಲ್ಟ್ (ನ್ಯೂಜಿಲೆಂಡ್) ರೇಟಿಂಗ್ 708

1 ಮೊಹಮ್ಮದ್ ಸಿರಾಜ್ (ಭಾರತ)
ರೇಟಿಂಗ್ **729**

ಸಿರಾಜ್ ಬೌಲಿಂಗ್ ಸಾಧನೆ (ಏಕದಿನ)
ಪಂದ್ಯ: 21
ವಿಕೆಟ್: 38
ಶ್ರೇಷ್ಠ: 32ಕ್ಕೆ4
ಎಕಾನಮಿ: 4.62
ಪದಾರ್ಪಣೆ: 2019 (ಆಸ್ಟ್ರೇಲಿಯಾ ಎದುರು. ಅಡಿಲೇಡ್‌ನಲ್ಲಿ)
ವಯಸ್ಸು: 28

ದುಬೈ (ಪಿಟಿಐ): ‘ಹೈದರಾಬಾದ್ ಎಕ್ಸ್‌ಪ್ರೆಸ್’ ಮೊಹಮ್ಮದ್ ಸಿರಾಜ್ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಏಕದಿನ ಕ್ರಿಕೆಟ್ ಬೌಲರ್‌ಗಳ ರ‍್ಯಾಂಕಿಂಗ್‌ನಲ್ಲಿ ಇದೇ ಮೊದಲ ಬಾರಿ ಅಗ್ರಸ್ಥಾನಕ್ಕೇರಿದ್ದಾರೆ.

ಅತ್ಯಂತ ಕಡಿಮೆ ಅವಧಿಯಲ್ಲಿ ಅವರು ಈ ಸಾಧನೆ ಮಾಡಿದ್ದಾರೆ. 21 ಪಂದ್ಯಗಳಲ್ಲಿ ಅವರು ಒಟ್ಟು 38 ವಿಕೆಟ್‌ಗಳನ್ನು ಗಳಿಸಿದ್ದಾರೆ. ಅವರು ಈ ಹಾದಿಯಲ್ಲಿ ನ್ಯೂಜಿಲೆಂಡ್‌ನ ಟ್ರೆಂಟ್ ಬೌಲ್ಟ್ ಹಾಗೂ ಆಸ್ಟ್ರೇಲಿಯಾದ ಜೋಶ್ ಹ್ಯಾಜಲ್‌ವುಡ್ ಅವರನ್ನು ಹಿಂದಿಕ್ಕಿದ್ದಾರೆ.

ಈಚೆಗೆ ಅವರು ಶ್ರೀಲಂಕಾ ವಿರುದ್ಧದ ಮೂರು ಪಂದ್ಯಗಳ ಸರಣಿಯಲ್ಲಿ ಒಂಬತ್ತು ವಿಕೆಟ್ ಗಳಿಸಿದ್ದರು. ನ್ಯೂಜಿಲೆಂಡ್ ಎದುರಿನ ಸರಣಿಯ ಮೊದಲ ಪಂದ್ಯದಲ್ಲಿ ನಾಲ್ಕು ವಿಕೆಟ್ ಗಳಿಸಿ ಮಿಂಚಿದ್ದರು. ಅನುಭವಿ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರ ಅನುಪಸ್ಥಿತಿಯಲ್ಲಿ ತಂಡದ ಬೌಲಿಂಗ್ ಹೊಣೆಯನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ.

4 ಮಿಚೆಲ್ ಸ್ಟಾರ್ಕ್ (ಆಸ್ಟ್ರೇಲಿಯಾ) ರೇಟಿಂಗ್ 665

5 ರಶೀದ್ ಖಾನ್ (ಅಫ್ಗಾನಿಸ್ತಾನ) ರೇಟಿಂಗ್ 659

ಶ್ರೀ ಶ್ರೀ ರವಿಶಂಕರ್ ತೆರಳುತ್ತಿದ್ದ ಹೆಲಿಕಾಪ್ಟರ್ ತುರ್ತು ಭೂಸ್ಪರ್ಶ

ಚೆನ್ನೈ (ಪಿಟಿಐ): 'ಆರ್ಟ್ ಆಫ್ ಲಿವಿಂಗ್' ಫೌಂಡೇಷನ್‌ನ ಸಂಸ್ಥಾಪಕರಾದ ಶ್ರೀ ಶ್ರೀ ರವಿಶಂಕರ್ ಗುರೂಜಿ ಮತ್ತು ಅವರ ಇಬ್ಬರು ಸಹಾಯಕರು ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್ ಹವಾಮಾನ ವೈಪರೀತ್ಯದ ಪರಿಣಾಮ ತಮಿಳುನಾಡಿನ ಈರೋಡ್ ಜಿಲ್ಲೆಯಲ್ಲಿ ಬುಧವಾರ ಬೆಳಿಗ್ಗೆ ತುರ್ತು ಭೂಸ್ಪರ್ಶ ಮಾಡಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ದಟ್ಟ ಮಂಜು ಕವಿದಿದ್ದ ಕಾರಣ ಖಾಸಗಿ ಹೆಲಿಕಾಪ್ಟರ್ ಈರೋಡ್ ಜಿಲ್ಲೆಯ ಕಡಂಬೂರ್ ಬಳಿಯ ಒಕಿಯಂ ಸರ್ಕಾರಿ ಶಾಲೆಯ ಆಟದ ಮೈದಾನದಲ್ಲಿ ಭೂಸ್ಪರ್ಶ ಮಾಡಿದೆ.

ಗುರೂಜಿ ಅವರು ಹೆಲಿಕಾಪ್ಟರ್‌ನಿಂದ ಇಳಿಯುತ್ತಿದ್ದಂತೆ ಗ್ರಾಮದ ಜನರ ಗುಂಪು ಅವರ ಬಳಿ ತೆರಳಿ ಆಶೀರ್ವಾದ ಪಡೆದರು. ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಕೂಡಲೇ ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದರು. ಹೆಲಿಕಾಪ್ಟರ್‌ನಲ್ಲಿದ್ದ ರವಿಶಂಕರ್ ಗೂರೂಜಿ, ಅವರ ಇಬ್ಬರು ಸಹಾಯಕರು ಹಾಗೂ ಪೈಲಟ್ ಸುರಕ್ಷಿತವಾಗಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಸ್ಥಳೀಯರೊಂದಿಗೆ ಒಂದು ಗಂಟೆ ಸಂವಾದ ನಡೆಸಿದ ಗುರೂಜಿ ಬೆಳಿಗ್ಗೆ 11.15ಕ್ಕೆ ತಿರುಪುರ್ ಜಿಲ್ಲೆಯ ಕಾಂಗೇಯಂಗೆ ತೆರಳಿದರು. ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಅವರು ಬೆಂಗಳೂರಿನಿಂದ ಕಾಂಗೇಯಂಗೆ ಪ್ರಯಾಣ ಬೆಳೆಸಿದ್ದರು.

ಹುಬ್ಬಳ್ಳಿಯ ಬೆಂಗೇರಿಯಲ್ಲಿರುವ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘದ ರಾಷ್ಟ್ರಧ್ವಜ ತಯಾರಿಕೆ ಕೇಂದ್ರದಲ್ಲಿ ತ್ರಿವರ್ಣ ಧ್ವಜಗಳ ಹೊಲಿಗೆಯಲ್ಲಿ ಕಾರ್ಮಿಕರು ಮಗ್ನರಾಗಿರುವುದು – ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ಜ.23ರವರೆಗೆ ₹53 ಲಕ್ಷದ ತ್ರಿವರ್ಣ ಧ್ವಜ ಮಾರಾಟ

ವರ್ಷದಲ್ಲಿ ₹3 ಕೋಟಿ ದಾಟಿದ ಧ್ವಜ ವಹಿವಾಟು

● ಬಸೀರಅಹ್ಮದ್ ನಗಾರಿ

ಹುಬ್ಬಳ್ಳಿ: ಇಲ್ಲಿನ ಬೆಂಗೇರಿಯಲ್ಲಿರುವ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘ (ಕೆಕೆಜಿಎಸ್‌ಎಸ್) ತಯಾರಿಸುವ ಬಿಐಎಸ್ ಮಾನದಂಡವುಳ್ಳ ರಾಷ್ಟ್ರಧ್ವಜಗಳಿಗೆ ವರ್ಷದಿಂದ ವರ್ಷಕ್ಕೆ ಬೇಡಿಕೆ ಹೆಚ್ಚುತ್ತಿದ್ದು ಸಂಘವು ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹3.17 ಕೋಟಿಗೂ ಅಧಿಕ ಮೊತ್ತದ ವಹಿವಾಟು ನಡೆಸಿದೆ.

ಸಂಘವು ಈ ತನಕದ ರಾಷ್ಟ್ರಧ್ವಜಗಳ ಮಾರಾಟದಲ್ಲಿ ನಡೆಸಿದ ಗರಿಷ್ಠ ದಾಖಲೆ ಇದಾಗಿದೆ.

'ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ನಡೆದ ಹರ್ ಘರ್ ತಿರಂಗಾ ಅಭಿಯಾನ, ಧಾರವಾಡ ಜಿಲ್ಲೆಯಲ್ಲಿ ನಡೆದ ಯುವಜನೋತ್ಸವ ಕಾರ್ಯಕ್ರಮ ಸೇರಿದಂತೆ ಹಲವು ಅಂಶಗಳು ರಾಷ್ಟ್ರಧ್ವಜಗಳ ಮಾರಾಟ ಹೆಚ್ಚಲು ಕಾರಣ' ಎಂದು ಕೆಕೆಜಿಎಸ್‌ಎಸ್ ಸಂಘದ ಕಾರ್ಯದರ್ಶಿ ಶಿವಾನಂದ ಮಠಪತಿ 'ಪ್ರಜಾವಾಣಿ'ಗೆ ತಿಳಿಸಿದರು.

'ನಮ್ಮಲ್ಲಿ ಒಂಬತ್ತು ಬಗೆಯ ಬಿಐಎಸ್ ಮಾನದಂಡವುಳ್ಳ ಧ್ವಜಗಳನ್ನು ತಯಾರಿಸಲಾಗುತ್ತದೆ. 14x21 ಅಡಿ ಸೇರಿದಂತೆ ಬಹುತೇಕ ಎಲ್ಲ ಬಗೆಯ ರಾಷ್ಟ್ರಧ್ವಜಗಳು ಈ ಸಲ ಮಾರಾಟವಾಗಿವೆ. 2x3 ಅಡಿ, 3x4.5 ಅಡಿ, 4x6 ಅಡಿ ಅಳತೆಯ ಧ್ವಜಗಳಿಗೆ ಬೇಡಿಕೆ ತುಸು ಹೆಚ್ಚಾಗಿತ್ತು' ಎಂದರು.

'2022ರ ಏಪ್ರಿಲ್‌ನಿಂದ 2023ರ ಜನವರಿ 23ರ ತನಕ ಒಟ್ಟು 34,593ಕ್ಕೂ ಹೆಚ್ಚು ಧ್ವಜಗಳು ಮಾರಾಟವಾಗಿದ್ದು, ಒಟ್ಟು ತನಕ ₹3.17 ಕೋಟಿ ವಹಿವಾಟು ನಡೆದಿದೆ' ಎಂದು ವಿವರಿಸಿದರು.

ಹೆಚ್ಚುವರಿ ದುಡಿಮೆ: 'ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಾಷ್ಟ್ರಧ್ವಜಗಳಿಗೆ ಬೇಡಿಕೆ ಹೆಚ್ಚಿದ್ದರಿಂದ, ಅವುಗಳನ್ನು ತಯಾರಿಸುವ ಕಾರ್ಮಿಕರಿಗೂ ಕೈತುಂಬ ಕೆಲಸವಿತ್ತು. 25 ಕಾರ್ಮಿಕರು ಬಹುತೇಕ ಮೂರು ತಿಂಗಳ ಕಾಲ ಹೆಚ್ಚುವರಿ ಕೆಲಸ(ಓ.ಟಿ) ಮಾಡಿದ್ದಾರೆ. ಈ ಕೆಲಸಕ್ಕಾಗಿ ಅವರಿಗೆ ಒಟ್ಟಾರೆ ಅಂದಾಜು ₹5 ಲಕ್ಷ ವೇತನ ಪಾವತಿಸಲಾಗಿದೆ' ಎಂದೂ ಮಠಪತಿ ತಿಳಿಸಿದರು.

ಯುವಜನೋತ್ಸವಕ್ಕೆ 7,332 ಧ್ವಜ: ಈ ಬಾರಿ ರಾಷ್ಟ್ರೀಯ ಯುವಜನೋತ್ಸವ ಧಾರವಾಡ ಜಿಲ್ಲೆಯಲ್ಲಿಯೇ ನಡೆದಿದ್ದು, ರಾಷ್ಟ್ರಧ್ವಜ ಮಾರಾಟ ಹೆಚ್ಚಳಕ್ಕೆ ಕೊಡುಗೆ ನೀಡಿದೆ.

'ಪ್ರಧಾನಿ ಮೋದಿ ಸೇರಿದಂತೆ ಗಣ್ಯರು ಹಾಗೂ ಯುವಜನೋತ್ಸವದಲ್ಲಿ ಪಾಲ್ಗೊಂಡಿದ್ದ ಪ್ರತಿನಿಧಿಗಳಿಗೆ ನೀಡಲು ಜಿಲ್ಲಾಡಳಿತ ರಾಷ್ಟ್ರಧ್ವಜಗಳನ್ನು ಪೂರೈಸಲು ಸೂಚಿಸಿತ್ತು. ಜಿಲ್ಲಾಡಳಿತದ ನಿರ್ದೇಶನದಂತೆ 6x9 ಇಂಚಿನ 301, 4x6 ಇಂಚಿನ 7,005 ಹಾಗೂ 12x18 ಇಂಚಿನ 26 ರಾಷ್ಟ್ರಧ್ವಜ ಪೂರೈಸಲಾಯಿತು. ಅದರಿಂದ ಸಂಸ್ಥೆಗೆ ₹5.36 ಲಕ್ಷ ಆದಾಯ ಬಂದಿದೆ' ಎಂದು ಮಠಪತಿ ತಿಳಿಸಿದರು.

ಬಿಐಎಸ್ ಮಾನದಂಡವಿಲ್ಲದ ವಿವಿಧ ಅಳತೆಯ ರಾಷ್ಟ್ರಧ್ವಜಗಳನ್ನು ಸಿದ್ಧಪಡಿಸಲಾಗುತ್ತದೆ. ಇವುಗಳ ಮಾರಾಟ ಒಟ್ಟಾರೆ ಮಾರಾಟದ ಶೇ 20ರಷ್ಟಿರುತ್ತದೆ ಎಂಬುದು ವಿಶೇಷ.

ಧ್ವಜಗಳ ವಿಲೇವಾರಿಗೆ ಕ್ರಮ

'ಮನೆ-ಮನೆಗಳ ಮೇಲೆ ರಾಷ್ಟ್ರಧ್ವಜ ಹಾರಾಟ ಅಭಿಯಾನದ ಬಳಿಕ ಕೆಲ ಸಂಘ -ಸಂಸ್ಥೆಗಳು ಸಾರ್ವಜನಿಕರಿಂದ ಸಂಗ್ರಹಿಸಿದ್ದ ಪಾಲಿಸ್ಟರ್ ಬಟ್ಟೆ ಸೇರಿದಂತೆ ವಿವಿಧ ಬಗೆಯ 850ಕ್ಕೂ ಹೆಚ್ಚು ರಾಷ್ಟ್ರಧ್ವಜಗಳನ್ನು ನಮಗೆ ನೀಡಿವೆ. ಅವುಗಳ ವಿಲೇವಾರಿಗೆ ಗಂಧದ ಕಟ್ಟಿಗೆಯಲ್ಲಿ ಸುಡುವುದು ಹಾಗೂ 3x6 ಅಡಿ ತೆಗ್ಗು ತೋಡಿ ಹೂಳುವುದು ಹೀಗೆ ಎರಡು ವಿಧಾನಗಳಿವೆ. ಶೀಘ್ರವೇ ಅವುಗಳ ನಿಯಮಬದ್ಧ ವಿಲೇವಾರಿಗೆ ಕ್ರಮ ವಹಿಸಲಾಗುವುದು' ಎಂದು ಮಠಪತಿ ತಿಳಿಸಿದರು.

ರಾಷ್ಟ್ರಧ್ವಜಗಳ ಮಾರಾಟ ವಿವರ

ವರ್ಷ	ವಿವಿಧ ಅಳತೆ ಎಷ್ಟು ಧ್ವಜ?	ಒಟ್ಟು ಮೌಲ್ಯ (₹ ಕೋಟಿಗಳಲ್ಲಿ)
2022-23	34,593*	3.17*
2021-22	18,669	1.85
2020-21	12,096	1.29
2019-20	18,873	1.91
2018-19	25,814	2.11
2017-18	26,334	2.17

(*2023ರ ಜನವರಿ 23ರವರೆಗೆ)

ಲಖೀಂಪುರ ಖೀರಿ ಹಿಂಸಾಚಾರ: ಆಶಿಶ್‌ಗೆ ಮಧ್ಯಂತರ ಜಾಮೀನು

ನವದೆಹಲಿ (ಪಿಟಿಐ): 2021ರಲ್ಲಿ ನಡೆದಿದ್ದ ಲಖೀಂಪುರ ಖೀರಿ ಹಿಂಸಾಚಾರ ಪ್ರಕರಣದ ಪ್ರಮುಖ ಆರೋಪಿಯಾದ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಗನಾದ ಆಶಿಶ್ ಮಿಶ್ರಾಗೆ ಸುಪ್ರೀಂ ಕೋರ್ಟ್ ಬುಧವಾರ ಎಂಟು ವಾರಗಳ ವರೆಗೆ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

'ಜಾಮೀನು ಅವಧಿಯಲ್ಲಿ ಆರೋಪಿಯು ಉತ್ತರಪ್ರದೇಶ ಅಥವಾ ದೆಹಲಿಯಲ್ಲಿ ಉಳಿದುಕೊಳ್ಳುವಂತಿಲ್ಲ' ಎಂದು ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಜೆ.ಕೆ.ಮಾಹೇಶ್ವರಿ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ತೀರ್ಪಿನಲ್ಲಿ ತಿಳಿಸಿದೆ.

ಈ ಕುರಿತ ವಿಚಾರಣೆಯನ್ನು ನ್ಯಾಯಾಲಯವು ಮಾರ್ಚ್ 14ಕ್ಕೆ ಮುಂದೂಡಿದೆ.

ಅಮರ್ತ್ಯ ಸೇನ್‌ರಿಂದ ವಿಶ್ವಭಾರತಿ ವಿ.ವಿ ಜಾಗ ಒತ್ತುವರಿ: ಹಿಂದಿರುಗಿಸಲು ಸೂಚನೆ

ಕೋಲ್ಕತ್ತಾ (ಪಿಟಿಐ): ನೊಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ಅವರು ವಿಶ್ವ ಭಾರತಿ ಕೇಂದ್ರೀಯ ವಿಶ್ವವಿದ್ಯಾಲಯದ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿರುವ ವಿಶ್ವವಿದ್ಯಾಲಯ, ಒತ್ತುವರಿ ತೆರವು ಮಾಡಬೇಕೆಂದು ಸೂಚಿಸಿದೆ.

'5,662.8 ಚದರ ಅಡಿ ಜಾಗವನ್ನು ಅಮರ್ತ್ಯ ಸೇನ್ ಅವರು ಒತ್ತುವರಿ ಮಾಡಿಕೊಂಡು, ತಮ್ಮ ಮನೆ ನಿರ್ಮಿಸಿಕೊಂಡಿದ್ದಾರೆ' ಎಂದು ವಿಶ್ವವಿದ್ಯಾಲಯದ ಉಪ ಕುಲಸಚಿವ ಅವರು ಸಹಿ ಮಾಡಿರುವ ಪತ್ರವು ಹೇಳಿದೆ.

'ಅಮರ್ತ್ಯ ಸೇನ್ ಅವರು ಬಯಸಿದರೆ, ಅವರೇ ಸೂಚಿಸುವ ಸರ್ವೆಯರ್ ಮೂಲಕವೂ ಸರ್ವೇ ಕಾರ್ಯ ಮಾಡಿಸಲು ಸಿದ್ಧರಿದ್ದೇವೆ. ಆದಷ್ಟು ಬೇಗ ಒತ್ತುವರಿ ಮಾಡಿಕೊಂಡಿರುವ ಜಾಗವನ್ನು ತೆರವು ಮಾಡಬೇಕು' ಎಂದು ಪತ್ರದಲ್ಲಿ ತಿಳಿಸಲಾಗಿದೆ.

'ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಕ್ರೀಡಾಂಗಣದ ಒಂದೂಕಾಲು ಎಕರೆ ಜಾಗವನ್ನು ಅಮರ್ತ್ಯ ಸೇನ್ ಅವರ ತಂದೆ 1943ರಲ್ಲಿ ಗುತ್ತಿಗೆ ಪಡೆದುಕೊಂಡಿದ್ದರು' ಎಂದು ವಿಶ್ವವಿದ್ಯಾಲಯದ ವಕ್ತಾರೆ ಮಹುವಾ ಬ್ಯಾನರ್ಜಿ ಹೇಳಿದರು. ಆದರೆ, ಈ ಕುರಿತು ಪ್ರತಿಕ್ರಿಯೆ ಪಡೆದುಕೊಳ್ಳಲು ಅಮರ್ತ್ಯ ಸೇನ್ ಅವರಾಗಲಿ, ಅವರ ಕುಟುಂಬವಾಗಲಿ ಸಂಪರ್ಕಕ್ಕೆ ಸಿಗಲಿಲ್ಲ.

ಒಳ ಪುಟಗಳು

ಸಂಗೊಳ್ಳಿ ರಾಯಣ್ಣನ 'ಶೌರ್ಯವನ' ಸಿದ್ಧ 4
ಸಾಹಿತ್ಯ-ಸಮಕಾಲೀನ ಬೆಸುಗೆಯ ಸಾಹಿತ್ಯೋತ್ಸವ 5

ಅತ್ಯುತ್ತಮ ಸೇವೆ: 20 ಪೊಲೀಸರಿಗೆ ರಾಷ್ಟ್ರಪತಿ ಪದಕ

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ರಾಜ್ಯದ ಎಡಿಜಿಪಿ ಸೇರಿದಂತೆ 20 ಪೊಲೀಸರಿಗೆ 2023ನೇ ಸಾಲಿನ ರಾಷ್ಟ್ರಪತಿ ಪದಕ ಲಭಿಸಿದೆ. ಗಣರಾಜ್ಯೋತ್ಸವ ದಿನದಂದು ಪದಕ ಪ್ರದಾನ ಕಾರ್ಯಕ್ರಮ ಜರುಗಲಿದೆ. ಪದಕ ಪಡೆದವರ ವಿವರ ಇಲ್ಲಿದೆ.

ವಿಶಿಷ್ಟ ಸೇವಾ ಪದಕ — 2023ನೇ ಸಾಲಿನ ರಾಷ್ಟ್ರಪತಿ ಶ್ಲಾಘನೀಯ ಸೇವಾ ಪದಕ

ಕೆ.ವಿ. ಶರತ್ ಚಂದ್ರ, ಎಡಿಜಿಪಿ, ಸಿಐಡಿ | ಲಾಭೂರಾಮ್, ಡಿಐಜಿ, ಗುಪ್ತದಳ | ಎಸ್. ನಾಗರಾಜು, ಡಿವೈಎಸ್ಪಿ | ಪಿ.ವೀರೇಂದ್ರ ಕುಮಾರ್, ಡಿವೈಎಸ್ಪಿ, ಕೆಎಲ್ಎ | ಬಿ. ಪ್ರಮೋದ್‌ಕುಮಾರ್, ಡಿವೈಎಸ್ಪಿ, ಕೆಎಲ್ಎ | ಸಿದ್ಧಲಿಂಗಪ್ಪ ಪಾಟೀಲ, ಡಿವೈಎಸ್ಪಿ

ಸಿ.ವಿ. ದೀಪಕ್, ಡಿವೈಎಸ್ಪಿ, ಎಸ್‌ಟಿಎಫ್ | ಎಚ್. ವಿಜಯ್, ಡಿವೈಎಸ್ಪಿ, ಬೆಂಗಳೂರು ನಗರ ವಿಶೇಷ ವಿಭಾಗ | ಬಿ.ಎಸ್.ಮಂಜುನಾಥ್, ಇನ್‌ಸ್ಪೆಕ್ಟರ್, ಮಾದನಾಯಕನಹಳ್ಳಿ ಠಾಣೆ | ರಾವ್ ಗಣೇಶ್ ಜನಾರ್ದನ್, ಇನ್‌ಸ್ಪೆಕ್ಟರ್, ಬೆಂಗಳೂರು ಅಶೋಕನಗರ ಸಂಚಾರ ಠಾಣೆ | ಆರ್.ಪಿ. ಅನಿಲ್, ಸರ್ಕಲ್ ಇನ್‌ಸ್ಪೆಕ್ಟರ್, ದಾವಣಗೆರೆ | ಮನೋಜ್ ಎನ್. ಹೋವಳೆ, ಇನ್‌ಸ್ಪೆಕ್ಟರ್, ಬೆಂಗಳೂರು ಸಂಚಾರ ಮತ್ತು ಯೋಜನೆ | ಬಿ.ಟಿ. ವರದರಾಜ, ವಿಶೇಷ ಆರ್‌ಪಿಐ, ಕೆಎಸ್‌ಆರ್‌ಪಿ 3ನೇ ಪಡೆ

ಟಿ.ಎ. ನಾರಾಯಣ್ ರಾವ್, ವಿಶೇಷ ಎಆರ್‌ಎಸ್‌ಐ, 4ನೇ ಪಡೆ | ಎಸ್.ಎಸ್. ವೆಂಕಟರಮಣ ಗೌಡ, ವಿಶೇಷ ಎಆರ್‌ಎಸ್‌ಐ, 4ನೇ ಪಡೆ | ಎಸ್.ಎಂ. ಪಾಟೀಲ, ವಿಶೇಷ ಎಆರ್‌ಎಸ್‌ಐ, 9ನೇ ಪಡೆ | ಕೆ. ಪ್ರಸನ್ನಕುಮಾರ್, ಹೆಡ್‌ಕಾನ್‌ಸ್ಟೆಬಲ್, ಸಿಐಡಿ | ಎಚ್. ಪ್ರಭಾಕರ್, ಹೆಡ್ ಕಾನ್‌ಸ್ಟೆಬಲ್, ತುಮಕೂರು ಸಂಚಾರ ಪಶ್ಚಿಮ ಠಾಣೆ | ಡಿ. ಸುಧಾ, ಹೆಡ್‌ಕಾನ್‌ಸ್ಟೆಬಲ್, ಎಸ್‌ಸಿಆರ್‌ಬಿ | ಟಿ.ಆರ್. ರವಿಕುಮಾರ್, ಸಿಎಚ್‌ಸಿ, ಬೆಂಗಳೂರು ನಿಯಂತ್ರಣ ಕೊಠಡಿ

ಸ್ಪರ್ಧಾ ವಾಣಿ

ಎಲ್ಐಸಿ 300 ಹುದ್ದೆ 3 ಪರೀಕ್ಷೆ

ಭಾರತೀಯ ಜೀವವಿಮಾ ನಿಗಮದಲ್ಲಿ ಖಾಲಿಯಿರುವ 300 ಸಹಾಯಕ ಆಡಳಿತಾಧಿಕಾರಿ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಪರೀಕ್ಷಾ ವಿಧಾನ, ಸಿಲಬಸ್ ಸೇರಿದಂತೆ ನೇಮಕ ಪ್ರಕ್ರಿಯೆ ಕುರಿತ ಸಂಪೂರ್ಣ ವಿವರ ಇಲ್ಲಿದೆ.

ಮಂಜುನಾಥ್ ಭದ್ರಶೆಟ್ಟಿ

ಸಾರ್ವಜನಿಕ ಸ್ವಾಮ್ಯದ 'ಭಾರತೀಯ ಜೀವ ವಿಮಾ ನಿಗಮ' ಸಂಸ್ಥೆಯಲ್ಲಿ (ಎಲ್ಐಸಿ) ಬ್ಯಾಕ್‌ಲಾಗ್ ಸೇರಿದಂತೆ ದೇಶದಾದ್ಯಂತ ಖಾಲಿಯಿರುವ 300 'ಎಲ್ಐಸಿ ಸಹಾಯಕ ಆಡಳಿತಾಧಿಕಾರಿ (ಎಒಒ-ಜನರಲಿಸ್ಟ್) 31ನೇ ಬ್ಯಾಚ್' ಹುದ್ದೆಗಳ ಭರ್ತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಜನವರಿ 15ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭವಾಗಿದೆ. ಜನವರಿ 31 ಅರ್ಜಿ ಸಲ್ಲಿಕೆಗೆ ಕೊನೆ ದಿನವಾಗಿದೆ. ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ ಪಡೆದ 21 ವರ್ಷದಿಂದ 30 ವರ್ಷ ವಯೋಮಾನದ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು.

ಎಲ್ಐಸಿಯಲ್ಲಿ ಎಒಒ ಒಂದು ಮಹತ್ವದ ಹುದ್ದೆಯಾಗಿದೆ. ಕೇಂದ್ರಿಕೃತ ಮಂಡಳಿಯಿಂದ ಈ ನೇಮಕಾತಿ ನಡೆಯಲಿದ್ದು, ಅಭ್ಯರ್ಥಿಗಳ ಆಯ್ಕೆಗೆ ಮೂರು ಹಂತಗಳಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಆ ಹಂತಗಳು ಯಾವುವು? ಪರೀಕ್ಷೆ ಹೇಗಿರುತ್ತದೆ? ಪಠ್ಯಕ್ರಮ(ಸಿಲಬಸ್) ಹೇಗಿರುತ್ತದೆ? ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

ಹಂತ -1

ಮೊದಲ ಹಂತವು ಪೂರ್ವಭಾವಿ ಪರೀಕ್ಷೆಯನ್ನು ಹೊಂದಿರುತ್ತದೆ. ಕಂಪ್ಯೂಟರ್ ಆಧಾರಿತ ಈ ಪರೀಕ್ಷೆಯಲ್ಲಿ (ಆನ್‌ಲೈನ್ ಎಕ್ಸಾಮ್) 100 ಅಂಕಗಳಿಗೆ 1 ಗಂಟೆಯ ಪರೀಕ್ಷೆ ಇರುತ್ತದೆ. ಇದರಲ್ಲಿ ಮೂರು ಭಾಗಗಳಿದ್ದು ತಾರ್ಕಿಕ ಸಾಮರ್ಥ್ಯಕ್ಕೆ 35 ಪ್ರಶ್ನೆಗಳು 35 ಅಂಕ, ಕ್ವಾಂಟಿಟೇಟಿವ್‌ಗೆ 35 ಪ್ರಶ್ನೆಗಳು-35 ಅಂಕಗಳು, ಇಂಗ್ಲಿಷ್ ಭಾಷೆ ಸಾಮರ್ಥ್ಯಕ್ಕೆ 30 ಪ್ರಶ್ನೆಗಳು 30 ಅಂಕಗಳನ್ನು ನಿಗದಿಪಡಿಸಲಾಗಿದೆ.

ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಮುಖ್ಯ ಪರೀಕ್ಷೆಗೆ ಇಂಗ್ಲಿಷ್ ಭಾಷೆ ಸಾಮರ್ಥ್ಯ ಪತ್ರಿಕೆಯ ಅಂಕಗಳನ್ನು ಪರಿಗಣಿಸಲಾಗುವುದಿಲ್ಲ. ಆದರೆ, ಕನಿಷ್ಠ 10 ಅಂಕಗಳನ್ನು ಪಡೆಯುವುದು ಕಡ್ಡಾಯ. ಉಳಿದ 70 ಅಂಕಗಳನ್ನು ಮಾತ್ರ ಮುಖ್ಯಪರೀಕ್ಷೆಯ ರ‍್ಯಾಂಕಿಂಗ್‌ಗೆ ಪರಿಗಣಿಸಲಾಗುತ್ತದೆ.

ಪೂರ್ವಭಾವಿ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದಲ್ಲಿ 1:20ರ ಅನುಪಾತದಂತೆ ಅಭ್ಯರ್ಥಿಗಳನ್ನು ಮುಖ್ಯಪರೀಕ್ಷೆಗೆ ಆಯ್ಕೆ ಮಾಡಲಾಗುತ್ತದೆ.

ಹಂತ 2

ಎರಡನೇ ಹಂತವು 300 ಅಂಕಗಳಿಗೆ ನಡೆಯುವ ಪರೀಕ್ಷೆಯಾಗಿರುತ್ತದೆ. ಇದು ಕೂಡ ಕಂಪ್ಯೂಟರ್ ಆಧಾರಿತ ಬಹುಆಯ್ಕೆಯ ಮಾದರಿ ಪರೀಕ್ಷೆಯಾಗಿದ್ದು (ಹಿಂದಿ ಅಥವಾ ಇಂಗ್ಲಿಷ್) 2 ಗಂಟೆ ಅವಧಿಯದ್ದಾಗಿರುತ್ತದೆ. ಇದರಲ್ಲಿ 4 ಭಾಗಗಳಿದ್ದು ತಲಾ 30 ಪ್ರಶ್ನೆಗಳಿರುತ್ತವೆ. ಪ್ರತಿ ವಿಭಾಗದಲ್ಲಿ ಕನಿಷ್ಠ ಶೇ 40ರಷ್ಟು ಅಂಕಗಳನ್ನು ಪಡೆಯಬೇಕು.

ಗಮನಿಸಬೇಕಾದ ಅಂಶವೆಂದರೆ ಇದೇ ಹಂತದಲ್ಲಿ ಒಟ್ಟು 25 ಅಂಕಗಳ 2 ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರಿಸಬೇಕಾಗುತ್ತದೆ. ಇದು ಕೂಡ ಕಂಪ್ಯೂಟರ್ ಆಧಾರಿತ ಅರ್ಹತಾ ಪರೀಕ್ಷೆಯಾಗಿದ್ದು ಕನಿಷ್ಠ 10 ಅಂಕಗಳನ್ನು ಪಡೆಯುವುದು ಕಡ್ಡಾಯ.

ಹಂತ 3

ಮುಖ್ಯ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುತ್ತದೆ. ಮುಖ್ಯಪರೀಕ್ಷೆಯಲ್ಲಿ ಜನರಲ್ ಮೆರಿಟ್‌ನವರು ಶೇ 60 ಅಂಕ, ಒಬಿಸಿ ಶೇ 30, ಎಸ್‌ಸಿ/ಎಸ್‌ಟಿ ಶೇ 27 ಅಂಕಗಳನ್ನು ಪಡೆದಿದ್ದರೆ ಮಾತ್ರ ಸಂದರ್ಶನಕ್ಕೆ ಅರ್ಹರು. ಮುಖ್ಯ ಪರೀಕ್ಷೆ ಹಾಗೂ ಸಂದರ್ಶನದ ಅಂಕಗಳ ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳನ್ನು ವೈದ್ಯಕೀಯ ಪರೀಕ್ಷೆಗೆ ಪರಿಗಣಿಸಲಾಗುತ್ತದೆ. ನಂತರ ವೈದ್ಯಕೀಯ ಪರೀಕ್ಷೆಯಲ್ಲಿ ಯಶಸ್ವಿಯಾದವರು ಎಒಒಗಳಾಗಿ ನೇಮಕವಾಗುತ್ತಾರೆ. ಒಂದು ವೇಳೆ ಯಾವುದೇ ಅಭ್ಯರ್ಥಿ ಕನಿಷ್ಠ ಅಂಕಗಳನ್ನು ಪಡೆಯದಿದ್ದರೇ ಈ ನೇಮಕಾತಿಯನ್ನೇ ಸ್ಥಗಿತಗೊಳಿಸಿ ಅಗತ್ಯ ಬಿದ್ದರೆ ಹೊಸದಾಗಿ ನೇಮಕಾತಿ ಪ್ರಕ್ರಿಯೆ ನಡೆಸಲಾಗುತ್ತದೆ. ❖

ಸಿಲಬಸ್ ಹೇಗಿರಲಿದೆ?

ಇದೊಂದು ಪದವಿ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆ. ಅಭ್ಯರ್ಥಿಗಳು, ಗ್ರಹಿಕೆ ಸಾಮರ್ಥ್ಯ, ಸಾಮಾನ್ಯ ಜ್ಞಾನ, ಪ್ರಚಲಿತ ವಿದ್ಯಮಾನ, ದತ್ತಾಂಶ ವಿಶ್ಲೇಷಣೆ ಮತ್ತು ಅಳವಡಿಕೆಗೆ ಸಂಬಂಧಿಸಿದ ಇತ್ತೀಚಿನ ಪಠ್ಯಗಳನ್ನು ಅಭ್ಯಸಿಸಬೇಕಾಗುತ್ತದೆ. ವಿಶೇಷವಾಗಿ ವಿಮಾ ಮತ್ತು ಹಣಕಾಸು ಮಾರುಕಟ್ಟೆಗೆ ಸಂಬಂಧಿಸಿದ ಪಠ್ಯವನ್ನು ಆಳವಾಗಿ ಅಧ್ಯಯನ ಮಾಡಬೇಕು. ಪ್ರಚಲಿತ ವಿದ್ಯಮಾನಗಳು, ಸಾಮಾನ್ಯ ಜ್ಞಾನಕ್ಕಾಗಿ ಅಧ್ಯಯನ ಪರಿಕರಗಳ ಜೊತೆ ಪ್ರತಿದಿನ ದಿನಪತ್ರಿಕೆ ಓದುವುದು ಸೂಕ್ತ. ಅಭ್ಯರ್ಥಿಗಳು ಸುದ್ದಿ ಪತ್ರಿಕೆಗಳ ಜೊತೆ ಹಣಕಾಸು, ವಾಣಿಜ್ಯ ವಿಷಯಕ್ಕೆ ಸಂಬಂಧಿಸಿದ ಪತ್ರಿಕೆಗಳನ್ನು ಪ್ರತಿದಿನ ಓದುವುದು ಉತ್ತಮ. ಸಿಲಬಸ್ ಕುರಿತ ಇನ್ನಷ್ಟು ಮಾಹಿತಿಗಾಗಿ https://www.careerpower.in/lic-aao-syllabus.html ಈ ಲಿಂಕ್‌ಗೆ ಭೇಟಿ ನೀಡಬಹುದು.

ಎಲ್ಐಸಿಯಿಂದ ಉಚಿತ ತರಬೇತಿ

ಎಒಒ ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಎಲ್ಐಸಿ ಸಂಸ್ಥೆ ಉಚಿತವಾಗಿ ತರಬೇತಿ ನೀಡುತ್ತಿದೆ. ಜನವರಿ 31ರ ನಂತರ ಎಲ್ಐಸಿ ವಿಭಾಗೀಯ ಕಚೇರಿಯಲ್ಲಿ ತರಬೇತಿ ಆರಂಭವಾಗಲಿದೆ. ನುರಿತ ಸಂಪನ್ಮೂಲ ವ್ಯಕ್ತಿಗಳು ತರಬೇತಿ ನೀಡಲಿದ್ದಾರೆ. ಆಸಕ್ತ ಅಭ್ಯರ್ಥಿಗಳು ಎಲ್ಐಸಿ ವೆಬ್‌ಸೈಟ್ www.licindia.in ನೇಮಕಾತಿ ವಿಭಾಗದಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಸ್ವಂತ ಖರ್ಚಿನಲ್ಲಿ ತರಬೇತಿಗೆ ಹಾಜರಾಗಬೇಕು.

ಕನ್ನಡದಲ್ಲೂ ಪರೀಕ್ಷೆ ನಡೆಸಲು ಆಗ್ರಹ

ಎಒಒ ಹುದ್ದೆಗಳಿಗೆ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಪರೀಕ್ಷೆ (ಪೂರ್ವಭಾವಿ ಮತ್ತು ಮುಖ್ಯಪರೀಕ್ಷೆ) ನಡೆಸಲಾಗುತ್ತಿದೆ. ಇದರಿಂದ ಕನ್ನಡ ಸೇರಿದಂತೆ ಇತರೆ ಪ್ರಾದೇಶಿಕ ಭಾಷೆಯ ಅಭ್ಯರ್ಥಿಗಳಿಗೆ ಅನ್ಯಾಯವಾಗಲಿದೆ ಎಂಬ ಕೂಗು ಕೇಳಿ ಬಂದಿದ್ದು ಪ್ರಾದೇಶಿಕ ಭಾಷೆಗಳಲ್ಲೂ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಒತ್ತಾಯವೂ ಕೇಳಿಬಂದಿದೆ.

ಸಿಐಎಸ್‌ಎಫ್‌ನಲ್ಲಿ ಉದ್ಯೋಗ

ಕಾನ್‌ಸ್ಟೆಬಲ್ ಡ್ರೈವರ್–ಡಿಸಿಪಿಒ ಕೆಟಗರಿ

ಚಿತ್ರ: CISF Twitter

ಕೇಂದ್ರ ಗೃಹ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯಲ್ಲಿ (CISF) 451 'ಕಾನ್‌ಸ್ಟೆಬಲ್ ಡ್ರೈವರ್'ಮತ್ತು 'ಕಾನ್‌ಸ್ಟೆಬಲ್ ಡಿಸಿಪಿಒ' ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕಾನ್‌ಸ್ಟೆಬಲ್ ಡ್ರೈವರ್ ಕೆಟಗರಿಯಲ್ಲಿ 183 ಹುದ್ದೆಗಳು, ಕಾನ್‌ಸ್ಟೆಬಲ್ ಡಿಸಿಪಿಒ(ಡ್ರೈವರ್ ಫಾರ್ ಫೈರ್ ಸರ್ವೀಸಸ್) ಕೆಟಗರಿಯಲ್ಲಿ 268 ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.

ನೇರ ನೇಮಕಾತಿ ಪ್ರಕ್ರಿಯೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ಆಸಕ್ತರು ₹100 ಶುಲ್ಕ ದೊಂದಿಗೆ ಫೆಬ್ರವರಿ 22ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಕೆ ಮತ್ತು ಹೆಚ್ಚಿನ ಮಾಹಿತಿಗಾಗಿ https://www.cisfrectt.in/ಗೆ ಭೇಟಿ ನೀಡಬಹುದು.

ಶೈಕ್ಷಣಿಕ ಮತ್ತು ಇನ್ನಿತರೆ ಅರ್ಹತೆಗಳು : 10 ನೇ ತರಗತಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಪಡೆದಿರಬೇಕು . ಹೆವಿ ಮೋಟಾರ್ ವೆಹಿಕಲ್ ಅಥವಾ ಟ್ರಾನ್ಸ್‌ಪೋರ್ಟ್ ವೆಹಿಕಲ್ ಚಾಲನಾ ಪರವಾನಗಿ ಪತ್ರ ಪಡೆದಿರಬೇಕು. ಜೊತೆಗೆ, ಲಘು ಮೋಟಾರ್ ವಾಹನ ಚಾಲನೆ ಮತ್ತು ಗೇರ್ ಇರುವ ಮೋಟಾರ್ ಸೈಕಲ್ ಚಾಲನಾ ಪರವಾನಗಿ ಪತ್ರ ಹೊಂದಿರಬೇಕು. ಜೊತೆಗೆ ಮೂರು ವರ್ಷಗಳ ಡ್ರೈವಿಂಗ್ ಅನುಭವವಿರಬೇಕು.

ವಯೋಮಿತಿ: ಕನಿಷ್ಠ 21ವರ್ಷ. ಗರಿಷ್ಠ 27 ವರ್ಷಗಳು. ಎಸ್.ಸಿ, ಎಸ್.ಟಿ ಅಭ್ಯರ್ಥಿಗಳಿಗೆ ಐದು ವರ್ಷಗಳವರೆಗೆ, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷಗಳು ವಯೋಮಿತಿ ಸಡಿಲಿಕೆ ಇದೆ. ಸಿಐಎಸ್‌ಎಫ್ ಸಿಬ್ಬಂದಿ ಸೇರಿದಂತೆ ಸರ್ಕಾರಿ ಉದ್ಯೋಗಿಗಳಾಗಿರುವ ಅಭ್ಯರ್ಥಿಗಳಿಗೆ ಸಾಮಾನ್ಯ ವರ್ಗದವರು ಮತ್ತು ಒಬಿಸಿ ಅಭ್ಯರ್ಥಿಗಳಿಗೆ 40 ವರ್ಷ ಹಾಗೂ ಎಸ್ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 45 ವರ್ಷಗಳವರೆಗೆ ವಯೋಮಿತಿ ನಿಗದಿಪಡಿಸಲಾಗಿದೆ. ಈ ಹುದ್ದೆಗಳಿಗೆ ಪುರುಷರು ಮಾತ್ರ ಅರ್ಜಿ ಸಲ್ಲಿಸಲು ಅವಕಾಶ.

ಆಯ್ಕೆ ಪ್ರಕ್ರಿಯೆ ಹೇಗೆ:

ಮೂರು ಹಂತಗಳಲ್ಲಿ ಆಯ್ಕೆ ಪ್ರಕ್ರಿಯೆ ನಡೆಯುತ್ತದೆ. ಮೊದಲನೆಯ ಹಂತದಲ್ಲಿ ದೇಹದಾರ್ಢ್ಯ ಪರೀಕ್ಷೆ. ಎರಡನೇ ಹಂತ ಲಿಖಿತ ಪರೀಕ್ಷೆ ಮತ್ತು ಮೂರನೆಯ ಹಂತದಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಲಾಗುತ್ತದೆ.

ಮೊದಲು ದೇಹದಾರ್ಢ್ಯ ಪರೀಕ್ಷೆ (ಪಿಇಟಿ ಮತ್ತು ಪಿಎಸ್‌ಟಿ) ನಂತರ, ಒಎಂಆರ್ ಶೀಟ್ ಆಧಾರಿತ / ಕಂಪ್ಯೂಟರ್ ಆಧಾರಿತ ಲಿಖಿತ ಪರೀಕ್ಷೆಗಳು ನಡೆಯಲಿದೆ. ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಮಾತ್ರ ಪರೀಕ್ಷೆ ನಡೆಸಲಾಗುತ್ತದೆ.

ಆಡಳಿತಾತ್ಮಕ ಕಾರಣ ಅಥವಾ ಸಂದರ್ಭಕ್ಕೆ ಅನುಗುಣವಾಗಿ ಮೊದಲ ಎರಡು ಹಂತದ ಪರೀಕ್ಷೆಗಳ ಅನುಕ್ರಮವನ್ನು ಸಿಎಸ್‌ಐಎಫ್ ತನ್ನ ವಿವೇಚನೆಯೊಂದಿಗೆ ಬದಲಾಯಿಸಲು ಅವಕಾಶವಿದೆ. ಒಂದು ಪಕ್ಷ ಮೊದಲ ಹಂತದಲ್ಲಿ ಲಿಖಿತ ಪರೀಕ್ಷೆ ನಡೆಸಿದರೆ, ಈ ಪರೀಕ್ಷೆಯಲ್ಲಿನ ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳನ್ನು ಮುಂದಿನ ಹಂತಕ್ಕೆ ಆಯ್ಕೆ ಮಾಡಬಹುದು. ❖

ಕೆಎಸ್‌ಎಟಿಯಲ್ಲಿ ಶೀಘ್ರಲಿಪಿಗಾರರ ಹುದ್ದೆಗಳು

ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯ ಮಂಡಳಿಯು ಬೆಂಗಳೂರು, ಬೆಳಗಾವಿ ಮತ್ತು ಕಲಬುರ್ಗಿ ಪೀಠಗಳಲ್ಲಿ ಖಾಲಿಯಿರುವ ಏಳು ಶೀಘ್ರಲಿಪಿಗಾರ(ಸ್ಟೆನೊಗ್ರಾಫರ್) ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ.

ಈ ಕುರಿತು ಅಧಿಸೂಚನೆ ಹೊರಡಿಸಿದ್ದು(ದಿನಾಂಕ: ಜ 6, 2023), ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಈಗಾಗಲೇ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಜನವರಿ 31 ಅರ್ಜಿ ಸಲ್ಲಿಕೆಗೆ ಕೊನೆ ದಿನವಾಗಿದೆ. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಶೈಕ್ಷಣಿಕ ವಿದ್ಯಾರ್ಹತೆ:

ಎಸ್ಸೆಸ್ಸೆಲ್ಸಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯವರು ನಡೆಸುವ ಕನ್ನಡ ಮತ್ತು ಆಂಗ್ಲಭಾಷಾ ಬೆರಳಚ್ಚು ಪರೀಕ್ಷೆ ಪ್ರೌಢದರ್ಜೆ(ಸೀನಿಯರ್ ಗ್ರೇಡ್) ಹಾಗೂ ಇಂಗ್ಲಿಷ್ ಮತ್ತು ಕನ್ನಡ ಭಾಷೆಯ ಶೀಘ್ರಲಿಪಿ ಪ್ರೌಢದರ್ಜೆ(ಸೀನಿಯರ್ ಗ್ರೇಡ್) ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು.

ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಅಧಿಕೃತ ಜಾಲತಾಣ www. Ksat.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕು(ಉಳಿದ ಮೂಲ ವೃಂದಕ್ಕೆ ನಿಗದಿಪಡಿಸಿರುವ ಅರ್ಜಿಯನ್ನು ಮಾತ್ರ ಡೌನ್‌ಲೋಡ್ ಮಾಡಿಕೊಳ್ಳಬೇಕು).

ಭರ್ತಿ ಮಾಡಿದ ಅರ್ಜಿಯೊಂದಿಗೆ ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕು. ಮಂಡಳಿಯು ನಿಗದಿಪಡಿಸಿರುವ ನಮೂನೆಯಲ್ಲಿಯೇ ಅರ್ಜಿ ಸಲ್ಲಿಸಬೇಕು. ಇತರೆ ಯಾವುದೇ ನಮೂನೆಯಲ್ಲಾಗಲಿ ಅಥವಾ ಬೆರಳಚ್ಚು/ಝೆರಾಕ್ಸ್ ಪ್ರತಿಯಲ್ಲಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ.

ಭರ್ತಿ ಮಾಡಿದ ಅರ್ಜಿಗಳನ್ನು ವಿಲೇಖನಾಧಿಕಾರಿಗಳು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, 7ನೇ ಮಹಡಿ, ಕೆಂಪೇಗೌಡ ರಸ್ತೆ, ಬೆಂಗಳೂರು – 560009 ಇಲ್ಲಿಗೆ ಸಲ್ಲಿಸಬೇಕು.

ಅರ್ಜಿ ಶುಲ್ಕ: ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ ₹150. ಎಸ್‌ಸಿ, ಎಸ್‌ಟಿ, ಪ್ರವರ್ಗ–1 ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಿಂದ ವಿನಾಯಿತಿ ನೀಡಿದೆ. ಅರ್ಜಿ ಶುಲ್ಕವನ್ನು ರಿಜಿಸ್ಟ್ರಾರ್, ಕೆಎಸ್‌ಎಟಿ, 7ನೇ ಮಹಡಿ, ಕಂದಾಯಭವನ, ಕೆ.ಜಿ.ರಸ್ತೆ ಬೆಂಗಳೂರು ಇವರ ಹೆಸರಿನಲ್ಲಿ ಡಿಡಿ/ ಐಪಿಒ ಮೂಲಕ ಸಲ್ಲಿಸಬೇಕು.

ವಯೋಮಿತಿ: ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಗರಿಷ್ಠ 35 ವರ್ಷಗಳು. ಎಸ್.ಸಿ, ಎಸ್‌ಟಿ , ಪ್ರವರ್ಗ –1 ರ ಅಭ್ಯರ್ಥಿಗಳಿಗೆ 40 ವರ್ಷಗಳು, 2ಎ, 2ಬಿ,3ಎ,3ಬಿ ಅಭ್ಯರ್ಥಿಗಳಿಗೆ 38 ವರ್ಷಗಳನ್ನು ನಿಗದಿಪಡಿಸಲಾಗಿದೆ.

ವೇತನ ಶ್ರೇಣಿ: ಮಾಸಿಕ ₹30350 ರಿಂದ ₹58,250

ಹೆಚ್ಚಿನ ಮಾಹಿತಿಗೆ www.ksat.karnataka.gov.in ಜಾಲತಾಣಕ್ಕೆ ಭೇಟಿ ನೀಡಬಹುದು ❖

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

www.exammastermind.com

ಸ್ಪರ್ಧಾತ್ಮಕ ಪರೀಕ್ಷೆಗಾಗಿ

ದೇಶ, ವಿದೇಶದ ವಿದ್ಯಮಾನಗಳು, ಪ್ರಚಲಿತ ವಿಷಯಗಳು, ಪ್ರಬಂಧಗಳು, ಸಾಮಾನ್ಯ ಜ್ಞಾನದ ಮಾದರಿ ಪ್ರಶ್ನೋತ್ತರಗಳು ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರಿತ ನಿಖರ ಹಾಗೂ ವಿಸ್ತೃತ ಮಾಹಿತಿಗಾಗಿ 'ಪ್ರಜಾವಾಣಿ–ಡೆಕ್ಕನ್‌ಹೆರಾಲ್ಡ್'ನ 'ಮಾಸ್ಟರ್ ಮೈಂಡ್'ಗೆ ಚಂದಾದಾರರಾಗಿ. ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರಗಳು

ಸಮಾಜ ವಿಜ್ಞಾನ

ಎಸ್ಸೆಸ್ಸೆಲ್ಸಿ

26) ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು ಸ್ಪಷ್ಟೀಕರಿಸಿ

ಉತ್ತರ:- ಬಕ್ಸಾರ್ ಕದನದ ಪರಿಣಾಮ ಬಿಹಾರ, ಒಡಿಶಾ ಮತ್ತು ಬಂಗಾಳ ಪ್ರಾಂತ್ಯಗಳು ಇಂಗ್ಲಿಷರ ವಶವಾದವು ಮೊಘಲ್ ಚಕ್ರವರ್ತಿ ಷಾ ಅಲಂ ದಿವಾನಿ ಹಕ್ಕನ್ನು ಇಂಗ್ಲಿಷರಿಗೆ ನೀಡಿದನು.

1765ರಲ್ಲಿ ಕಂಪನಿ ಗವರ್ನರ್ ಆಗಿ ನೇಮಕಗೊಂಡಿದ್ದ ರಾಬರ್ಟ್ ಕ್ಲೈವನು ದ್ವಿ- ಸರ್ಕಾರವನ್ನು ಜಾರಿಗೆ ತಂದನು. ಇದರ ಪ್ರಕಾರ ಇಂಗ್ಲಿಷರು ದಿವಾನಿ ಹಕ್ಕಿನಿಂದಾಗಿ ಭೂ ಕಂದಾಯವನ್ನು ವಸೂಲಿ ಮಾಡಿಕೊಂಡು ತಮ್ಮ ಸಂಪತ್ತನ್ನು ವೃದ್ಧಿಸಿಕೊಂಡರು. ಈ ರೀತಿ ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು

27) ಈ ಚಿತ್ರದಲ್ಲಿ ಇರುವವರು ಯಾರು? ಇವರು ಬರೆದಿರುವ ಕೃತಿಯೊಂದನ್ನು ಹೆಸರಿಸಿ



ಉತ್ತರ:- ಬಾಲಗಂಗಾಧರ ತಿಲಕ ಇವರು ಬರೆದಿರುವ ಕೃತಿ:- ಗೀತಾ ರಹಸ್ಯ

28) ಮಳೆ ಕೊಯ್ಲು ಅಥವಾ ಮಳೆ ನೀರು ಸಂಗ್ರಹಣೆ ಎಷ್ಟು ವಿಧಗಳು ಇವೆ? ಅವು ಯಾವುವು ಉದಾಹರಣೆಯೊಂದಿಗೆ ವಿವರಿಸಿ.

ಉತ್ತರ:- ಮಳೆಕೊಯ್ಲು ಅಥವಾ ಮಳೆ ನೀರು ಸಂಗ್ರಹಣೆ ಇದರಲ್ಲಿ ಎರಡು ವಿಧಗಳಿವೆ.

(1) ಮಳೆ ಬಿದ್ದ ಸ್ಥಳದಲ್ಲಿಯೇ ನೀರನ್ನು ಸಂಗ್ರಹಿಸುವುದು. ಉದಾ : ಮನೆಯ ಮೇಲ್ಛಾವಣಿಯಿಂದ.

(2) ಮಳೆ ಬಿದ್ದ ನಂತರ ಹರಿಯುವ ನೀರನ್ನು ಸಂಗ್ರಹಿಸುವುದು. ಉದಾ : ಒಡ್ಡು ಕಟ್ಟಿ ನೀರನ್ನು ಸಂಗ್ರಹಿಸುವುದು. ಮನೆಯ ಚಾವಣಿಯ ಮೇಲೆ ಬಿದ್ದು ಹರಿಯುವ ನೀರನ್ನು ಸಂಗ್ರಹಿಸಿ ದಿನ ನಿತ್ಯದ ಬಳಕೆಗೆ ಬಳಸುವುದು. ಇದರಿಂದ ಸಾರ್ವಜನಿಕ ನೀರು ಪೂರೈಕೆಯ ಮೇಲಿನ ಅವಲಂಬನೆ ಕಡಿಮೆ ಮಾಡುವದು. ವ್ಯವಸಾಯ ಕ್ಷೇತ್ರಗಳಲ್ಲಿ ಹೊಂಡಗಳನ್ನು ತೋಡಿ ನೀರನ್ನು ಸಂಗ್ರಹಿಸುವುದು. ಇತ್ಯಾದಿ

29) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಕುರಿತು ಬರೆಯಿರಿ

ಉತ್ತರ:- 1848ರಲ್ಲಿ ಭಾರತಕ್ಕೆ ಗವರ್ನರ್ ಜನರಲ್ ಆಗಿ ಬಂದ ಡಾಲ್‌ಹೌಸಿಯು ಭಾರತದ ಎಲ್ಲ ದೇಶೀಯ ಸಂಸ್ಥಾನಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸುವ ಪ್ರಯತ್ನವನ್ನು ನಡೆಸಿದ. ಡಾಲ್‌ಹೌಸಿಯು ತನ್ನ ವಿಸ್ತರಣಾ ನೀತಿಯನ್ನು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯ ಮೂಲಕ ಸಾಧಿಸಿದನು. ಈ ನೀತಿಯ ಪ್ರಕಾರ: 'ಯಾವನೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ'. ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲಾಗುತ್ತಿತ್ತು. ಈ ನೀತಿಗೆ ಒಳಪಟ್ಟ ರಾಜ್ಯಗಳಲ್ಲಿ ಸತಾರ, ಜೈಪುರ್, ಸಂಬಲ್‌ಪುರ್, ಉದಯಪುರ್, ಝಾನ್ಸಿ, ನಾಗಪುರ ಮೊದಲಾದವುಗಳು ಪ್ರಮುಖವಾದವುಗಳಾಗಿವೆ. ಈ ರಾಜ್ಯಗಳ ರಾಜರಿಗೆ ಮಕ್ಕಳಿಲ್ಲದಿರುವುದನ್ನು ಮೊದಲೇ ಅರಿತಿದ್ದ ಬ್ರಿಟಿಷ್ ಗವರ್ನರ್ ಜನರಲ್‌ನು ಈ ನೀತಿಯನ್ನು ರಾಜಕೀಯ ಅಸ್ತ್ರವಾಗಿ ಜಾರಿಗೊಳಿಸಿದನು. ಡಾಲ್‌ಹೌಸಿಯ ತಡೆಯಿಲ್ಲದ ರಾಜ್ಯಾಕ್ರಮಣದ ನಡೆಯಿಂದ ಭಾರತೀಯ ರಾಜರು ಮಾತ್ರವಲ್ಲ, ಅವರ ಬಗೆಗೆ ಸಹಾನುಭೂತಿಯುಳ್ಳ ಸಾಮಾನ್ಯ ಜನವರ್ಗವು ಕೂಡ ಬ್ರಿಟಿಷ್‌ರ ವಿರುದ್ಧ ನಿಂತಿತು.

30) ಯಾವ ಕಾರಣಕ್ಕಾಗಿ ಭಾರತದೊಡನೆ ವ್ಯಾಪಾರವಹಿವಾಟು ನಡೆಸಲು ಯೂರೋಪಿಯನ್ನರಿಗೆ ಹೊಸ ಜಲಮಾರ್ಗ ಕಂಡುಹಿಡಿಯಬೇಕಾಯಿತು? ಹಾಗೂ ಯಾವುದು ಇವರ ನೆರವಿಗೆ ಬಂದವು?

ಉತ್ತರ:- ಭಾರತ (ಏಷ್ಯಾ) ಮತ್ತು ಯುರೋಪ್ ನಡುವಿನ ವ್ಯಾಪಾರ ಮತ್ತು ವ್ಯವಹಾರಗಳು ಕಾನ್‌ಸ್ಟಾಂಟಿನೋಪಲ್ ನಗರದ ಮೂಲಕ ನಡೆಯುತ್ತಿತ್ತು. 1453ರಲ್ಲಿ ಆಟೋಮಾನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು. ಇದರಿಂದಾಗಿ ಆ ನಗರವನ್ನು ಸಂಧಿಸುವ ಎಲ್ಲಾ ವ್ಯಾಪಾರ ಮಾರ್ಗಗಳು ಟರ್ಕರ ನಿಯಂತ್ರಣಕ್ಕೆ ಹೋದವು. ಹೊಸದಾಗಿ ಸಿಕ್ಕ ಅವಕಾಶದಿಂದ ಟರ್ಕರು ಈ ಮಾರ್ಗದ ವ್ಯಾಪಾರದ ಮೇಲೆ ತೀವ್ರತರದ ತೆರಿಗೆಗಳನ್ನು ವಿಧಿಸತೊಡಗಿದರು. ಪರಿಣಾಮವಾಗಿ ವರ್ತಕರಿಗೆ ಈ ಮಾರ್ಗದ ವ್ಯಾಪಾರವು ಲಾಭದಾಯಕವಾಗಿ ಪರಿಣಮಿಸಲಿಲ್ಲ. ಇದೇ ವೇಳೆ ಇಟಲಿಯ ವರ್ತಕರ ಏಕಸ್ವಾಮ್ಯವನ್ನು ಮುರಿಯಲು ಸ್ಪೇನ್, ಪೋರ್ಚುಗಲ್ ಮೊದಲಾದ ಯುರೋಪಿನ ದೇಶಗಳ ರಾಜರು ಹೊಸ ಸಮುದ್ರ ಮಾರ್ಗಗಳನ್ನುಹುಡುಕಲು ಸಾಹಸಿ ನಾವಿಕರನ್ನು ಪ್ರೋತ್ಸಾಹಿಸಲಾರಂಭಿಸಿದರು. ಇದಕ್ಕೆಪೂರಕವಾಗಿ ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ಆಸ್ಟ್ರೋಲೋಬ್ (ನಕ್ಷತ್ರ ಉನ್ನತಿಮಾಪನ), ಸಿಡಿಮದ್ದು, ಮೊದಲಾದವುಗಳು ನೆರವಿಗೆ ಬಂದವು.

31) ಯಾಕೆ ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿಪ್ರಾಮುಖ್ಯತೆಯನ್ನು ಪಡೆದಿದೆ ?

ಉತ್ತರ:- ಪರ್ಯಾಯ ಪ್ರಸ್ಥಭೂಮಿ ಆರ್ಥಿಕವಾಗಿ ಪ್ರಾಮುಖ್ಯತೆಯನ್ನು ಪಡೆದಿದೆ. ಏಕೆಂದರೆ ಇಲ್ಲಿ ಅಪಾರವಾದ ಖನಿಜ ಸಂಪನ್ಮೂಲಗಳಿವೆ. ಇಲ್ಲಿನ ನದಿಗಳು ಜಲಪಾತಗಳಿಂದ ಕೂಡಿರುವುದರಿಂದ ಜಲ ವಿದ್ಯುತ್ ಉತ್ಪಾದನೆಗೆ ಅನುಕೂಲವಾಗಿವೆ.

32) ಕರಾವಳಿಯ ಬಗ್ಗೆ ಬರೆಯಿರಿ

ಉತ್ತರ:- ಭಾರತದ ಕರಾವಳಿಯನ್ನು'ಪಶ್ಚಿಮ ಕರಾವಳಿ' ಮತ್ತು 'ಪೂರ್ವಕರಾವಳಿ' ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಪಶ್ಚಿಮ ಕರಾವಳಿಯು ಅರಬ್ಬೀ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಗುಜರಾತಿನ ಕಛ್‌ನಿಂದ ಕನ್ಯಾಕುಮಾರಿ ಭೂಶಿರದವರೆಗೆ 1500 ಕಿ.ಮೀ.ಗಳಷ್ಟು ಉದ್ದವಾಗಿದೆ. ಇದನ್ನು ಕೇರಳದಲ್ಲಿ ಮಲಬಾರ್ ತೀರ,ಕರ್ನಾಟಕದಲ್ಲಿ ಕರ್ನಾಟಕ ಅಥವಾ ಕೆನರಾ ತೀರ, ಗೋವಾ ಮತ್ತು ಮಹಾರಾಷ್ಟ್ರದಲ್ಲಿ ಕೊಂಕಣ ತೀರ ಮತ್ತು ಗುಜರಾತಿನಲ್ಲಿ ಗುಜರಾತ್ ತೀರ ಎಂದು ವಿಂಗಡಿಸಲಾಗಿದೆ. ಮುಂಬೈ, ಮರ್ಮಗೋವಾ, ಕೊಚ್ಚಿನ್,ಕಾಂಡ್ಲಾ, ಕಾರವಾರ, ಮಂಗಳೂರು ಇಲ್ಲಿನ ಮುಖ್ಯ ಬಂದರುಗಳಾಗಿವೆ. ಕನ್ಯಾಕುಮಾರಿಯಿಂದ ಉತ್ತರದಲ್ಲಿ ಗಂಗಾನದಿ ಮುಖಜ ಭೂಮಿಯವರೆಗೆ ಪೂರ್ವ ಘಟ್ಟಗಳು ಹಬ್ಬಿವೆ. ಪೂರ್ವ ಘಟ್ಟ ಹಾಗೂ ಬಂಗಾಳಕೊಲ್ಲಿಯ ನಡುವೆ ಪೂರ್ವ ಕರಾವಳಿ ಮೈದಾನವಿದೆ. ಈ ಕರಾವಳಿಯ ಮೈದಾನವು ಹೆಚ್ಚು ಅಗಲ ಮತ್ತು ಒಂದೇ ರೀತಿ ಸಮತಟ್ಟಾಗಿದೆ. ಇದು ಮಹಾನದಿ, ಗೋದಾವರಿ, ಕೃಷ್ಣಾ ಮತ್ತು ಕಾವೇರಿ ನದಿಗಳ ಮುಖಜ ಭೂಮಿಗಳನ್ನು ಒಳಗೊಂಡಿದೆ. ಪೂರ್ವ ತೀರದಲ್ಲಿ ಸಮುದ್ರದ ಉಪ್ಪು ನೀರಿನಿಂದ ನಿರ್ಮಿತವಾದ ಕೆಲವು ಸರೋವರ ಅಥವಾ ಲಗೂನ್‌ಗಳಿವೆ. ಇವುಗಳಲ್ಲಿ ಒಡಿಸ್ಸಾದ ಚಿಲ್ಕಾ, ತಮಿಳುನಾಡಿನ 'ಪುಲಿಕಾಟ್' ಸರೋವರಗಳು ಮುಖ್ಯವಾಗಿವೆ. ಪೂರ್ವ ಕರಾವಳಿಯನ್ನು ಉತ್ಕಲ ತೀರ ಮತ್ತು ಕೋರಮಂಡಲ ತೀರ ಎಂದು ವಿಂಗಡಿಸಲಾಗಿದೆ.

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿಯ ವಿಜ್ಞಾನ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ರಸಾಯನ ವಿಜ್ಞಾನ

ಪಿಯುಸಿ

1) ಕಾರ್ಬಾಕ್ಸಿಲಿಕ್ ಆಮ್ಲಗಳ ಆಮ್ಲೀಯತೆಯ ಮೇಲೆ ಆದೇಶಿತಗಳ ಪರಿಣಾಮದ ಬಗ್ಗೆ ಬರೆಯಿರಿ

ಉತ್ತರ : ಆದೇಶಿತಗಳು ಸಂಯುಗ್ಮಿ ಪ್ರತ್ಯಾಮ್ಲದ ಸ್ಥಿರತೆಯ ಮೇಲೆ ಪರಿಣಾಮ ಉಂಟುಮಾಡುವ ಸಾಧ್ಯತೆ ಇರುವ ಕಾರಣ ಕಾರ್ಬಾಕ್ಸಿಲಿಕ್ ಆಮ್ಲಗಳ ಆಮ್ಲೀಯತೆಯ ಮೇಲೂ ಸಹ ಪರಿಣಾಮ ಬೀರುತ್ತವೆ. ಎಲೆಕ್ಟ್ರಾನ್ ಸೆಳೆಯಬಲ್ಲ ಗುಂಪುಗಳು ಪ್ರೇರಣಾತ್ಮಕ ಮತ್ತು ಅನುರಣನ ಪರಿಣಾಮದಿಂದ ಋಣ ವಿದ್ಯುದಾವೇಶವನ್ನು ವಿಸ್ಥಾನಗೊಳಿಸುವುದರ ಮೂಲಕ ಸಂಯುಗ್ಮ ಪ್ರತ್ಯಾಮ್ಲವನ್ನು ಸ್ಥಿರಗೊಳಿಸಿ ಕಾರ್ಬಾಕ್ಸಿಲಿಕ್ ಆಮ್ಲಗಳ ಆಮ್ಲೀಯತೆಯನ್ನು ಹೆಚ್ಚಿಸುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ, ಎಲೆಕ್ಟ್ರಾನ್ ದಾನಿ ಗುಂಪುಗಳು ಸಂಯುಗ್ಮ ಪ್ರತ್ಯಾಮ್ಲವನ್ನು ಅಸ್ಥಿರಗೊಳಿಸುವುದರಿಂದ ಆಮ್ಲೀಯತೆಯನ್ನು ಕುಗ್ಗಿಸುತ್ತವೆ.

ಕಾರ್ಬಾಕ್ಸಿಲಿಕ್ ಆಮ್ಲಕ್ಕೆ ಫೀನೈಲ್ ಅಥವಾ ವಿನೈಲ್‌ನಂತಹ ಗುಂಪುಗಳ ನೇರ ಜೋಡಣೆಯು, ಕೆಳಗೆ ತೋರಿಸಿರುವ ಅನುರಣನ ಪರಿಣಾಮದಿಂದಾಗುವ ನಿರೀಕ್ಷಿತ ಇಳಿಕೆಗೆ ವ್ಯತಿರಿಕ್ತವಾಗಿ, ಅನುಗುಣವಾದ ಕಾರ್ಬಾಕ್ಸಿಲಿಕ್ ಆಮ್ಲದ ಆಮ್ಲೀಯತೆಯನ್ನು ಹೆಚ್ಚಿಸುತ್ತವೆ.



ಕಾರ್ಬಾಕ್ಸಿಲ್ ಕಾರ್ಬನ್‌ಗೆ ಜೋಡಣೆಯಾದ sp2 ಕಾರ್ಬನ್ನಿನ ಅಧಿಕ ವಿದ್ಯುದೃಣೀಯತೆಯೇ ಇದಕ್ಕೆ ಕಾರಣವಾಗಿದೆ. ಆರೊಮ್ಯಾಟಿಕ್ ಕಾರ್ಬಾಕ್ಸಿಲಿಕ್ ಆಮ್ಲದ ಫೀನೈಲ್‌ನ ಮೇಲೆ ಎಲೆಕ್ಟ್ರಾನ್ ಸೆಳೆಯುವ ಗುಂಪಿನ ಉಪಸ್ಥಿತಿಯು ಅವುಗಳ ಆಮ್ಲೀಯತೆಯನ್ನು ಹೆಚ್ಚಿಸುತ್ತವೆ ಆದರೆ ಎಲೆಕ್ಟ್ರಾನ್ ದಾನಿ ಗುಂಪುಗಳು ಅವುಗಳ ಆಮ್ಲೀಯತೆಯನ್ನು ಕುಗ್ಗಿಸುತ್ತವೆ.



4–ಮಿಥಾಕ್ಸಿ ಬೆಂಜೋಯಿಕ್ ಆಮ್ಲ	ಬೆಂಜೋಯಿಕ್ ಆಮ್ಲ	4–ನೈಟ್ರೋಬೆಂಜೋಯಿಕ್ ಆಮ್ಲ
($pK_a = 4.46$)	($pK_a = 4.19$)	($pK_a = 3.41$)

2) ಕಾರ್ಬಾಕ್ಸಿ ಆಮ್ಲಗಳ ಉಪಯೋಗವನ್ನು ಬರೆಯಿರಿ

ಉತ್ತರ:- ಮಿಥೆನೋಯಿಕ್ ಆಮ್ಲವನ್ನು ರಬ್ಬರ್, ಜವಳಿ, ವರ್ಣ ದ್ರವ್ಯ, ಚರ್ಮ ಮತ್ತು ವಿದ್ಯುತ್‌ಲೇಪನ ಉದ್ಯಮಗಳಲ್ಲಿ ಬಳಸುವರು. ಇಥೆನೋಯಿಕ್ ಆಮ್ಲವನ್ನು ದ್ರಾವಕವಾಗಿ ಮತ್ತು ಆಹಾರದ ಉದ್ಯಮದಲ್ಲಿ ವಿನೆಗರ್ ಬಳಸುವರು. ಹೆಕ್ಸೇನ್‌ಡೈಒಯಿಕ್ ಆಮ್ಲವನ್ನು ನೈಲಾನ್-6, ಉತ್ಪಾದನೆಯಲ್ಲಿ ಬಳಸುತ್ತಾರೆ. ಬೆಂಜೋಯಿಕ್ ಆಮ್ಲದ ಎಸ್ಟರ್‌ಗಳನ್ನು ಸುಗಂಧದ್ರವ್ಯಗಳಲ್ಲಿ ಉಪಯೋಗಿಸುತ್ತಾರೆ. ಸೋಡಿಯಂ ಬೆಂಜೋಯೇಟ್ ಅನ್ನು ಆಹಾರ ಸಂರಕ್ಷಕವಾಗಿ ಉಪಯೋಗಿಸುತ್ತಾರೆ. ಉನ್ನತ ಕೊಬ್ಬಿನಾಮ್ಲಗಳನ್ನು ಸಾಬೂನು ಮತ್ತು ಮಾರ್ಜಕಗಳ ಉತ್ಪಾದನೆಯಲ್ಲಿ ಬಳಸುತ್ತಾರೆ.

3) ಆಲ್ಡಿಹೈಡು, ಆರೊಮ್ಯಾಟಿಕ್ ಆಲ್ಡಿಹೈಡು, ಕೀಟೋನ್‌ಗಳ ತಯಾರಿಕೆಯ ಬಗ್ಗೆ ಬರೆಯಿರಿ

ಉತ್ತರ:- ಆಲ್ಡಿಹೈಡುಗಳನ್ನು ಪ್ರಾಥಮಿಕ ಆಲ್ಕೊಹಾಲ್‌ಗಳ ವಿಹೈಡ್ರೋಜನೀಕರಣ ಅಥವಾ ನಿಯಂತ್ರಿತ ಉತ್ಕರ್ಷಣೆಯಿಂದ ಮತ್ತು ಅಸೈಲ್ ಹ್ಯಾಲೈಡುಗಳ ನಿಯಂತ್ರಿತ ಅಥವಾ ಆಯ್ದ ಅಪಕರ್ಷಣೆಯಿಂದ ತಯಾರಿಸಲಾಗುತ್ತದೆ.

ಆರೊಮ್ಯಾಟಿಕ್ ಆಲ್ಡಿಹೈಡುಗಳನ್ನು (i) ಕ್ರೋಮೈಲ್ ಕ್ಲೋರೈಡು ಅಥವಾ ಅಸಿಟಿಕ್ ಅನ್‌ಹೈಡ್ರೆಡ್‌ನ ಉಪಸ್ಥಿತಿಯಲ್ಲಿ CrO3 ನೊಂದಿಗೆ ಮೀಥೈಲ್ ಬೆಂಜೀನಿನ ಉತ್ಕರ್ಷಣೆಯಿಂದ (ii) ನಿರ್ಜಲೀಕೃತ ಅಲ್ಯೂಮಿನಿಯಂ ಕ್ಲೋರೈಡ್ ಅಥವಾ ಕ್ಯುಪ್ರಸ್‌ಕ್ಲೋರೈಡ್‌ನ ಉಪಸ್ಥಿತಿಯಲ್ಲಿ ಕಾರ್ಬನ್ ಮೊನಾಕ್ಸೈಡ್ ಮತ್ತು ಹೈಡ್ರೋಕ್ಲೋರಿಕ್ ಆಮ್ಲದೊಂದಿಗೆ ಅರೀನ್‌ಗಳನ್ನು ಫಾರ್ಮೈಲಿಕರಿಸಿ, ಅಥವಾ (iii) ಬೆಂಜಾಲ್ ಕ್ಲೋರೈಡ್‌ನ ಜಲೀಯವಿಭಜನೆಯಿಂದಲೂ ತಯಾರಿಸಬಹುದು.

ಕೀಟೋನ್‌ಗಳನ್ನು ದ್ವಿತೀಯಕ ಆಲ್ಕೊಹಾಲ್‌ಗಳ ಉತ್ಕರ್ಷಣೆಯಿಂದ ಮತ್ತು ಆಲ್ಕೈನುಗಳ ಜಲೀಕರಣದಿಂದ ತಯಾರಿಸುವರು. ಕೀಟೋನ್‌ಗಳನ್ನು, ಡೈಆಲ್ಕೈಲ್ ಕ್ಯಾಡ್ಮಿಯಂನೊಂದಿಗಿನ ಅಸೈಲ್ ಕ್ಲೋರೈಡ್‌ನ ಪ್ರತಿಕ್ರಿಯೆಯಿಂದಲೂ ಸಹ ತಯಾರಿಸುತ್ತಾರೆ. ಅಸೈಲ್ ಕ್ಲೋರೈಡು ಅಥವಾ ಅನ್‌ಹೈಡ್ರೈಡ್‌ಗಳೊಂದಿಗೆ ಆರೊಮ್ಯಾಟಿಕ್ ಹೈಡ್ರೋಕಾರ್ಬನ್‌ಗಳ ಫ್ರಿಡಲ್ ಕ್ರಾಫ್ಟ್ ಅಸೈಲೀಕರಣವು ಆರೊಮ್ಯಾಟಿಕ್ ಕೀಟೋನ್‌ಗಳ ತಯಾರಿಕೆಯ ಒಂದು ಉತ್ತಮ ವಿಧಾನವಾಗಿದೆ. ಆಲ್ಕೀನುಗಳ ಓಜೋನೀಯ ವಿಭಜನೆಯಿಂದ ಆಲ್ಡಿಹೈಡ್ ಮತ್ತು ಕೀಟೋನ್‌ಗಳೆರಡನ್ನೂ ತಯಾರಿಸಬಹುದು.

ನೆನಪಿಡಿ:

- ಆಲ್ಡಿಹೈಡ್‌ಗಳನ್ನು ಸೌಮ್ಯ ಉತ್ಕರ್ಷಣಕಾರಕಗಳಂತಹ ಟಾಲನ್ ಕಾರಕ ಮತ್ತು ಫೆಹ್ಲಿಂಗ್ ಕಾರಕಗಳಿಂದ ಕಾರ್ಬಾಕ್ಸಿಲಿಕ್ ಆಮ್ಲಗಳನ್ನಾಗಿ ಸುಲಭವಾಗಿ ಉತ್ಕರ್ಷಿಸಲಾಗುತ್ತದೆ. ಈ ಉತ್ಕರ್ಷಣಾ ಕ್ರಿಯೆಗಳನ್ನು ಆಲ್ಡಿಹೈಡ್‌ಗಳಿಂದ ಕೀಟೋನ್‌ಗಳನ್ನು ವ್ಯತ್ಯಾಸಿಸಲು ಉಪಯೋಗಿಸುವರು.
- ಕಾರ್ಬಾಕ್ಸಿಲಿಕ್ ಆಮ್ಲಗಳನ್ನು ಪ್ರಾಥಮಿಕ ಆಲ್ಕೊಹಾಲ್‌ಗಳು, ಆಲ್ಡಿಹೈಡ್‌ಗಳು ಮತ್ತು ಆಲ್ಕೀನುಗಳ ಉತ್ಕರ್ಷಣೆಯಿಂದ, ನೈಟ್ರೈಲುಗಳ ಜಲೀಯ ವಿಭಜನೆಯಿಂದ ಮತ್ತು ಕಾರ್ಬನ್ ಡೈಆಕ್ಸೈಡ್‌ನೊಂದಿಗೆ ಗ್ರಿಗ್ನಾರ್ಡ್ ಕಾರಕವನ್ನು ಸಂಸ್ಕರಿಸಿ ತಯಾರಿಸಲಾಗುವುದು.
- ಆರೊಮ್ಯಾಟಿಕ್ ಕಾರ್ಬಾಕ್ಸಿಲಿಕ್ ಆಮ್ಲಗಳನ್ನು ಆಲ್ಕೈಲ್ ಬೆಂಜೀನುಗಳ ಪಾರ್ಶ್ವ ಸರಪಳಿಯ ಉತ್ಕರ್ಷಣೆಯಿಂದಲೂ ಸಹ ತಯಾರಿಸಲಾಗುವುದು.
- ಕಾರ್ಬಾಕ್ಸಿಲಿಕ್ ಆಮ್ಲಗಳು ಆಲ್ಕೊಹಾಲ್ ಮತ್ತು ಬಹುತೇಕ ಸರಳ ಫೀನಾಲ್‌ಗಳಿಗಿಂತ ಗಣನೀಯವಾಗಿ ಹೆಚ್ಚು ಆಮ್ಲೀಯವಾಗಿರುತ್ತವೆ..
- ಮಿಥೆನಾಲ್, ಇಥೆನಾಲ್, ಪ್ರೊಪೆನೋನ್, ಬೆಂಜಾಲ್ಡಿಹೈಡ್, ಫಾರ್ಮಿಕ್ ಆಮ್ಲ, ಅಸಿಟಿಕ್ ಆಮ್ಲ ಮತ್ತು ಬೆಂಜೋಯಿಕ್ ಆಮ್ಲಗಳು ಉದ್ಯಮದಲ್ಲಿ ಅತ್ಯಂತ ಉಪಯುಕ್ತ ಸಂಯುಕ್ತಗಳಾಗಿವೆ.

ಪ್ರಜಾವಾಣಿ ನೋಡಿಯೊ

ಪಿಯುಸಿ ಗಣಿತ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಹಳಿ ದಾಟುವಾಗ ರೈಲು ಡಿಕ್ಕಿ: ಸಾವು

ಪ್ರಜಾವಾಣಿ ವಾರ್ತೆ

ಮಂಡ್ಯ: ನಗರದ ರೈಲು ನಿಲ್ದಾಣದಲ್ಲಿ ಇಳಿದು ಹಳಿ ದಾಟುವಾಗ, ಚಲಿಸುತ್ತಿದ್ದ ರೈಲು ಡಿಕ್ಕಿಯಾಗಿ ಇಬ್ಬರು ಮಹಿಳೆಯರು ಬುಧವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಚಕ್ರಬಾವಿ ಗ್ರಾಮದ ಲಕ್ಷ್ಮಮ್ಮ (49) ಮತ್ತು ಬೆಂಗಳೂರಿನ ಕಾಮಾಕ್ಷಿಪಾಳ್ಯ ಕಾವೇರಿಪುರದ ಸಿ.ಡಿ.ರಮೇಶ್ ಅವರ ಪತ್ನಿ ಶಶಿಕಲಾ (35) ಮೃತಪಟ್ಟವರು.

ಬೆಳಿಗ್ಗೆ 9.10ರ ಸಮಯದಲ್ಲಿ ಬೆಂಗಳೂರಿನಿಂದ ಕಾಚಿಗುಡ ರೈಲಿನಲ್ಲಿ ಬಂದಿಳಿದ ಅವರು ಮೈಸೂರಿನಿಂದ ಬರುತ್ತಿದ್ದ ಮೈಲಾಡುತುರೈ ರೈಲನ್ನು ಗಮನಿಸದೆ ತರಾತುರಿಯಲ್ಲಿ ಹಳಿ ದಾಟಲು ಹೋದಾಗ ಅವಘಡ ನಡೆದಿದೆ.

ಲಕ್ಷ್ಮಮ್ಮ ಅವರು ಬಸರಾಳು ಸಮೀಪದ ಜವನೇಗೌಡನಕೊಪ್ಪಲು ಗ್ರಾಮದಲ್ಲಿ ತಿಥಿ ಕಾರ್ಯಕ್ರಮಕ್ಕೆ ಬಂದಿದ್ದರು, ಶಶಿಕಲಾ ಅವರು ಗಿರವಿ ಇಟ್ಟಿದ್ದ ಒಡವೆಗಳನ್ನು ನವೀಕರಣ ಮಾಡಿಸಲು ಬಂದಿದ್ದರು ಎಂದು ರೈಲ್ವೆ ಪೊಲೀಸರು ಮಾಹಿತಿ ನೀಡಿದರು.

ಈ ಸಂಬಂಧ ರೈಲ್ವೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಿತ್ತೂರು ಸಂಸ್ಥಾನ ಕಾಲದ ಸನ್ನಿವೇಶಗಳ ಮರುಸೃಷ್ಟಿ, ನೈಜತೆಯೇ ಮೈದಳೆದ ನೋಟ

ರಾಯಣ್ಣನ 'ಶೌರ್ಯವನ' ಸಿದ್ಧ

• ಇಮಾಮ್‌ಹುಸೇನ್ ಗೂಡುನವರ

ಸಂಗೊಳ್ಳಿ (ಬೆಳಗಾವಿ ಜಿಲ್ಲೆ): ಖಡ್ಗ ಹಿಡಿದು ಪರಾಕ್ರಮ ತೋರುವ ಸಂಗೊಳ್ಳಿ ರಾಯಣ್ಣ, ಸಿಂಹಾಸನದ ಮೇಲೆ ಕುಳಿತು ನಾಡಮಕ್ಕಳಿಗೆ ಧೈರ್ಯ ಹೇಳುವ ರಾಣಿ ಚನ್ನಮ್ಮ, ಬ್ರಿಟಿಷ್ ಸೈನ್ಯದೊಂದಿಗೆ ರಣಾಂಗಣದಲ್ಲಿ ರಕ್ತ ಹರಿಸಿದ ಹೋರಾಟ ಕಲಿಗಳು, ಕ್ರಾಂತಿವೀರನನ್ನು ಗಲ್ಲಿಗೇರಿಸಿದ ಗಾಂಭೀರ್ಯದ ನೋಟ...

ಒಂದೇ, ಎರಡೇ! ಸಂಗೊಳ್ಳಿ ರಾಯಣ್ಣನ ಜೀವನ ಚರಿತ್ರೆ ಬಿಂಬಿಸುವ 1,800ಕ್ಕೂ ಅಧಿಕ ಕಲಾಕೃತಿಗಳು ಇಲ್ಲಿವೆ.

ಇದರ ಹೆಸರು ಶೌರ್ಯವನ. ರಾಯಣ್ಣನ ಜನ್ಮಸ್ಥಳ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿಯಲ್ಲಿ ಇದನ್ನು ನಿರ್ಮಿಸಲಾಗಿದೆ. 10 ಎಕರೆ ವಿಸ್ತಾರದಲ್ಲಿ ಕಿತ್ತೂರು ಸಂಸ್ಥಾನದ 64 ವಿವಿಧ ಸನ್ನಿವೇಶಗಳನ್ನು ಇಲ್ಲಿ ಸೃಷ್ಟಿಸಲಾಗಿದೆ. ಸಿಮೆಂಟ್, ಕಬ್ಬಿಣ ಹಾಗೂ ಕೆಂಪು ಇಟ್ಟಿಗೆಯಿಂದ ಸಿದ್ಧಪಡಿಸಿದ ಇಲ್ಲಿನ ಪ್ರತಿಯೊಂದು ಕಲಾಕೃತಿ ನೈಜತೆಯಿಂದ ಕೂಡಿವೆ.

ಹಾವೇರಿ ಜಿಲ್ಲೆಯ ಗೋಟಗೋಡಿಯ ಶಿಲ್ಪಕಲಾ ಕುಟೀರದ 150 ಕಲಾವಿದರು ಎರಡು ವರ್ಷಗಳಿಂದ ಶೌರ್ಯವನ ನಿರ್ಮಿಸುತ್ತಿದ್ದಾರೆ. ಕೋಟೆ, ಅರಮನೆ, ರಣರಂಗ, ಕುಸ್ತಿ ಅಖಾಡ, ಗರಡಿಮನೆ, ರಾಯಣ್ಣನ ಮನೆ, ಅವನ ತಾಯಿ–ತಂಗಿಯ ಬದುಕು, ರಾಜಾ ಮಲ್ಲಸರ್ಜ, ರಾಣಿ ಚನ್ನಮ್ಮನ ರಾಜವೈಭೋಗ, 192 ವರ್ಷಗಳ ಹಿಂದೆ ಸಂಗೊಳ್ಳಿ ಗ್ರಾಮ ಹಾಗೂ ಕಿತ್ತೂರು ಸಂಸ್ಥಾನ ಹೇಗಿತ್ತು ಎಂಬುದನ್ನು ಮನೋಜ್ಞವಾಗಿ ಸಿದ್ಧಪಡಿಸಲಾಗಿದೆ.

ಏನೇನಿದೆ ಇಲ್ಲಿ: ರಾಯಣ್ಣನ ಅಜ್ಜ ರೋಗಪ್ಪ ಅವರ ಕಾಲದಿಂದ ಆರಂಭವಾಗಿ ರಾಯಣ್ಣ ಹುಟ್ಟು, ಬಾಲ್ಯ, ತಾರುಣ್ಯ, ಹೋರಾಟ, ಗೆರಿಲ್ಲಾ ಕೌಶಲ, ಯುದ್ಧ ತಂತ್ರಗಳು, ಸುರಪುರ ಅರಸರ ಭೇಟಿ, ರಾಯಣ್ಣನ ತಂಗಿ ಮಲ್ಲವ್ವ ಬಲಿದಾನ, ಖಾನಾಪುರ ತಾಲ್ಲೂಕಿನ ನಂದಗಡದಲ್ಲಿ ರಾಯಣ್ಣನ ಗಲ್ಲಿಗೇರಿಸಿದ ಸಂದರ್ಭ ಮತ್ತಿತರ ಮಾಹಿತಿ ಸಾರುವ ಸನ್ನಿವೇಶಗಳು ರೋಮಾಂಚಕವಾಗಿವೆ. ಧಾರವಾಡದ ವಿಶೇಷ ನ್ಯಾಯಾಲಯದಲ್ಲಿ ರಾಯಣ್ಣನ ವಿಚಾರಣೆ ನಡೆಸಿದ ಜೈಲು ನಿರ್ಮಾಣ ಮಾಡಲಾಗುತ್ತಿದೆ. ಇವೆಲ್ಲ ಸನ್ನಿವೇಶಗಳಿಗೆ ಕಾರ್ಮಿಕರು ಅಂತಿಮ ಸ್ಪರ್ಶ ಕೊಡುತ್ತಿದ್ದಾರೆ.

ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿಯಲ್ಲಿ ನಿರ್ಮಿಸಿದ ಶೌರ್ಯವನದಲ್ಲಿ ಕಿತ್ತೂರು ಸಂಸ್ಥಾನ ಹಾಗೂ ಬ್ರಿಟಿಷರ ಮಧ್ಯದ ಯುದ್ಧದ ಸನ್ನಿವೇಶ

ಆಕರ್ಷಕ ಪ್ರವಾಸಿ ತಾಣ

ಸಂಗೊಳ್ಳಿ ರಾಯಣ್ಣನನ್ನು ಬ್ರಿಟಿಷ್ ಸರ್ಕಾರ 1831ರ ಜನವರಿ 26ರಂದು ಗಲ್ಲಿಗೇರಿಸಿತು. ಈ ಘಟನೆಗೆ ಇದೇ ಜನವರಿ 26ಕ್ಕೆ 192 ವರ್ಷ ತುಂಬುತ್ತದೆ. ಸ್ವಾತಂತ್ರ್ಯ ಹೋರಾಟದಲ್ಲಿ ರಾಯಣ್ಣನ ಪಾತ್ರ, ಜನ್ಮಸ್ಥಳಕ್ಕೂ ಇತಿಹಾಸದಲ್ಲಿ ಪ್ರಾಮುಖ್ಯ ನೀಡುವ ಉದ್ದೇಶದಿಂದ ಈ ಶೌರ್ಯವನ ನಿರ್ಮಿಸಲಾಗಿದೆ. ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಇದು ಹೆಚ್ಚು ಆಕರ್ಷಣೀಯ ಆಗಲಿದೆ.

'ಈ ಹಿಂದೆ ನೀಡಿದ್ದ ₹12 ಕೋಟಿ ವೆಚ್ಚದಲ್ಲಿ ಅತ್ಯಂತ ಸುಂದರವಾಗಿ ಶೌರ್ಯವನ ನಿರ್ಮಿಸಿದ್ದೇವೆ. ಶೇ 90 ಕಾಮಗಾರಿ ಮುಗಿದಿದೆ. ಈಗ ಹೆಚ್ಚುವರಿಯಾಗಿ ₹5 ಕೋಟಿ ಅನುದಾನ ಕೇಳಿದ್ದೇವೆ. ಅದು ಬಿಡುಗಡೆ ಹಂತದಲ್ಲಿದೆ. ಸಂಪರ್ಕ ರಸ್ತೆ, ಹೋಟೆಲ್, ಟಿಕೆಟ್ ಕೌಂಟರ್, ಬ್ಯಾರಿಕೇಡ್, ಪ್ರಾಕೃತಿಕ ಸೌಂದರ್ಯ, ಪ್ರಯಾಣಿಕರ ತಂಗುದಾಣ ಮತ್ತಿತರ ಕಾಮಗಾರಿ ಕೈಗೊಳ್ಳಲಾಗುವುದು. ಇನ್ನೆರಡು ತಿಂಗಳಲ್ಲಿ ಲೋಕಾರ್ಪಣೆಗೆ ಸಿದ್ಧವಾಗಲಿದೆ' ಎಂದು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಮಲ್ಲೇಶಪ್ಪ ಹೊರಪೇಟೆ 'ಪ್ರಜಾವಾಣಿ'ಗೆ ತಿಳಿಸಿದರು.

ಸುದ್ದಿ 2 ನಿಮಿಷ

ದಕ್ಷಿಣ ಪೂರ್ವ ವಲಯ ಯುವಜನೋತ್ಸವ ನಾಳೆಯಿಂದ

ಕಲಬುರಗಿ: 'ಭಾರತೀಯ ವಿಶ್ವವಿದ್ಯಾಲಯಗಳ ಸಂಘದ (ಎಐಯು) ಸಹಯೋಗದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಜ್ಞಾನಗಂಗಾ ಆವರಣದಲ್ಲಿ ಜನವರಿ 27ರಿಂದ 31ರವರೆಗೆ 36ನೇ ಅಂತರ್ ವಿಶ್ವವಿದ್ಯಾಲಯ ದಕ್ಷಿಣ ಪೂರ್ವ ವಲಯ ಯುವಜನೋತ್ಸವ ನಡೆಯಲಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ದಯಾನಂದ ಅಗಸರ ತಿಳಿಸಿದರು.

'ಕರ್ನಾಟಕ, ತೆಲಂಗಾಣ ಮತ್ತು ಛತ್ತೀಸಗಢ ರಾಜ್ಯಗಳ 50 ವಿಶ್ವವಿದ್ಯಾಲಯಗಳ 1,200 ವಿದ್ಯಾರ್ಥಿಗಳು 27 ಸ್ಪರ್ಧೆಗಳಲ್ಲಿ ಭಾಗವಹಿಸುವರು. ಐದು ದಿನ ನಡೆಯುವ ಸ್ಪರ್ಧೆಗಳಲ್ಲಿ ಗೆದ್ದ ವಿದ್ಯಾರ್ಥಿಗಳು, ಫೆಬ್ರುವರಿ 24ರಿಂದ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯದಲ್ಲಿ ನಡೆಯುವ ರಾಷ್ಟ್ರೀಯ ಯುವಜನೋತ್ಸವದಲ್ಲಿ ಪಾಲ್ಗೊಳ್ಳಲು ಅರ್ಹತೆ ಪಡೆಯುವರು' ಎಂದು ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಜನವರಿ 27ರ ಮಧ್ಯಾಹ್ನ 2.30ಕ್ಕೆ ಮೆರವಣಿಗೆ ಜರುಗಲಿದೆ. ಸಂಜೆ 4ಕ್ಕೆ ಕರ್ನಾಟಕ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಕೆ. ತುಳಸಿಮಾಲಾ ಅವರು ಯುವಜನೋತ್ಸವ ಉದ್ಘಾಟಿಸುವರು. ಜ. 31ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ನಾಗೇಶ್ ವಿ.ಬೆಟ್ಟಕೋಟೆ, ಸಹ ಸಂಪತ್ ಮೈತ್ರೇಯ, ಎಐಯು ಮಹಾ ಕಾರ್ಯದರ್ಶಿ ಡಾ.ಪಂಕಜ್ ಮಿತ್ತಲ್ ಭಾಗವಹಿಸುವರು' ಎಂದರು.

'ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗಳನ್ನು ಶಾಸಕರು ದತ್ತು ತೆಗೆದುಕೊಳ್ಳಲಿ'

ಕೊಪ್ಪಳ: 'ಸರ್ಕಾರಿ ಶಾಲೆಗಳನ್ನು ಶಾಸಕರು ಹೆಚ್ಚಿನ ಸಂಖ್ಯೆಯಲ್ಲಿ ದತ್ತು ತೆಗೆದುಕೊಳ್ಳಬೇಕು. ಅಧಿಕಾರಿಯೊಬ್ಬರ ಮಾತು ಕೇಳಿಕೊಂಡು ಜನಪರವಲ್ಲದ ಯೋಜನೆಗಳನ್ನು ಜಾರಿಗೆ ತಂದರೆ ಯಾರಿಗೂ ಪ್ರಯೋಜನವಾಗದು' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

'ರಾಜ್ಯದಲ್ಲಿ ಶಿಕ್ಷಕರ ಕೊರತೆ ನೀಗಿಸಿದರೆ ಶಿಕ್ಷಣ ಕ್ಷೇತ್ರ ಸುಧಾರಿಸುತ್ತದೆ. ಒಬ್ಬ ಶಿಕ್ಷಕ ನಿವೃತ್ತರಾದರೆ, ಮರುದಿನ ಇನ್ನೊಬ್ಬ ಶಿಕ್ಷಕನ ನೇಮಕಾತಿ ಆಗಬೇಕು. ಮಕ್ಕಳ ಹಿತದೃಷ್ಟಿಯಿಂದ ಶಿಕ್ಷಕರ ನೇಮಕಾತಿಗೆ ಸರ್ಕಾರ ಚುರುಕಾಗಬೇಕು' ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

'ಸರ್ಕಾರಿ ನೌಕರರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಸರ್ಕಾರಿ ಶಾಲೆಗಳಲ್ಲೇ ಶಿಕ್ಷಣ ಕೊಡಿಸಬೇಕು ಎಂಬ ನಿಯಮವನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಆಗಾಗ್ಗೆ ಶಾಲೆಗಳಿಗೆ ಭೇಟಿ ನೀಡಿ, ಅಲ್ಲಿನ ಪರಿಸ್ಥಿತಿ ಸುಧಾರಣೆಗೆ ಅಗತ್ಯ ಕ್ರಮ ತೆಗೆದುಕೊಳ್ಳಬೇಕು' ಎಂದು ಅವರು ಹೇಳಿದರು.

ಮೂಲಸೌಕರ್ಯವಿಲ್ಲದೇ ಪರದಾಟ

ಅಹೋರಾತ್ರಿ ಪ್ರತಿಭಟನೆ: ಅಂಗನವಾಡಿ ಕಾರ್ಯಕರ್ತೆಯರಿಂದ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಜ.23ರಿಂದ ಅಹೋರಾತ್ರಿ ಪ್ರತಿಭಟನೆ ಆರಂಭಿಸಿದ್ದು, ಬೇಡಿಕೆ ಈಡೇರಿಕೆಗೆ ಸ್ಪಂದಿಸದ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕುತ್ತಿದ್ದಾರೆ. ಉದ್ಯಾನದಲ್ಲಿ ಮಕ್ಕಳ ಸಮೇತ ಮೊಕ್ಕಾಂ ಹೂಡಿರುವ ಮಹಿಳೆಯರು, ಮೂಲಸೌಕರ್ಯಗಳಿಲ್ಲದೇ ಪರದಾಡುತ್ತಿದ್ದಾರೆ.

ರಾಜ್ಯದ ಹಲವು ಜಿಲ್ಲೆಗಳಿಂದ ನಗರಕ್ಕೆ ಬಂದಿರುವ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಉದ್ಯಾನದಲ್ಲೇ ಬಿಸಿಲು–ಚಳಿ ಲೆಕ್ಕಿಸದೇ ಹಗಲು–ರಾತ್ರಿ ಪ್ರತಿಭಟನೆ ನಡೆಸುತ್ತಿದ್ದಾರೆ.

ಪ್ರತಿಭಟನೆ ಆರಂಭವಾಗಿ ಬುಧವಾರಕ್ಕೆ ಮೂರು ದಿನವಾದರೂ ಸರ್ಕಾರದ ಯಾವುದೇ ಅಧಿಕಾರಿಯಾಗಲೀ ಜನಪ್ರತಿನಿಧಿಗಳಾಗಲೀ ಸ್ಥಳಕ್ಕೆ ಭೇಟಿ ನೀಡದಿದ್ದರಿಂದ ಪ್ರತಿಭಟನಕಾರರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

'ಅಂಗನವಾಡಿ ಕಾರ್ಯಕರ್ತೆಯರನ್ನು ಸರ್ಕಾರಿ ಶಿಕ್ಷಕಿಯರೆಂದು ಪರಿಗಣಿಸಬೇಕು. ಅನ್ನದ ಕೇಂದ್ರಗಳಾಗಿರುವ ಅಂಗನವಾಡಿಗಳನ್ನು ಅಕ್ಷರ ಕೇಂದ್ರಗಳಾಗಿ ಮಾರ್ಪಡಿಸಬೇಕು. ಗ್ರ್ಯಾಚ್ಯುಟಿ ಪಾವತಿಸಬೇಕು ಎನ್ನುವುದೂ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ ಆರಂಭಿಸಲಾಗಿದೆ' ಎಂದು ಸಿಐಟಿಯು (ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್) ಅಧೀನದ ರಾಜ್ಯ ಅಂಗನವಾಡಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷೆ ಎಸ್. ವರಲಕ್ಷ್ಮಿ 'ಪ್ರಜಾವಾಣಿ'ಗೆ ತಿಳಿಸಿದರು.

'ರಾಜ್ಯದ ಮಕ್ಕಳ ಅಭಿವೃದ್ಧಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಪಾತ್ರ ಪ್ರಮುಖವಾಗಿದೆ. ಆದರೆ, ಸರ್ಕಾರ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿದೆ. ಕೆಲಸಕ್ಕೆ ಗೈರಾಗಿ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತಿದ್ದರೂ ಸರ್ಕಾರ ಮೌನವಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದ ಹಲವು ಜಿಲ್ಲೆಗಳ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಬೆಂಗಳೂರು ಸ್ವಾತಂತ್ರ್ಯ ಉದ್ಯಾನದಲ್ಲಿ ಹಗಲು–ರಾತ್ರಿ ಪ್ರತಿಭಟನೆ ಆರಂಭಿಸಿದ್ದಾರೆ – ಪ್ರಜಾವಾಣಿ ಚಿತ್ರ

ಉದ್ಯಾನ ಬಳಿಯ ಬಿಬಿಎಂಪಿ ಶೌಚಾಲಯಗಳನ್ನು ಉಚಿತವಾಗಿ ಬಳಸಲು, ಉದ್ಯಾನ ಎದುರಿನ ರಸ್ತೆಯಲ್ಲಿ ಪೆಂಡಾಲ್ ಹಾಕಲು ಅನುಕೂಲ ಕಲ್ಪಿಸಬೇಕು

ಎಸ್. ವರಲಕ್ಷ್ಮಿ

'ಬೇಡಿಕೆ ಈಡೇರಿಕೆಗಾಗಿ ಹಲವು ವರ್ಷಗಳಿಂದ ಪ್ರತಿಭಟನೆ ನಡೆಸಲಾಗುತ್ತಿದೆ. ಸುಳ್ಳು ಭರವಸೆ ನೀಡುವ ಸರ್ಕಾರ, ಕೊಟ್ಟ ಮಾತು ತಪ್ಪುತ್ತಿದೆ. ಈ ಬಾರಿ ಬೇಡಿಕೆ ಈಡೇರಿಸುವ ಬಗ್ಗೆ ಲಿಖಿತ ಭರವಸೆ ಸಿಗುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ' ಎಂದು ಹೇಳಿದರು.

ಶೌಚಾಲಯಗಳ ಕೊರತೆ, ಶುಲ್ಕವೂ ಏರಿಕೆ: ಉದ್ಯಾನದಲ್ಲಿ ಒಂದೇ ಶೌಚಾಲಯವಿದೆ. ನಿತ್ಯವೂ ಎರಡು ಸಾವಿರಕ್ಕೂ ಹೆಚ್ಚು ಮಹಿಳೆಯರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳುತ್ತಿದ್ದು, ನಿತ್ಯಕರ್ಮಗಳಿಗಾಗಿ ಅವರೆಲ್ಲ ಪರದಾಡುವ ಸ್ಥಿತಿ ಇದೆ.

ಉದ್ಯಾನ ಸಮೀಪದಲ್ಲಿ ಬಿಬಿಎಂಪಿ ಶೌಚಾಲಯವಿದ್ದು, ಬಹುತೇಕ ಮಹಿಳೆಯರು ಅದನ್ನೇ ಬಳಸುತ್ತಿದ್ದಾರೆ. ₹ 5 ನಿಗದಿಪಡಿಸಲಾಗಿದ್ದ ಬಳಕೆದಾರರ ಶುಲ್ಕವನ್ನು ದಿಢೀರ್ ₹ 10 ಮಾಡಲಾಗಿದೆ.

'ಮೊದಲ ದಿನದಿಂದಲೇ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದೇನೆ. ಶೌಚಾಲಯಕ್ಕೆ ಹೋಗಬೇಕಾದರೆ ಗಂಟೆಗಟ್ಟಲೇ ಕಾಯಬೇಕು. ಕುಡಿಯುವ ನೀರಿಗೂ ಅಲೆದಾಡಬೇಕು. ಆರೋಗ್ಯವೂ ಹಾಳಾಗುತ್ತಿದೆ' ಎಂದು ಪ್ರತಿಭಟನಾನಿರತ ಮಹಿಳೆ ಸುಮಂಗಲಾ ಅಳಲು ತೋಡಿಕೊಂಡರು.

'ಬಿಬಿಎಂಪಿ ಶೌಚಾಲಯದಲ್ಲಿ ಒಂದು ಬಾರಿ ಬಳಕೆಗೆ ₹10 ತೆಗೆದುಕೊಳ್ಳುತ್ತಿದ್ದಾರೆ. ಒಂದು ದಿನ ಹಲವು ಬಾರಿ ಶೌಚಾಲಯ ಬಳಸಿದರೆ, ಹೆಚ್ಚಿನ ಹಣ ಪಾವತಿಸಬೇಕಾದ ಸ್ಥಿತಿ ಇದೆ' ಎಂದು ಹೇಳಿದರು.

ಎಲ್ಲಾ ಅಂಗನವಾಡಿ ಸಂಘಟನೆಗಳ ಬೇಡಿಕೆ ಈಡೇರಿಕೆ ಕಷ್ಟ: ಆಚಾರ

ಕೊಪ್ಪಳ: 'ಅಂಗನವಾಡಿ ಕಾರ್ಯಕರ್ತೆಯರದ್ದೇ ಆರು–ಏಳು ಸಂಘಟನೆಗಳಿವೆ. ಅವರದ್ದೇ ತಂಡಗಳಿವೆ. ಪದೇ ಪದೇ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸುತ್ತಲೇ ಇದ್ದರೆ, ಸದಾ ಅವರ ಬಳಿಯೇ ಇರಲು ಆಗುವುದೇ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವ ಹಾಲಪ್ಪ ಆಚಾರ್ ಪ್ರಶ್ನಿಸಿದರು.

'ಒಂದು ಸಂಘಟನೆಯು ಈ ಹಿಂದೆ ಪ್ರತಿಭಟಿಸಿದಾಗ, ಬೇಡಿಕೆಗಳ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸುವುದಾಗಿ ತಿಳಿಸಿದ್ದೆ. ಅಷ್ಟರಲ್ಲಿ ಮತ್ತೊಂದು ಸಂಘಟನೆ ಪ್ರತಿಭಟನೆ ಆರಂಭಿಸಿತು. ಸಚಿವನಾಗಿ ಹಣಕಾಸಿನ ಎಲ್ಲಾ ಬೇಡಿಕೆಗಳನ್ನು ನಾನೊಬ್ಬನೇ ಈಡೇರಿಸಲು ಆಗದು. ಇದನ್ನು ಬಜೆಟ್‌ಗೂ ಮುನ್ನ ಸಿ.ಎಂ ಜೊತೆ ಚರ್ಚಿಸುವೆ' ಎಂದು ಬುಧವಾರ ಸುದ್ದಿಗಾರರಿಗೆ ತಿಳಿಸಿದರು. 'ಬೆಂಗಳೂರಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ನಮ್ಮ ಇಲಾಖೆ ಅಧಿಕಾರಿಗಳು ಭೇಟಿ ನೀಡಿದ್ದಾರೆ. ಸರ್ಕಾರ ಅವರ ಸಮಸ್ಯೆಗಳಿಗೆ ಸ್ಪಂದಿಸಲಿದೆ' ಎಂದರು.

ಎಲೆಚುಕ್ಕಿ ರೋಗ: ರೈತ ಆತ್ಮಹತ್ಯೆ

ಬಾಳೆಹೊನ್ನೂರು: ಎಲೆಚುಕ್ಕಿ, ಹಳದಿ ಎಲೆರೋಗದಿಂದಾಗಿ ಅಡಿಕೆ ಬೆಳೆ ನಾಶವಾಗಿದ್ದರಿಂದ ದಯಂಬಳ್ಳಿ ಗ್ರಾಮದ ಕಕ್ಕದ್ದೆ ಹೊಸನೆಲದ ರೈತ ರವೀಂದ್ರ (74) ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಇವರಿಗೆ ಇಬ್ಬರು ಗಂಡು ಮಕ್ಕಳು ಇದ್ದಾರೆ. 'ಇವರಿಗೆ ಐದು ಎಕರೆ ಜಮೀನು ಇದೆ. ಫಸಲು ನಾಶವಾಗದಂತೆ ನಾಲ್ಕು ಭಾರಿ ಔಷಧಿ ಸಿಂಪಡಿಸಿದ್ದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಇದರ ಜೊತೆಗೆ ಜಯಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ₹ 1.5 ಲಕ್ಷ ಹಾಗೂ ಇತರ ಕೈಸಾಲ ಕೂಡ ಮಾಡಿದ್ದು ಅದನ್ನು ತೀರಿಸಲು ಸಾಧ್ಯವಾಗದೆ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಮೃತರ ಸಹೋದರ ರಾಜಣ್ಣ ದೂರು ನೀಡಿದ್ದಾರೆ.

ಮತದಾರರಿಗೆ ₹ 6 ಸಾವಿರ ಆಮಿಷ: ಕಾಂಗ್ರೆಸ್‌ನಿಂದ ತನಿಖೆಗೆ ಒತ್ತಾಯ

ರಮೇಶ ಜಾರಕಿಹೊಳಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪ್ರತಿ ಮತದಾರರಿಗೆ ₹ 6 ಸಾವಿರ ನೀಡಿ ಮತ ಕೇಳಲಾಗುವುದು. ಎದುರಾಳಿ ಅಭ್ಯರ್ಥಿ ಎಷ್ಟೇ ಖರ್ಚು ಮಾಡಿದರೂ ಅದಕ್ಕಿಂತ ₹ 10 ಕೋಟಿ ಹೆಚ್ಚಿನ ಹಣ ಖರ್ಚು ಮಾಡಲು ನಾವು ಸಿದ್ಧರಿದ್ದೇವೆ' ಎಂಬ ಹೇಳಿಕೆ ನೀಡಿರುವ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದ ನಿಯೋಗ ಹೈಗ್ರೌಂಡ್ ಪೊಲೀಸ್ ಠಾಣೆಯಲ್ಲಿ ಬುಧವಾರ ದೂರು ದಾಖಲಿಸಿದೆ.

'ಬಹಿರಂಗ ಆಮಿಷ ಒಡ್ಡಿ ರಾಜ್ಯದ 5 ಕೋಟಿ ಮತದಾರರನ್ನು ₹ 30 ಸಾವಿರ ಕೋಟಿಗೆ ಖರೀದಿಸುವ ಸಂಚು ನಡೆಸಿರುವ ರಮೇಶ ಜಾರಕಿಹೊಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಪ್ರೇರಣೆ ನೀಡಿದ್ದಾರೆ. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ದೂರಿನಲ್ಲಿ ನಿಯೋಗವು ಆಗ್ರಹಿಸಿದೆ.

ಮತದಾರರ ಖರೀದಿಗೆ ಸಂಚು ನಡೆಸಿದ್ದಾರೆ ಎಂದು ಆರೋಪಿಸಿ ಶಾಸಕ ರಮೇಶ ಜಾರಕಿಹೊಳಿ ಮತ್ತು ಬಿಜೆಪಿ ಮುಖಂಡರ ವಿರುದ್ಧ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ನೇತೃತ್ವದ ನಿಯೋಗ ಹೈಗ್ರೌಂಡ್ಸ್ ಪೊಲೀಸ್ ಇನ್‌ಸ್ಪೆಕ್ಟರ್‌ಗೆ ಬುಧವಾರ ದೂರು ನೀಡಿತು. ವಿ.ಎಸ್. ಉಗ್ರಪ್ಪ, ಶ್ರೀನಿವಾಸ ಮಾನೆ, ವಿಜಯ್ ಮುಳುಗುಂದ್ ಇದ್ದರು

ದೂರು ನೀಡಿದ ಬಳಿಕ ಮಾತನಾಡಿದ ಡಿ.ಕೆ. ಶಿವಕುಮಾರ್, 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಿಜೆಪಿ ನಡೆಯನ್ನು ಎಲ್ಲರೂ ಗಮನಿಸುತ್ತಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಗೆಲ್ಲುವುದಿಲ್ಲ, ಆದರೂ ಸರ್ಕಾರ ರಚಿಸುತ್ತೇವೆ ಎಂಬ ಸಂಕಲ್ಪ ಮಾಡಿಕೊಂಡು ಬಿಜೆಪಿ ಶಾಸಕರು ಕೆಲಸ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

'ರಮೇಶ ಜಾರಕಿಹೊಳಿ ಮತದಾರರಿಗೆ ಆಮಿಷ ಒಡ್ಡುತ್ತಿರುವ ದಾಖಲೆಗಳ ಸಹಿತ ಐಪಿಸಿ ಸೆಕ್ಷನ್ 171ಬಿ, 506, ಜನಪ್ರತಿನಿಧಿ ಕಾಯ್ದೆ 123 ಪ್ರಕಾರ ನಾವು ದೂರು ದಾಖಲಿಸಿದ್ದೇವೆ. ಕೂಡಲೇ ಎಫ್‌ಐಆರ್ ದಾಖಲಿಸಬೇಕು. ರಮೇಶ ಜಾರಕಿಹೊಳಿ ಅವರನ್ನು ಬಂಧಿಸಬೇಕು' ಎಂದು ಆಗ್ರಹಿಸಿದರು.

'ರಾಜ್ಯ ಪ್ರವಾಸದಲ್ಲಿದ್ದ ಕಾರಣ ದೂರು ನೀಡಲು ತಕ್ಷಣಕ್ಕೆ ಸಾಧ್ಯವಾಗಲಿಲ್ಲ. ಅಲ್ಲದೆ, ಬುಧವಾರ ರಾಷ್ಟ್ರೀಯ ಮತದಾರರ ದಿನ. ಈ ಮತದಾನದ ಹಕ್ಕಿಗೆ ಅದರದ್ದೇ ಆದ ಗೌರವ ಇದೆ. ಈ ಪವಿತ್ರವಾದ ಹಕ್ಕು ಉಳಿಸಲು, ಬಿಜೆಪಿಯ ಷಡ್ಯಂತ್ರದ ವಿರುದ್ಧ ಈ ದಿನ ದೂರು ನೀಡಿದ್ದೇವೆ. ಗುರುವಾರ ಪಕ್ಷದ ನಾಯಕರ ಸಭೆ ಇದೆ. ಪ್ರತಿ ಕ್ಷೇತ್ರದಲ್ಲಿ ನಿಗಾ ವಹಿಸಲು ಕಾರ್ಯಕರ್ತರಿಗೆ ತಿಳಿಸಲಾಗುವುದು' ಎಂದು ಹೇಳಿದರು.

ಪ್ರಜಾ ಮತ
ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

ಕಾಂಗ್ರೆಸ್‌ನ 'ಕೈ ಜತೆ ಕೈ ಜೋಡಿಸಿ' ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಹುಲ್ ಗಾಂಧಿ ಕೈಗೊಂಡಿರುವ ಭಾರತ್ ಜೋಡೊ ಯಾತ್ರೆಯ ಸಂದೇಶಗಳಾದ ಭ್ರಾತೃತ್ವ, ಪ್ರೀತಿ, ಶಾಂತಿ ವಿಚಾರಗಳನ್ನು ಜನರಿಗೆ ತಲುಪಿಸಲು ಗುರುವಾರದಿಂದ (ಜ. 26) 'ಕೈ'ಗೆ 'ಕೈ' ಜೋಡಿಸಿ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಮಾರ್ಚ್ 26ರವರೆಗೆ ನಡೆಯಲಿದೆ' ಎಂದು ಎಐಸಿಸಿ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥೆ ಸುಪ್ರಿಯಾ ಶ್ರೀನಾಟೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಮಹಾತ್ಮ ಗಾಂಧಿ ಪುಣ್ಯತಿಥಿಯ ದಿನ (ಜನವರಿ 30) 'ಭಾರತ್ ಜೋಡೊ' ಯಾತ್ರೆ ಮುಕ್ತಾಯಗೊಳ್ಳಲಿದೆ' ಎಂದರು.

'ಯಾತ್ರೆ ಕಾಶ್ಮೀರ ತಲುಪಿದ್ದು, ರಾಹುಲ್ ಗಾಂಧಿ ಇದುವರೆಗೂ ಸುಮಾರು 3,900 ಕಿ.ಮೀ ದೂರ ಅವರು ಹೆಜ್ಜೆ ಹಾಕಿದ್ದಾರೆ' ಎಂದರು.

'ಬಡತನ, ನಿರುದ್ಯೋಗ ವಿಚಾರವಾಗಿ ಮಾತನಾಡಲು ಕೇಂದ್ರದ ಬಿಜೆಪಿ ಸರ್ಕಾರ ತಯಾರಿಲ್ಲ. ಹೀಗಾಗಿ, ಈ ವಿಚಾರಗಳ ಬಗ್ಗೆ ಧ್ವನಿ ಎತ್ತಲು ಕಾಂಗ್ರೆಸ್ ಪಕ್ಷ ಈ ಯಾತ್ರೆ ನಡೆಸಿದೆ. ಆ ಮೂಲಕ, ಸರ್ಕಾರಕ್ಕೆ ದೇಶದ ಸಮಸ್ಯೆಗಳ ಬಗ್ಗೆ ಪ್ರಶ್ನೆ ಎತ್ತಲಾಗಿದೆ' ಎಂದು ಹೇಳಿದರು.

ಪ್ರತಿ ದಿನ 5,000 ಲೀಟರ್ ಹಾಲು ಸಂಗ್ರಹಿಸುವ ಖಾನಟ್ಟಿ ರೈತರು

ಖಾನಟ್ಟಿ: ಕಬ್ಬು ಕೈ ಕಚ್ಚಿತು, ಹಾಲು ಕೈ ಹಿಡಿಯಿತು

• ಬಾಲಶೇಖರ ಬಂದಿ

ಮೂಡಲಗಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಪುಟ್ಟ ಗ್ರಾಮ ಖಾನಟ್ಟಿ ಹೈನುಗಾರಿಕೆ ಮೂಲಕ ಸ್ವಾವಲಂಬನೆ ಸಾಧಿಸಿದೆ. ಹಳ್ಳಿ ಜನರ ಒಗ್ಗಟ್ಟಿನ ಪರಿಣಾಮ ಪ್ರತಿ ದಿನ 5,000 ಲೀಟರ್‌ಗೂ ಹೆಚ್ಚು ಹಾಲು ಸಂಗ್ರಹವಾಗುತ್ತಿದೆ. ಇದು ಇಂದು– ನಿನ್ನೆಯ ಕಥೆಯಲ್ಲ. ಬರೋಬ್ಬರಿ ಮೂರೂವರೆ ದಶಕಗಳಿಂದ ಈ ಊರು ಕ್ಷೀರಮಯವಾಗಿದೆ.

ಖಾನಟ್ಟಿಯ ಒಟ್ಟು ಜನಸಂಖ್ಯೆ 3,200 ಮಾತ್ರ. ಜಾನುವಾರುಗಳ ಸಂಖ್ಯೆ 1,774. ಇಲ್ಲಿ ಸಣ್ಣ ರೈತರೇ ಹೆಚ್ಚು. ಕಬ್ಬು ಬೆಳೆದು ನಷ್ಟ ಅನುಭವಿಸಿದ ರೈತರು ಹೈನುಗಾರಿಕೆಗೆ ವಾಲಿದರು. ಈಗ ಬಹುಪಾಲು ಜನ ಮೇವು ಬೆಳೆಯುತ್ತಿದ್ದಾರೆ. ಕೃಷಿಗಿಂತ ಹೈನೋದ್ಯಮ ಲಾಭದಾಯಕ ಎಂದು ಸಾಬೀತು ಮಾಡಿದ್ದಾರೆ. ಹಾಲು ಉತ್ಪಾದಕರ ಸಹಕಾರ ಸಂಘವೇ ಈ ಊರಿನ ಸ್ವಾವಲಂಬನೆಗೆ ಪ್ರೇರಣೆ.

ಹಾಲಿನ ದರ, ಒಟ್ಟು ಮೊತ್ತ, ಹಾಲಿನ ಜಿಡ್ಡಿನಾಂಶ, ಪೂರೈಕೆದಾರರ ಹೆಸರು, ದಿನಾಂಕದ ವಿವರಗಳೊಂದಿಗೆ ಗಣಕೀಕೃತ ಬಿಲ್ ನೀಡಲಾಗುತ್ತದೆ. 10 ದಿನಗಳಿಗೊಮ್ಮೆ ಸದಸ್ಯರ ಖಾತೆಗೆ ಹಣ ಜಮಾ ಮಾಡಲಾಗುತ್ತದೆ.

ಮೂಡಲಗಿ ತಾಲ್ಲೂಕಿನ ಖಾನಟ್ಟಿಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಹಾಲು ಹಾಕಲು ಸರದಿಯಲ್ಲಿ ನಿಂತ ಜನ

ರಿಯಾಯಿತಿ ದರದಲ್ಲಿ ಪಶು ಆಹಾರ ವಿತರಣೆ, ಉಚಿತ ಪಶು ಚಿಕಿತ್ಸೆ, ಸದಸ್ಯರು ಆಕಸ್ಮಿಕ ನಿಧನರಾದರೆ ರೈತ ಕಲ್ಯಾಣ ನಿಧಿಯಿಂದ ₹20 ಸಾವಿರ ಸಹಾಯ ಧನ, ಜಾನುವಾರು ಸಾವನ್ನಪ್ಪಿದರೆ ರಾಸು ವಿಮೆ ಯೋಜನೆ ಅಡಿ ₹50 ಸಾವಿರದವರೆಗೆ ನೆರವು, ಶೇ 50ರ ರಿಯಾಯಿತಿಯಲ್ಲಿ ಹಾಲು ಕರೆಯುವ ಯಂತ್ರ, ಮೇವು ಕತ್ತರಿಸುವ ಯಂತ್ರ, ಪಶು ನೆಲ ಹಾಸು ವಿತರಣೆ ಮಾಡಲಾಗುತ್ತದೆ. ರಾಸುಗಳಿಗೆ ಉಚಿತ ಗರ್ಭಧಾರಣೆ ವ್ಯವಸ್ಥೆ ಹಾಗೂ ಹಾಲು ಉತ್ಪಾದಕರಿಗೆ ಮುಂಗಡವಾಗಿ ಹಣ ನೀಡುವ ವ್ಯವಸ್ಥೆಯೂ ಇಲ್ಲಿದೆ.

'ಗ್ರಾಮದಲ್ಲಿ ಹೈನೋದ್ಯಮ ಬೆಳೆಯಲು ಕೆಎಂಎಫ್ ಅಧ್ಯಕ್ಷ, ಶಾಸಕ ಬಾಲಚಂದ್ರ ಜಾರಕಿಹೊಳಿ, ಕೆಎಂಎಫ್ ಜಿಲ್ಲಾ ಘಟಕದ ಅಧ್ಯಕ್ಷ ವಿವೇಕರಾವ ಪಾಟೀಲ ಅವರ ಪ್ರೋತ್ಸಾಹ ದೊಡ್ಡದು' ಎಂದು ಸಂಘದ ಅಧ್ಯಕ್ಷ ಮಹಾದೇವ ಬಡಿಗೇರ ಹೇಳುತ್ತಾರೆ.

ಮಾದರಿ ಸಂಘ: 1985ರಲ್ಲಿ 14 ಸದಸ್ಯರೊಂದಿಗೆ ಪ್ರಾರಂಭಗೊಂಡ ಖಾನಟ್ಟಿ ಸಂಘ ಈಗ 500 ಸದಸ್ಯರನ್ನು ಹೊಂದಿದೆ. ಎರಡಂತಸ್ತಿನ ಸ್ವಂತ ಕಟ್ಟಡ, ಗಣೀಕರಣ ಸೌಲಭ್ಯ, ನಿಯಮಿತ ಬಿಲ್ ಪಾವತಿ, ಹೈನೋದ್ಯಮ ತರಬೇತಿಯ ಕಾರಣ ಮಾದರಿಯಾಗಿದೆ. ಸಹಕಾರ ಮಹಾಮಂಡಳದಿಂದ 2022ನೇ ಸಾಲಿನಲ್ಲಿ 'ರಾಜ್ಯದ ಉತ್ತಮ ಸಹಕಾರ ಸಂಘ' ಪ್ರಶಸ್ತಿ ಹಾಗೂ ಕೆಎಂಎಫ್‌ನಿಂದ 'ಸರ್ವೋತ್ತಮ ಸಂಘ' ಪ್ರಶಸ್ತಿ ಪಡೆದಿದೆ.

ಬಾವುರಾವ ಕುಲಕರ್ಣಿ, ಶಿವನಪ್ಪ ರೆಡ್ಡೆರಟ್ಟಿ, ಚಂದಪ್ಪ ಅರಗಿ ಹಾಗೂ ಸಮಾನ ಮನಸ್ಕರು ಸೇರಿ 35 ವರ್ಷಗಳ ಹಿಂದೆ ನೆಟ್ಟ ಸಸಿ ಈಗ ಹೆಮ್ಮರವಾಗಿದೆ ಎನ್ನುತ್ತಾರೆ ಗ್ರಾಮಸ್ಥರು.

ತಿಂಗಳಿಗೆ ₹1.5 ಲಕ್ಷ ಗಳಿಸುವ ರೈತ!

ಖಾನಟ್ಟಿಯ ಯುವ ರೈತ ಹೊನ್ನಪ್ಪ ಬೂದಿಹಾಳ ಪ್ರತಿ ದಿನ 150 ಲೀಟರ್ ಹಾಲು ಹಾಕುತ್ತಾರೆ. ಪ್ರತಿ ತಿಂಗಳು ₹1.50 ಲಕ್ಷ ಆದಾಯ ಪಡೆಯುವ ಮೂಲಕ ಗ್ರಾಮದಲ್ಲಿ 'ನಂಬರ್ ಒನ್' ಹಾಲು ಉತ್ಪಾದಕ ಅನ್ನಿಸಿಕೊಂಡಿದ್ದಾರೆ.

'ನಂಗ ಭೂಮಿ ಕಡಿಮೆ ಐತ್ರಿ. ಹೈನುಗಾರಿಕೆ ನನ್ನ ಕೈ ಹಿಡದೈತಿ. ಮೊದ್ಲ ಅನುಮಾನ ಇತ್ತು. ದನಗೋಳ ಸಾಕುವುದಕ್ಕೆ ಶುರು ಮಾಡಿದ ಮ್ಯಾಲ ಭಾಳ್ ಹುರುಪು ಬಂತು' ಎನ್ನುವುದು ಹೊನ್ನಪ್ಪ ಅನುಭವ.

ರಾಜು ರಡ್ಡೇರಟ್ಟಿ, ಶಿವಲಿಂಗಪ್ಪ ಕಲ್ಲೋಳಿ ಅವರೂ ಪ್ರತಿ ತಿಂಗಳು ₹1 ಲಕ್ಷಕ್ಕೂ ಅಧಿಕ ಹಣ ಪಡೆಯುತ್ತಿದ್ದಾರೆ ಎಂಬುದು ಗಮನಾರ್ಹ.

ಕುಂದಗೋಳದಲ್ಲಿ ಶಾ ರೋಡ್ ಶೋ 28ಕ್ಕೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಜಿಲ್ಲೆಯ ಕುಂದಗೋಳದಲ್ಲಿ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯ ಭಾಗವಾಗಿ ಜ.28ರಂದು ರೋಡ್ ಶೋ ನಡೆಸಲಿದ್ದಾರೆ' ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಟೆಂಗಿನಕಾಯಿ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜ. 27ಕ್ಕೆ ಹುಬ್ಬಳ್ಳಿಗೆ ಬಂದು ವಾಸ್ತವ್ಯ ಹೂಡಲಿರುವ ಶಾ ಅವರು 28ರಂದು ಬೆಳಿಗ್ಗೆ ಕೆಎಲ್‌ಇ ಸಂಸ್ಥೆಯ ಬಿವಿಬಿ ಎಂಜಿನಿಯರಿಂಗ್ ಕಾಲೇಜಿನ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ನಂತರ, ಧಾರವಾಡದಲ್ಲಿ ವಿಧಿವಿಜ್ಞಾನ ಕೇಂದ್ರಕ್ಕೆ ಶಂಕುಸ್ಥಾಪನೆ ನೆರವೇರಿಸುವರು. ಮಧ್ಯಾಹ್ನ 1.30ಕ್ಕೆ ಕುಂದಗೋಳಕ್ಕೆ ಭೇಟಿ ನೀಡುವರು' ಎಂದರು.

'ಪಟ್ಟಣದ ಶಂಭು ಲಿಂಗೇಶ್ವರ ದೇವಸ್ಥಾನಕ್ಕೆ ಪೂಜೆ ಸಲ್ಲಿಸುವ ಶಾ ಅವರು, 1 ಕಿ.ಮೀ ರೋಡ್ ಶೋ ನಡೆಸಲಿದ್ದಾರೆ. ಚುನಾವಣಾ ಪ್ರಚಾರದ ಗೋಡೆ ಬರಹ ಮತ್ತು ಮನೆಮನೆಗೆ ಕರಪತ್ರಗಳನ್ನು ಹಂಚುವ ಕಾರ್ಯಕ್ರಮಗಳಿಗೆ ಚಾಲನೆ ನೀಡಲಿದ್ದಾರೆ. ನಂತರ, ಬೆಳಗಾವಿ ಜಿಲ್ಲೆಯ ಎಂ.ಕೆ. ಹುಬ್ಬಳ್ಳಿಯಲ್ಲಿ ಚನ್ನಮ್ಮನ ಕಿತ್ತೂರು, ಖಾನಾಪುರ, ಬೈಲಹೊಂಗಲದ ಪ್ರಮುಖರ ಸಭೆ ನಡೆಸಿ, ಬೃಹತ್ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

'7ನೇ ವೇತನ ಆಯೋಗ ಜಾರಿಗೆ ಬಜೆಟ್‌ನಲ್ಲಿ ಅನುದಾನ ಮೀಸಲಿಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ಶಿಫಾರಸಿನಂತೆ ಹೆಚ್ಚಿನ ವೇತನ ನೀಡಲು ಬಜೆಟ್‌ನಲ್ಲಿ ಅನುದಾನ ಮೀಸಲಿಡಬೇಕು ಎಂದು ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ ಆಗ್ರಹಿಸಿದೆ.

'ಹೊಸ ಪಿಂಚಣಿ ಯೋಜನೆಯನ್ನು (ಎನ್‌ಪಿಎಸ್) ರದ್ದುಗೊಳಿಸಿ, ನಿಶ್ಚಿತ ಹಳೆ ಪಿಂಚಣಿ ಯೋಜನೆಯನ್ನು (ಒಪಿಎಸ್) ಕೂಡಲೇ ಜಾರಿಗೊಳಿಸಬೇಕು ಎನ್ನುವುದೂ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಫೆ.7ರಂದು ವಿಧಾನಸೌಧ ಚಲೊ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ಒಕ್ಕೂಟದ ಅಧ್ಯಕ್ಷ ಜೈಕುಮಾರ್ ಎಚ್.ಎಸ್. ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಪಕ್ಕದ ರಾಜ್ಯಗಳ ಹಾಗೂ ಹೈಕೋರ್ಟ್‌ನ ನೌಕರರ ವೇತನಕ್ಕೂ ರಾಜ್ಯದ ನೌಕರರ ವೇತನಕ್ಕೂ ಕನಿಷ್ಠ 40ರಷ್ಟು ವ್ಯತ್ಯಾಸವಿದೆ. ಕೇಂದ್ರ ಸರ್ಕಾರಿ ನೌಕರರ ವೇತನಕ್ಕೆ ಹೋಲಿಸಿದರೂ ಇದೇ ಸ್ಥಿತಿ ಇದೆ. ಇದನ್ನು ಸರಿಪಡಿಸಬೇಕು. ರಾಜ್ಯದಲ್ಲಿ ಖಾಲಿ ಇರುವ 2.80 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಬೇಕು. ಆಡಳಿತ ಸುಧಾರಣೆಯ ನೆಪದಲ್ಲಿ ಶಿಫಾರಸು ಮಾಡಲಾಗಿರುವ ಹುದ್ದೆಗಳ ಕಡಿತ ಮತ್ತು ಸರ್ಕಾರಿ ಸೇವೆಗಳನ್ನು ಖಾಸಗೀಕರಣ ಮಾಡುವುದನ್ನು ನಿಲ್ಲಿಸಬೇಕು. ಸುಪ್ರಿಂ ಕೋರ್ಟ್ ಆದೇಶದಂತೆ ಗುತ್ತಿಗೆ ಆಧಾರಿತ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವುದರ ಜೊತೆಗೆ ನೇರ ನೇಮಕಾತಿಯಲ್ಲಿ ಅವರಿಗೆ ಪ್ರಾತಿನಿಧ್ಯ ನೀಡಬೇಕು' ಎಂದರು.

'ಸರ್ಕಾರ ಕೋವಿಡ್ ಸಮಯದಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದ 18 ತಿಂಗಳ ತುಟ್ಟಿ ಭತ್ಯೆಯನ್ನು ಬಿಡುಗಡೆಗೊಳಿಸಬೇಕು. ಸರ್ಕಾರಿ ಶಾಲೆಗಳನ್ನು ಮುಚ್ಚುವುದು, ಶಿಕ್ಷಣದ ಖಾಸಗೀಕರಣಕ್ಕೆ ಕಡಿವಾಣ ಹಾಕಬೇಕು' ಎಂದರು.

ಜೈಪುರ ಸಾಹಿತ್ಯೋತ್ಸವ ಮುಕ್ತಾಯ • ನಾಲ್ಕೂವರೆ ಲಕ್ಷ ಜನರ ಸಾಕ್ಷಿ

ಸಾಹಿತ್ಯ–ಸಮಕಾಲೀನ ಬೆಸುಗೆಯ ಸಾಹಿತ್ಯೋತ್ಸವ

• ವಿಶಾಖ ಎನ್.

ಜೈಪುರ: ಹದಿನಾರು ವರ್ಷಗಳ ಹಿಂದೆ ಜೈಪುರ ಸಾಹಿತ್ಯೋತ್ಸವ (ಜೆಎಲ್‌ಎಫ್) ಶುರುವಾದದ್ದು. ಮೊದಲ ವರ್ಷ ಪ್ರೇಕ್ಷಕರ ಸಾಲಿನಲ್ಲಿ ಮೂವತ್ತು ಜನರಿದ್ದರು. ಅವರಲ್ಲಿ ಜಪಾನೀಯರೇ ಹೆಚ್ಚು; ಅದೂ ಅವರೆಲ್ಲ ದಾರಿ ತಪ್ಪಿ ಬಂದಿದ್ದರು. ಈಗ ಸುಮಾರು ನಾಲ್ಕೂವರೆ ಲಕ್ಷ ಜನರು ಈ ಸಾಹಿತ್ಯೋತ್ಸವಕ್ಕೆ ಸಾಕ್ಷಿಯಾಗುತ್ತಿದ್ದಾರೆ.

ಸಾಹಿತ್ಯೋತ್ಸವದ ಸಹ ಸ್ಥಾಪಕರಲ್ಲಿ ಒಬ್ಬರಾದ ವಿಲಿಯಂ ಡಾಲ್‌ರಿಂಪಲ್ ಈ ಸಂಗತಿಯನ್ನು ಈ ಸಲ ಉದ್ಘಾಟನಾ ಭಾಷಣದಲ್ಲಿ ಮೊದಲ ದಿನವೇ ಹೇಳಿಕೊಂಡರು. ಕೊನೆಯ ದಿನದಾಂತ್ಯಕ್ಕೆ ಉತ್ಸವದ ಪ್ರೊಡ್ಯೂಸರ್ ಸಂಜಯ್ ರಾಯ್, '2019ರಲ್ಲಿ ಎಷ್ಟು ಪುಸ್ತಕಗಳು ಬಿಕರಿಯಾಗಿದ್ದವೋ ಈ ಸಲವೂ ಅಷ್ಟೇ ಸಂಖ್ಯೆಯ ಕೃತಿಗಳು ಸಾಹಿತ್ಯೋತ್ಸವದಲ್ಲಿ ಮಾರಾಟಗೊಂಡಿವೆ' ಎಂದು ಹೇಳಿದರು.

ಕೋವಿಡ್ ಕಾರಣದಿಂದಾಗಿ ಎರಡು ವರ್ಷ ಜೈಪುರ ಸಾಹಿತ್ಯೋತ್ಸವ ಆನ್‌ಲೈನ್‌ನಲ್ಲಿ ನಡೆದಿತ್ತು. ಈ ಸಲ ಅದೇ ರೀತಿಯಲ್ಲಿ ಸಾಹಿತ್ಯಾಸಕ್ತರು ಬರುವರೋ ಇಲ್ಲವೋ ಎನ್ನುವ ಅನುಮಾನ ಆಯೋಜಕರಲ್ಲಿ ಇತ್ತು. ಅದು ನಿವಾರಣೆಯಾಗುವ ರೀತಿಯಲ್ಲಿ ಜೆಎಲ್‌ಎಫ್ ಯಶಸ್ವಿಯಾಯಿತೆನ್ನುವುದಕ್ಕೆ ಅವರ ಮಾತೇ ಸಾಕ್ಷಿ.

ಉತ್ಸವದ ಗೋಷ್ಠಿಯೊಂದರಲ್ಲಿ ಜಾವೇದ್ ಅಖ್ತರ್, ಶಬಾನಾ ಆಜ್ಮಿ

ಜೈಪುರ ಸಾಹಿತ್ಯೋತ್ಸವದ ಮೊದಲ ದಿನ ನೊಬೆಲ್ ಪ್ರಶಸ್ತಿ ಪುರಸ್ಕೃತ ಸಾಹಿತಿ 'ಅಬ್ದುಲ್‌ರಜಾಕ್ ಗುರ್ನಾ' ಚುಟುಕು ಪ್ರಾಸ್ತಾವಿಕ ಭಾಷಣ ಮಾಡಿದರು. ಲೇಖಕನು ಯಾವುದಕ್ಕೆ ಪ್ರತಿರೋಧ ತೋರಬೇಕು ಎನ್ನುವುದನ್ನು ಅವರು ಹೇಳಿದ್ದು ಮಾರ್ಮಿಕವಾಗಿತ್ತು. ದಾರಿತಪ್ಪಿಸಬಹುದಾದ ಆಮಿಷಗಳಿಗೆ, ಯಾವುದನ್ನೋ ಅಮುಖ್ಯ ಎಂದು ಉದಾಸೀನ ಮಾಡುವುದಕ್ಕೆ ಸಾಹಿತಿಯಲ್ಲಿ ಪ್ರತಿರೋಧ ಇರಬೇಕು ಎಂದು ಅವರು ಸಲಹೆ ನೀಡಿದರು.

ಸಾಹಿತಿ–ರಾಜಕಾರಣಿ ಶಶಿ ತರೂರ್ ಸಾಹಿತ್ಯೋತ್ಸವದಲ್ಲಿ ಜನಪ್ರಿಯ ಭಾಷಣಕಾರ. ಅವರು ಇರುತ್ತಿದ್ದ ಗೋಷ್ಠಿಗಳಿಗೆ ಲಭ್ಯವಿದ್ದ ಆಸನಗಳ ಸಂಖ್ಯೆಯ ಮೂರು ಪಟ್ಟು ಜನರು ಸೇರುತ್ತಿದ್ದರು. ಇನ್ಫೊಸಿಸ್ ಫೌಂಡೇಷನ್‌ನಿಂದಾಗಿ ಗುರುತಾಗಿರುವ ಸಾಹಿತಿ ಸುಧಾ ಮೂರ್ತಿ ಅವರ ಗೋಷ್ಠಿಗಳಿಗೂ ಮುಗಿಬಿದ್ದವರ ಸಂಖ್ಯೆ ಕಡಿಮೆ ಇರಲಿಲ್ಲ.

ಸಂಗೀತ ಕಛೇರಿಗಳ ಮೆರುಗು: ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಹೆಸರು ಮಾಡಿರುವ ಸುಷ್ಮಾ ಸೋಮ, ಪಂಡಿತ್ ರವಿಶಂಕರ್ ಅವರೊಟ್ಟಿಗೆ ಚಿಕ್ಕ ವಯಸ್ಸಿನಲ್ಲೇ ವೇದಿಕೆ ಹಂಚಿಕೊಂಡು ಜನಪ್ರಿಯರಾಗಿರುವ ಆದಿತ್ಯ ಪ್ರಕಾಶ್, ದೆಹಲಿಯ ಸಮಕಾಲೀನ ಸಂಗೀತದ ಬ್ಯಾಂಡ್ 'ದಿ ಅನಿರುದ್ಧ್ ವರ್ಮ ಕಲೆಕ್ಟಿವ್', ದೆಹಲಿಯ ಮತ್ತೊಂದು ಹಿಂದೂಸ್ತಾನಿ ಶಾಸ್ತ್ರೀಯ ಗಾಯಕರ ತಂಡ 'ಪಂಜಿಯಾ' ಹಾಗೂ ಸಿತಾರ್ ವಾದಕ ಸೌರಬ್ರತ ಚಕ್ರವರ್ತಿ ಅವರ ಸಂಗೀತದೊಂದಿಗೆ ಸಾಹಿತ್ಯೋತ್ಸವದ ಪ್ರತಿದಿನದ ಬೆಳಗುಗಳು ಪ್ರಾರಂಭವಾದವು.

ಪಕ್ಷಿ, ಲಿಫಾಫ, ರಿದಮ್ಸ್ ಆಫ್ ಇಂಡಿಯಾ, ಪೀಟರ್ ಕ್ಯಾಟ್ ರೆಕಾರ್ಡಿಂಗ್ ಕಂಪನಿ, ಶ್ಯಾಡೊ ಅಂಡ್ ಲೈಟ್, ಕಬೀರ್ ಕೆಫೆ ಹೆಸರಿನ ತಂಡಗಳು ಪ್ರತಿದಿನ ಸಂಜೆ ಸಂಗೀತೋತ್ಸವ ಪ್ರಸ್ತುತಪಡಿಸಿದವು. ಸಂಗೀತ ಕಾರ್ಯಕ್ರಮಗಳು ಹೆಚ್ಚು ಸಹೃದಯರು ನೆರೆಯುವಂತೆ ಮಾಡಿದವು.

ಬೆಂಗಳೂರಿನ ಉದ್ಯಮಿ ನಂದನ್ ನಿಲೇಕಣಿ ಭಾರತದ ಡಿಜಿಟಲ್ ಜಗತ್ತು ಸದ್ಬಳಕೆಗೆ ಹೇಗೆ ಕಾರಣವಾಗು ತ್ತಿದೆ ಎಂದು ಮಾತನಾಡುತ್ತಲೇ, ವ್ಯಕ್ತಿ ಗಳು ಇಂಟರ್ನೆಟ್ ದಾಸರಾಗುತ್ತಾ ಭಾವನಾತ್ಮಕ ಜಗತ್ತಿನಿಂದ ದೂರವಾಗುತ್ತಿರುವುದಕ್ಕೆ ವಿಷಾದವನ್ನೂ ವ್ಯಕ್ತಪಡಿಸಿದರು. ಮಹಾತ್ಮ ಗಾಂಧಿಯವರ ಸತ್ಯಾಗ್ರಹದಲ್ಲಿ ನಿರತರಾಗಿದ್ದ ತಮ್ಮ ತಾತನಿಂದ ತಾವು ಬಾಲ್ಯದಲ್ಲೇ ಪಡೆದ ಪ್ರೇರಣೆಯನ್ನು ಲೇಖಕಿ ರೋಹಿಣಿ ನಿಲೇಕಣಿ ಹೇಳಿಕೊಂಡರು.

ಭಾನು ಮುಷ್ತಾಕ್ ಅವರ ಆಯ್ದ ಸಣ್ಣಕಥೆಗಳನ್ನು ಇಂಗ್ಲಿಷ್‌ಗೆ ಅನುವಾದಿಸುತ್ತಿರುವ ಕನ್ನಡತಿ ದೀಪಾ ಭಾಸ್ತಿ, ಮೂಲ ಕೃತಿಕಾರರಿಗೆ ಕೊಡುವಷ್ಟೆ ಕಿಮ್ಮತ್ತನ್ನು ಅನುವಾದಕರಿಗೂ ಕೊಡಬೇಕು ಎಂದು ಇತ್ತೀಚೆಗೆ ನಡೆದ ಚಳವಳಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಅನುವಾದದಲ್ಲಿ ಧ್ವನ್ಯಾರ್ಥ ಹಿಡಿಯುವ ಕಷ್ಟಗಳ ಮೇಲೂ ಬೆಳಕು ಚೆಲ್ಲಿದರು.

ಅಂತಿಮ ದಿನ ಬಿಸಿ ಬಿಸಿ ಚರ್ಚೆ: ಸಾಹಿತ್ಯೋತ್ಸವದ ಕೊನೆಯ ದಿನ 'ಎಡ ಮತ್ತು ಬಲದ ನಡುವಿನ ಕಂದಕಕ್ಕೆ ಸೇತುವೆ ಕಟ್ಟಲು ಸಾಧ್ಯವಿಲ್ಲ' ಎಂಬ ವಿಷಯವಾಗಿ ಪರ–ವಿರೋಧದ ಚರ್ಚೆ ನಡೆಯಿತು. ಆಮೇಲೆ ಇದೇ ವಿಷಯವನ್ನು ಜನ ಮತಕ್ಕೂ ಹಾಕಲಾಯಿತು. ವಿಷಯದ ಪರವಾಗಿಯೇ ಹೆಚ್ಚು ಜನರು ಧ್ವನಿಮತ ಹಾಕಿದರು.

ಸಂಸದ ಜವಾಹರ್ ಸರ್ಕಾರ್, ಸಾಹಿತಿ ಪುರುಷೋತ್ತಮ್ ಅಗರ್‌ವಾಲ್ ಹಾಗೂ ಪರಿಸರ ಹೋರಾಟಗಾರ್ತಿ ವಂದನಾ ಶಿವ ವಿಷಯದ ಪರವಾಗಿ ವಾದ ಮಂಡಿಸಿದರು. ಮಕರಂದ್ ಪರಾಂಜಪೆ, ಸಂಸದ ಹಾಗೂ ಲೇಖಕ ಪವನ್ ಕೆ. ವರ್ಮ ಹಾಗೂ ಮಹಾರಾಷ್ಟ್ರದ ರಾಜ್ಯಸಭಾ ಸದಸ್ಯೆ ಪ್ರಿಯಾಂಕಾ ಚತುರ್ವೇದಿ ವಿಷಯದ ವಿರುದ್ಧವಾಗಿ ವಾದ ಮಂಡಿಸಿದರು.

ಸಂವಾದ ನಡೆಯುತ್ತಿದ್ದಾಗ ವಿದೇಶದ ಯುವಕರೊಬ್ಬರು ಪ್ರಶ್ನೆ ಕೇಳಿದರು. ಆಗ, 'ವಿದೇಶದ ಯಾರೋ ಪ್ರಶ್ನೆ ಕೇಳುವ ಮೂಲಕ ನಮ್ಮ ದೇಶದ ಸಮಸ್ಯೆಯನ್ನು ಸರಿಪಡಿಸುವ ಅಗತ್ಯವಿಲ್ಲ' ಎಂದು ಜೆಎನ್‌ಯು ಪ್ರೊಫೆಸರ್ ಹಾಗೂ ಲೇಖಕ ಮಕರಂದ್ ಆರ್. ಪರಾಂಜಪೆ ಹೇಳಿದ್ದಕ್ಕೆ ಪ್ರತಿರೋಧ ವ್ಯಕ್ತವಾಯಿತು. ಕೊನೆಗೆ ಅವರು ಆ ಯುವಕನಲ್ಲಿ ಕ್ಷಮೆ ಯಾಚಿಸಿದರು.

ಸುಮಿತ್ ಸಾಮೊಸ್, ಸೂರಜ್ ಎಂಗಡೆ, ಯೋಗೇಶ್ ಮೈತ್ರೇಯಾ ಅವರನ್ನೊಳಗೊಂಡ, ಪರಿಪೂರ್ಣವಾಗಿ ದಲಿತರ ಮೊದಲ ಗೋಷ್ಠಿಗೂ ಈ ಬಾರಿ ಜೈಪುರ ಸಾಹಿತ್ಯೋತ್ಸವ ಸಾಕ್ಷಿಯಾಯಿತು.

ಕೊನೆಯಲ್ಲಿ ಪ್ರೇಕ್ಷಕರು ಕೇಳುತ್ತಿದ್ದ ಪ್ರಶ್ನೆಗಳಿಂದಲೇ ಕೆಲವು ಗೋಷ್ಠಿಗಳು ಕಳೆಗಟ್ಟಿದವು.

ಜನಪ್ರಿಯರ ನೋಡಲು ನೂಕುನುಗ್ಗಲು

ಗುಲ್ಜಾರ್, ಜಾವೆದ್ ಅಖ್ತರ್, ಶಬಾನಾ ಆಜ್ಮಿ, ಹರಿಪ್ರಸಾದ್ ಚೌರಾಸಿಯಾ ಇವರೆಲ್ಲರಿದ್ದ ಗೋಷ್ಠಿಗಳನ್ನು ನೋಡಲೆಂದೇ ಎಷ್ಟೋ ಅಭಿಮಾನಿಗಳು ಬಂದಿದ್ದರು. ಹಿಂದಿಯ ಹಲವು ಉಪಭಾಷೆಗಳು, ಮಹಿಳೆಯರಿಗೆ ಸಂಬಂಧಿಸಿದ ಗೋಷ್ಠಿಗಳು ಮೆಚ್ಚುಗೆ ಪಡೆದವು.

ಟಾಟಾ ಮೋಟರ್ಸ್ ಲಾಭ ₹ 3,043 ಕೋಟಿ

ನವದೆಹಲಿ (ಪಿಟಿಐ/ರಾಯಿಟರ್ಸ್): ಟಾಟಾ ಮೋಟರ್ಸ್ ಕಂಪನಿಯು 2022ರ ಡಿ. 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ₹ 3,043 ಕೋಟಿ ನಿವ್ವಳ ಲಾಭ ಗಳಿಸಿದೆ. ಮಾರಾಟದಲ್ಲಿ ಹೆಚ್ಚಳ ಆಗಿರುವುದೇ ಲಾಭ ಗಳಿಸಲು ಕಾರಣ ಎಂದು ಕಂಪನಿ ತಿಳಿಸಿದೆ.

ಕಂಪನಿಯು ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 1,451 ಕೋಟಿ ನಿವ್ವಳ ನಷ್ಟ ಕಂಡಿತ್ತು. ಒಟ್ಟು ವರಮಾನವು ₹ 72,229 ಕೋಟಿಯಿಂದ ₹ 88,489 ಕೋಟಿಗೆ ಏರಿಕೆ ಆಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಜಾಗ್ವಾರ್ ಲ್ಯಾಂಡ್ ರೋವರ್ ವರಮಾನ ಶೇ 28ರಷ್ಟು ಹೆಚ್ಚಾಗಿದೆ ಎಂದು ಹೇಳಿದೆ. ಕಂಪನಿಯು 2 ವರ್ಷಗಳ ನಂತರದಲ್ಲಿ ತ್ರೈಮಾಸಿಕದ ಅವಧಿಯೊಂದರಲ್ಲಿ ಲಾಭ ದಾಖಲಿಸಿದೆ.

ದೇಶದಲ್ಲಿ ಅಭಿವೃದ್ಧಿಪಡಿಸಿದ 'ಭಾರ್‌ಒಎಸ್' ಪರೀಕ್ಷೆ

ನವದೆಹಲಿ (ಪಿಟಿಐ): ಐಐಟಿ-ಮದ್ರಾಸ್ ಸ್ಥಳೀಯವಾಗಿ ಅಭಿವೃದ್ಧಿಪಡಿಸಿರುವ 'ಭಾರ್‌ಒಎಸ್' ಹೆಸರಿನ ಮೊಬೈಲ್ ಕಾರ್ಯಾಚರಣಾ ವ್ಯವಸ್ಥೆಯ (ಒಎಸ್) ಪ್ರಾಯೋಗಿಕ ಪರೀಕ್ಷೆಯನ್ನು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಮತ್ತು ಅಶ್ವಿನಿ ವೈಷ್ಣವ್ ನಡೆಸಿದರು.

ದತ್ತಾಂಶ ಗೋಪ್ಯತೆಯ ಕಡೆಗೆ 'ಭಾರ್‌ಒಎಸ್' ಯಶಸ್ವಿ ಹೆಜ್ಜೆಯಾಗಿದೆ. ದೇಶದ ಬಡವರು ಇದರ ಪ್ರಯೋಜನ ಪಡೆದುಕೊಳ್ಳಲಿದ್ದಾರೆ ಎಂದು ಪ್ರಧಾನ್ ತಿಳಿಸಿದ್ದಾರೆ. ಐಐಟಿ–ಮದ್ರಾಸ್‌ನ ನೆರವಿನಿಂದ ಜಂದ್‌ಕೆ ಆಪರೇಷನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಇದನ್ನು ಅಭಿವೃದ್ಧಿಪಡಿಸಿದೆ.

ಮೊದಲಿಗೆ ಈ ಒಎಸ್ ಅನ್ನು, ಖಾಸಗಿತನ, ಸುರಕ್ಷತೆಗೆ ಸಂಬಂಧಿಸಿದಂತೆ ಕಠಿಣ ನಿಯಮ ಹೊಂದಿರುವ ಸಂಘ ಸಂಸ್ಥೆಗಳಲ್ಲಿ ಬಳಕೆಗೆ ನೀಡಲಾಗುವುದು. ಇದರಲ್ಲಿ ಮುಂಚಿತವಾಗಿಯೇ ಇನ್ ಸ್ಟಾಲ್ ಆಗಿರುವ ಯಾವುದೇ ಆ್ಯಪ್ ಇರುವುದಿಲ್ಲ. ಬಳಕೆದಾರರು ತಮಗೆ ಗೊತ್ತಿಲ್ಲದ ಅಥವಾ ತಾವು ನಂಬದೇ ಇರುವ ಯಾವುದೇ ಆ್ಯಪ್ ಬಳಸುವಂತೆ ಇದು ಒತ್ತಾಯಿಸುವುದಿಲ್ಲ. ಬಳಕೆದಾರರು ತಮಗೆ ಅಗತ್ಯ ಇರುವ ಆ್ಯಪ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.

ಟಿವಿಎಸ್ ಲಾಭ ಶೇ 28ರಷ್ಟು ಏರಿಕೆ

ನವದೆಹಲಿ (ಪಿಟಿಐ): ದ್ವಿಚಕ್ರ ಹಾಗೂ ತ್ರಿಚಕ್ರ ವಾಹನ ತಯಾರಿಕಾ ಕಂಪನಿ ಟಿವಿಎಸ್‌ನ ಡಿಸೆಂಬರ್ ತ್ರೈಮಾಸಿಕದ ನಿವ್ವಳ ಲಾಭದ ಪ್ರಮಾಣವು ಶೇಕಡ 28ರಷ್ಟು ಹೆಚ್ಚಾಗಿದ್ದು, ₹ 304 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ನಿವ್ವಳ ಲಾಭವು ₹ 237 ಕೋಟಿ ಆಗಿತ್ತು. ಕಂಪನಿಯ ವರಮಾನವು ಈ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹ 8,075 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಇದು ₹ 6,606 ಕೋಟಿ ಆಗಿತ್ತು.

ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ಒಟ್ಟು 8.36 ಲಕ್ಷ ದ್ವಿಚಕ್ರ ವಾಹನಗಳನ್ನು ಮಾರಾಟ ಮಾಡಿದೆ. ರಫ್ತಾಗಿರುವ ದ್ವಿಚಕ್ರ ವಾಹನಗಳ ಸಂಖ್ಯೆಯು 2.07 ಲಕ್ಷ. ತ್ರಿಚಕ್ರ ವಾಹನಗಳ ಮಾರಾಟವು 43 ಸಾವಿರಕ್ಕೆ ಇಳಿಕೆ ಕಂಡಿದೆ. ಪ್ರತಿ ಷೇರಿಗೆ ₹ 5ರಷ್ಟು ಮಧ್ಯಂತರ ಲಾಭಾಂಶ ನೀಡುವುದಾಗಿ ಕಂಪನಿಯ ಆಡಳಿತ ಮಂಡಳಿಯು ಹೇಳಿದೆ.

'ಹೊರನಾಡ ಕನ್ನಡಿಗರ ಸಮಸ್ಯೆ- ಸಿಎಂಗೆ ಶೀಘ್ರ ವರದಿ'

ಬೆಂಗಳೂರು: 'ಹೊರನಾಡ ಕನ್ನಡಿಗರ ಸಮಸ್ಯೆಗಳನ್ನು ಪರಿಹರಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಶೀಘ್ರದಲ್ಲಿ ಮುಖ್ಯಮಂತ್ರಿಗೆ ವರದಿ ಸಲ್ಲಿಸಲಾಗುವುದು' ಎಂದು ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ ಹೇಳಿದರು.

ಪ್ರಾಧಿಕಾರದ ಕಚೇರಿಯಲ್ಲಿ ಕರ್ನಾಟಕದ ನೆರೆಯ ಆರು ರಾಜ್ಯಗಳ ಕನ್ನಡ ಪರ ಸಂಘಟನೆಗಳ ಪ್ರತಿನಿಧಿಗಳ ಜೊತೆ ಬುಧವಾರ ಸಭೆ ನಡೆಸಿದ ಅವರು, ಹೊರನಾಡು ಕನ್ನಡಿಗರು ಎದುರಿಸುತ್ತಿರುವ ಶೈಕ್ಷಣಿಕ, ಉದ್ಯೋಗ ಸಮಸ್ಯೆಗಳ ಕುರಿತು ಚರ್ಚಿಸಿದರು.

ಸಭೆಯಲ್ಲಿ ಮಹಾರಾಷ್ಟ್ರ, ಗೋವಾ, ಆಂಧ್ರ, ತೆಲಂಗಾಣ, ತಮಿಳುನಾಡು ಮತ್ತು ಕೇರಳದ 50ಕ್ಕೂ ಹೆಚ್ಚು ಪ್ರಮುಖರು, ಹೊರನಾಡಿನ ಕನ್ನಡಿಗರು ಎದುರಿಸುತ್ತಿ ರುವ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದರು. ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಹಾಗೂ ಜತ್ತ ಕನ್ನಡಿಗರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಡಿ. 27ರಂದು ಭೇಟಿಯಾಗಿ ಹೊರನಾಡ ಕನ್ನಡಿಗರ ಸಮಸ್ಯೆಗಳ ಬಗ್ಗೆ ಚರ್ಚಿಸಿದ್ದರು. ಮುಖ್ಯಮಂತ್ರಿ ಸೂಚನೆಯಂತೆ ಸೋಮಶೇಖರ ಅವರು ಸಭೆ ಕರೆದಿದ್ದರು.



ಹಿಮಾವೃತ...

ಶ್ರೀನಗರದ ಹೊರವಲಯದಲ್ಲಿ ಬುಧವಾರ ಸುರಿವ ಹಿಮದಲ್ಲೇ ಕುರಿಗಾಹಿಯೊಬ್ಬರು ಕುರಿಗಳ ಜತೆ ಸಾಗಿದರು –ಪಿಟಿಐ ಚಿತ್ರ

ಹಿಮಾಚಲ ಪ್ರದೇಶ: ಹಿಮಪಾತ 265 ರಸ್ತೆಗಳಲ್ಲಿ ಸಂಚಾರ ನಿರ್ಬಂಧ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ಲಾಹೌಲ್ ಮತ್ತು ಸ್ಪಿತಿ, ಚಂಬಾ, ಕಿನ್ನೌರ್, ಶಿಮ್ಲಾ ಮತ್ತು ಕುಲ್ಲು ಜಿಲ್ಲೆಗಳಲ್ಲಿ ತೀವ್ರ ಹಿಮಪಾತದಿಂದಾಗಿ 265 ರಸ್ತೆಗಳಲ್ಲಿ ಸಂಚಾರವನ್ನು ನಿರ್ಬಂಧಿಸಲಾಗಿದೆ. ಇದೇ ವೇಳೆ ರಾಜ್ಯದ ಕೆಲವೆಡೆ ಬುಧವಾರ ಭಾರಿ ಮಳೆಯೂ ಆಗಿದೆ.

ರಾಜ್ಯದಲ್ಲಿ ಕನಿಷ್ಠ ತಾಪಮಾನ 3ರಿಂದ 5ಕ್ಕೆ ಏರಿಕೆಯಾಗಿದೆ. ಕೀಲಾಂಗ್ ಪ್ರದೇಶದಲ್ಲಿ ರಾತ್ರಿ ಅತ್ಯಂತ ಕಡಿಮೆ ಅಂದರೆ –4.7 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು.

ಲಾಹೌಲ್ ಮತ್ತು ಸ್ಪಿತಿಯಲ್ಲಿ 139 ರಸ್ತೆಗಳು, ಚಂಬಾದಲ್ಲಿ 92, ಶಿಮ್ಲಾ ಮತ್ತು ಕುಲ್ಲುದಲ್ಲಿ ತಲಾ 13, ಮಂಡಿಯಲ್ಲಿ ಮೂರು ಮತ್ತು ಕಂಗ್ರಾ ಜಿಲ್ಲೆಯಲ್ಲಿ ಎರಡು ರಸ್ತೆಗಳಲ್ಲಿ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿದೆ. ಇವುಗಳಲ್ಲಿ ರೋಹ್ಟಾಂಗ್ ಪಾಸ್ ಬಳಿಯ ರಾಷ್ಟ್ರೀಯ ಹೆದ್ದಾರಿ– 3, ಜಲೋರಿ ಪಾಸ್ ಬಳಿಯ ರಾಷ್ಟ್ರೀಯ ಹೆದ್ದಾರಿ– 305 ಮತ್ತು ಗ್ರಾಂಫುನಿಂದ ಲೋಸ್ಸಾರ್ ವರೆಗಿನ ರಾಷ್ಟ್ರೀಯ ಹೆದ್ದಾರಿ– 505 ಸೇರಿವೆ.

ಮಳೆ ವಿವರ: ನಗ್ರೋಟಾ ಸೂರಿಯನ್ ಪ್ರದೇಶದಲ್ಲಿ 90 ಮಿ.ಮೀ ಮಳೆಯಾಗಿದೆ. ಹಾಗೆಯೇ ಚಂಬಾದಲ್ಲಿ 73 ಮಿ.ಮೀ, ಗುಲೇರ್ 69 ಮಿ.ಮೀ, ಧರ್ಮಶಾಲಾ 68 ಮಿ.ಮೀ, ಗುಲ್ಯಾನಿ 60 ಮಿ.ಮೀ, ಉನಾ 50 ಮಿ.ಮೀ, ಪಾಲಂಪುರ್ 40 ಮಿ.ಮೀ ಮತ್ತು ಹಮೀರ್‌ಪುರ 28 ಮಿ.ಮೀ ನಷ್ಟು ಮಳೆ ಸುರಿದಿದೆ ಎಂದು ಸರ್ಕಾರ ಮಾಹಿತಿ ನೀಡಿದೆ.

ಶ್ರೀನಗರ: ವಿಮಾನ ಸಂಚಾರಕ್ಕೆ ತೊಡಕು

ಶ್ರೀನಗರ (ಪಿಟಿಐ): ಕಾಶ್ಮೀರದ ಹೆಚ್ಚಿನ ಪ್ರದೇಶಗಳಲ್ಲಿ ಹಿಮಪಾತ ಸಂಭವಿಸುತ್ತಿರುವ ಕಾರಣ ಇಲ್ಲಿನ ವಾಯು ಸಂಚಾರಕ್ಕೆ ತೊಡಕಾಗಿ ಪರಿಣಮಿಸಿದೆ.

ಕಾಶ್ಮೀರದ ಬಹುತೇಕ ಕಡೆಗಳಲ್ಲಿ ಲಘು ಹಿಮಪಾತ ದಾಖಲಾಗಿದೆ. ಆದರೆ ಇಲ್ಲಿನ ಎತ್ತರದ ಪ್ರದೇಶಗಳಲ್ಲಿ ಭಾರೀ ಹಿಮಪಾತ ಸಂಭವಿಸಿದೆ. ದಿನ ಕಳೆದಂತೆ ಹಿಮಪಾತದ ಪ್ರಮಾಣ ಕಡಿಮೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಹಿಮಪಾತದ ಪರಿಣಾಮ ಶ್ರೀನಗರ ವಿಮಾನ ನಿಲ್ದಾಣದಲ್ಲಿ ಎಲ್ಲಾ ವಿಮಾನಗಳ ಸಂಚಾರ ವಿಳಂಬವಾಗಿದೆ. ವಿಮಾನ ನಿಲ್ದಾಣದಲ್ಲಿ ಹಿಮದ ಶೇಖರಣೆ ಹೆಚ್ಚು ಇಲ್ಲದಿದ್ದರೂ, ಕಡಿಮೆ ಗೋಚರತೆಯು ವಿಮಾನ ಕಾರ್ಯಾಚರಣೆ ಮೇಲೆ ಪರಿಣಾಮ ಬೀರಿದೆ.

ಅಮೆರಿಕ: ಭಾರತ ಮೂಲದ ವ್ಯಕ್ತಿ ಹತ್ಯೆ

ನ್ಯೂಯಾರ್ಕ್ (ಪಿಟಿಐ): 'ಭಾರತ ಮೂಲದ 52 ವರ್ಷದ ಪೀನಲ್ ಪಟೇಲ್ ಎಂಬುವವರನ್ನು ಮೂವರು ಮುಸುಕುಧಾರಿ ವ್ಯಕ್ತಿಗಳು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ಪೀನಲ್ ಅವರ ಪತ್ನಿ ಹಾಗೂ ಮಗಳಿಗೆ ಗಾಯಗಳಾಗಿವೆ' ಎಂದು ಪೊಲೀಸರು ತಿಳಿಸಿದರು. ಅಮೆರಿಕದಲ್ಲಿ ಒಂದೇ ವಾರದ ಒಳಗೆ ಭಾರತೀಯರ ಮೇಲೆ ಇಂಥ ದಾಳಿ ನಡೆಯುತ್ತಿರುವ ಎರಡನೇ ಘಟನೆ ಇದಾಗಿದೆ.

'ಜನವರಿ 20ರಂದು ಜಾರ್ಜಿಯಾದಲ್ಲಿರುವ ಪೀನಲ್ ಅವರ ಮನೆಯ ಮುಂದಿನ ಕಾರು ನಿಲುಗಡೆ ಭಾಗದಲ್ಲಿ ಈ ಘಟನೆ ನಡೆದಿದೆ. ಪೀನಲ್ ಮತ್ತು ಅವರ ಕುಟುಂಬದವರು ಕೆಲಸ ಮುಗಿಸಿ ಮನೆಗೆ ಹಿಂದಿರುಗಿದ್ದಾರೆ. ಮನೆಯ ಮುಂದೆಯೇ ಮೂವರು ವ್ಯಕ್ತಿಗಳು ಗುಂಡಿನ ದಾಳಿ ನಡೆಸಿದ್ದಾರೆ' ಎಂದರು.

'ಪೀನಲ್ ಅವರು ಮೂವರನ್ನು ತಡೆಯಲು ಮುಂದಾದರು, ಈ ವೇಳೆ ಪೀನಲ್ ಅವರ ಕುಟುಂಬಕ್ಕೂ ಗುಂಡು ತಗುಲಿದೆ. ವಿಷಯ ತಿಳಿದು ಪೊಲೀಸರು ಸ್ಥಳಕ್ಕೆ ಬಂದಾಗ, ಪೀನಲ್ ಹಾಗೂ ಅವರ ಪತ್ನಿ ರೂಪಲ್‌ಬೇನ್ ಪಟೇಲ್ ಹಾಗೂ ಮಗಳು ಭಕ್ತಿ ಪಟೇಲ್ ಅವರು ರಕ್ತದ ಮಡುವಿನಲ್ಲಿದ್ದರು' ಎಂದು ಪೊಲೀಸರು ತಿಳಿಸಿದರು.

'ದಾಳಿ ನಡೆಸಿದ ಬಳಿಕ ಮೂವರು ಕಾರಿನಲ್ಲಿ ಪರಾರಿಯಾಗಿದ್ದಾರೆ. ಪಟೇಲ್ ಅವರ ಮನೆಯಿಂದ ಯಾವುದೇ ಕಳವು ಮಾಡಿಲ್ಲ' ಎಂದರು.

'ನೆವರ್ ಗೀವ್ ಆನ್ ಇಂಚ್' ಪುಸ್ತಕದಲ್ಲಿ ಸಂಘರ್ಷ ಉಲ್ಬಣ ಪ್ರಸ್ತಾಪ

ಭಾರತ– ಪಾಕ್ ಮಧ್ಯೆ ಅಣ್ವಸ್ತ್ರ ಯುದ್ಧ ತಪ್ಪಿಸಿದ್ದು ಅಮೆರಿಕ: ಪಾಂಪಿಯೊ

ವಾಷಿಂಗ್ಟನ್ (ಎಎಫ್‌ಪಿ): 'ಭಾರತ ಮತ್ತು ಪಾಕಿಸ್ತಾನ 2019ರ ಫೆಬ್ರುವರಿಯಲ್ಲಿ ಅಣ್ವಸ್ತ್ರ ಸಮರದ ಹಂತಕ್ಕೆ ತಲುಪಿದ್ದವು. ಆಗ ಅಮೆರಿಕ ಮಧ್ಯಪ್ರವೇಶಿಸಿ ಅಣ್ವಸ್ತ್ರ ಯುದ್ಧ ತಪ್ಪಿಸಿತ್ತು' ಎಂದು ಅಮೆರಿಕದ ಮಾಜಿ ವಿದೇಶಾಂಗ ಕಾರ್ಯದರ್ಶಿ ಮೈಕ್ ಪಾಂಪಿಯೊ ಬಹಿರಂಗಪಡಿಸಿದ್ದಾರೆ.

ಈ ಕುರಿತು ಪಾಂಪಿಯೊ ಅವರು ಬರೆದಿರುವ ಆತ್ಮಚರಿತ್ರೆ 'ನೆವರ್ ಗೀವ್ ಆನ್ ಇಂಚ್' ಪುಸ್ತಕ ಮಂಗಳವಾರ ಬಿಡುಗಡೆಯಾಗಿದೆ. 2019ರಲ್ಲಿ ಉಭಯ ರಾಷ್ಟ್ರಗಳ ನಡುವೆ ಉಲ್ಬಣಿಸಿದ್ದ ಸಂಘರ್ಷದ ವೇಳೆ ಅಮೆರಿಕ ಮಧ್ಯಸ್ಥಿಕೆ ವಹಿಸಿ ಪರಿಸ್ಥಿತಿ ಶಮನಗೊಳಿಸಿತು ಎಂದು ಅವರು ಪುಸ್ತಕದಲ್ಲಿ ಹೇಳಿಕೊಂಡಿದ್ದಾರೆ.

ಮೈಕ್ ಪಾಂಪಿಯೊ

'ಆ ಸಂದರ್ಭದಲ್ಲಿ ಭಾರತ-ಪಾಕಿಸ್ತಾನ ಅಣ್ವಸ್ತ್ರ ಯುದ್ಧ ನಡೆಸಲು ಯಾವ ಮಟ್ಟದ ಪೈಪೋಟಿಗೆ ಇಳಿದಿದ್ದವು ಎನ್ನುವುದು ಜಗತ್ತಿಗೆ ಸರಿಯಾಗಿ ತಿಳಿದಿರಲಿಲ್ಲ' ಎಂಬ ಸಂಗತಿಯನ್ನು ಭವಿಷ್ಯದಲ್ಲಿ ಅಮೆರಿಕದ ಅಧ್ಯಕ್ಷ ಸ್ಥಾನದ ಸ್ಪರ್ಧಿ ಎನ್ನಲಾಗುತ್ತಿರುವ ಪಾಂಪಿಯೊ ಬಹಿರಂಗಪಡಿಸಿದ್ದಾರೆ. ಇವರು ಡೊನಾಲ್ಡ್ ಟ್ರಂಪ್ ಅವರ ಆಡಳಿತದಲ್ಲಿ ಸಿಐಎ ಮುಖ್ಯಸ್ಥರಾಗಿದ್ದರು.

'ಟ್ರಂಪ್ ಮತ್ತು ಉತ್ತರ ಕೊರಿಯಾ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಅವರ ನಡುವಿನ ಮಾತುಕತೆಯ ಸಭೆಯಲ್ಲಿ ಭಾಗವಹಿಸಲು ಹನಾಯ್ ಪ್ರವಾಸದಲ್ಲಿದ್ದೆ. ಆಗ ತಮಗೆ ಭಾರತೀಯ ಹಿರಿಯ ಅಧಿಕಾರಿಯಿಂದ ತುರ್ತು ಕರೆ ಬಂದಿತ್ತು. ಪಾಕಿಸ್ತಾನ ಅಣ್ವಸ್ತ್ರ ದಾಳಿಗೆ ಸಿದ್ಧತೆ ಆರಂಭಿಸಿರುವುದನ್ನು ಅವರು ನನಗೆ ತಿಳಿಸಿದರು. ಸಂಘರ್ಷ ಉಲ್ಬಣಕ್ಕೆ ಅವರೂ ತಯಾರಾಗಿದ್ದರು. ಆಗ ನಾನು ಅವರಿಗೆ ನೀವು ಏನೂ ಮಾಡಬೇಡಿ, ನನಗೆ ಒಂದು ನಿಮಿಷ ಸಮಯಕೊಡಿ, ಇದನ್ನು ಬಗೆಹರಿಸುವೆ ಎಂದೆ. ಅಣ್ವಸ್ತ್ರ ಯುದ್ಧಕ್ಕೆ ಇಳಿಯುದಂತೆ ಉಭಯ ರಾಷ್ಟ್ರಗಳಿಗೆ ಅಮೆರಿಕದ ರಾಜತಾಂತ್ರಿಕರು ಮನವರಿಕೆ ಮಾಡಿಸಿದರು' ಎಂದು ಪಾಪಿಯೊ ಈ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.

ಪಾಂಪಿಯೊ ಅವರು ಉತ್ತರ ಕೊರಿಯಾದ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಅವರೊಂದಿಗೆ ಪ್ಯೊಂಗ್ಯಾಂಗ್‌ನಲ್ಲಿ ನಡೆಸಿದ ದಕ್ಷಿಣ ಕೊರಿಯಾ, ಚೀನಾ ಕುರಿತ ರಹಸ್ಯ ಮಾತುಕತೆಗಳ ವಿವರವನ್ನು ಈ ಪುಸ್ತಕದಲ್ಲಿ ಎಳೆಎಳೆಯಾಗಿ ತೆರೆದಿಟ್ಟಿದ್ದಾರೆ.

ಪಾಕಿಸ್ತಾನದ ಉಗ್ರರು ಕಾಶ್ಮೀರಕ್ಕೆ ನುಸುಳಿ ಬಂದು ಆತ್ಮಾಹುತಿ ಬಾಂಬ್ ಸ್ಫೋಟಿಸಿ ಭಾರತೀಯ ಅರೆಸೇನಾ ಪಡೆಯ 41 ಸೈನಿಕರನ್ನು ಹತ್ಯೆ ಮಾಡಿದ್ದರು.

2019ರ ಫೆಬ್ರುವರಿಯಲ್ಲಿ ಪಾಕಿಸ್ತಾನದ ಭೂಪ್ರದೇಶದೊಳಗಿದ್ದ ಉಗ್ರರ ಅಡಗುದಾಣ ಬಾಲಾಕೋಟ್ ಮೇಲೆ ಭಾರತೀಯ ಸೇನೆ ವೈಮಾನಿಕ ದಾಳಿ (ಸರ್ಜಿಕಲ್ ಸ್ಟ್ರೈಕ್) ನಡೆಸಿ ಪ್ರತೀಕಾರ ತೀರಿಸಿಕೊಂಡಿತ್ತು. ಆಗ ಭಾರತದ ವಾಯುಪಡೆಯ ಮಿಗ್ ವಿಮಾನವನ್ನು ಪಾಕ್ ಸೇನೆ ಹೊಡೆದುರುಳಿಸಿ ಪೈಲಟ್ ಅಭಿನಂದನ್ ಅವರನ್ನು ಸೆರೆ ಹಿಡಿದಿತ್ತು.

ಪಿಹಾ ಬೀಚ್‌ನಲ್ಲಿ ಮುಳುಗಿ ಇಬ್ಬರು ಭಾರತೀಯರ ಸಾವು

ವೆಲ್ಲಿಂಗ್ಟನ್(ಪಿಟಿಐ): ನ್ಯೂಜಿಲೆಂಡ್‌ನ ಪಿಹಾ ಬೀಚ್‌ನಲ್ಲಿ ಈಜುತ್ತಿದ್ದ ಸಂದರ್ಭದಲ್ಲಿ ಮುಳುಗಿ ಇಬ್ಬರು ಭಾರತೀಯರು ಮೃತಪಟ್ಟಿದ್ದಾರೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

'ಮೃತರನ್ನು ಸೌರಿನ್ ನಯನ್ ಕುಮಾರ್ ಪಟೇಲ್ (28) ಮತ್ತು ಅನ್ಶೌಲ್ ಶಾ (31) ಎಂದು ಗುರುತಿಸಲಾಗಿದೆ. ಇವರು ಗುಜರಾತ್‌ನ ಅಹಮದಾಬಾದ್ ಮೂಲದವರಾಗಿದ್ದು, ಆಕ್ಲೆಂಡ್‌ನಲ್ಲಿ ಒಟ್ಟಿಗೆ ವಾಸಿಸುತ್ತಿದ್ದರು' ಎಂದು ವರದಿ ಮಾಡಿದೆ.

ಎಲೆಕ್ಟ್ರಾನಿಕ್ ಎಂಜಿನಿಯರ್ ಆಗಿದ್ದ ಪಟೇಲ್ ಕಳೆದ ವರ್ಷ ಆಗಸ್ಟ್‌ನಲ್ಲಿ ನ್ಯೂಜಿಲೆಂಡ್‌ಗೆ ತೆರಳಿದ್ದರು. ಶಾ, ಅನಿಲ ಕೇಂದ್ರದಲ್ಲಿ ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿದ್ದರು ಎಂದು ಹೇಳಿದೆ.

ನ್ಯೂಜಿಲೆಂಡ್: ನೂತನ ಪ್ರಧಾನಿ ಕ್ರಿಸ್ ಹಿಪ್ಕಿನ್ಸ್ ಪ್ರಮಾಣ ವಚನ

ವೆಲ್ಲಿಂಗ್ಟನ್(ಎಪಿ): ನ್ಯೂಜಿಲೆಂಡ್‌ನ ನೂತನ ಪ್ರಧಾನಿಯಾಗಿ ಕ್ರಿಸ್ ಹಿಪ್ಕಿನ್ಸ್ ಹಾಗೂ ಉಪಪ್ರಧಾನಿಯಾಗಿ ಕಾರ್ಮೆಲ್ ಸೆಪಿಲೋನಿ ಅವರು ಬುಧವಾರ ಪ್ರಮಾಣ ವಚನ ಸ್ವೀಕರಿಸಿದರು.

ಜನವರಿ 19ರಂದು ಜಸಿಂಡ ಆರ್ಡರ್ನ್ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ ಪರಿಣಾಮ 41ನೇ ಪ್ರಧಾನಿಯಾಗಿ ಕ್ರಿಸ್ ಹಿಪ್ಕಿನ್ಸ್ ಆಯ್ಕೆಯಾಗಿದ್ದರು. 44 ವರ್ಷದ ಹಿಪ್ಕಿನ್ಸ್ ಅವರಿಗೆ ನ್ಯೂಜಿಲೆಂಡ್‌ನ ಗವರ್ನರ್-ಜನರಲ್ ಸಿಂಡಿ ಕಿರೊ ಪ್ರಮಾಣ ವಚನ ಬೋಧಿಸಿದರು.

'ನನ್ನ ಜೀವನದಲ್ಲಿ, ನನಗೆ ದೊರಕಿರುವ ಅತಿ ದೊಡ್ಡ ಗೌರವ ಮತ್ತು ಜವಾಬ್ದಾರಿ ಇದಾಗಿದೆ. ಹಣದುಬ್ಬರ ಕಡಿಮೆ ಮಾಡಲು ಮತ್ತು ಆರ್ಥಿಕ ಸುಧಾರಣೆಗೆ ಒತ್ತು ನೀಡಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ' ಎಂದು ಅವರು ಈ ಸಂದರ್ಭದಲ್ಲಿ ಭರವಸೆ ನೀಡಿದರು.

ನ್ಯೂಜಿಲೆಂಡ್‌ನ ನೂತನ ಪ್ರಧಾನಿಯಾಗಿ ಕ್ರಿಸ್ ಹಿಪ್ಕಿನ್ಸ್ ಅವರು ಮತ್ತು ಉಪ ಪ್ರಧಾನಿಯಾಗಿ ಕಾರ್ಮೆಲ್ ಸೆಪುಲೋನಿ (ಎಡ ಬದಿ) ವೆಲ್ಲಿಂಗ್ಟನ್‌ನಲ್ಲಿ ಬುಧವಾರ ಅಧಿಕಾರ ಸ್ವೀಕರಿಸಿದರು.

ಜಸಿಂಡ ಆರ್ಡರ್ನ್ ಸರ್ಕಾರದಲ್ಲಿ ಹಿಪ್ಕಿನ್ಸ್, ಶಿಕ್ಷಣ ಮತ್ತು ಗೃಹ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ಕೋವಿಡ್ ಸಾಂಕ್ರಾಮಿಕ ಕಾಲಘಟ್ಟದಲ್ಲಿ ಬಿಕ್ಕಟ್ಟು ನಿರ್ವಹಣೆಯ ಹೊಣೆ ವಹಿಸಿದ್ದರಲ್ಲದೆ ಹೆಚ್ಚಿನ ಜನಮನ್ನಣೆಗೆ ಪಾತ್ರರಾಗಿದ್ದರು.

ನ್ಯೂಜಿಲೆಂಡ್‌ನಲ್ಲಿ ಸಾರ್ವತ್ರಿಕ ಚುನಾವಣೆಗೆ ಒಂಬತ್ತು ತಿಂಗಳು ಮಾತ್ರ ಬಾಕಿಯಿದೆ.

26 ಜಿಲ್ಲೆಗಳಲ್ಲಿ ಸಚಿವರಿಂದ ಧ್ವಜಾರೋಹಣ

ಬೆಂಗಳೂರು: ಗಣರಾಜ್ಯೋತ್ಸವದ ಪ್ರಯುಕ್ತ ಗುರುವಾರ ನಡೆಯುವ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಲು ರಾಜ್ಯದ 26 ಜಿಲ್ಲೆಗಳಲ್ಲಿ ಉಸ್ತುವಾರಿ ಸಚಿವರು ಮತ್ತು ನಾಲ್ಕು ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

ಬೆಂಗಳೂರಿನ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ನಡೆಯುವ ಗಣರಾಜ್ಯೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಧ್ವಜಾರೋಹಣ ನೆರವೇರಿಸಲಿದ್ದಾರೆ. ಉಳಿದ 30 ಜಿಲ್ಲೆಗಳಲ್ಲಿ ಸಚಿವರು ಹಾಗೂ ಅಧಿಕಾರಿಗಳನ್ನು ನಿಯೋಜಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಬುಧವಾರ ಆದೇಶ ಹೊರಡಿಸಿದೆ.

ಮಂಡ್ಯದಲ್ಲಿ ನೂತನವಾಗಿ ಜಿಲ್ಲಾ ಉಸ್ತುವಾರಿ ಸಚಿವರಾಗಿ ನೇಮಕಗೊಂಡಿರುವ ಕಂದಾಯ ಸಚಿವ ಆರ್. ಅಶೋಕ ಧ್ವಜಾರೋಹಣ ನೆರವೇರಿಸಲಿದ್ದಾರೆ. ವಿಜಯಪುರ, ಬೀದರ್, ಚಿಕ್ಕಮಗಳೂರು ಮತ್ತು ಬಾಗಲಕೋಟೆ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾಧಿಕಾರಿಗಳೇ ಧ್ವಜಾರೋಹಣ ಮಾಡಲಿದ್ದಾರೆ ಎಂದು ಇಲಾಖೆ ತಿಳಿಸಿದೆ. ಅನಾರೋಗ್ಯ ಅಥವಾ ಇತರ ಕಾರಣಗಳಿಂದ ಸಚಿವರು ಕಾರ್ಯಕ್ರಮಕ್ಕೆ ಗೈರಾದರೆ ಜಿಲ್ಲಾಧಿಕಾರಿಗಳೇ ಧ್ವಜಾರೋಹಣ ನಡೆಸಬೇಕು ಎಂದೂ ನಿರ್ದೇಶನ ನೀಡಲಾಗಿದೆ.

ಮಾಣಿ ಮಠ: ಬ್ರಹ್ಮಕಲಶೋತ್ಸವ ಸಂಪನ್ನ

ಮಾಣಿ (ದಕ್ಷಿಣ ಕನ್ನಡ): ಇಲ್ಲಿನ ಶ್ರೀ ರಾಮಚಂದ್ರಾಪುರ ಮಠದಲ್ಲಿ ಸಪರಿವಾರ ಶ್ರೀರಾಮದೇವರ ಪ್ರತಿಷ್ಠಾಪನೆಯ ಬ್ರಹ್ಮಕಲಶೋತ್ಸವವನ್ನು ಬುಧವಾರ ರಾಘವೇಶ್ವರ ಭಾರತೀ ಸ್ವಾಮೀಜಿ ನೆರವೇರಿಸಿದರು.

ಗೋಕರ್ಣದ ತಂತ್ರಿ ಅಮೃತೇಶ ಭಟ್ ಹಿರೇ ಹಾಗೂ ಶ್ರೀಮಠದ ಧರ್ಮಕರ್ಮ ವಿಭಾಗದ ಕೇಶವ ಪ್ರಸಾದ್ ಕೂಟೇಲು ನೇತೃತ್ವದಲ್ಲಿ ಧಾರ್ಮಿಕ ವಿಧಿವಿಧಾನಗಳು ನಡೆದವು.

ವೇದಘೋಷ, ಭಕ್ತರ ಜೈಕಾರದ ನಡುವೆ 10 ಗಂಟೆಗೆ ಶ್ರೀ ರಾಘವೇಶ್ವರ ಸ್ವಾಮೀಜಿ ಅವರು ಬ್ರಹ್ಮಕಲಶ ನೆರವೇರಿಸಿದರು. ಜತೆಗೆ ಮೂಲಮಂತ್ರ ಹವನ, ಗಣಪತಿ ಅಥರ್ವಶೀರ್ಷ ಹವನ, ಶ್ರೀ ರುದ್ರಹವನ, ಪರಿವಾರ ದೇವರುಗಳಿಗೆ ನವಕಾಭಿಷೇಕ ಜರುಗಿತು.

ಮಾಣಿಮಠ ಮಹಾಸಮಿತಿ ಅಧ್ಯಕ್ಷ ಹಾರಕೆರೆ ನಾರಾಯಣ ಭಟ್ ಅವರು ರಜತ ಕಲಶಾಭಿಷೇಕ ನೆರವೇರಿಸಿದರು.

ಮಾಣಿ ಮಠದಲ್ಲಿ ರಾಘವೇಶ್ವರ ಭಾರತೀ ಸ್ವಾಮೀಜಿ ಪೂಜೆ ನೆರವೇರಿಸಿದರು

ಮಹಾಸಮಿತಿ ಪದಾಧಿಕಾರಿಗಳಾದ ಜನಾರ್ದನ ಭಟ್ ಬಂಗಾರಡ್ಕ, ಮೈಕೆ ಗಣೇಶ್ ಭಟ್, ಮಂಡಲ ಗುರಿಕ್ಕಾರರಾದ ಉದಯಕುಮಾರ್ ಖಂಡಿಗ, ವಾಸ್ತು ತಜ್ಞ ಮಹೇಶ್ ಮುನಿಯಂಗಳ ಪಾಲ್ಗೊಂಡಿದ್ದರು. ಗುರುವಾರ ಶ್ರೀದೇವರ ಮಂಗಲೋತ್ಸವ, ಅವಶಿಷ್ಟಹವನ, ಮಹಾಪೂರ್ಣಾಹುತಿ, ಶ್ರೀ ಲಕ್ಷ್ಮೀನಾರಾಯಣ ಹೃದಯ ಹವನ ನಡೆಯಲಿವೆ.

ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕದಲ್ಲಿ ಪ್ರದರ್ಶನ ಜ.27ರಿಂದ

'ಹೊಸ ದಾಖಲೆಯತ್ತ ಟಿಪ್ಪು ನಿಜಕನಸುಗಳು'

ಪ್ರಜಾವಾಣಿ ವಾರ್ತೆ

ಮೈಸೂರು: 'ಮೈಸೂರು ರಂಗಾಯಣದ ವಿಶೇಷ ರಂಗ ಪ್ರಯೋಗವಾದ 'ಟಿಪ್ಪು ನಿಜಕನಸುಗಳು' ಕನ್ನಡ ಆಧುನಿಕ ರಂಗಭೂಮಿಯಲ್ಲಿ ಹೊಸ ಇತಿಹಾಸ ಬರೆದಿದೆ' ಎಂದು ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ತಿಳಿಸಿದ್ದಾರೆ.

ಈ ಬಗ್ಗೆ ಬುಧವಾರ ಪ್ರಕಟಣೆ ನೀಡಿರುವ ಅವರು, 'ಮೈಸೂರು ಜೊತೆಗೆ ಬೆಂಗಳೂರು, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಮಂಗಳೂರು, ಹಾಸನ, ಪುತ್ತೂರು, ಕೊಡಗು ಮತ್ತು ಮಂಡ್ಯದಲ್ಲಿ ಒಟ್ಟು 26 ಪ್ರದರ್ಶನಗಳನ್ನು ಕಂಡಿದೆ. ಇಲ್ಲೆಲ್ಲವೂ ಟಿಕೆಟ್ 'ಸೋಲ್ಡ್‌ಔಟ್' ದಾಖಲೆಯೂ ನಿರ್ಮಾಣವಾಗಿದೆ. 20 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ನಾಟಕವನ್ನು ವೀಕ್ಷಿಸಿದ್ದಾರೆ' ಎಂದು ಹೇಳಿದ್ದಾರೆ.

'ನಾಟಕದ ಪ್ರದರ್ಶನದ ಆರಂಭದ ದಿನಗಳಲ್ಲಿ ತಕರಾರು ಎತ್ತಿದ್ದ ಕೆಲವರು, ಪ್ರದರ್ಶನಗಳು ಸಾಗುತ್ತಿದ್ದಂತೆ ಮೌನಕ್ಕೆ ಜಾರಿದ್ದಾರೆ. ಟಿಪ್ಪು ಸುಲ್ತಾನನ ಇನ್ನೊಂದು ಕರಾಳ ಮುಖದ ಅನಾವರಣ ಸಾಕ್ಷಿಸಹಿತ ಪ್ರದರ್ಶನ ಆಗುತ್ತಿದ್ದಂತೆಯೇ ಅವರಿಗೂ ಸತ್ಯದ ಅರಿವಾಗಿದೆ. ಇತ್ತೀಚೆಗೆ ಸಿಕ್ಕ ಅಧಿಕೃತ ಮಾಹಿತಿಯಂತೆ ಟಿಪ್ಪು ಸುಲ್ತಾನ್ ಕರ್ನಾಟಕದ ಆನೆಗುಂದಿ ಮತ್ತು ಹಂಪೆಯಲ್ಲಿ ಅನೇಕ ದೇವಾಲಯಗಳನ್ನು ನಾಶಪಡಿಸಿದ್ದು ಬಯಲಾಗಿದೆ. ಈ ಎಲ್ಲ ಮುಚ್ಚಿಟ್ಟ ಸತ್ಯಗಳು ಈ ನಾಟಕದ ಮೂಲಕ ರಾಜ್ಯದಲ್ಲಿ ಹೊಸ ಅಲೆಯನ್ನು ಎಬ್ಬಿಸಿದೆ. ಇದೊಂದು ಆಧುನಿಕ ರಂಗಭೂಮಿಯ ಗೆಲುವಾಗಿದೆ' ಎಂದು ಸಮರ್ಥಿಸಿಕೊಂಡಿದ್ದಾರೆ.

ಮೈಸೂರು ರಂಗಾಯಣ ಪ್ರಸ್ತುತಪಡಿಸಿದ ಅಡ್ಡಂಡ ಸಿ. ಕಾರ್ಯಪ್ಪ ನಿರ್ದೇಶನದ 'ಟಿಪ್ಪು ನಿಜಕನಸುಗಳು' ನಾಟಕದ ಒಂದು ದೃಶ್ಯ

'ರಂಗಾಯಣವು ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕದ ಪ್ರದರ್ಶನ ಪ್ರವಾಸವನ್ನು ಜ.27ರಿಂದ ಫೆ.15ರವರೆಗೆ 2ನೇ ಹಂತದಲ್ಲಿ ಆರಂಭಿಸಿದೆ. ಜ.27ರಂದು ಹುಬ್ಬಳ್ಳಿ, ಜ.29ರಂದು ಧಾರವಾಡ, ಜ.31ರಂದು ಬೆಳಗಾವಿ, ಫೆ.2ರಂದು ವಿಜಯಪುರ, ಫೆ.5ರಂದು ಬಾಗಲಕೋಟೆ, ಫೆ.8ರಂದು ಬೀದರ್, ಫೆ.8 ಹಾಗೂ 10ರಂದು ಕಲಬುರಗಿ, ಫೆ.12ರಂದು ರಾಯಚೂರು, ಫೆ.14ರಂದು ಬಳ್ಳಾರಿಯಲ್ಲಿ ಪ್ರದರ್ಶನ ಇರಲಿದೆ. ಈ ಎಲ್ಲಾ ಕಡೆಯೂ ಬಹುತೇಕ ಟಿಕೆಟ್‌ಗಳು ಖರೀದಿಯಾಗಿವೆ. ಒಟ್ಟು ನೂರು ಪ್ರದರ್ಶನಗಳ ಗುರಿಯೊಂದಿಗೆ ಹೊರಟಿರುವ ರಂಗಾಯಣ ಫೆಬ್ರವರಿ ಅಂತ್ಯಕ್ಕೆ 50 ಪ್ರದರ್ಶನಗಳನ್ನು ಮುಗಿಸಲಿದೆ. 'ಟಿಪ್ಪು ನಿಜಕನಸುಗಳು' ನಾಟಕ ಕೃತಿ ಮಾರಾಟದಲ್ಲೂ ದಾಖಲೆ ಬರೆದಿದೆ. ಈಗಾಗಲೇ 12ನೇ ಆವೃತ್ತಿ ಮುದ್ರಣ ಕಂಡಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಟಿಎಂಸಿ ವಕ್ತಾರ ಸಾಕೇತ್ ಗೋಖಲೆ ಬಂಧಿಸಿದ ಇ.ಡಿ

ನವದೆಹಲಿ (ಪಿಟಿಐ): ಗುಂಪುನಿಧಿ ಹಣಕ್ಕೆ ಸಂಬಂಧಿಸಿದಂತೆ ಅವ್ಯವ ಹಾರ ನಡೆಸಿದ ಆರೋಪದಡಿ ತೃಣಮೂಲ ಕಾಂಗ್ರೆಸ್‌ನ ವಕ್ತಾರ ಸಾಕೇತ್ ಗೋಖಲೆ ಅವರನ್ನು ಜಾರಿ ನಿರ್ದೇಶನಾಲಯ ಬಂಧಿಸಿದೆ ಎಂದು ಅಧಿಕೃತ ಮೂಲಗಳು ಬುಧವಾರ ತಿಳಿಸಿವೆ.

ಗುಜರಾತ್‌ನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಅವರನ್ನು ಭ್ರಷ್ಟಾಚಾರ ತಡೆ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣ ದಾಖಲಿಸಿ ಅಹಮದಾಬಾದ್‌ನಲ್ಲಿ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಡಿ. 29ರಂದು ಗುಜರಾತ್ ಪೊಲೀಸರು ಗೋಖಲೆ ಅವರನ್ನು ಬಂಧಿಸಿದ್ದರು.

ಲಕ್ಷ್ಯ ಸೇನ್ ಆಟದ ವೈಖರಿ —ಎಪಿ ಚಿತ್ರ

ಸೇನ್, ಸೈನಾ ಶುಭಾರಂಭ

ಜಕಾರ್ತ (ಪಿಟಿಐ): ಭಾರತದ ಸೈನಾ ನೆಹ್ವಾಲ್ ಮತ್ತು ಲಕ್ಷ್ಯ ಸೇನ್ ಅವರು ಇಲ್ಲಿ ನಡೆಯುತ್ತಿರುವ ಇಂಡೋನೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಬುಧವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಸೇನ್ ಅವರು 21–12, 21–11 ರಲ್ಲಿ ಜಪಾನ್‌ನ ಕೊಡೈ ನರವೊಕಾ ಅವರನ್ನು ಮಣಿಸಿದರು. ಭಾರತದ ಆಟಗಾರ ಎರಡೂ ಗೇಮ್‌ಗಳಲ್ಲಿ ಶಿಸ್ತಿನ ಪ್ರದರ್ಶನ ನೀಡಿದರು.

ಸೇನ್ ಅವರು ಮಲೇಷ್ಯಾ ಓಪನ್ ಮತ್ತು ಇಂಡಿಯಾ ಓಪನ್ ಟೂರ್ನಿಗಳಲ್ಲಿ ಮೊದಲ ಸುತ್ತಿನಲ್ಲೇ ಮುಗ್ಗರಿಸಿದ್ದರು. ಆದರೆ ನರವೊಕಾ ವಿರುದ್ಧ ಉತ್ತಮ ಲಯದಲ್ಲಿ ಆಡಿದರು. ವೇಗದ ಸ್ಮ್ಯಾಷ್‌ಗಳು ಮತ್ತು ಡ್ರಾಪ್ ಶಾಟ್‌ಗಳ ಮೂಲಕ ಪಾಯಿಂಟ್ಸ್ ಕಲೆಹಾಕಿದರು. ಏಳನೇ ಶ್ರೇಯಾಂಕದ ಸೇನ್ ಅವರು ಮುಂದಿನ ಸುತ್ತಿನಲ್ಲಿ ಮಲೇಷ್ಯಾದ ಎಂಗ್ ತ್ಸೆ ಯೊಂಗ್ ವಿರುದ್ಧ ಪೈಪೋಟಿ ನಡೆಸುವರು.

ಸೈನಾ ನೆಹ್ವಾಲ್ ಅವರಿಗೆ ಮಹಿಳೆಯರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ತಡೆ ದಾಟಲು ಸಾಕಷ್ಟು ಪರಿಶ್ರಮ ಪಡಬೇಕಾಯಿತು. ಅವರು 21-15 17-21 21-15 ರಲ್ಲಿ ಚೀನಾ ತೈಪೆಯ ಪಾಯ್ ಯು ಪೊ ಅವರನ್ನು ಮಣಿಸಿದರು.

ಕೆ.ಶ್ರೀಕಾಂತ್ ಅವರು ಮೊದಲ ಸುತ್ತಿನಲ್ಲೇ ಸೋತರು. ಶೆಶನ್ ಹಿರೆನ್ ರುತ್ಸವಿಟೊ 21–10, 24–22 ರಲ್ಲಿ ಭಾರತದ ಆಟಗಾರನ ವಿರುದ್ಧ ಗೆದ್ದರು. ಶ್ರೀಕಾಂತ್ ಎರಡನೇ ಗೇಮ್‌ನಲ್ಲಿ 18–15 ರಲ್ಲಿ ಮುನ್ನಡೆಯಲ್ಲಿದ್ದರು. ಆ ಬಳಿಕ ಆಟದ ಮೇಲಿನ ಹಿಡಿತ ಕೈಬಿಟ್ಟರು.

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ • ನಾಲ್ಕರಘಟ್ಟಕ್ಕೆ ನೊವಾಕ್ ಜೊಕೊವಿಚ್, ಟಾಮಿ ಪಾಲ್

ಫೈನಲ್‌ಗೆ ಬೋಪಣ್ಣ– ಸಾನಿಯಾ

ನೊವಾಕ್ ಜೊಕೊವಿಚ್ ಚೆಂಡನ್ನು ಹಿಂದಿರುಗಿಸಿದ ರೀತಿ —ಎಎಫ್‌ಪಿ ಚಿತ್ರ

ಸಾನಿಯಾ– ಬೋಪಣ್ಣ ಜೋಡಿ

ಮೆಲ್ಬರ್ನ್ (ಪಿಟಿಐ/ ಎಎಫ್‌ಪಿ): ಕೊನೆಯ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯಲ್ಲಿ ಟ್ರೋಫಿ ಎತ್ತಿಹಿಡಿದು, ಸ್ಮರಣೀಯ ಸಾಧನೆ ಮಾಡುವ ಅವಕಾಶ ಸಾನಿಯಾ ಮಿರ್ಜಾ ಅವರಿಗೆ ಲಭಿಸಿದೆ.

ರೋಹನ್ ಬೋಪಣ್ಣ ಜೊತೆಗೂಡಿ ಆಡುತ್ತಿರುವ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಮಿಶ್ರ ಡಬಲ್ಸ್ ವಿಭಾಗದ ಫೈನಲ್ ಪ್ರವೇಶಿಸಿದ್ದಾರೆ. ವೃತ್ತಿಜೀವನದ ಏಳನೇ ಗ್ರ್ಯಾನ್‌ಸ್ಲಾಮ್ ಟ್ರೋಫಿಯ ಮೇಲೆ ಕಣ್ಣಿಟ್ಟು ಅವರು ಫೈನಲ್ ಆಡಲಿದ್ದಾರೆ.

ಬುಧವಾರ ನಡೆದ ಸೆಮಿಫೈನಲ್‌ನಲ್ಲಿ ಭಾರತದ ಜೋಡಿ 7–6, 6–7, 10–6 ರಲ್ಲಿ ಅಮೆರಿಕದ ಡೆಸಿರೆ ಕ್ರಾಚಿಕ್ ಮತ್ತು ಬ್ರಿಟನ್‌ನ ನೀಲ್ ಸ್ಕುಪ್ಸ್ಕಿ ವಿರುದ್ಧ ಗೆದ್ದಿತು. ಜಿದ್ದಾಜಿದ್ದಿನ ಸೆಣಸಾಟ ಒಂದು ಗಂಟೆ 52 ನಿಮಿಷ ನಡೆಯಿತು.

ಇಲ್ಲಿ ಶ್ರೇಯಾಂಕರಹಿತ ಜೋಡಿಯಾಗಿ ಆಡುತ್ತಿರುವ ಸಾನಿಯಾ–ಬೋಪಣ್ಣ ಮೊದಲ ಸೆಟ್ ಟೈಬ್ರೇಕರ್‌ನಲ್ಲಿ ಗೆದ್ದರು. ಆದರೆ ಅಮೆರಿಕ–ಬ್ರಿಟನ್ ಜೋಡಿ ಎರಡನೇ ಸೆಟ್‌ನಲ್ಲಿ ಗೆದ್ದು ಸಮಬಲ ಸಾಧಿಸಿತು. ಸೂಪರ್ ಟೈಬ್ರೇಕರ್‌ನಲ್ಲಿ ಭಾರತದ ಜೋಡಿ ಪಂದ್ಯ ತನ್ನದಾಗಿಸಿಕೊಂಡಿತು.

‘ಇದು ನನ್ನ ಕೊನೆಯ ಗ್ರ್ಯಾನ್‌ಸ್ಲಾಮ್ ಟೂರ್ನಿ. ರೋಹನ್ ಜತೆ ಆಡುವುದು ವಿಶೇಷ ಅನುಭವ ನೀಡುತ್ತದೆ. 14ನೇ ವಯಸ್ಸಿನಲ್ಲಿ ನನ್ನ ಮೊದಲ ಮಿಶ್ರ ಡಬಲ್ಸ್ ಪಂದ್ಯವನ್ನು ಅವರ ಜತೆ ಆಡಿದ್ದೆ. ಇದೀಗ ನನಗೆ 36 ಮತ್ತು ಅವರಿಗೆ 42 ವಯಸ್ಸು. ನಾವಿಬ್ಬರು ಈಗಲೂ ಆಡುತ್ತಿದ್ದೇವೆ’ ಎಂದು ಪಂದ್ಯದ ಬಳಿಕ ಸಾನಿಯಾ ಪ್ರತಿಕ್ರಿಯಿಸಿದ್ದಾರೆ.

ಸಾನಿಯಾ ಗೆದ್ದಿರುವ ಆರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳಲ್ಲಿ ಮೂರು ಮಿಶ್ರ ಡಬಲ್ಸ್‌ನಲ್ಲಿ ಬಂದಿವೆ. ಅವರು ಮಹೇಶ್ ಭೂಪತಿ (2009ರ ಆಸ್ಟ್ರೇಲಿಯಾ ಓಪನ್, 2012ರ ಫ್ರೆಂಚ್ ಓಪನ್) ಮತ್ತು ಬ್ರೆಜಿಲ್‌ನ ಬ್ರೂನೊ ಸೊರೇಸ್ (2014ರ ಅಮೆರಿಕ ಓಪನ್) ಜೊತೆ ಚಾಂಪಿಯನ್ ಆಗಿದ್ದರು.

ಮಹಿಳೆಯರ ಡಬಲ್ಸ್‌ನಲ್ಲಿ ಮೂರೂ ಪ್ರಶಸ್ತಿಗಳನ್ನು (2015ರ ವಿಂಬಲ್ಡನ್ ಮತ್ತು ಅಮೆರಿಕ ಓಪನ್, 2016ರ ಆಸ್ಟ್ರೇಲಿಯಾ ಓಪನ್) ಸ್ವಿಟ್ಜರ್‌ಲೆಂಡ್‌ನ ಮಾರ್ಟಿನಾ ಹಿಂಗಿಸ್ ಅವರೊಂದಿಗೆ ಜಯಿಸಿದ್ದಾರೆ.

ಮುಂದಿನ ತಿಂಗಳು ನಡೆಯುವ ದುಬೈ ಓಪನ್ ಟೆನಿಸ್ ಟೂರ್ನಿಯ ಬಳಿಕ ನಿವೃತ್ತಿಯಾಗುವುದಾಗಿ ಸಾನಿಯಾ ಅವರು ಈಗಾಗಲೇ ಪ್ರಕಟಿಸಿದ್ದಾರೆ.

ಸೆಮಿಗೆ ಜೊಕೊವಿಚ್: ಅಮೋಘ ಪ್ರದರ್ಶನ ಮುಂದುವರಿಸಿದ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು.

ರಾಡ್ ಲೇವರ್ ಅರೆನಾದಲ್ಲಿ ಬುಧವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಅವರು 6–1, 6–2, 6–4 ರಲ್ಲಿ ಐದನೇ ಶ್ರೇಯಾಂಕದ ಆಟಗಾರ ರಷ್ಯಾದ ಆಂಡ್ರೆ ರುಬ್ಲೆವ್ ವಿರುದ್ಧ ಗೆದ್ದರು.

ಇಲ್ಲಿ ದಾಖಲೆಯ 10ನೇ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ಜೊಕೊವಿಚ್ ಸೆಮಿಫೈನಲ್‌ನಲ್ಲಿ ಅಮೆರಿಕದ ಟಾಮಿ ಪಾಲ್ ಅವರ ಸವಾಲನ್ನು ಎದುರಿಸಲಿದ್ದಾರೆ.

ಟಾಮಿ ಪಾಲ್ ಅವರು 7-6 (8/6), 6-3, 5-7, 6-4 ರಲ್ಲಿ ಅಮೆರಿಕದವರೇ ಆದ ಬೆನ್ ಶೆಲ್ಟನ್ ವಿರುದ್ಧ ಗೆದ್ದರು. 14 ವರ್ಷಗಳ ಬಿಡುವಿನ ಬಳಿಕ ಇಲ್ಲಿ ಸೆಮಿ ಪ್ರವೇಶಿಸಿದ ಅಮೆರಿಕದ ಮೊದಲ ಆಟಗಾರ ಎಂಬ ಗೌರವ ಅವರಿಗೆ ಒಲಿಯಿತು. ಆ್ಯಂಡಿ ರಾಡಿಕ್ ಅವರು 2009 ರಲ್ಲಿ ಮೆಲ್ಬರ್ನ್ ಪಾರ್ಕ್‌ನಲ್ಲಿ ಕೊನೆಯದಾಗಿ ನಾಲ್ಕರಘಟ್ಟ ಪ್ರವೇಶಿಸಿದ್ದರು.

ಪೋಲೆಂಡ್‌ನ ಮಗ್ದಾ ಲಿನೆಟ್ ಮತ್ತು ಬೆಲಾರಸ್‌ನ ಅರಿನಾ ಸಬಲೆಂಕಾ ಅವರು ಮಹಿಳೆಯರ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿದರು. ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಮಗ್ದಾ 6-3, 7-5 ರಲ್ಲಿ ಜೆಕ್ ಗಣರಾಜ್ಯದ ಕರೋಲಿನಾ ಪಿಸ್ಕೊವಾ ವಿರುದ್ಧ ಗೆದ್ದರೆ, ಸಬಲೆಂಕಾ 6-3, 6-2 ರಲ್ಲಿ ಕ್ರೊವೇಷ್ಯಾದ ಡೋನಾ ವೆಕಿಚ್ ಅವರನ್ನು ಮಣಿಸಿದರು.

ಸೂರ್ಯ ಐಸಿಸಿ ವರ್ಷದ ಕ್ರಿಕೆಟಿಗ

ಸೂರ್ಯಕುಮಾರ್ ಯಾದವ್

ದುಬೈ (ಪಿಟಿಐ): ಭಾರತದ ಬ್ಯಾಟರ್ ಸೂರ್ಯಕುಮಾರ್ ಯಾದವ್ ಅವರಿಗೆ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ವರ್ಷದ ಕ್ರಿಕೆಟಿಗ ಗೌರವ ಒಲಿದಿದೆ.

ತಮ್ಮ ವಿಶಿಷ್ಟ ಶೈಲಿಯ ಬ್ಯಾಟಿಂಗ್‌ನಿಂದ ಗಮನ ಸೆಳೆದಿರುವ ಮುಂಬೈಕರ್ 2022ರಲ್ಲಿ ಅಮೋಘ ಫಾರ್ಮ್‌ನಲ್ಲಿದ್ದರು. ಅದರಲ್ಲೂ ಚುಟುಕು ಕ್ರಿಕೆಟ್‌ನಲ್ಲಿ ಹಲವು ದಾಖಲೆಗಳನ್ನು ಬರೆದರು.

ಐಸಿಸಿ ಶ್ರೇಷ್ಠ ಆಟಗಾರನಿಗಾಗಿ ನಡೆದ ಮತದಾನದಲ್ಲಿ ಇಂಗ್ಲೆಂಡ್‌ನ ಸ್ಯಾಮ್ ಕರನ್, ಪಾಕಿಸ್ತಾನದ ಮೊಹಮ್ಮದ್ ರಿಜ್ವಾನ್ ಮತ್ತು ಜಿಂಬಾಬ್ವೆಯ ಸಿಕಂದರ್ ರಝಾ ಅವರನ್ನು ಹಿಂದಿಕ್ಕಿದರು.

‘ಸ್ಕೈ’ ಎಂದೇ ಖ್ಯಾತರಾಗಿರುವ 32 ವರ್ಷದ ಸೂರ್ಯ ಟಿ20 ಕ್ರಿಕೆಟ್ ಮಾದರಿಯಲ್ಲಿ ಕಳೆದ ಒಂದು ಕ್ಯಾಲೆಂಡರ್ ವರ್ಷದಲ್ಲಿ 1164 ರನ್ ಗಳಿಸಿದರು. ಈ ಸಾಧನೆ ಮಾಡಿದ ವಿಶ್ವದ ಎರಡನೇ ಬ್ಯಾಟರ್ ಎನಿಸಿಕೊಂಡರು. 187.43ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ರನ್ ಕಲೆಹಾಕಿದ್ದಾರೆ. ಒಂದು ವರ್ಷದಲ್ಲಿ 68 ಸಿಕ್ಸರ್‌ಗಳನ್ನು ಸಿಡಿಸಿದ ದಾಖಲೆಯನ್ನೂ ಬರೆದಿದ್ದಾರೆ.

ಅಲ್ಲದೇ ಎರಡು ಶತಕ ಮತ್ತು ಒಂಬತ್ತು ಅರ್ಧಶತಕಗಳನ್ನೂ ಗಳಿಸಿದ್ದಾರೆ. ಹೋದ ವರ್ಷ ಆಸ್ಟ್ರೇಲಿಯಾದಲ್ಲಿ ನಡೆದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅವರು ಆರು ಇನಿಂಗ್ಸ್‌ಗಳಲ್ಲಿ ಮೂರು ಅರ್ಧಶತಕ ಗಳಿಸಿದ್ದಾರೆ. ಒಟ್ಟು 189.68 ಸ್ಟ್ರೈಕ್‌ರೇಟ್‌ನಲ್ಲಿ ರನ್ ಕಲೆಹಾಕಿದ್ದಾರೆ.

ನ್ಯೂಜಿಲೆಂಡ್ ವಿರುದ್ಧದ ಟಿ20 ಸರಣಿಯಲ್ಲಿ ಅವರು ಒಂದು ಶತಕ ಗಳಿಸಿದ್ದರು. ಐಸಿಸಿ ರ್‍ಯಾಂಕಿಂಗ್‌ನಲ್ಲಿ 890 ರೇಟಿಂಗ್ ಪಾಯಿಂಟ್ಸ್ ಗಳಿಸಿರುವ ಸೂರ್ಯ ಅಗ್ರ ಸ್ಥಾನಕ್ಕೇರಿದ್ದಾರೆ.

ಮಹಿಳಾ ಕ್ರಿಕೆಟ್ ವಿಭಾಗದಲ್ಲಿ ಹೋದ ವರ್ಷ ಪ್ರಶಸ್ತಿ ಗಳಿಸಿದ್ದ ಭಾರತದ ಸ್ಮೃತಿ ಮಂದಾನ ಅವರನ್ನು ಈ ವರ್ಷ ಆಸ್ಟ್ರೇಲಿಯಾದ ತಹಿಲಾ ಮೆಕ್‌ಗ್ರಾ ಹಿಂದಿಕ್ಕಿದರು.

ಶತಕಕ್ಕೆ ಮೂರು ವರ್ಷ: ರೋಹಿತ್ ಸಿಡಿಮಿಡಿ

ರೋಹಿತ್ ಶರ್ಮಾ

ಇಂದೋರ್ (ಪಿಟಿಐ): ತಮ್ಮ ಶತಕದ ಕುರಿತ ಅಂಕಿಸಂಖ್ಯೆಗಳನ್ನು ಪ್ರದರ್ಶಿಸಿದ ಬ್ರಾಡ್‌ಕಾಸ್ಟರ್‌ಗಳಿಗೆ ‘ದೃಷ್ಟಿಕೋನ’ದ ಕೊರತೆ ಇದೆ ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಸಿಡಿಮಿಡಿಗೊಂಡಿದ್ದಾರೆ.

ಮಂಗಳವಾರ ಅವರು ನ್ಯೂಜಿಲೆಂಡ್ ಎದುರಿನ ಮೂರನೇ ಏಕದಿನ ಪಂದ್ಯದಲ್ಲಿ ಶತಕ ಗಳಿಸಿದ್ದರು. ಅವರು ಕಳೆದ ಮೂರು ವರ್ಷಗಳಲ್ಲಿ ಗಳಿಸಿದ ಮೊದಲ ಶತಕ ಇದು. ಜನವರಿ 2020ಯಲ್ಲಿ ಕೊನೆಯ ಬಾರಿಗೆ ಶತಕ ಗಳಿಸಿದ್ದರು ಎಂದು ಅಧಿಕೃತ ಪ್ರಸಾರಕರು ವಾಹಿನಿಯಲ್ಲಿ ಪ್ರದರ್ಶಿಸಿದ್ದರು.

‘ಕಳೆದ ಮೂರು ವರ್ಷಗಳಲ್ಲಿ ನಾನು ಆಡಿರುವುದು ಕೇವಲ 12 ಏಕದಿನ ಪಂದ್ಯಗಳನ್ನು ಮಾತ್ರ. ಅಂಕಿ ಅಂಶ ತೋರಿಸುವಾಗ ಅದರೊಳಗಿನ ಸಂಪೂರ್ಣ ತಿರುಳನ್ನೂ ವಿವರಿಸಬೇಕು. ಅದಕ್ಕೊಂದು ದೃಷ್ಟಿಕೋನ ಬೇಕು’ ಎಂದು ರೋಹಿತ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಬ್ರಾಡ್‌ಕಾಸ್ಟರ್‌ಗಳು ಸರಿಯಾದ ಚಿತ್ರಣವನ್ನು ನೀಡಬೇಕು. ಈ ಕುರಿತು ನೀವು ಕೂಡ ಎಚ್ಚರವಹಿಸಬೇಕು. ಕೋವಿಡ್ 19 ಕಾಯಿಲೆಯ ಹಾವಳಿಯಿಂದಾಗಿ ಎಲ್ಲರೂ ನಮ್ಮ ಮನೆಗಳಲ್ಲಿ ಬಂದಿಯಾಗಿದ್ದೆವು. ಅಲ್ಲದೇ ನಾನು ಗಾಯಗೊಂಡಿದ್ದೆ. ಆ ಅವಧಿಯಲ್ಲಿ ಆಡಿದ್ದು ಎರಡು ಟೆಸ್ಟ್‌ಗಳಲ್ಲಿ ಮಾತ್ರ. ಏಕದಿನ ಪಂದ್ಯಗಳಲ್ಲಿ ಆಡಿದ್ದು ಕಡಿಮೆ’ ಎಂದು ಸಮರ್ಥಿಸಿಕೊಂಡರು.



ಮುಂಬಯಿಯ ಇನ್ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್ಮೆಂಟ್ ಪ್ರಮಾಣಿಸಿರುವ ನಮ್ಮ ವೈಜ್ಞಾನಿಕ ಪ್ರಯೋಗಗಳಲ್ಲಿ, ಎಲ್‌ಪಿಜಿ ಗ್ಯಾಸ್ ಒಲೆಯ ಮೇಲೆ ಪ್ರೆಶರ್ ಕುಕ್ಕರಿನಲ್ಲಿ ತಯಾರಾದ ಅಡುಗೆ ತೆರೆದ ಪಾತ್ರೆಯಲ್ಲಿ ತಯಾರಾದ ಅಡುಗೆಯ ಹೋಲಿಕೆಯಲ್ಲಿ ಸರಾಸರಿ 52% ಇಂಧನ ಉಳಿಸುತ್ತದೆ.

ತಿಂಗಳಿಗೆ ಒಂದು ಎಲ್‌ಪಿಜಿ ಸಿಲಿಂಡರ್ ಉಪಯೋಗಿಸುವ ಕುಟುಂಬವೊಂದು ತೆರೆದ ಪಾತ್ರೆಯ ಅಡುಗೆಯಿಂದ ಪ್ರೆಶರ್ ಕುಕ್ಕರಿಗೆ ಬದಲಾಯಿಸಿಕೊಂಡರೆ, ಇದರಿಂದ ವರ್ಷಕ್ಕೆ ಸುಮಾರು 6000 ರೂ. ಉಳಿತಾಯವಾಗುತ್ತದೆ.

ತಯಾರಾದ ಅಡುಗೆ	ಇಂಧನ ಉಳಿತಾಯ
ಆಲೂಗಡ್ಡೆ	34%
ಕಡಲೆ	44%
ತೊಗರಿ ಬೇಳೆ	60%
ಮಾಂಸ	65%
ಸರಾಸರಿಯಲ್ಲಿ	**52%**

ಇನ್ನಷ್ಟು ಸೂಚನೆ ಮತ್ತು ವಿವರಗಳನ್ನು ಇಲ್ಲಿ ನೋಡಿ: www.savewithpressurecookers.com

ಪ್ರೆಶರ್ ಕುಕ್ಕರ್ ಬಳಸಿ. ದೇಶಕ್ಕಾಗಿ ಇಂಧನ ಉಳಿಸಿ.

ಆಂಧ್ರಪ್ರದೇಶ: ನಾರಾ ಲೋಕೇಶ್ ಪಾದಯಾತ್ರೆಗೆ ಅನುಮತಿ

ನಾರಾ ಲೋಕೇಶ್

ಅಮರಾವತಿ (ಪಿಟಿಐ): ಇದೇ 27ರಿಂದ ಚಿತ್ತೂರು ಜಿಲ್ಲೆಯ ಕುಪ್ಪಂನಿಂದ ಆರಂಭವಾಗಲಿರುವ ತೆಲುಗು ದೇಶಂ ಪಕ್ಷದ ಅಧ್ಯಕ್ಷ ಎನ್. ಚಂದ್ರಬಾಬು ನಾಯ್ಡು ಅವರ ಪುತ್ರ ಹಾಗೂ ಪಕ್ಷದ ಪ್ರಧಾನ ಕಾರ್ಯದರ್ಶಿ ನಾರಾ ಲೋಕೇಶ್ ಅವರ 4 ಸಾವಿರ ಕಿ.ಮೀ ಉದ್ದದ ಪಾದಯಾತ್ರೆಗೆ ಆಂಧ್ರಪ್ರದೇಶದ ಪೊಲೀಸರು ಮಂಗಳವಾರ ಅನುಮತಿ ನೀಡಿದ್ದಾರೆ.

‘ಯಾತ್ರೆಯ ಭಾಗವಾಗಿ ನಡೆಯಲಿರುವ ಎಲ್ಲಾ ಸಾರ್ವಜನಿಕ ಸಭೆಗಳಿಗೆ ಪೊಲೀಸರು ಸಾಮಾನ್ಯವಾದ ಕೆಲವು ಷರತ್ತುಗಳನ್ನು ವಿಧಿಸಿದ್ದಾರೆ. ಆದರೆ, ಪಾದಯಾತ್ರೆಗೆ ಯಾವುದೇ ನಿರ್ದಿಷ್ಟ ಷರತ್ತು ವಿಧಿಸಲಾಗಿಲ್ಲ’ ಎಂದು ಚಿತ್ತೂರಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಿಶಾಂತ್ ರೆಡ್ಡಿ ತಿಳಿಸಿದ್ದಾರೆ.

‘ಪಾದಯಾತ್ರೆಯು ಹೊಸ ಕ್ಷೇತ್ರಕ್ಕೆ ಬಂದಾಗಲೆಲ್ಲಾ ಸಂಘಟಕರು ಸಂಬಂಧಪಟ್ಟ ಜಿಲ್ಲೆಯ ಪೊಲೀಸರಿಂದ ಅನುಮತಿ ಪಡೆಯಬೇಕು’ ಎಂದೂ ಅವರು ಹೇಳಿದ್ದಾರೆ.

‘ಪಾದಯಾತ್ರೆಗೆ ‘ಯುವ ಗಲಂ’ (ಯುವಜನರ ಧ್ವನಿ) ಎಂದು ಹೆಸರಿಡಲಾಗಿದ್ದು, ಲೋಕೇಶ್ ಅವರು ಕುಪ್ಪಂನಿಂದ ಇಚ್ಛಾಪುರದವರೆಗೆ 400 ದಿನಗಳಲ್ಲಿ ಸುಮಾರು 125 ಕ್ಷೇತ್ರಗಳಲ್ಲಿ ಸಂಚರಿಸುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ’ ಎಂದು ಟಿಡಿಪಿ ಮೂಲಗಳು ತಿಳಿಸಿವೆ.

ಹಾಕಿ: ಯಂಗ್‌ಸ್ಟಾರ್ ತಂಡಕ್ಕೆ ಭರ್ಜರಿ ಜಯ

ಬೆಂಗಳೂರು: ರಾಯಚೂರಿನ ಯಂಗ್‌ಸ್ಟಾರ್ ಹಾಕಿ ಕ್ಲಬ್ ತಂಡದವರು ಕೆಎಚ್‌ಎಚ್‌ಎ ರಾಜ್ಯ ‘ಎ’ ಡಿವಿಷನ್ ಹಾಕಿ ಟೂರ್ನಿಯಲ್ಲಿ ಗೆಲುವು ಪಡೆದರು.

ಬುಧವಾರ ನಡೆದ ಪಂದ್ಯದಲ್ಲಿ ಯಂಗ್‌ಸ್ಟಾರ್ ತಂಡ 9–2 ಗೋಲುಗಳಿಂದ ಬೆಂಗಳೂರು ಯುನೈಟೆಡ್ ಹಾಕಿ ಕ್ಲಬ್ ತಂಡವನ್ನು ಮಣಿಸಿತು.

ವಿಜಯಿ ತಂಡದ ಅಭಿನಂದನ್ (9, 22ನೇ ನಿ.) ಮತ್ತು ಜಿ.ಅಂಕಿತ್ (19, 40 ನೇ ನಿ.) ತಲಾ ಎರಡು ಗೋಲುಗಳನ್ನು ಗಳಿಸಿದರು. ಇತರ ಗೋಲುಗಳನ್ನು ಎಂ.ಬಾಬು (12), ಎನ್.ಕೆ.ವಿನಾಯಕ್ (13), ಶ್ರೀಕಾಂತ್ (34), ಮೊಹಮ್ಮದ್ ತಾಲಿಬ್ (39) ಮತ್ತು ವೈ.ದೀಪಕ್ (49) ತಂದಿತ್ತರು.

ಬೆಂಗಳೂರು ಯುನೈಟೆಡ್ ಪರ ವಿವೇಕ್ ಉತ್ತಪ್ಪ ಮತ್ತು ಅವಿನಾಶ್ ಗೋಲು ಗಳಿಸಿದರು.

ಹಿಂದೂ ಮಹಾಸಾಗರದಲ್ಲಿ ನೌಕಾಪಡೆಯ ಸಮರಾಭ್ಯಾಸ

ನವದೆಹಲಿ (ಪಿಟಿಐ): ಚೀನಾ ಸೇನೆಯು ಹಿಂದೂ ಮಹಾಸಾಗರ ಪ್ರದೇಶದಲ್ಲಿ ಬಲ ವೃದ್ಧಿಸಿಕೊಳ್ಳುತ್ತಿರುವ ಬೆನ್ನಲ್ಲೇ ಭಾರತೀಯ ನೌಕಾಪಡೆಯು ತನ್ನ ಯುದ್ಧ ಸಾಮರ್ಥ್ಯ ಪರೀಕ್ಷಿಸಿಕೊಳ್ಳುವ ಸಲುವಾಗಿ ಈ ಪ್ರದೇಶದಲ್ಲಿ ಭಾರಿ ಸಮರಾಭ್ಯಾಸ ನಡೆಸಲು ನಿರ್ಧರಿಸಿದೆ.

‘ಎರಡು ವರ್ಷಕ್ಕೊಮ್ಮೆ ನಡೆಯುವ ಥಿಯೇಟರ್ ಲೆವಲ್ ಆಪರೇಷನಲ್ ರೆಡಿನೆಸ್ ಎಕ್ಸರ್‌ಸೈಸ್ (ಟ್ರೋಪೆಕ್ಸ್) ನೌಕಾಪಡೆಯ ಕಾರ್ಯಾಚರಣೆಯ ಪರಿಕಲ್ಪನೆಯನ್ನು ಮೌಲ್ಯೀಕರಿಸುವ ಹಾಗೂ ಪರಿಷ್ಕರಿಸುವ ಗುರಿ ಹೊಂದಿದೆ. ಜೊತೆಗೆ ಒಟ್ಟಾರೆ ಯುದ್ಧ ಸಾಮರ್ಥ್ಯವನ್ನು ಪರೀಕ್ಷಿಸುವ ಉದ್ದೇಶ ಒಳಗೊಂಡಿದೆ’ ಎಂದು ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

‘ಜನವರಿಯಿಂದ ಮಾರ್ಚ್‌ವರೆಗೆ ನಡೆಯುವ ‘ಟ್ರೋಪೆಕ್ಸ್’ನಲ್ಲಿ ನೌಕಾ ಪಡೆ ಹಾಗೂ ಕರಾವಳಿ ಕಾವಲು ಪಡೆಯ ಡೆಸ್ಟ್ರಾಯರ್‌ಗಳು, ಯುದ್ಧನೌಕೆಗಳು ಹಾಗೂ ಅವುಗಳ ಬೆಂಗಾವಲು ಹಡಗುಗಳು, ಸಬ್‌ಮರಿನ್‌ಗಳು ಹಾಗೂ ಯುದ್ಧ ವಿಮಾನಗಳು ಭಾಗವಹಿಸಲಿವೆ’ ಎಂದು ನೌಕಾಪಡೆಯ ವಕ್ತಾರ, ಕಮಾಂಡರ್ ವಿವೇಕ್ ಮಧ್ವಾಲ್ ತಿಳಿಸಿದ್ದಾರೆ.

‘ಸಮುದ್ರದೊಳಗೆ ಹಾಗೂ ಬಂದರು ಪ್ರದೇಶದಲ್ಲಿ ವಿವಿಧ ಹಂತಗಸ್ಪರ್ಧೆಗಳಲ್ಲಿ ತಾಲೀಮು ನಡೆಸಲಾಗುತ್ತದೆ. ಸೇನಾ ಪಡೆ, ವಾಯುಪಡೆ ಹಾಗೂ ಕರಾವಳಿ ಕಾವಲು ಪಡೆಗಳೊಂದಿಗೆ ಕಾರ್ಯಾಚರಣೆ ಕುರಿತಾದ ವಿಚಾರ ವಿನಿಮಯ ಮಾಡಿಕೊಳ್ಳುವುದಕ್ಕೂ ಟ್ರೋಪೆಕ್ಸ್ ನೆರವಾಗಲಿದೆ’ ಎಂದಿದ್ದಾರೆ.

ಮಹದಾಯಿ ನೀರಿಗಾಗಿ ಕಾನೂನು, ರಾಜಕೀಯ ಹೋರಾಟ: ಗೋವಾ ಸಿಎಂ

ಪಣಜಿ (ಪಿಟಿಐ): ಮಹದಾಯಿ ನೀರಿಗಾಗಿ ಕಾನೂನು, ತಾಂತ್ರಿಕ ಮತ್ತು ರಾಜಕೀಯ ಹೋರಾಟ ನಡೆಸುವುದಾಗಿ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹೇಳಿದ್ದಾರೆ ಹಾಗೂ ಮಹದಾಯಿ ನದಿ ನೀರಿನ ಹೋರಾಟದಲ್ಲಿ ಗೋವಾ ಸರ್ಕಾರ ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅಂತರರಾಜ್ಯ ನೀರು ಹಂಚಿಕೆ ವಿವಾದದಲ್ಲಿ ರಾಜ್ಯದ ಹಿತಾಸಕ್ತಿ ಕಾಪಾಡಲು ಸರ್ಕಾರವು ಬದ್ಧವಾಗಿದೆ ಎಂದು ಸಾವಂತ್ ಬುಧವಾರ ಇಲ್ಲಿ ತಿಳಿಸಿದರು.

ಯಾರು ಏನೇ ಹೇಳಲಿ, ನಾವು ನಮ್ಮ ನಿರ್ಧಾರದಲ್ಲಿ ಅಚಲರಾಗಿದ್ದೇವೆ. ಮಹದಾಯಿಗಾಗಿ ಏನೇನು ಮಾಡಬೇಕೋ ಅದನ್ನು ಕಾನೂನಾತ್ಮಕವಾಗಿ, ತಾಂತ್ರಿಕವಾಗಿ ಮತ್ತು ರಾಜಕೀಯವಾಗಿ ಮಾಡುತ್ತಿದ್ದೇವೆ. ಅಂತಿಮ ಗೆಲುವು ನಮ್ಮದಾಗಿರಲಿದೆ ಎಂಬ ವಿಶ್ವಾಸ ಇದೆ ಎಂದು ಹೇಳಿದರು.

ಕರ್ನಾಟಕದ ಮಹದಾಯಿ ಯೋಜನೆಯ ಡಿಪಿಆರ್ ಕೇಂದ್ರ ಜಲ ಆಯೋಗ ಇತ್ತೀಚೆಗೆ ಅನುಮೋದನೆ ನೀಡಿತ್ತು.